ಕಾಲಗೆರೆಯ ಶ್ರೀ [illegible]ಷ್ಣಜಾನೀಶ್ವರ

ಯೋಗಿರಾಜ ವಿಜಯ

ಲೇಖಕ. - ಲಕ್ಕಪ್ಪ ಅ. ಶಿರಹಟ್ಟಿ.

ಹಾಲಕೆರೆಯ

ಶ್ರೀ ಅನ್ನದಾನೀಶ್ವರ

ಯೋಗಿರಾಜ ವಿಜಯ.

(ಸಚಿತ್ರ)

ಲೇಖಕ— ಲ. ಅ. ಶಿರಹಟ್ಟಿ.

ಹಾಲಕೆರೆ

೧೯೩೯

9/16

ಹಾಲಕೆರೆಯ

ಶ್ರೀ ಮನ್ನಿರಂಜನ ನಿರಾಭಾರಿ

ಅನ್ನದಾನೀಶ್ವರ

ಯೋಗಿರಾಜ ವಿಜಯ.

[ಸಚಿತ್ರ]

ಇದನ್ನು

ವಿಜಾಪುರ ಶ್ರೀ ಸಿದ್ಧೇಶ್ವರ ಸಂಸ್ಥೆಯ ಆಸ್ಥಾನ ಪಂಡಿತ.

ಶ್ರೀ ಬಸವರಾಜಶಾಸ್ತ್ರೀ ಮಲ್ಲಿನಾಥಶಾಸ್ತ್ರೀ ಕೋಡೀಕೊಪ್ಪಮಠ

ಇವರ ಪರಿಶೋಧನೆಗೊಳಪಟ್ಟು

ಲಕ್ಕಪ್ಪ ಅನ್ನಪ್ಪ ಶಿರಹಟ್ಟಿ.

ಪ್ರಾಥಮಿಕ ಶಾಲಾಧ್ಯಾಪಕ ವಿಜಾಪುರ

ಇವರು ಬರೆದರು.

ಇದರಯಾವತ್ತೂ ಸ್ವಾಮಿತ್ವವು ಪ್ರಕಾಶಕರ ಸ್ವಾಧೀನವಿರುವದು.

ಶಕೆ ೧೮೫೧

ಬೆಲೆ ೧೨ ಆಣೆಗಳು.

ಲ॰ ಅ. ಶಿರಹಟ್ಟಿ,
ಅಸಿ. ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ
ಮುದ್ರಿಸಿದರು.
ಹಾಲಕೆರೆಯ ವಿರಕ್ತಮಠದಲ್ಲಿ ಶ್ರೀಗಳವರ ವತಿಯಿಂದ
ವೇ. ಗೌರೀನಾಥಶಾಸ್ತ್ರೀ ಕಾಟಾಪುರ ಹಿರೇಮಠ
ಇವರು ಪ್ರಕಾಶಗೊಳಿಸಿದರು.

ಮುನ್ನುಡಿ.

ಇದೊಂದು ಜ್ವಲನ್ನಿಷ್ಠೆಯ ಜಗತ್ತು. ಇದರಲ್ಲಿ ಪ್ರವಾಸಮಾಡುವವರು ವಿನಯ, ಶ್ರದ್ಧೆ, ಶಾಂತಿ, ಸಹಿಷ್ಣುತೆ ಮೊದಲಾದವುಗಳ ಬುತ್ತಿಯನ್ನು ಕಟ್ಟಿಕೊಂಡು ಸಂಚರಿಸಬೇಕು. ಇಲ್ಲಿ ಕಲ್ಲುಮುಳ್ಳುಗಳ ನೋವಿಲ್ಲ; ಸುಳ್ಳುಸಾವುಗಳ ಸೊಕ್ಕಿಲ್ಲ; ಅಂದರೆ ಜೀವನದ ದಾರಿಯ ಬಳಲಿಕೆಯು ಆರಿ, ಅಚಲಾನಂದಪದವಿಯ ಸುಖವು ದೊರೆಯುವದು. ದಾರಿಯೇನೋ ಉದ್ದವಾದುದಿದೆ; ದಾರಿಯುದ್ದಕ್ಕೂ ಸತ್ಪುರುಷ ಪದ-ಕಮಲ-ರೇಣುವಿನ ಮಾರ್ದವವು ಒಪ್ಪುತ್ತಲಿರುವದು.

ನಿಷ್ಠೆಗೆ ಎಲ್ಲವೂ ನಿಚ್ಚಳವಾಗಿ ಮೂಡಿ ಬೆಳಗುವದು. ಹಾಲಗೆರೆಯ ಅನ್ನದಾನೀಶ್ವರರು ವಿಭೂತಿಗಳು. ವಿಭೂತಿಯಿದ್ದಲ್ಲಿ ದೇವತ್ವವಿರುವುದು. ಜೀವ-ದೇವರನ್ನು ಬೆರಸಿ ಮದುವೆಯನ್ನು ಮಾಡಬಂದುದೇ ವಿಭೂತಿಯು.

ವಿಭೂತಿಯು ಜ್ವಲಜ್ಜೀವವು, ಜೀವಜ್ಯೋತಿಯು. ಅದು ಕಸದಲ್ಲಿ ರಸವನ್ನು ಎರೆಯುವದು; ಕಲ್ಲನ್ನು ಕರಗಿಸುವದು; ಜಡದಲ್ಲಿ ಜೀವಕಳೆಯನ್ನು ತುಂಬುವದು; ಜೀವನಲ್ಲಿ ಶಿವನನ್ನು ತೋರಿಸುವದು. ಕಾಲ್ಗಿಚ್ಚು ಕಾಡನ್ನು ಸುಟ್ಟುಬಿಡುವಂತೆ, ವಿಭೂತಿಯು ಪಾಪದ ರಾಶಿಯನ್ನು ನಿಗ್ರಹದ ಬೆಂಕಿಯಲ್ಲಿ ಉರಿದು, ಪುಣ್ಯದ ಪ್ರಭಾವವನ್ನು ಬೆಳಗುವುದು; ವಿಷಯದ ಅಹಿಯನ್ನು ತುಳಿದು ನಲಿದಾಡುವುದು; ಮೃತ್ಯುವಿನ ತಲೆಯನ್ನು ಹೊಡೆದು 'ಮೃತ್ಯುಂಜಯ' ನೆನಿಸುವುದು.

ಮತ್ತು ಕಗ್ಗತ್ತಲೆಯಲ್ಲಿ ಕಾಡು ಬಿದ್ದವರಿಗೆ ದಾರಿಯನ್ನು ತೋರಿಸುವ ಧ್ರುವತಾರೆಯದು; ಮೋಹಸಾಗರದ ತರಂಗಗಳ ತಾಕಲಾಟಕ್ಕೆ ಸಿಕ್ಕು ಜರ್ಜರವಾಗಿ ಮುಂಗಾಣದಿದ್ದ ಜೀವನೌಕೆಗೆ ದೀಪ

ಸ್ತಂಭವದು; ಸಂಸಾರದಲ್ಲಿದ್ದು ಮರುಳರಾಗದೆ ಪರಮಾರ್ಥವನ್ನು ಪಡೆಯಿರೆಂದೂ 'ಈಸಬೇಕು, ಇದ್ದು ಜಯಿಸಬೇಕು' ಎಂದೂ ಜೀವರಾಶಿಗೆಲ್ಲ ಧೃತಿಪಾಠವನ್ನು ಕಲಿಸುವ ಧರ್ಮಗುರುವದು, ಕರ್ಮ ಗುರುವದು.

ಈ 'ಅನ್ನದಾನೀಶ್ವರ ವಿಜಯು'ವು ಪುರಾಣದ ಆಧಾರದ ಮೇಲಿಂದ ಬರೆದುದು, ಐತಿಹಾಸಿಕ ಸಂಗತಿಗಳನ್ನು ಚರ್ಚಿಸಲು ಅನುವೆಲ್ಲಿ? ಆದರೂ ಇದರಲ್ಲಿಯ ಅದ್ಭುತ ಕಥೆಗಳ ಸತ್ಯತೆಯ ವಿಷಯದಲ್ಲಿ ನಮಗೆ ಬರೆಯಬೇಕಿಲ್ಲ; ನೋಡುವವರ ನಿಟ್ಟನ್ನು ಅದು ಅವಲಂಬಿಸಿರುತ್ತದೆ. ಅಧಿಕಾರಿಗಳಿಗೆ ಬೆಳಕು ಹೊಳೆಯುವದು; ಅನಧಿಕಾರಿಗಳಾದ ಕಂಗಳರಿಗೆ ಅದು ಹೊಳೆಯಲಿಕ್ಕಿಲ್ಲ. ಈಗಿನ ಯುಗವು ಬೌದ್ಧಿಕಯುಗವು. ಶ್ರದ್ಧೆಗಿಂತಲೂ ಚಾಪಲ್ಯವು ಹೆಚ್ಚು. ಆದುದರಿಂದ ಹೀಗೆ ಬರೆಯಬೇಕಾಗಿದೆ.

ಗ್ರಂಥದ ಸರಣಿಯು ಅಲ್ಲಲ್ಲಿ ಕಾವ್ಯಮಯವಾಗಿದೆ. ಪಾಕವು ಸರಳವಾದುದೂ ಸುಂದರವಾದುದೂ ಆಗಿದೆ. ಭಾಷೆಯು ತಡೆಯಿಲ್ಲದೆ ಸಾಗಿದೆ. ಒಟ್ಟಿನ ಮೇಲೆ ಭಗವದಂಶಭೂತವಾದ ಸೌಂದರ್ಯಕ್ಕೆ ತಕ್ಕಂತಹದಾಗಿದೆ. ಶ್ರದ್ಧಾವಂತನಿಗೆ ಈ 'ವಿಜಯು' ದಲ್ಲಿ ಸಂಪತ್ತಿರುವುದು; ಊರ್ಜಿತವಾದ ಲೋಕಗಳಿರುವವು.

ಶ್ರೀ. ಲಕ್ಕಪ್ಪ ಅಪ್ಪಪ್ಪ ಶಿರಹಟ್ಟಿಯವರು ಮುನ್ನುಡಿಯ ಬರೆಯುವ ಬಹುಮಾನದ ಕೆಲಸವನ್ನು ನನಗೆ ಒಪ್ಪಿಸಿದುದಕ್ಕಾಗಿ ನಾನು ತುಂಬಾ ಅವರಿಗೆ ಋಣಿಯಾಗಿರುವೆನು. ಪ್ರಪಂಚದಲ್ಲಿದ್ದು ಶಿವಯೋಗಿಗಳ ಸಹವಾಸವನ್ನು ಮಾಡಿ ಪರಮಾರ್ಥವನ್ನು ಗಳಿಯಿಸಲು ಧರ್ಮ ಬಾಂಧವರು ಪ್ರಯತ್ನಪಟ್ಟರೆ ಅವರ ಶ್ರಮವು ಸಾರ್ಥಕವಾಗುವದೆಂದು ನಂಬಿರುವ

ವಿಜಾಪುರ ವಿದ್ವಜ್ಜನ ವಿಧೇಯ,

ಶ್ರಾ. ಶು. ೧೩, ಶ. ೧೮೫೧. **ಹಣಮಂತರಾವ ಕೊಣ್ಣೂರ** ಬಿ. ಎ.

ಲ. ಅ. ಶಿರಹಟ್ಟಿ,
ಅಸಿ. ಡಿಸ್ಟ್ರಿಕ್ಟ ಎಜ್ಯುಕೇಶನಲ್ ಇನ್ಸ್ಪೆಕ್ಟರ

ಪೀಠಿಕೆ.

ಕನ್ನಡಿಗರ ಎಡೆಯಲ್ಲಿರುವ ಈ ಸತ್ಪುರುಷ ಚರಿತ್ರದ ಪಾಕವನು ಮಾಡಿದವನು ನಾನಲ್ಲ; ಇದರ ಮೂಲಕರ್ತೃಗಳು **ಶ್ರೀ ಚನ್ನಕವಿಗ**ಳಾಗಿದ್ದಾರೆ. ಊಟದಲ್ಲಿ ವಿಶಿಷ್ಟತನವನ್ನು ಪಡೆದವರಲ್ಲದೆ ಉಳಿದವರು ಬಳಸಿಕೊಂಡುಣ್ಣಲು ಸಾಧ್ಯವಲ್ಲದ ಭಾಜನದಲ್ಲಿ ಈ ಸರ್ವೋತ್ಕೃಷ್ಟವಾದ ಪಾಕವು ಸಿದ್ಧವಾಗಿತ್ತು. ಆದನ್ನು ಹಗುರಾದ ಪಾತ್ರೆಯಲ್ಲಿ ಬಳಸಿ ಸಾಮಾನ್ಯರೆಲ್ಲರಿಗೆ ನೀಡಿದುದೇ ನನ್ನ ಕೆಲಸವು. ಪಾಕದ ಮಾಧುರ್ಯವು ನೀಡುವವನಿಂದ ಹೆಚ್ಚುವದಂತೂ ಅಸಂಭವವು. ಇನ್ನು ನಾನು ಈ ಪಾಕದ ಸ್ವಾದವು ಕೆಡದಂತೆ ಯತ್ನಿಸಿರುವೆನಾದರೂ ಎಡೆ ಮಾಡುವಾಗ ಕೈಯಾಡಿ ರುಚಿಗೆ ಕೊರತೆಯಾಗಿರಬಹುದಾದರೆ ಅದನ್ನು ಸೂಚಿಸಬೇಕೆಂದೂ ಆ ಬಗ್ಗೆ ನನ್ನನ್ನು ಕ್ಷಮಿಸಬೇಕೆಂದೂ ಉಣ್ಣುಗರಾದ ಕನ್ನಡಿಗರಿಗೆ ಬಿನ್ನೈಸಿಕೊಳ್ಳುತ್ತೇನೆ.

ಶ್ರೀ ಚನ್ನಯ್ಯನವರು ದ್ಯಾಂಪುರ ಈ ಕವಿವರರಿಂದ ರಚಿಸಲ್ಪಟ್ಟ **ಶ್ರೀಮದನ್ನದಾನೀಶ್ವರ ಮಹಾಪುರಾಣವು** ಪ್ರೌಢಕಾವ್ಯವಾಗಿದೆ; ಸುಮಾರು೧೫೦೦ ವಾರ್ಧಿಕ ಷಟ್ಪದಿಗಳಲ್ಲಿ ರಚಿಸಲ್ಪಟ್ಟಿದೆ; ಇದು ಪಂಚಲಕ್ಷಣಪರಿಪೂರ್ಣವಾಗಿದೆ. ಇದರ ಶೈಲಿಯು ಲಲಿತವಾಗಿದೆ. ಇದರ ಸೇವನೆಯಲ್ಲಿ ಆನಂದವು ತಲೆದೋರುತ್ತಲಿದೆ. ಈ ಪುರಾಣದ ಜನ್ಮಕಾಲವು ಕ್ರಿ. ಶ. ೧೯೨೪. ಅದರಿಂದೀಚೆಗೆ ಇವರು ಹೇಮರಡ್ಡಿ ಮಲ್ಲವ್ವನ ಪುರಾಣವನ್ನೂ ಮಂತ್ರರಹಸ್ಯವೆಂಬ ಪ್ರಬಂಧವನ್ನೂ ಬರೆದು ಕನ್ನಡಿಗರನ್ನು ತಮಗೆ ಮತ್ತಿಷ್ಟು ಋಣಿಗಳನ್ನಾಗಿ ಮಾಡಿಕೊಂಡಿದ್ದಾರೆ. 'ಕನ್ನಡನುಡಿತಾಯಿಯು ಇವರು ದೀರ್ಘಾಯುಗಳಾಗಿ ಇರುವಂತೆ ಹರಸಲಿ! ತನ್ನ ಈ ಮುದ್ದಿನಣುಗರಿಂದ ಇನ್ನಿಷ್ಟು ಇನ್ನಿಷ್ಟು ಸೇವೆಯನ್ನು ಕೊಂಡು ತಣಿಯಲಿ!' ಎಂದು ಹಾರೈಸುತ್ತೇನೆ.

ಈ ಪುರಾಣದ ಸಾರವನ್ನು ಹೊಸಗನ್ನಡ ಗದ್ಯದಲ್ಲಿ ಬರೆಯಿಸಿ ಪ್ರಕಟಿಸಬೇಕೆಂದು, ಈ ಚರಿತ್ರನಾಯಕರ ಕರಕಮಲಜಾತರೂ ತಪೋಧನರೂ ದಿವ್ಯತೇಜಃಪುಂಜರೂ ದಯಾಪರರೂ **ಹಾಲಗೆರೆಯ** ಈಗಿನ **ಶೂನ್ಯಸಿಂಹಾಸನಾಧಿಪತಿಗಳೂ** ಆದ ಶ್ರೀಗಳವರ ಮನೋಗತವಿದ್ದುದನ್ನು ಅನುಸರಿಸಿ ನಾನು ಆನಂದದಿಂದ ಈ ಕಾರ್ಯವನ್ನು ಕೈಕೊಂಡೆನು.

ಕಥಾಂಶದಲ್ಲಿಯೂ ವಿಷಯ ವಿವೇಚನೆಯಲ್ಲಿಯೂ ಬಹುಶಃ ಪುರಾಣವನ್ನೇ ಅನುಸರಿಸಿದ್ದೇನೆ. ಉದ್ದವಾದ ವರ್ಣನೆಗಳನ್ನೂ ಕೆಲವು ಉಪಾಖ್ಯಾನಗಳನ್ನೂ ಬಿಟ್ಟುಕೊಟ್ಟಿದ್ದೇನೆ. ಕೆಲವು ವರ್ಣನೆಗಳು ಗದ್ಯಗ್ರಂಥಕ್ಕೆ ಅನುಸರಿಸಿ ಮಾರ್ಪಟ್ಟಿವೆ. ಇದರಲ್ಲಿ ಉಕ್ತವಾಗಿರುವ ಶ್ರೀ ಅನ್ನದಾನೀಶ್ವರ ಲೀಲೆಗಳು ಈಗಿನ ಕೆಲವು ಹಂಡಬಂಡ ಜನರಿಗೆ ಅತಿಶಯೋಕ್ತಿಗಳಾಗಿ ಕಾಣಬಹುದು. ಅವುಗಳ ನಿಜತ್ವದ ಬಗ್ಗೆ ಪುರಾಣಕಾರರು ತಮ್ಮ ಪೀಠಿಕೆಯಲ್ಲಿ ಮಾಡಿದ ಪ್ರತಿಜ್ಞೆಯನ್ನೇ ಇಲ್ಲಿ ಉದ್ಧರಿಸುತ್ತೇನೆ. ವಾಚಕರು ನೋಡಲಿ, ಅಂದರಾಯಿತು. ಅವರು ಅನ್ನುವದೇನಂದರೆ "ಇವರ ಮಹಾತ್ಮ್ಯಗಳು ಅಗಣಿತವೆಂದರೂ ಅತಿಶಯೋಕ್ತಿಯಲ್ಲ. ಆದರೆ ಇವುಗಳಲ್ಲಿ ನಾನು ಕಂಡು ಮತ್ತು ಬಹು ಜನರಿಂದ ಕೇಳಿ ಮನವರಿಕೆಯಾದ ಕೆಲವು ಸಂಗತಿಗಳನ್ನಷ್ಟೇ ಜನ್ಮಸಾಫಲ್ಯಕ್ಕಾಗಿಯೂ ಲೋಕೋಪಕಾರಕ್ಕಾಗಿಯೂ ಯಥಾಮತಿಯಾಗಿ ಬರೆದಿರುವೆನು. ಇದರಲ್ಲಿ ಲೋಕರಂಜನೆಯ ಹವ್ಯಾಸಕ್ಕೆ ಬಿದ್ದು ಕಲ್ಪನೆಯಿಂದ ಸುಳ್ಳು ಬಣ್ಣಿಸಿಲ್ಲ."

ಅಲ್ಪಮತಿಯಾದರೂ ನನ್ನಿಂದಲೇ ಪ್ರೀತಿಪೂರ್ವಕವಾಗಿ ಈ ಸೇವೆಯನ್ನು ಕೈಕೊಂಡ ಹಾಗು ಆಶೀರ್ವಾದ ಬಲದಿಂದ ಕಾರ್ಯಶಕ್ತಿಯನ್ನಿತ್ತ ಶ್ರೀಗಳವರ ಪಾದನೀರಜಗಳಿಗೆ ನನ್ನ ಶತಶಃ ದೀರ್ಘದಂಡಪ್ರಣಾಮಗಳು. ಈ ಕಾರ್ಯವನ್ನು ಮಾಡಲು ನನ್ನನ್ನು ಪ್ರೇರಿಸಿ, ಶ್ರೀಗಳವರ ಆಜ್ಞೆಯನ್ನು ದೊರಕಿಸಿ, ಕೃತಿಯಲ್ಲಿ ಎಡಪಿದಾಗಲೆಲ್ಲ ಕೈಹಿಡಿದೆಬ್ಬಿಸಿ, ಶ್ರೀಗಳವರ ಈ ಸೇವೆಯು ನನಗೆ ಸಾಂಗವಾಗಿ ಘಟ

ಸಿದ ಭಾಗ್ಯವನ್ನು ಒದಗಿಸಿ ಕೊಟ್ಟ ಪಂ. ಶ್ರೀ ಬಸವರಾಜ ಶಾಸ್ತ್ರಿಗಳು ಕೋಡೀಕೊಪ್ಪಮಠ ಅಧ್ಯಾಪಕ ಶ್ರೀಸಿದ್ಧೇಶ್ವರ ಹಾಯಸ್ಕೂಲ ಇವರ ಉಪಕಾರವು ಅಸ್ಪಿಷ್ಟಲ್ಲ; ಅದನ್ನು ತೀರಿಸಲು ನನ್ನ ಅಳವಲ್ಲ; ಅವರಿಗೆ ನನ್ನ ಅನೇಕ ವಂದನೆಗಳನ್ನು ಮಾತ್ರ ಮನಃಪೂರ್ವಕವಾಗಿ ಅರ್ಪಿಸುತ್ತೇನೆ. ಶೈಲಿಯು ಆದಷ್ಟು ಸುಲಭವಾಗುವಂತೆ ಹಲಕೆಲವು ಸೂಚನೆಗಳನ್ನು ಮಾಡಿದ್ದಲ್ಲದೆ ಭಾವಗರ್ಭಿತವಾದ ಮುನ್ನುಡಿಯಿಂದ ಈ ವಿಜಯವನ್ನು ಅಲಂಕರಿಸಿದ ಕರ್ನಾಟಕ ವಾಙ್ಮಯ ವಿಶಾರದರಾದ ಶ್ರೀಯುತ ಹಣಮಂತರಾವ ಕೊಣ್ಣೂರ ಬಿ. ಎ. ಇವರಿಗೆ ಅದೆಷ್ಟೋ ಋಣಿಯಾಗಿದ್ದೇನೆ. ನಾನಿದನ್ನು ಬರೆಯುತ್ತಿರುವದನ್ನು ಕೇಳಿದೊಡನೆ ಪ್ರೀತಿಯಿಂದ ನೋಡಿ, ಎಂದಿನಂತೆ ಪ್ರೋತ್ಸಾಯಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ ಶ್ರೀಯುತ ಅಂದಾನಪ್ಪನವರು ಅಂಗಡಿ ಬಿ. ಎ. ಎಲ್. ಎಲ್. ಬಿ. ವಕೀಲ ಇವರಿಗೂ, ಬಲಹೀನನಾದವರೂ ನನ್ನನ್ನು ಅಂತರಂಗದ ಸ್ನೇಹದಿಂದ ಸಾಹಿತ್ಯಸೇವೆಯಲ್ಲಿ ಮುಂದೂಡಲು ಪ್ರಯತ್ನಿಸುವ ಪಂ. ಕೇಶವ ಶರ್ಮಾ ಗಲಗಲಿ ಇವರಿಗೂ ಅತ್ಯಂತ ಕೃತಜ್ಞನಾಗಿರುವೆನು. 'ಪ್ರೂಫು' ಗಳನ್ನು ನೋಡುವದರಲ್ಲಿ ನನಗೆ ವಿಶೇಷ ಸೌಕರ್ಯಗಳನ್ನುಂಟುಮಾಡಿ, ಈ ಪುಸ್ತಕವನ್ನು ಅತ್ಯಲ್ಪಕಾಲದಲ್ಲಿಯೇ ಅಂದವಾಗಿ ಅಚ್ಚುಹಾಕಿದ ಹಿತಚಿಂತಕ ಮುದ್ರಣಾಲಯದ ಒಡೆಯರಾದ ರಾವಸಾಹೇಬ ಫ. ಗು. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಕೀಲ ಇವರ ಉಪಕಾರವನ್ನು ಸ್ಮರಿಸುವೆನು.

ವಿಜಾಪುರ. ಶ್ರೀಗಳವರ ಪಾದಸೇವಕ,

ಶ್ರಾವಣ ಶು. ೧೫ ಶಕೆ ೧೮೫೧. **ಲ. ಅ. ಶಿರಹಟ್ಟಿ.** ಗ್ರ. ಕ.

ಲ. ಅ. ಶಿರಹಟ್ಟಿ,
ಅಸಿ. ಡಿಸ್ಟ್ರಿಕ್ಟ ಎಜ್ಯುಕೇಶನಲ್ ಇನ್ಸ್ಪೆಕ್ಟರ

ಸದ್ಭಾವದ ಬೆಳಗು.

ಶ್ರೀಮದನ್ನದಾನೀಶ್ವರ ಮಹಾಸ್ವಾಮಿಗಳವರ ಪುಣ್ಯಪ್ರದವಾದ ಚರಿತ್ರವನ್ನು ರಾ॥ ರಾ॥ ಲ. ಆ. ಶಿರಹಟ್ಟಿ ಮಾಸ್ತರರು ಗದ್ಯದಲ್ಲಿ ಬರೆಯುತ್ತಿರುವರೆಂಬದನ್ನು ಕೇಳಿ ಶ್ರೀಗಳವರ ಕರುಣಾಪಾತ್ರನಾದ ನಾನು ಕುತೂಹಲದಿಂದ ಹಸ್ತಲಿಖಿತ ಪ್ರತಿಯನ್ನೇ ತರಿಸಿ ನೋಡಿದೆನು. ಶ್ರೀಗಳವರ ಪಾದದಲ್ಲಿ ಭಕ್ತಿಯನ್ನಿಟ್ಟ ಹಲವರು ನ್ಯೂನತೆಗಳನ್ನು ನೀಗಿ ಸೌಖ್ಯವನ್ನು ಹೊಂದಿರುವರು. ನಾನಾದರೂ ಇವರ ಶುಭ ಸೂಚನೆಯಂತೆ ಇಲ್ಲಿಗೆ ಬಂದು ಈ ಹೊತ್ತಿನ ಸುಸ್ಥಿತಿಯನ್ನು ಹೊಂದಿ ಬಾಳುತ್ತಿರುವುದು ಈ ಮಹಿಮರ ಪಾದಕೃಪಾಬಲದಿಂದಲೇ. ಇಂಥ ಸತ್ಪುರುಷರ ದಿವ್ಯಪ್ರಭಾದ್ಯೋತಕವಾದ ಚರಿತ್ರಗಳು ಕನ್ನಡದಲ್ಲಿ ಬೆಳಗುತ್ತಲಿರುವುದು ಅತ್ಯಾವಶ್ಯಕವಾಗಿದೆ. ಇಂಥದೊಂದು ಪ್ರಯತ್ನವನ್ನು ಕೈಕೊಂಡು ತಕ್ಕರೀತಿಯಿಂದ ಜರುಗಿಸುತ್ತಿರುವ ರಾ॥ ರಾ॥ ಲ. ಆ. ಶಿರಹಟ್ಟಿಯವರು ಈ ಮಹಾಮಹಿಮರ ಶುಭಾಶೀರ್ವಾದಕ್ಕೆ ಪಾತ್ರರಾಗಲೆಂದು ಬಯಸುತ್ತೇನೆ. ಈ ಗ್ರಂಥದ ಶೈಲಿಯು ಲಲಿತವೂ ಸರಳವೂ ಸರಸವೂ ವಿಷಯವಿವೇಚನೆಯು ವಿಚಾರಣೀಯವೂ ಇರುವದರಿಂದ ಇದು ಓದುಗರ ಮನಸ್ಸನ್ನು ತಣಿಸುವದರಲ್ಲಿ ಸಂದೇಹವಿಲ್ಲ.

ವಿಜಾಪುರ,

ತಾ. ೧೫-೭-೩೯

ಅಂದಾನಪ್ಪ ಚನ್ನಪ್ಪ ಅಂಗಡಿ.

ಬಿ. ಎ. ಎಲ್. ಎಲ್. ಬಿ.

ಸ್ವೀಕಾರ.


ಕ್ರಮವಹಿಸಿ ಈ 'ಅನ್ನದಾನೀಶ್ವರ ಯೋಗಿರಾಜವಿಜಯ' ವನ್ನು ಬರೆದು ಶ್ರೀಗಳವರ ಪಾದಕ್ಕೆ ಅರ್ಪಿಸಿದ ಲೇಖಕರಿಗೂ, ಶ್ರೀಗಳ ಮೇಲಿನ ಭಕ್ತಿಯಿಂದ ಲೇಖಕರಿಗೆ ಸಹಾಯ ಮಾಡಿದ ಪರಿಶೋಧಕರಿಗೂ ಅಂದವಾದ ಮುನ್ನುಡಿಯನ್ನು ಬರೆದಿತ್ತ ಮಹನೀಯರಿಗೂ ಈ ಪುಸ್ತಕದ ಮುದ್ರಣಕ್ಕೆ ಹತ್ತಿದ ಹಣವನ್ನು ಭಕ್ತಿಯಿಂದಲೂ ಉದಾರತನದಿಂದಲೂ ಸ್ವಾಮಿಗಳವರ ಸನ್ನಿಧಿಗೆ ಕಾಣಿಕೆಯಾಗಿ ಅರ್ಪಿಸಿದ (ಶ್ರೀಗಳವರ ಪುರಾಣ ಪ್ರಕಟನೆಗೆ ೧೦೦೦ ರೂ. ಸಹಾಯ ಮಾಡಿದ ಶ್ರೀಯುತ ಮಲ್ಲರಡ್ಡೆಪ್ಪನ ಮೊಮ್ಮಗನಾದ) ರಾ|| ರಾ|| ಕಳಕಪ್ಪ ಬಸವರಡ್ಡೆಪ್ಪ ತೋಟಗಂಟಿ (ಪಾಟೀಲ ಮಲಕಸಮುದ್ರ) ಮು. ಸಂಗನಹಾಳ ಈ ಸದ್ಗೃಹಸ್ಥರಿಗೂ ಸಕಾಲದಲ್ಲಿ ಸುಂದರವಾಗಿ ಮುದ್ರಿಸಿದ ಹಿ. ಚಿಂ. ಮು. ದ. ಒಡೆಯರಾದ ರಾವಸಾಹೇಬ ಹಳಕಟ್ಟಿಯವರಿಗೂ ಶಿವಯೋಗಿವರರ ಕಾರುಣ್ಯದಿಂದ ಸುಖಸಮಾಧಾನಗಳಾಗಲೆಂದು ಹಾರೈಸುತ್ತೇವೆ.

ಪ್ರಕಾಶಕ,

ಗೌರೀನಾಥಶಾಸ್ತ್ರೀ ಕಾಶೀಪುರ ಹಿರೇಮಠ.

ಅಧ್ಯಾಪಕ ಶ್ರೀ ಅನ್ನದಾನಿಸ್ಮಾರಕ ಸಂಸ್ಕೃತ ಪಾಠಶಾಳಾ ಹಾಲಕೆರೆ.

ಓಂ.



ಅರ್ಪಣ.

ಚಂಪಕಮಾಲೆ.

ಗುರುವಿನನೂನಕೀರ್ತಿಯ ಬೆಳಂಗಿನೊಳುಜ್ವಲನಾಗಿ ರಾಜಿಪಂ।
ಗುರುಪದಯುಗ್ಮಮಂ ಪಡೆದು ಹೃಜ್ಜಲಜಾಗ್ರದೊಳೊಲ್ದು ಪೂಜಿಪಂ॥
ಗುರುವರನಾಗಿ ಭಕ್ತಹೃದಯಾಲಯದೊಳ್ ನೆಲೆಗೊಂಡು ಶೋಭಿಪಂ।
ಚರ 'ಗುರುವನ್ನದಾನಿ' ಮಹಿಮಾನಿಧಿಯೀ ಯತಿಪಾದಪದ್ಮಕೆ॥೧॥

ಕಂದ

ಪಡೆದೊಲಿದೀ ಪದದೆಡೆಯೊಳ್।
ಚಪುರಂ ನೀಡಿದ ಸುಮಾವಳಿಯನೊಳಗೊಗೆದ॥
ಸದಮಲ ಗುಣದಿಂ ಬಂಧಿಸಿ।
ಮುದದಿಂ ಮಾಲೆಯನು ಮಾಡಿ ನೀಡಿದೆನೊಲವಿಂ ॥೨॥

ಆವುದನೊಲ್ಲದೆ ಎಲ್ಲರನೆಚ್ಚರಿಪ ತಿಳುಹಿನ ತಿರುಳಿನ ರೂಪೆ,

ರಸಿಕರ ಹೃದಯಮನರಳಿಪ।
ಪೊಸಗಂಪಿನ ಮೋಹದರಲಮಲ್ಲಿದು ಕಾಡೊಳ್॥
ನಸುನಗೆಯಂ ನಗುವೊಂದೀ।
ಕುಸುಮಂ ನಿನಗುಚಿತಮೆಂದು ನೀಡಿದೆನಭವಾ ॥೩॥

ಭವದೀಯ ಪಾದಾಬ್ಜ ಮಕರಂದಮುಗ್ನ ಮಧುಕರ

ಗ್ರಂಥಕರ್ತ.

ಒಳ ಒಲವಿನ ಬೆಳೆ.

ವಿಜಯಪುರಕ್ಕೊಲೆದಾದಿನ।
ಬಿಜಯಂಗೈಸಿದ ತವಾಂಘ್ರಿ ದರ್ಶನವೆನ್ನೊಳ್॥
ಸೃಜಿಸಿದ ನಿರ್ಮಲ ಭಾವವೆ।
ನಿಜರೂಪಂದಾಳಿ ಬಾಳುತಿದೆ ಸನ್ನಿಧಿಯೊಳ್॥

ಗ್ರ. ಕ.

ಹಾಲಕೆರೆಯ

ಶ್ರೀಅನ್ನದಾನೀಶ್ವರ ಶಿವಯೋಗಿರಾಜರು.



ಜನ್ಮ- ಮಾಘ ವ. ೧೪. ಶಕೆ ೧೭೩೪ **ಪೀಠಾಧಿಕಾರ**- ವೈಶಾಖ ಶು. ೫. ಶಕೆ ೧೭೬೫

ಲಿಂಗೈಕ್ಯ--

ಪೌಷ್ಯ ಶು. ೩. ಶಕೆ ೧೮೩೫.

॥ ಓಂ ತತ್ಸತ್ ॥

ನೀನೆನ್ನಂತರಂಗವುಂ ಬೆಳಗೆಯೊ?

(ಅನ್ನದಾನೀಶ್ವರ ಸ್ತೋತ್ರನವರತ್ನಮಾಲಿಕೆ)

ಕಂದ॥

ಅಳವೇಂ ಬುಧಗುಂ ನಿನ್ನಂ।
ಸಲೆ ಪೊಗಳಲ್ಕಂ ಪೊಗಳ್ವೆನೆಂಬುದು ಮೌಢ್ಯಂ॥
ಜಲದಲಿ ತೋರುವ ಚಂದ್ರನ।
ಕಲೆಗಿಕ್ಕುವನೇನು ಕರವ ಕಂದನೊ ಬುಧನೋ?॥೧॥

॥ಚಾಮರ॥

ಆದೊಡಂ ಭವತ್ಪ್ರಭಾವಮೆನ್ನೊಳಾಳೆ ನಿನ್ನನು।
ಮೋದದಿಂ ಪೊಗಳ್ವೆನಲ್ತೆ? ತಾಳ್ವುದೊಲ್ಮೆಯುಂ ವಲಂ॥
ಮೋದಗೊಳ್ಳರೇನು ಕಂಡು ಪದ್ಮಪತ್ರಮಾಂತ ಸ-।
ವ್ಯೋದಬಿಂದು ತೋರೆ ತೋರಮುತ್ತಿನಂತೆ ಸಜ್ಜನರ್?॥೨॥

ಕಂದ॥

ಅರಸನ ಕೃಪೆಯಿರೆ ಬಡತನ-।
ಮಿರಲೇಂ? ವಾರಣವನೇರೆ ಸೊನಗನ ಭಯಮೇಂ?॥
ಧರಸಿರೆ ನಿನ್ನಯ ಘನಪದ-।
ಸರೋಜ ಭಕ್ತಿಯನು ಮನದಿ ಭವದಂಜಿಕೆಯೇ?॥೩॥

ತರಳ॥

ಇನನ ರಶ್ಮಿಗಳುರ್ಕಿನಿಂ ಕೆಡದಿಪ್ಪ ಕತ್ತಲೆಯುಂಟೆ? ಪೇಳ್।
ಅನಲನಾರ್ಪನು ಮೀರ್ದ ಕಾಷ್ಠಗಳುಂಟೆ? ಮೃತ್ಯುವ ಮೀರಿದಾ॥
ತನುಗುಣಾತ್ಮಕರುಂಟೆ? ಯೋಗಿವರಾನ್ನದಾನಿಯೆ, ನಿನ್ನ ಶ್ರೀ।
ವನರುಹಾಂಘ್ರಿಯ ಪೂಜೆಯಿಂ ಸುಡದಿಪ್ಪ ಪಾಪಮುದಿಪ್ಪುದೇ?॥೪॥

॥ ಕಂದ ॥

ಎಡೆಯಾಡುಗೆಯೆನ್ನೊಳು ನಿ- ।
ನ್ನಡಿ; ಕಟುಮನಮಿವನದೆಂದು ಹಿಂದೆಗೆವಪುದೇ? ॥
ಕಡುವಿರಿಸಕುಳಿರ್ವೆಟ್ಟದಿ ।
ನಡೆದವು ತವ ಮೃದುಪದಂಗಳಂದೊಲಿವಲ್ತೇ? ॥ ೫ ॥

॥ ಅಶ್ವಗತಿ ॥

ಕೊಳ್ಳದಿ ಬೀಳುವ ಭಕ್ತನ ರಕ್ಷಿಪಲೋಡುವೆ ಕ- ।
ಲ್ಮುಳ್ಳುಗಳೆನ್ನದೆ; ಕಾಲಲಿ ಯಾತ್ರೆಗೆ ಸಂಚರಿಪೈ ॥
ಒಳ್ಳಿತೆ ನಿನ್ನಯ ಕೋಮಲ ಪಾದಕೆ? ಯೋಗಿ, ಸದಾ ।
ಕೊಳ್ಳುವದೆನ್ನ ಮನಃಪದರಕ್ಷೆಯ ಸಂಚರಿಸಲ್ ॥ ೬ ॥

॥ ಸೀಸಪದ್ಯ ॥

ತೊಳಲಿ ತೃಷೆಯಿಂ ಜಳಾಶಯವ, ಪಥಿಕಂ ಬಳಲಿ ನೆಳಲನಂ, ಮಳೆಗಂಜಿದವ ನಿಳಯವಂ ।
ಚಳಿಯಿಂದ ಬಳಲಿದವನನಳವಂ, ಕತ್ತಲೆಯೊಳಳುಕುವಂ ಬೆಳಕನುರೆ ಹಸಿದತಿಥಿಯು ॥
ಅಲೆದಾಡುತಿರೆ ಗೃಹಸ್ಥನ ಪ್ರಸನ್ನಾನನವ ಸಲೆ ಕಂಡು ಮುಳುಗರೇನಾನಂದದಿ ।
ಪಲವಳಲುಗಳಿಗಳಲುವೆನ್ನ ಮನವಳಲವಂ ಕಳೆವ ನಿನ್ನಡಿಯ ನಿಟ್ಟಿಸಿ ನಲಿಯದೇ ॥ ೭ ॥

॥ ಮತ್ತೇಭವಿಕ್ರೀಡಿತ ॥

ಪಶುವೇಂ ಬಲ್ಲುದೆ ನಂಜಿದೆಂದು? ಪಸರೆಂದೆಲ್ಲಕ್ಕೆ ಬಾಯಿಕ್ಕದೇ? ।
ವಿಷಯಂಗಳ್ ಮನಮೊಚ್ಚಿಸಲ್ಕೆ ಪಶುವಾಂ ಬಾಯ್ಬಿಟ್ಟುಕೆಟ್ಟೇನುನಿ- ।
ನ್ನ ಸಮಾಬ್ಜಾಂಘ್ರಿಯ ಕ್ಷೇತ್ರದಲ್ಲಿ ನಲವಿಂ ಕಟ್ಟೊಡಿಸೈ ಜ್ಞಾನದಾ ।
ರಸಮಂ ನೀಂ ಪಶುನಾಥಯೋಗಿ ಪೊರೆಯೈ ಲೀಲಾವಿನೋದಂಗಳಿಂ ॥ ೮ ॥

॥ ಕಂದ ॥

ಭುವನದ ತಮಮಂ ಕಳೆವಂ ।
ರವಿ; ನೀನೆನ್ನಂತರಂಗಮಂ ಬೆಳಗೆಯೊ? ಪೇಳ್ ॥
ತವಕೃಪೆಯಿನೊಗೆವ ಜ್ಞಾನವು ।
ರವಿಕೋಟಿಯ ಬೆಳಗನೇನು ಗೆಲಿದಪುದಲ್ತೇ? ॥ ೯ ॥

ಗ್ರಂಥಕರ್ತ.

ವಿಷಯಾನುಕ್ರಮಣಿಕೆ.

ಶುದ್ಧಿಪತ್ರಿಕೆ.

ಪುಟ	ಸಾಲು	ಅಶುದ್ಧ.	ಶುದ್ಧ.
೬	೧೫	ಪ್ರಾರ್ಥಿಸಿದನು	ಪ್ರಾರ್ಥಿಸಿದನು.
೬	೨೪	ದೇದದೇವ	ದೇವದೇವ
೧೨	೩	ಕರಕಂಜಾತರೇ	ಕರಕಂಜಜಾತರೇ
೧೨	೮	ಕರಕಂಜಾತ	ಕರಕಂಜಜಾತ
೧೪	೧	ಪುತ್ರಾಭಿಲಾಷಿ	ಪುತ್ರಾಭಿಲಾಷೆ
೧೭	೧೬	ವಿರೂಪಾಕ್ಷಸಿದ್ಧಲಿಂಗನನ್ನು	ವಿರೂಪಾಕ್ಷಸಿದ್ಧಲಿಂಗರನ್ನು
೧೮	೧೬	ವಿಷಯೋಪಭೊಗ	ವಿಷಯೋಪಭೋಗ
೨೦	೭	ನಿಸ್ಪ್ರಹವೃತ್ತಿ	ನಿಸ್ಪೃಹವೃತ್ತಿ
೩೨	೮	ಜನವಿರೋಧವಾಗವಂತೆ	ಜನವಿರೋಧವಾಗದಂತೆ
೩೪	೨೧	ಬಾಹ್ಯಡಂಬರ	ಬಾಹ್ಯಾಡಂಬರ
೩೫	೧೨	ಕಾವಿಯು ವಸ್ತ್ರಾಂಬರ	ಕಾಷಾಂಬರ
೪೦	೧೨	ಹೊರಸುತಿರೆ	ಹೊರಸೂಸುತಿರೆ
೪೦	೧೩	ಲಜ್ಞಾ	ಲಜ್ಜಾ
೪೦	೨೪	ತಂತುಗಳ	ತಂತಿಗಳ
೪೧	೨೧	ಷಂಡ	ಷಂಢ
೫೧	೧೧	ಲೀಲಾಸ್ತಕ	ಲೀಲಾಸಕ್ತ
೫೬	೧೩	ಪರ್ಯಾವಸಾನ	ಪರ್ಯವಸಾನ
೫೮	೮	ಪ್ರತ್ಯಕ್ಷ್ಯವಾಗಿ	ಪ್ರತ್ಯಕ್ಷವಾಗಿ
೬೨	೩	ರೋಣಕ್ಕೆ	ನರೇಗಲ್ಲಿಗೆ
೯೨	೧	ಹೊರೆಗೇಡೀ	ಹೋವೆಗೇಡೀ
೧೦೯	೭	ಆನೆಯ	ಆನೆಯು
೧೦೯	೧೬	ನ್ಯರಾಗುವರು	ಧನ್ಯರಾಗುವರು.
೧೧೮	೧೭	ಚರವರಿಗೂ	ಚರವರರಿಗೂ
೧೨೯	೨	ಚಾವಿರವು	ವಿಚಾರವು
೧೩೩	೨೧	ಬಸನಬೋಧಾವೃತ	ಬಸವಬೋಧಾವೃತ
೧೩೫	೧೯	ಜನರ	ಜನರು
೧೩೬	೨೦	ಸ್ತ್ರಿಯರು	ಸ್ತ್ರೀಯರು

ಓಂ ಷಟ್‌ಸ್ಥಲ ಪರಬ್ರಹ್ಮಣೇನಮಃ

ಹಾಲಗೆರೆಯ
ಶ್ರೀಮನ್ನಿರಂಜನ ನಿರಾಭಾರಿ
ಅನ್ನದಾನೀಶ್ವರ
ಯೋಗಿರಾಜ ವಿಜಯ.

೧. ಗುರುಪರಂಪರೆ.

ಶ್ರೀಮದೂರ್ಜಿತವಾದ ಕೈಲಾಸಗಿರಿಯ ತಪ್ಪಲ; ಸೃಷ್ಟಿಯ ಸೊಬಗು; ಸೊಗದ ಸುಗ್ಗಿ; ಅಲ್ಲಿ ನಿಸರ್ಗಸಿದ್ಧವಾದ ಮನೋಹರವಾದ ಮಹತ್ತಮವಾದ ಸಭಾಮಂಟಪದಲ್ಲಿ ದಿವ್ಯ ಪೀಠದಲ್ಲಿ ಪುಲಿದೊವಲ ಹಾಸಿನಲ್ಲಿ ಲೋಕಕಲ್ಯಾಣಕರನಾದ ಶ್ರೀಶಂಕರನು ವಿರಾಜಮಾನನಾಗಿಹನು. ವಾಮಾಂಗದಲ್ಲಿ ಜಗನ್ಮಾತೆಯಾದ ನಗಜಾತೆಯು ರಂಜಿಸುತ್ತಲಿಹಳು. ಬಳಿಯಲ್ಲಿಯೇ ಕುಮಾರನೂ ಕುಂಜರ ಮುಖನೂ ನಲಿದಾಡುತ್ತಲಿಹರು. ದೇವತೆಗಳೂ ಮುನಿಗಳೂ ಇಕ್ಕೆಲಗಳಲ್ಲಿ ಓಳಿಗೊಂಡಿಹರು. ಮುಂದೆ ನಂದಿ ನಿಂದಿಹನು. ವರುಣನು ಆ ಮಹಾದೇವನ ಮೇಲೆ ಛತ್ರವನ್ನು ಹಿಡಿದಿಹನು. ವಾಯುವು ಚಾಮರವನ್ನೆತ್ತಿ ಢಾಳಿಸುತ್ತಿಹನು. ಆಗ ಹರಿಸುರೇಶರು ಮಂಗಳಗೀತೆಗಳನ್ನು ಹಾಡಿದರು. ಬ್ರಹ್ಮನು ರುದ್ರಸೂಕ್ತಗಳನ್ನು ಹೇಳಿದನು. ಉಳಿದ ದೇವತೆಗಳೂ ದನಿಗೂಡಿ ಇಂಪಾಗಿ ಹೊಗಳಿದರು. ಮುನಿಗಳೂ ಸಿದ್ಧಚಾರಣರೂ ಆನಂದದಿಂದ ತಲೆದೂಗಿ ನಲಿದಾಡಿದರು. ಪ್ರಮ

ಥಗಣಪವರು ಆನಂದನಿರ್ಭರರಾದರು. ಭೃಂಗಿಯು ನಲವೇರ್ಚಿ ಕುಣಿದಾಡಿದನು. ಆಗಲಾ ಮಹಾದೇವನು ಸಮಾಧಿ ಸುಖದಲ್ಲಿ ಜಿರೆಯುತ್ತಲೂ ಅವರೆಲ್ಲರ ಸೇವೆಯನ್ನು ಕೈಕೊಳ್ಳುತ್ತಲೂ ಮೆರೆದಿದ್ದನು. ಅಂತಹ ಸಂತೋಷದ ಕಾಲದಲ್ಲಿ ದೇವರ್ಷಿನಾರದನು, ವೀಣೆಯ ಮೇಲೆ ಕರಾಂಗುಲಿಗಳನ್ನಾಡಿಸುತ್ತಲೂ ನಿರ್ಮಲವಾದ ಹಲ್ಲುಗಳ ಕಾಂತಿಯನ್ನು ಸುತ್ತಲೂ ಪಸರಿಸುತ್ತಲೂ ಸ್ಪಷ್ಟವಾದ ದನಿಯಿಂದ ಪರಮೇಶ್ವರನ ನಾಮಸಂಕೀರ್ತನವನ್ನು ಮಾಡುತ್ತಲೂ ಅಕಸ್ಮಾತ್ತಾಗಿ ಆ ಶಿವಸಭೆಯನ್ನು ಪ್ರವೇಶಿಸಿದನು. ದೇವಮುನಿಗಳೆಲ್ಲರೂ ನಾರದನ ಮುಖದ ಕಡೆಗೆ ತವಕದಿಂದ ನೋಡತೊಡಗಿದರು. ಯಾಕಂದರೆ ನಾರದನು ಯಾವಾಗಲೂ ವಿಶ್ವದ ಒಂದಿಲ್ಲೊಂದು ಗೂಢ ರಹಸ್ಯವನ್ನು ತಂದು ಹೇಳುವನೆಂದು ಅವರ ಕುತೂಹಲ. ಇಂದೇನು ಹೊಸಸೋಜಿಗವನ್ನು ತಂದಿರಬಹುದೆಂದು ಅವರಿಗೆ ಆತುರವು.

ನಾರದನು ದೇವದೇವನಾದ ಶಂಕರನಿಗೆ ಸಾಷ್ಟಾಂಗವಾಗಿ ಎರಗಿ ಎದ್ದು ಮುಕುಳಿತ ಹಸ್ತನಾಗಿ ತಲೆವಾಗಿ— "ಸಾಂಬನೇ, ಸದಾಶಿವನೇ, ಸರ್ವಾಂತರ್ಯಾಮಿಯೇ, ನಿನ್ನ ಅಪಾರವಾದ ಸೃಷ್ಟಿ ಲೀಲೆಯನ್ನು ಕೊಂಡಾಡಲು ಸಾಧ್ಯವೇ? ನೀನು ನಿರಾಕಾರ–ನಿರ್ಗುಣನಾಗಿರುವದರಿಂದ ಪರಸ್ವರೂಪನೂ ಸಾಕಾರಸಗುಣನಾಗಿರುವದರಿಂದ ಅಪರಸ್ವರೂಪನೂ ಆಗಿರುವೆ. ಅಂದರೆ ನೀನು ಆದಿಮಧ್ಯಾಂತರಹಿತನೂ ಮಾಯಾತೀತನೂ ಆದ ಪರವಸ್ತುವಾಗಿದ್ದರೂ ಮಾಯಾತ್ಮಕವಾದ ಸೃಷ್ಟಿಯ ಸಾಪೇಕ್ಷದಿಂದ ಸಾಕಾರನೂ ಸಗುಣನೂ ಆದ ಅಪರಸ್ವರೂಪನಾಗಿರುವೆ. ಸೃಷ್ಟಿನಿರ್ಮಾಣಕ್ಕೆ ಊರ್ಣನಾಭಿಯಂತೆ ನೀನೇ ನಿಮಿತ್ತೋಪಾದಾನಕಾರಣನು, ನೀನೇ ಉಪಾಧಿಯು; ನಿರುಪಾಧಿಯಿಂದ ಈ ಸೃಷ್ಟಿಯನ್ನು ಮಾಡಿರುವೆ; ಅಂದರೆ ನೀನೇ ಆಗಿರುವೆ. ಯೋಗಿಯು ತನ್ನ ತಪಃಶಕ್ತಿಯಿಂದ ಗಿರಿದುರ್ಗಸೇನೆ ಮೊದಲಾದ ಹೊಸ ಸೃಷ್ಟಿಯನ್ನು ನಿರ್ಮಿಸುವಂತೆ ನೀನು ನಿನ್ನ ಅಂತಸ್ಥ ಇಚ್ಛಾಶಕ್ತಿಯಿಂದ

ಜಗದುತ್ಪತ್ತಿಯನ್ನು ಮಾಡಿದೆ. ಜಗತ್ಸ್ವರೂಪವು ನಿನ್ನ ಅಂತಃಶಕ್ತಿಯಲ್ಲಿ ಅಡಕವಾದದ್ದು; ಇದಕ್ಕೆ ಬೇರೆ ಉಪಾಧಿಯಿಲ್ಲ. ಅಥವಾ ನಿನ್ನ ಅಪರಸ್ವರೂಪವೇ ಇದಕ್ಕೆ ಉಪಾಧಿಯೆಂತಲೂ ಹೇಳಬಹುದು.

"ಹೀಗೆ ನೀನು ಮೊದಲು ಬ್ರಹ್ಮನನ್ನು ಸೃಜಿಸಿ ಆತನಿಂದ ಮುಂದಿನ ನಿರ್ಮಾಣ ಕಾರ್ಯವನ್ನು ನಡೆಯಿಸಿದೆ. ಆಗಲಾ ಬ್ರಹ್ಮನಿಗೆ ಜಗದುತ್ಪತ್ತಿಯ ಕ್ರಮವನ್ನು ತಿಳಿಸಲೆಂದು ನೀನು ಈ ಪ್ರಮಥ ಸೃಷ್ಟಿಯನ್ನು ನಿರ್ಮಿಸಿದೆ. ಅದರಿಂದಲೇ ಈ ಪ್ರಮಥರಿಗೆ ಅಪ್ರಾಕೃತರೆನ್ನುವದು. ಈ ಅಪ್ರಾಕೃತರು ಕೈಲಾಸದಲ್ಲಿ ಪ್ರಮಥರೆಂತಲೂ ಭೂಲೋಕದಲ್ಲಿ ವೀರಶೈವರೆಂತಲೂ ಅನ್ನಿಸಿಕೊಳ್ಳುವರು. ವೀರಶೈವರು ಇಷ್ಟಲಿಂಗವನ್ನಗಲದೆ ಅದನ್ನು ಯಾವಾಗಲೂ ಹೊಂದಿಯೂ ಅಂಗೈಯೊಳಗಿಟ್ಟು ದಿಟ್ಟಿಯನ್ನಿಟ್ಟು ಮನಸ್ಸನ್ನಿಟ್ಟು ಅರ್ಚಿಸಿಯೂ ಲಿಂಗಗುಣಗಳಿಂದ ಪರಿಣಮಿಸುತ್ತಿರ್ಪರು. ಅವರು ಬಯಸದೆ, ಅಲ್ಪ ಕ್ರಿಯೆಗಳಿಂದ ಒಂದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದುವರು. ಅದೇ ಬ್ರಹ್ಮನಿಂದ ಸೃಜಿಸಲ್ಪಟ್ಟ ಪ್ರಾಕೃತರಾದ ಉಳಿದ ಮಾನವರು ಅನಂತ ಕರ್ಮಗಳನ್ನು ಮಾಡಿ ಮೂರು ಜನ್ಮಗಳಲ್ಲಿ ಮುಕ್ತಿಯನ್ನು ಪಡೆಯುವರು. ಆದ್ದರಿಂದಲೇ ಸದ್ಗತಿದಾಯಕವಾದ ಮತಗಳಲ್ಲಿ ವೀರಶೈವಮತವು ಶ್ರೇಷ್ಠವೆಂದೆನಿಸಿರುವುದು. ದೇವಾ ಈಗ ಭೂಮಿಯಲ್ಲಿ ಇಂಥ ಧರ್ಮವೂ ಕೂಡ ಗ್ಲಾನಿಯನ್ನು ಹೊಂದುತಲಿಹುದು. ವೀರಶೈವರಲ್ಲಿ ಎಷ್ಟೋ ಜನರು ಮೋಕ್ಷವನ್ನು ಕೊಡುವ ಭಕ್ತಿ-ಜ್ಞಾನ-ವಿರತಿಗಳನ್ನು ಬಿಟ್ಟು, ಹಮ್ಮಿನಿಂದ ಹೊಟ್ಟೆ ಹೊರೆಯುವದೇ ಕರ್ತವ್ಯವೆಂದು ಭಾವಿಸಿದ್ದಾರೆ. ಗುರು, ಲಿಂಗ, ಜಂಗಮರನ್ನು ಪೂಜ್ಯರೆಂದು ಬಗೆಯುವದಿಲ್ಲ. ಅಷ್ಟಾವರಣಗಳಲ್ಲಿ ವಿಶ್ವಾಸವಿಲ್ಲ. ಅವುಗಳಿಗೆ ಕುಂದನಿಡುತ್ತಾರೆ. ಷಟಸ್ಥಲವಿದ್ಯೆಗೆ ಅಪಾರ್ಥವನ್ನು ಕಲ್ಪಿಸಿ ದ್ವೈತಾದಿ ಪರಮತಗಳಿಗೆ ಹೋಲಿಸುತ್ತಾರೆ. ಸನಾತನ ಧರ್ಮವಲ್ಲಿ ನಿಷ್ಠರಾದವರನ್ನು ಹಳಿಯುತ್ತಾರೆ. ಇದಕ್ಕೆ ಎಷ್ಟು

ಮಾತ್ರವೂ ಹೇಸುವದಿಲ್ಲ. ಇಂಥ ದುಷ್ಟರಿಗೆ ಬೆದರಿ ಕೆಲವು ಜನ ಧಾರ್ಮಿಕರು ಅಡವಿಗಳನ್ನು ಸೇರುತ್ತಾರೆ. ಈಗಿನ ಸ್ಥಿತಿಯನ್ನೇನು ಬಣ್ಣಿಸುವುದು? ದುಷ್ಕೃತ್ಯಗಳೇ ಸುಕೃತಗಳಾಗಿವೆ; ದುರಭಿಮಾನವೇ ಹೆಚ್ಚಾಗಿದೆ. ಜನರು ತುಡುಗು, ಹಾದರ, ಪುಸಿಗಳಲ್ಲಿಯೇ ಮಗ್ನರಾಗಿಹರು. ಧರ್ಮದಿಂದ ಆನಂದವೂ ಅಧರ್ಮದಿಂದ ದುರ್ಗತಿಯೂ ಆಗುವವೆಂಬದನ್ನು ತಿಳಿದೂ ತಿಳಿದೂ ಧರ್ಮಕ್ಕೆ ತಿಲಾಂಜಲಿಯನ್ನು ಕೊಟ್ಟು ದುರ್ಮನುಜರಾಗಿ ಪಾತಕವನ್ನು ಮಾಡಲಿಚ್ಛಿಸುವರು. ಅದೇನು ನಿನ್ನ ಮಾಯದಾಟವೋ ಅವರಿಗಾದ ಭ್ರಮೆಯೋ ತಿಳಿಯದು!! ಧರ್ಮವು ಶ್ರೇಯಸ್ಕರವಾದದ್ದು, ಧರ್ಮವೊಂದಿದ್ದರೆ ಚಂಡಾಲನು ಕುಲಜನಾಗುವನು! ಬಡವನು ಬಲ್ಲಿದನಾಗುವನು! ಕುರೂಪಿಯು ಸುರೂಪಿಯಾಗುವನು!! ಧರ್ಮವಂತನೇ ಲೋಕಮಾನ್ಯನು! ಧರ್ಮಕ್ಕೆ ಹಾನಿಯಿಲ್ಲ! ಆದ್ದರಿಂದ ವೇದಾದಿಗಳು ಧರ್ಮಕ್ಕೆ ಜಯವು! ಧರ್ಮದಿಂದ ಪಾಪನಾಶ! ಧರ್ಮದಲ್ಲಿ ಸುಖವು! ಧರ್ಮದಿಂದ ನಡೆ! ಧರ್ಮವೇ ಶ್ರೇಷ್ಠವಾದದ್ದೆಂದು ನಿರಾತಂಕವಾಗಿ ಹೊಗಳುವವು. ಧರ್ಮವನ್ನು ನಂಬಿ ನಡೆಯದವನೇ ದುಃಖಿ, ನರಕಿ, ಚಂಡಾಲ, ಮತ್ತೆ ಜಗದ ಅಕಲ್ಯಾಣಕರನು. ಆತನು ಜನನ ಮರಣಗಳಲ್ಲಿ ಪೇಚಾಡುವನು. ಲೋಕನಾಥನೇ ಪತಿತ ಪಾವನನೇ ಇಂತಹ ಧರ್ಮವು ಭೂಮಿಯಲ್ಲಿ ದಿನೇ ದಿನೇ ನಾಶವಾಗುತ್ತಲಿರುವದು. ಅದನ್ನೇನು ಹೇಳಲಿ! ನೀನೇ ಅದನ್ನು ಉದ್ಧರಿಸಲು ಸಮರ್ಥನು. ಪತಿತರನ್ನು ಪಾವನರನ್ನಾಗಿ ಮಾಡಿ ನಿನ್ನ ಬಿರುದನ್ನು ಸಾರ್ಥಕಗೊಳಿಸಬಾರದೇ?" ಎಂದು ಹಲವು ರೀತಿಯಿಂದ ನುತಿಸಿ ಬೇಡಿಕೊಂಡನು.

ಭೂಲೋಕದ ಕರುಣಾಜನಕವಾದ ಸ್ಥಿತಿಯನ್ನು ನಾರದನ ಹೃದಯಸ್ಪರ್ಶಿಯಾದ ವಾಕ್ಚಿತ್ರದಲ್ಲಿ ಕಂಡು ಶಿವನ ಸಭಿಕರೆಲ್ಲರು ಸ್ತಂಭೀಭೂತರಾದರು. ಆಗ ಶಿವನು ಅವರೆಲ್ಲರನ್ನು ನೋಡಿ ಮುಗುಳುನಗೆ ನಗುತ್ತ— "ನಾರದಮಹರ್ಷಿಯೇ ನಿನ್ನ ಮನೋಗತವನ್ನು ನಾನು ತಿಳಿದೆನು. ಭೂಲೋಕದಲ್ಲಿ ಧರ್ಮವೂ ನಾನಾ ಮತ

ಗಳೂ ಗ್ಲಾನಿಯನ್ನು ಹೊಂದುವದೂ ಉಂಟು; ನಾನಾ ಲೀಲೆಗಳಿಂದ ಅದನ್ನು ನಿವಾರಿಸಿ ಧರ್ಮಮತಗಳನ್ನು ಪೊರೆಯುವ ಶಕ್ತಿವಂತರೂ ಉಂಟು. ಈ ಕ್ರಮವು ನಡೆಯತಕ್ಕದ್ದೇ. ಇದಕ್ಕೆ ಬೇರೆ ಆಲೋಚನೆಯೇನು? ಲೋಕದಲ್ಲಿ ಅಧೀನರು ಅಥವಾ ಅನಧಿಕೃತರೆಂದೂ ಅಧಿಕೃತರೆಂದೂ ಎರಡು ಬಗೆಯ ಶರೀರಿಗಳುಂಟು; ಕಾಲಕರ್ಮಕ್ಕೆ ಆಧೀನರಾದವರೇ ಅಧೀನರು. ಅವರಿಗೆ ಸುಖದುಃಖ, ಷಡ್ರಿಪು, ಜನನ ಮರಣ ಮೊದಲಾದ ಧೂರ್ತಗುಣಗಳುಂಟು; ಸಪ್ತವ್ಯಸನಗಳು ಅವರನ್ನು ಬೆಂಬಳಿಸಿವೆ; ತಾಪತ್ರಯಗಳು ಅಂಟಿವೆ. ಅವರು ಕಿಂಚಿಜ್ಞರೂ ಅನೀಶ್ವರರೂ ಅದೃಷ್ಟ ಪರತಂತ್ರರೂ ಆಗಿರುವರು. ಅವರು ಸಂಸಾರದ ಬಾಧೆಯನ್ನು ಬಿಡಿಸಿಕೊಳ್ಳುವದಕ್ಕಾಗಿ ನನ್ನನ್ನು ಶರಣು ಹೊಗುವರು. ಕ್ರಿಯಾಜ್ಞಾನಗಳು ಸಿದ್ಧಿಸಲು, ಒಂದೇ ಜನ್ಮದಲ್ಲಿ ಅವರ ಪ್ರಾರಬ್ಧವು ತೀರುವದು. ಅವರು ಪೂರ್ವಜನ್ಮವನ್ನು ಅರಿಯರು. ಇದಕ್ಕೆ ವಿಪರೀತವಾಗಿ ಅಧಿಕೃತರು ಸರ್ವಜ್ಞರೂ ಈಶ್ವರರೂ ಸ್ವತಂತ್ರರೂ ಆಗಿರುತ್ತಾರೆ. ಅವರು ಅಭಿಮಾನಿಗಳಲ್ಲ; ಅಧಿಕಾರವಾಸನೆಯೇ ಅವರ ಪ್ರಾರಬ್ಧವು. ಅವರು ಭೂಮಿಯಲ್ಲಿ ಎಷ್ಟೋ ಲೀಲೆಗಳನ್ನೆಸಗಿದ ಬಳಿಕ ಆ ಕರ್ಮವು ತೀರುವದು. ಧರ್ಮಗ್ಲಾನಿಯಾಗಲು ಅದನ್ನು ತಿಳಿದು ಅವರು ಲೋಕಾನುಗ್ರಹಕ್ಕಾಗಿ ಸ್ವಯಂಸ್ಫೂರ್ತಿಯಿಂದಾಗಲಿ ನನ್ನ ಆಜ್ಞೆಯಿಂದಾಗಲಿ ಅವತರಿಸಿ, ನನ್ನ ದ್ರೋಹಿಗಳನ್ನು ಒಕ್ಕಲಿಕ್ಕಿ, ಧರ್ಮವನ್ನು ಕಾಪಾಡಿ, ಲೋಕಹಿತಮಾಡುವರು. ನಂದಿ, ಮನು, ವ್ಯಾಸ ಮೊದಲಾದ ಅಧಿಕೃತರು ಆಗಾಗ್ಗೆ ಅವತರಿಸಿದರು. ಅಧಿಕೃತರ ಅವತಾರಕ್ಕೆ ದೇಶ ಕಾಲ ಕುಲಾದಿಗಳ ನಿರ್ಬಂಧವಿಲ್ಲ. ಏಕಕಾಲದಲ್ಲಿಯೇ ಅನಂತರೂಪಗಳನ್ನೂ ಧರಿಸಿ ಧರ್ಮದ ಪುನರುಜ್ಜೀವನವನ್ನು ಮಾಡುವರು; ಅವರ ಮಹಿಮಾಶಕ್ತಿಯು ತರ್ಕಿಸಲಸಾಧ್ಯವು. ನಾರದ ಮುನಿಯೇ ಅದಿರಲಿ, ಕೃತಯುಗದಲ್ಲಿ ನಿರಂಜನನೆಂದೂ, ತ್ರೇತಾಯುಗದಲ್ಲಿ ನಿರ್ಮಾಯನೆಂದೂ ದ್ವಾಪರದಲ್ಲಿ ನಿಷ್ಕಲನೆಂದೂ ಹೆಸರು ಹೊಂದಿ ಅವತರಿಸಿ ಸಹಜ ಲೀಲೆಯನ್ನೆಸ

ಗಿದ ಅಧಿಕೃತನಾದ ಜಂಗಮನೇ ಈಗ ಕಲಿಯುಗದಲ್ಲಿ ಪ್ರಭುವೆಂಬ ಹೆಸರಿನಿಂದ ಅವತರಿಸಿ ವೀರಶೈವ ಜಗತ್ತನ್ನು ಪರಿಪಾಲಿಸುವನು. ನೀನು ಆಲೋಚಿಸಬೇಡ" ಎಂದು ಸಂತೈಸಿದನು. ಅದನ್ನು ತಿಳಿದು ಪ್ರಮಥ ಗಣವು ಉತ್ಸಾಹಗೊಂಡಿತು.

ಬಳಿಕ ಶಿವನು ಆತ್ಮಜ್ಯೋತಿಯನ್ನು ಅಂದರೆ ನಿಷ್ಕಲವೂ ಪರವಸ್ತುವೂ ಆದ ತನ್ನ ಚಿತ್ಕಲೆಯನ್ನು ಘನೀಭೂತಗೊಳಿಸಿ ಚರಾಕೃತಿಯನ್ನಾಗಿಸಿ ಪ್ರತ್ಯಕ್ಷಮಾಡಿಕೊಂಡನು. ಬಳಿಕ ಆ ಚರಮೂರ್ತಿಗೆ ನಮಸ್ಕಾರವನ್ನು ಮಾಡಿ ಆಸನದ ಮೇಲೆ ಕೂಡಿಸಿ, ಉಪಚರಿಸಿ ಕೈಮುಗಿದು—"ಪ್ರಭುವೆ, ನೀನು ಹಿಂದೆ ಯುಗಯುಗಗಳಲ್ಲಿ ಭೂಮಿಯಲ್ಲಿ ಅವತರಿಸಿ ಹೀನಸ್ಥಿತಿಗೆ ಬರತೊಡಗಿದ ಧರ್ಮವನ್ನು ಕಾಪಾಡಿದೆ. ಈಗಲೂ ಭೂಮಿಯಲ್ಲಿ ಧರ್ಮಗ್ಲಾನಿಯಾಗತೊಡಗಿದೆ. ದುರ್ಜನರ ಬಲವು ಹೆಚ್ಚುತ್ತಲಿದೆ. ಸದಾಚಾರದಿಂದಿದ್ದು, ಸದಾನಂದವನ್ನು ಪಡೆಯುವ ಒಲವು ನಾಶವಾಗತೊಡಗಿದೆ. ಆದ್ದರಿಂದ ಪ್ರಭು, ಈಗಲೂ ನೀನು ಭೂಲೋಕದಲ್ಲಿ ಅವತರಿಸಿ ನಿನ್ನ ಮಹಿಮಾಶಕ್ತಿಯಿಂದ ಧರ್ಮಗ್ಲಾನಿಯನ್ನು ತೊಲಗಿಸು; ನನ್ನ ಮತವನ್ನುದ್ಧರಿಸು; ಭವದುಃಖದಲ್ಲಿ ಬಳಲಿದ ದೀನರಿಗೆ ಸುಖದ ಮಾರ್ಗವನ್ನು ತೋರು." ಎಂದು ವಿನಯ ವಾಕ್ಯಗಳನ್ನಾಡಿ ಪ್ರಾರ್ಥಿಸಿದನು. ಅದಕ್ಕೆ ಆ ಪ್ರಭುವು ಸಂತೋಷದಿಂದ ಒಪ್ಪಿ ಅನಂತ ಸೂರ್ಯ ಪ್ರಕಾಶದಿಂದ. ಭೂಮಿಗಿಳಿದು ಬಂದನು.

ಅದನ್ನೆಲ್ಲ ನೋಡಿದ ಪಾರ್ವತಿಯು ಇದೇನು ಹುಚ್ಚಾಟವೆಂದು ಬಗೆದು ವಿಕಾರ ಮುಖದಿಂದ ಶಿವನನ್ನು ನೋಡಿ— "ಇದೆಂಥ ಕೆಲಸ? ನಿಮ್ಮ ಬುದ್ಧಿ ಅಳಿಯಿತೇ? ಇವನಾರು? ಅನ್ಯರಿಗೆ ನೀವು ನಮಸ್ಕರಿಸುವದೇ? ನೀವೇ ಸರ್ವೋತ್ತಮರೆಂದೂ ಅದ್ವಿತೀಯರೆಂದೂ ದೇವದೇವರೆಂದೂ ನಂಬಿಗೆಯಿರಲು ಹೀಗೆ ಆಚರಿಸಬಹುದೇ?" ಎಂದು ನುಡಿದಳು. ಅವಳ ಮುಖವನ್ನು ನೋಡಿ ಮನೋಭಾವವನ್ನು

ತಿಳಿದ ಶಿವನು ಮುಗುಳುನಗೆ ನಕ್ಕು—"ಪ್ರಿಯೆ, ಆತನು ಪರಸ್ವರೂಪನೂ ಪರಮನಿರಂಜನನೂ ಮಾಯಾತೀತನೂ ಆಗಿರುವನು. ಪರಶಿವನೆಂಬ ನಾಮವು ಅವನಿಗೇ ಯಥಾರ್ಥವು. ನನಗೆ ಆತನು ಅಧಿಷ್ಠಾನನಾಗಿ........" ಎನ್ನುತ್ತಿರಲು ಪಾರ್ವತಿಯು ಪತಿಯ ಅಭಿಮಾನದಿಂದ ವಿಕಾರವಶಳಾಗಿ ತಡೆಯದೆ ನಡುವೇ—"ಬಿಡಿಬಿಡಿರಿ. ಆತನ ಮಹಿಮೆಯನ್ನೇನು ಬಣ್ಣಿಸುವಿರಿ? ಆತನು ಮಾಯೆಗೆ ಮೀರಿದವನೋ? ಭೂಲೋಕದಲ್ಲಿ ಅವತರಿಸುವ ಅವನನ್ನು ನಾನು ಮಾಯಾಬದ್ಧನನ್ನಾಗಿ ಮಾಡಿದರೆ........" ಎನ್ನುತ್ತ ಪತಿಯನ್ನು ನೋಡಿದಳು. ಶಿವನು ಪಾರ್ವತಿಗೆ ಈ ಮಾತಿನ ಮನವರಿಕೆಯಾಗಲೆಂದೋ ಪ್ರಭುವಿನ ನಿಜಸ್ವರೂಪವೂ ಅನಂತಾನಂತಮಹಿಮೆಯೂ ಜಗತ್ತಿಗೆ ತಿಳಿಯಲೆಂದೋ ಆಗ ಸುಮ್ಮನಾದನಲ್ಲದೆ ದೇವಿಗೆ ಮರುಮಾತನ್ನು ಹೇಳಲಿಲ್ಲ. ಕೂಡಲೆ ಹೇವಕ್ಕೆ ಬಿದ್ದ ಪಾರ್ವತಿಯು ತನ್ನ ಅಂತಃಶಕ್ತಿಯಿಂದ ಓರ್ವ ಮಾಯಾ ಸ್ತ್ರೀಯನ್ನು ನಿರ್ಮಿಸಿದಳು. ಬಳಿಕ ಅವಳನ್ನು ಸತ್ಕರಿಸಿ—"ಮಗಳೇ, ನೀನು ಭೂಲೋಕದಲ್ಲಿ ಅವತರಿಸವ್ವಾ! ಅಲ್ಲಿ ನಿರಂಜನಪ್ರಭುವು ಅವತರಿಸಿಹನು. ನೀನು ನಿನ್ನ ಸೌಂದರ್ಯದಿಂದ ಆತನನ್ನು ಬೆರಗುಗೊಳಿಸಿ ಶೃಂಗಾರದ ವಿಲಾಸದಿಂದ ಮೆರೆದು ನೃತ್ಯಗೀತಾದಿಗಳನ್ನೆಸಗಿ ಆತನ ಮನವೊಲಿಸಿ ಕಾಮಲೀಲೆಗೊಳಪಡಿಸಿ ಗೆಲೆಯವ್ವಾ! ಶಿವಸಭೆಯಲ್ಲಿ ಆತನನ್ನು ಮಾಯಾಬಂಧನಕ್ಕೊಳಪಡಿಸುವೆನೆಂದು ಪ್ರತಿಜ್ಞೆಯನ್ನು ಮಾಡಿರುವೆನು. ಮುದ್ದುಗಣಿಯೇ ನನ್ನ ಮಾತು ಮೇಲಾಗುವಂತೆ ಮಾಡವ್ವಾ! ಹಾವಭಾವರಸವಿಲಾಸಗಳೊಡಗೂಡಿ ಅದ್ವಿತೀಯ ರೂಪಸಂಪನ್ನೆಯಾಗುವೆ. ಹೋಗು! ವಿಜಯವನ್ನು ಪಡೆದು ಬಾ!" ಎಂದು ಹರಸಿ ಕಳಿಸಿದಳು.

ವೈಭವ ಸಂಪನ್ನನಾದ ಬನವಸಿಯಲ್ಲಿ ಮಮಕಾರನೆಂಬ ರಾಜನಿದ್ದನು. ಅವನ ಹೆಂಡತಿಯ ಹೆಸರು ಮೋಹಿನಿಯು. ಅವರಿಬ್ಬರು ಮಕ್ಕಳಿಲ್ಲದೆ ಹಂಬಲಿಸುತ್ತ ಕಂಡ ಕಂಡ ದೇವರಿಗೆ ಕೈಮುಗಿದು ಹರ

ಕೆಯನ್ನು ಹೊತ್ತು ಬೇಡಿಕೊಳ್ಳುತ್ತಿರಲು ಶಾಂಬರೀ ಮಾಯೆಯು, ಪಾರ್ವತಿಯ ಸಂಕಲ್ಪದಂತೆ ಅವರ ಹೊಟ್ಟೆಯಿಂದ ಹುಟ್ಟಿದಳು. ಮಗುವಿನ ಮೋಹದಲ್ಲಿ ಸಿಲುಕಿದ ತಾಯಿತಂದೆಗಳು ಅವಳಿಗೆ ಮಾಯೆಯೆಂದೇ ಹೆಸರನ್ನಿಟ್ಟರು. ಇತ್ತ ವಲ್ಲಿನಗರವೆಂಬದಕ್ಕೆ ಅರಸನಾದ ನಿರಹಂಕಾರ ಮತ್ತು ಆತನ ಹೆಂಡತಿ ಸುಜ್ಞಾನಾಂಬೆ ಇವರು ಪುತ್ರಾಪೇಕ್ಷೆಯಿಂದ ಶಿವನನ್ನು ಭಕ್ತಿಯಿಂದ ಮೊರೆಹೊಕ್ಕಿರಲು ಪ್ರಭುವು ಅವರಿಗೆ ಮಗುವೆನಿಸಿ ಅಯೋನಿಜನಾಗಿ ಉದ್ಭವಿಸಿದ್ದನು. ಆತನು ದೊಡ್ಡವನಾಗಿ ಸಂಸಾರವನ್ನುಳಿದು ಅಂಗಗುಣಗಳ ಸಂಬಂಧವನ್ನು ಅಳಿದು ಶಿವತತ್ವಗಳನ್ನು ಬೀರುತ್ತ ಬನವಸಿಗೆ ಬಂದನು.

ಮಾಯೆಯು ಬಗೆಬಗೆಯ ಸೊಬಗುಗಳಿಂದ ಬೆಳೆಯ ತೊಡಗಿದಳು. ಬಾಲ್ಯಾವಸ್ಥೆಯು ಕಳೆದು ಹೋಯಿತು. ತಾರುಣ್ಯವು ತಲೆದೋರಿತು. ದೇಹ ಕಾಂತಿಯು ಹೆಚ್ಚಿ ಅವಯವಗಳು ವಿಕಸಿತವಾಗಿ ಮನೋಹರವಾದವು. ಸೌಂದರ್ಯದ ಬಲದಿಂದಲೇ ಪ್ರಭುವನ್ನು ಜಯಿಸಲೆಂದು ಹುಟ್ಟಿದವಳು, ಅವಳ ರೂಪಕ್ಕೇನು ಕೊರತೆಯೋ? ಸಾವಿರಾರ ವರ್ಷಗಳ ತಪದ ಭಾರವನ್ನು ಮೇಲೆ ಹೇರಿ ಗಟ್ಟಿ ಮಾಡಿದ ಯೋಗಿಗಳ ವಜ್ರದಂಥ ಎದೆಯನ್ನು ಸಹ ಕ್ಷಣಮಾತ್ರದಲ್ಲಿ ಒಡೆದು ಬಿಡುವಂತಿದ್ದಳು. ಆಕೆಯು ಅಹಂಕಾರನೆಂಬ ಗುರುವಿನಿಂದ ಶಿವೋಪದೇಶವನ್ನು ಹೊಂದಿ, ಆ ಮಹಾದೇವನೇ ತನ್ನ ಪತಿಯಾಗಬೇಕೆಂದು ಮಧುಕೇಶ್ವರನನ್ನು ನಾನಾ ಬಗೆಯಾಗಿ ಪೂಜಿಸುತ್ತ ಬೇಡಿಕೊಳ್ಳುತ್ತಲಿದ್ದಳು. ಮೇಲೆ ಹೇಳಿದಂತೆ ಪ್ರಭುವು ಬನವಸಿಗೆ ಬಂದು ಒಂದುದಿನ ಮಧುಕೇಶ್ವರನ ದೇವಾಲಯದಲ್ಲಿ ಸಾನಂದ ಮುದ್ರೆಯಿಂದ ಒಂದು ಕಡೆಗೆ ಕುಳಿತುಕೊಂಡಿದ್ದನು. ನಿತ್ಯದಂತೆ ದೇವಾಲಯಕ್ಕೆ ಬಂದ ಮಾಯೆಯು ಅಕಸ್ಮಾತ್ತಾಗಿ ಅವನನ್ನು ನೋಡಿದಳು. ಪ್ರಭುವಿನ ಅನೂನವಾದ ತೇಜಸ್ಸನ್ನು ನೋಡಿ ವಿಮೋಹಿತಳಾದಳು. 'ತಾನಪೇಕ್ಷಿಸುವ ಶಿವನೇ ಈ ರೂಪದಲ್ಲಿ ಬಂದಿರ

ಬಹುದು. ಇಲ್ಲದಿದ್ದರೆ ತನ್ನ ಮನವೇಕೆ ಇಷ್ಟು ಮೋಹಗೊಳ್ಳು ತ್ತಿತ್ತು?' ಎಂದು ಆಲೋಚಿಸಿದಳು. ಬಳಿಕ ಸ್ಥಿರವಾದ ಆ ಆಲೋಚನೆಯ ಬಲುಮೆಯಿಂದ ಆತನನ್ನು ತನ್ನರಮನೆಗೆ ಕರೆದೊಯ್ದು ಸತ್ಕರಿಸಬೇಕೆಂದು ನಿಶ್ಚಯಿಸಿದಳು. ಅದರಂತೆ "ನಮ್ಮ ಮನೆಗೆ ಬಂದು ನನ್ನ ಸೇವೆಯನ್ನು ಕೈಕೊಳ್ಳಬೇಕೆಂದು ಬೇಡಿಕೊಂಡಳು," ಆತನು ಒಪ್ಪಲಿಲ್ಲ. ನಿರುಪಾಯಳಾಗಿ ಹೋದಳು. ಅಂದಿನ ದಿವಸದಲ್ಲೆಲ್ಲ ಆಕೆಯು ವಿರಹ ತಾಪದಿಂದ ಬಳಲಿ ಬಗೆಬಗೆಯ ಆಲೋಚನೆ ಯಲ್ಲಿಯೇ ಕಾಲವನ್ನು ಕಳೆದಳು. ಮರುದಿವಸ ಬಂದು ಮತ್ತೆ ಆತ ನನ್ನು ಕಂಡು ಪರಿಪರಿಯ ಹಾವಭಾವಗಳಿಂದಲೂ, ಒನಪುಒಯ್ಯಾ ರಗಳಿಂದಲೂ, ಕಾಮುಚೇಷ್ಟೆಗಳನ್ನು ಮಾಡಿ ಆತನ ಮನವೊಲಿಸ ಲೆಳಿಸಿದಳು. ನೃತ್ಯಗೀತಾದಿಗಳನ್ನು ಮಾಡಿ ಕಾಮವಾಸನೆಯನ್ನು ಹುಟ್ಟಿಸಲು ಯತ್ನಿಸಿದಳು. ಏನಾದರೂ ಪ್ರಭುವು ಕಣ್ಣೆತ್ತಿ ಆಕೆ ಯನ್ನು ನೋಡಲಿಲ್ಲ. ಆತನ ಗಂಭೀರಭಾವದಲ್ಲಿ ಅಂತರವಾಗಲಿಲ್ಲ. ಬಳಿಕ ಮಾಯೆಯು ಮನಸ್ಸಿನ ಹರಿಯನ್ನು ತಡೆಯದೆ ಕಾಮಾತು ರಳಾಗಿ ಪ್ರಭುವಿನನ್ನು ಆಲಿಂಗಿಸಲು ಮೇಲ್ವರಿದಳು. ಆದರೆ ಪ್ರಭುವು ಪಂಚಭೌತಿಕ ದೇಹದವನಾಗಿದ್ದರಲ್ಲವೇ ಅವಳ ಕೈಗೆ ಸಿಕ್ಕುವದು? ಆಕೆಯು ಬಯಲನ್ನಪ್ಪಿದಂತಾಯಿತು. ಆ ಮೇಲೆ ಪ್ರಭುವು ಅಲ್ಲಿಂ ದೆದ್ದು ಅಡವಿಗೆ ಹೊರಟು ಹೋದನು. ಮಾಯೆಯೂ ಕಾಡನ್ನು ಸೇರಿದಳು. ಕಷ್ಟಬಟ್ಟು ಮತ್ತೆ ಪ್ರಭುವನ್ನು ಕಂಡಳು. ಪರಿಪರಿ ಯಿಂದ ಆತನನ್ನು ವಶಮಾಡಿಕೊಳ್ಳಲು ಯತ್ನಿಸಿದಳು. ಕಡೆಗೆ ನಿರಾ ಶೆಯನ್ನು ಹೊಂದಿದಳು. ಹೀಗೆ ಆಕೆಯು ಪ್ರಭುವನ್ನು ಮೋಹ ಗೊಳಿಸುವದೊತ್ತಟ್ಟಿಗುಳಿದು ತಾನೇ ಆತನಿಗೆ ಮೋಹಿಸಿದುದನ್ನು ತಿಳಿದು ಪಾರ್ವತಿಯು ಅವಳನ್ನು ಎಚ್ಚರಿಸಲೆಂದು ವಿಮಲೆಯನ್ನು ಭೂಲೋಕಕ್ಕೆ ಅಟ್ಟಿದಳು. ಅವಳಿಂದಲೂ ಮಾಯೆಯು ಎಚ್ಚರಗೊ ಳ್ಳಲಿಲ್ಲ. ಪ್ರಭುವಿನ ಹಂಬಲವು ಅವಳನ್ನು ಬಿಡಲಿಲ್ಲ. ಪ್ರಭುವೂ ಇವಳ ಯಾವ ಪ್ರಯತ್ನಕ್ಕೂ ಒಳಗಾಗಲಿಲ್ಲ. ಪಾರ್ವತಿಯು ಸಂಕ

ಲ್ಪವಿದ್ದವರಿಂದ ಇದೇ ಮಾಯೆಯು ಹುಟ್ಟಿದಾಗಲೇ ಇವಳ ಪ್ರಭಾವದಿಂದ ಬನವಸಿಯ ಪ್ರಾಂತದಲ್ಲಿಯ ವಿರಾಗಿಗಳಲ್ಲಿಯೂ ಕಾಮವಾಸನೆಯು ಉದ್ಭವಿಸಿತು! ತರುಲತೆಗಳು ಚಿಗಿತವು! ವೃದ್ಧರು ತರುಣರಂತೆ ಕಾಣಹತ್ತಿದರು!! ಎಷ್ಟೋ ದಿವಸಗಳ ಹಿಂದೆ ಅಗಲಿ ಹೋದ ತಮ್ಮ ನಲ್ಲನಲ್ಲೆಯರನ್ನು ನೆನೆದು ಮುದುಕೆಯರೂ ಮುದುಕರೂ ವಿರಹತಾಪದಿಂದ ಬಳಲಿದರು!! ಆದರೆ ಅದೇ ಮಾಯೆಯೇ ಈಗ ಅನುಪಮಸುಂದರಿಯಾಗಿ, ನೂತನಯೌವನದ ಸಂಪತ್ತನ್ನು ಪಡೆದವಳಾಗಿ, ಕಾಮಕಲೆಗಳಿಂದ ಕೂಡಿದವಳಾಗಿ, ತಾನಾಗಿ ಬಂದು ವಿವಿಧ ರೀತಿಗಳಿಂದ ಅಂಗಸಂಗಕ್ಕಾಗಿ ಮನವೊಲಿಸಲು ಯತ್ನಿಸಿದರೆ, ಪ್ರಭುವಿನ ಮನದಲ್ಲಿ ಕಾಮವಾಸನೆಯು ಸುಳಿವು ಸಹ ತೋರಲಿಲ್ಲ. ಮಾಯಾ ವಿಶಿಷ್ಟನಾಗಿದ್ದರೆ ಮಾತ್ರ ಮಾಯೆಯ ಮೋಹಕ್ಕೊಳಬೀಳಬಹುದಾಗಿತ್ತು. ಆದರೆ ಪ್ರಭುವು ನಿರ್ಮಾಯಿಕನು. ಮಾಯೆಯು ತನ್ನ ಮೈಮೇಲೆ ಹರಿದು ಬರುವಾಗ ಆತನು ಅಲ್ಲ! ಮಾ! ಅಲ್ಲ! ಮಾ! (ತಾಯೀ, ಬೇಡ) ಎನ್ನುತ್ತ ಹಿಂದಕ್ಕೆ ಸರಿಯುತ್ತಿದ್ದನು. ಆಗ ಆಕೆಯು "ಮತ್ತೆ ಮತ್ತೆ ಅಲ್ಲಮಾ, ಅಲ್ಲಮಾ, ಅಂತೆ ಇದೇನು?" ಎಂದು ಪರಿಹಾಸ ಮಾಡಿದಳು. ಅಂದಿನಿಂದಲೇ ಪ್ರಭುವಿಗೆ ಅಲ್ಲಮಾಪ್ರಭುವೆಂಬ ಹೆಸರು ಬಳಿಕೆಯಲ್ಲಿ ಬಂದಿರಬೇಕು.

ಇರಲಿ ಹೀಗೆ ನಿರಾಶೆಗೊಂಡ ಮಾಯೆಯು ಕೂಡಲೆ ಜನ್ಮವನ್ನು ನೀಗಿ ಕೈಲಾಸವನ್ನು ಸೇರಿದಳು. ಶಿವಸಭೆಯಲ್ಲಿ ಪಾರ್ವತಿಯು, ಪ್ರಭುವನ್ನು ಸೋಲಿಸದೆ ತಾನೇ ಸೋತು ಬಂದ ಮಾಯೆಯನ್ನು ಕಂಡು ತಲೆಯೆತ್ತದಂತಾಗಿ ನಾಚಿ ತಲೆಬಾಗಿಸಿದಳು. ಅದನ್ನು ಕಂಡು ಶಿವನು ನಕ್ಕು—"ಪ್ರಿಯೆ, ವ್ಯಸನವೇಕೆ? ಪ್ರಭುವು ಇಂಥ ಮೋಹಾದಿಗುಣಗಳಿಗೆ ವಶನಾಗತಕ್ಕವನಲ್ಲ. ಅವನನ್ನು ವಶಪಡಿಸಿಕೊಳ್ಳುವದಾದರೆ ನಿನ್ನ ಚಿತ್ಕಲೆಯನ್ನು ಪ್ರತಿರೂಪಿಸಿ ಅವಳಿಗೆ ಸತ್ವಗುಣ ಭಕ್ತಿ ವಿರತಿಗಳ ಉಡುಗೆಗಳನ್ನುಡಿಸಿ ಕಳಿಸಿ ನೋಡು" ಎಂದನು.

ಅದಕ್ಕೊಪ್ಪಿ ದೇವಿಯು ಹಾಗೆಯೇ ಮಾಡಿದಳು. ಪಾರ್ವತಿಯು ಆ ಚಿತ್ರಲೆಯೇ ಉಡುತಡಿಯಲ್ಲಿ ವೀರಶೈವ ಸದ್ಭಕ್ತನ ಹೊಟ್ಟೆಯಲ್ಲಿ ಹುಟ್ಟಿತು. ಆ ಕೂಸಿಗೆ ಮಹಾದೇವಿಯೆಂಬ ಹೆಸರು. ಮಹಾದೇವಿಯಕ್ಕನು ಬೆಳೆದು ಪ್ರಸಿದ್ಧಳಾದಳು. ತನಗೆ ಮೋಹಿಸಿ ಬಗೆ ಬಗೆಯ ಆಶೆ ತೋರಿಸಿದ ಕೌಶಿಕ ರಾಜನ ಮನೋಭಂಗವನ್ನು ಮಾಡಿದಳು. ಬಳಿಕ ಸದ್ಭಕ್ತಿಯಿಂದ ಕಷ್ಟಗಳನ್ನು ಲೆಕ್ಕಿಸದೆ ಅಡವಿಯೆಲ್ಲ ತಿರುಗಿ ಪ್ರಭುವಿನ ಪಾದವನ್ನು ಕಂಡು, ತನಗಿದ್ದ ಭವಬಾಧೆಯನ್ನು ತೊಲಗಿಸಿ ಉದ್ಧರಿಸಬೇಕೆಂದು ಮೊರೆಬಿದ್ದಳು. ಅವಳ ವಿಮಲಭಕ್ತಿಗೆ ಮೆಚ್ಚಿ ಪ್ರಭುವು ಅವಳಿಗೆ ಜ್ಞಾನೋಪದೇಶವನ್ನು ಮಾಡಿದನು.

ಅಲ್ಲಮಪ್ರಭುವು ಅಲ್ಲಲ್ಲಿ ಸಂಚರಿಸಿ ಶಿವದ್ರೋಹಿಗಳನ್ನು ಒಕ್ಕಲಿಕ್ಕಿ ದುರಾಚಾರಿಗಳನ್ನು ದಂಡಿಸಿ ಸದಾಚಾರಿಗಳಿಗೆ ಶಿವಾದ್ವೈತ ಜ್ಞಾನವನ್ನರುಹಿ ಶಿವಪಥದಲ್ಲಿ ನಿಲ್ಲಿಸಿದನು; ಕಲ್ಯಾಣಕ್ಕೆ ಬಂದು ಬಸವೇಶ್ವರಾದಿ ಪ್ರಮಥರಿಗೂ ಶಿವಶರಣರಿಗೂ ಶಿವಮಾರ್ಗವನ್ನು ಸುಗಮವಾಗಿ ತಿಳಿಸಿದನು. ಆತನೊಮ್ಮೆ ಚಿತ್ರಗಿಗೆ ಬಂದು ಅಲ್ಲಿ ಕೆಲದಿನವಿದ್ದು ಶರಣು ಬಂದ ಭಕ್ತರನ್ನು ಪೊರೆದು ಮುಂದೆ ಹೊರಟನು. ಆದರೆ ಆತನ ಕೃಪಾಲೋಲುಪರಾದ ಅಲ್ಲಿಯ ಭಕ್ತರು ಅವನನ್ನು ಅಗಲಲು ಸಮ್ಮತಿಸದೆ ಮೊರೆಯಿಟ್ಟರು. ಪ್ರಭುವು ಅದನ್ನು ತಿಳಿದು ತನ್ನ ಹಿಂದಿರುವ ಮೂರುಸಾವಿರ ವಿರಕ್ತರಲ್ಲಿ ಗುರುಮಹಾಂತೇಶನೆಂಬ ಚರಮೂರ್ತಿಯನ್ನು ಅಲ್ಲಿಟ್ಟು ಮುಂದೆ ನಡೆದನು.

ಗುರುಮಹಾಂತೇಶಸ್ವಾಮಿಗಳು ಮಹಿಮಾನಿಧಿಗಳಾಗಿ ಶಿವಯೋಗ ಸಾಮ್ರಾಜ್ಯದಲ್ಲಿ ಸಾಂದ್ರಾನಂದ ಲಯವುಳ್ಳವರಾಗಿ ನಡೆದು ಕಡೆಗೆ ವೀರಶೈವ ಮತದ ಸಂಗ್ರಹಕ್ಕಾಗಿ ವಿಜಯಮಹಾಂತದೇಶಿಕ, ಅನ್ನದಾನೀಶ್ವರ, ಕೊಟ್ಟೂರೇಶ್ವರ ಎಂಬವರಿಗೆ ಚರಾಧಿಕಾರವನ್ನು ಕೊಟ್ಟು ಬೇರೆ ಬೇರೆ ಕಡೆಗೆ ಕಳಿಸಿ ಲಿಂಗೈಕ್ಯರಾದರು.

ಅನ್ನದಾನೀಶ್ವರಸ್ವಾಮಿಗಳು ಸುತ್ತಲೂ ಸಂಚರಿಸಿ ಷಟ್‌ಸ್ಥಲ ಜ್ಞಾನವನ್ನು ಬೋಧಿಸಿ ಕಡೆಗೆ ಹಾಲಗೆರೆಯಲ್ಲಿ ನಿಂತು ಶಿವಯೋಗ ಸುಖವನ್ನು ಅನುಭವಿಸಿದರು. ಇವರ ಕರಕಂಜಾತಪರಂಪರೆಯಲ್ಲಿ ಕ್ರಮವಾಗಿ ಕರಿಸಿದ್ಧಸ್ವಾಮಿಗಳು, ಮುಪ್ಪಿನಬಸವಲಿಂಗಾರ್ಯರು, ಅನ್ನದಾನೀಶ, ಕಿರಿಯಮುಪ್ಪಿನಬಸವಲಿಂಗಾರ್ಯ, ಪಿರಿಯನ್ನದಾನೀಶ್ವರ, ಗುರುಅನ್ನದಾನೀಶ್ವರ, ಮುಪ್ಪಿನಬಸವಲಿಂಗಾರ್ಯ ಎಂಬವರು ಸ್ವಾಮಿಗಳಾದರು. ಕಡೆಯವರಾದ ಮುಪ್ಪಿನಬಸವಲಿಂಗಾರ್ಯರ ಕರಕಂಜಾತರೇ ನಮ್ಮ ಈ ಚರಿತ್ರನಾಯಕರು! ಸಚ್ಚರಿತ್ರರು! ಕರುಣಾಪಾರರು!!

೨. ನೀನಲ್ಲದೆ ಇನ್ನಾರು ತಕ್ಕವರು?

ಸಹ್ಯಪರ್ವತವಂತೆ, ಅಲ್ಲೆಲ್ಲಿಯೋ ಮಲಾಪಹಾರಿಣಿಯು ಹುಟ್ಟಿದಳು. ಅವಳು ಚಿಕ್ಕಂದಿನಲ್ಲಿ ಮಂಜುಳವಾದ ಧ್ವನಿಯಿಂದ ಗಾನವನ್ನು ಮಾಡುತ್ತ ನಲಿದು ಅಲ್ಲಲ್ಲಿ ಸುಳಿದಾಡಿದಳು. ಬಳಿಕ ಪ್ರಾಯವು ಬರಬರುತ್ತಲೇ ಅವಳಿಗೆ ನಮ್ಮ ಬೆಳವಲಿನ ಸೌಕರ್ಯ ಸಂಪತ್ತುಗಳನ್ನು ನೋಡಬೇಕೆಂಬ ಆಶೆಯು ಹುಟ್ಟಿತು. ಅವಳು ಇಲ್ಲಿಗೆ ಬಂದು ಸುತ್ತಲಿನ ಸೊಬಗನ್ನು ನೋಡುತ್ತ ಮಂದಗಮನದಿಂದ ಪೂರ್ವಾಭಿಮುಖಳಾಗಿ ನಡೆದಿದ್ದಳು. ಅಷ್ಟರಲ್ಲಿ ಹಿರಿಯ ಸಹೋದರಿಯಂತಿದ್ದ ಪ್ರೀತಿಯ ಗೆಳತಿಯಾದ ಕೃಷ್ಣೆಯು ಪತಿಯ ಮನೆಗೆ ನಡೆದಿರುವಳೆಂಬದನ್ನು ಕೇಳಿದಳು. ಅವಳನ್ನು ಕಾಣುವ ಕುತೂಹಲದಿಂದ ಈಶಾನ್ಯಕ್ಕೆ ತಿರುಗಿ ಭರದಿಂದ ಆ ನಿಟ್ಟಿಗೆ ಸಾಗಿದಳು.

ಸಂಗಮನಾಥನ ಸನ್ನಿಧಿಯಲ್ಲಿಯೇ ತನ್ನ ಪ್ರಿಯಸಖಿಯನ್ನು ಕೂಡಿ ಆನಂದಿತಳಾದಳು. ಆಕೆಯು ಮಾರ್ಗದಲ್ಲಿ ತನ್ನ ಹೆಸರಿಗನುಗುಣವಾಗಿ ಮೊರೆಹೊಕ್ಕವರ ಪಾಪವನ್ನೆಲ್ಲ ಪರಿಹರಿಸಿದ್ದರಿಂದ ಅವರ ಪಾಪವು ತನ್ನಲ್ಲಿ ಸಂಗ್ರಹವಾಗಲು ಅದನ್ನು ಕಳೆದುಕೊಂಡು ಪಾವನಳಾಗಬೇಕೆಂದು ಬಗೆದು ಜಂಗಮಪದವನ್ನು ತನ್ನ ತಲೆಯಲ್ಲಿ ಧರಿಸಿರುವಳೋ ಎಂಬಂತೆ ಗಂಜಿಹಾಳದ ವಿರಕ್ತಮಠವು ನದಿಯ ಪಾತ್ರಕ್ಕೆ ಹೊಂದಿಯೇ ವಿರಾಜಿಸುತ್ತಲಿರುವದು. ಅಲ್ಲಮಪ್ರಭು ಪರಂಪರಾಗತನಾದ ಮುಪ್ಪಿನಬಸವಲಿಂಗಾರ್ಯನೆಂಬ ಚರವರ್ಯನು ಆ ಮಠದ ಸ್ವಾಮಿಯು.

ಈ ಮುಪ್ಪಿನಬಸವಲಿಂಗಸ್ವಾಮಿಯು ಭವಪಾಶಬಂಧನವನ್ನು ಸಂಪೂರ್ಣವಾಗಿ ಹರಿದೊಗೆದವನಾಗಿ ಷಟ್‌ಸ್ಥಲಜ್ಞಾನಕೋವಿದನಾಗಿದ್ದನು. ಇದಲ್ಲದೆ ಶಾಂತನೂ ಪಾಪರಹಿತನೂ ಭೂತದಯಾಪರನೂ ಆಗಿ ಖ್ಯಾತಿಯನ್ನು ಹೊಂದಿದ್ದನು. ಲಿಂಗಾಂಗಸಮರಸಜ್ಞಾನದಿಂದ ಕಂಗೊಳಿಸುತ್ತಿದ್ದನು. ಆತನು ಆಶ್ರಿತರಾದ ಭಕ್ತವೃಂದಕ್ಕೆ ಇಂದ್ರಿಯಪ್ರಕರದಲ್ಲಿ ಲಿಂಗ ಸಂಬಂಧವನ್ನು ಮಾಡಿ ಅಂಗಗುಣಗಳನ್ನು ಕಳೆದು ಚಿಲ್ಲಿಂಗಗುಣಗಳನ್ನು ಇರಿಸುವನು. ಕರ್ಮದ ತೊಡಕನ್ನು ಅಳಿಸಿ, 'ಮಗನೇ ನಿನಗಿನ್ನು ಭವಬಾಧೆಯಿಲ್ಲ.' ಎಂದು ಅಭಯವಿತ್ತು ನೂರೊಂದು ಸ್ಥಲದ ಜ್ಞಾನಾಮೃತವನ್ನು ಕುಡಿಸಿ, ನಲಿಸಿ ಕಾಪಾಡುವನು. ಭಕ್ತರೆಲ್ಲರು ಈತನೇ ಪರಶಿವನೆಂದು ಭಾವಿಸಿ, ಭಕ್ತಿಯಿಂದ ಅವನನ್ನು ಆದರಿಸುತ್ತಲಿದ್ದರು.

ಅದೇ ಗಂಜಿಹಾಳದಲ್ಲಿರುವ ಚೌಕೀಮಠದ ಕರಿವೀರಾರ್ಯನೂ ಅವನ ಧರ್ಮಪತ್ನಿಯಾದ ಲಿಂಗಮ್ಮನೂ ಈ ಚರಶ್ರೇಷ್ಠನಲ್ಲಿ ಅತ್ಯಂತ ನಂಬಿಗೆಯನ್ನಿಟ್ಟು ನಡೆದುಕೊಳ್ಳುತ್ತಿದ್ದರು. ಅವರು ಅನ್ನವಸ್ತ್ರಗಳಿಂದ ಸಾಕಾದವರಾಗಿದ್ದರೂ ಸಂತಾನವಿಲ್ಲದೆ ಕೊರಗುತ್ತಿದ್ದರು. ಕಡೆಗವರು ಆ ಮಹಿಮನ ಪಾದಗಳ ಮೇಲೆ ಬಿದ್ದು— 'ಗುರುದೇವನೇ,

ಪುತ್ರಾಭಿಲಾಷೆಯಿಂದ ಮರುಮರುಗಿ ನಿಮ್ಮ ಪಾದಗಳನ್ನೇ ಮೊರೆ ಹೊಕ್ಕೆವು. ನಮ್ಮ ವಂಶೋದ್ಧಾರವನ್ನು ಮಾಡಿ ರಕ್ಷಿಸಬೇಕು' ಎಂದು ಬೇಡಿಕೊಂಡರು. ಅದಕ್ಕೆ ಆ ಮುಪ್ಪಿನಬಸವಲಿಂಗದೇವನು,-- "ದೃಢಚಿತ್ತನೇ ಚಿಂತಿಸಬೇಡ, ಶಿವನು ಕರುಣಿಸುವನು. ನಿನಗೆ ಪುತ್ರಲಾಭವಾಗುವದು. ನೀನು ಮೊದಲು ಹುಟ್ಟಿದವನನ್ನು ನಿನ್ನ ವಂಶಾಭಿವೃದ್ಧಿಗಾಗಿ ಮನೆತನಕ್ಕಿಟ್ಟುಕೊಂಡು ಮುಂದೆ ಹುಟ್ಟುವ ಗಂಡುಮಕ್ಕಳನ್ನು ಈ ಮಠಕ್ಕೆ ಕೊಡುವೆಯಾ?" ಎಂದು ತಟ್ಟನೆ ಕೇಳಿ ಬಿಟ್ಟನು. ಅದಕ್ಕೆ ದಂಪತಿಗಳಾದರೂ ಎಷ್ಟು ಮಾತ್ರವೂ ಅನುಮಾನಿಸದೆ ಸಂತೋಷದಿಂದ ಒಪ್ಪಿಕೊಂಡು ಸಾಷ್ಟಾಂಗವಾಗಿ ನಮಸ್ಕರಿಸಿದರು. ಬಳಿಕ ಪ್ರಸಾದವನ್ನು ಕೈಕೊಂಡು ಮನೆಗೆ ಬಂದರು. ಮತ್ತು ಎಂದಿನಂತೆ ಭಕ್ತಿಯಿಂದ ಇದ್ದರು.

ಸ್ಪರ್ಶಮಣಿಯು ಮುಟ್ಟಿದರೆ ಕಬ್ಬಿಣವು ಬಂಗಾರವಾಗದೆ? ಪರುಷಸಿದ್ಧಿಯುಳ್ಳ ಚರೋತ್ತಮನ ನುಡಿಯು ಹುಸಿಯಾಗುವದೆ? ಇಲ್ಲ. ಮುಂದೆ ಒಂದು ವರ್ಷ ತುಂಬುವದರೊಳಗೆ ಲಿಂಗಮ್ಮನು ಸುಕುಮಾರನನ್ನು ಹಡೆದಳು. ಅವರ ಆನಂದಕ್ಕೆ ಕಡಿಮೆಯಿಲ್ಲ. ಮಗುವಿಗೆ ಮರಿಬಸವನೆಂದು ಹೆಸರನ್ನಿಟ್ಟು ಸಲಹ ತೊಡಗಿದರು. ಮರುವರ್ಷವೇ ಮತ್ತೆ ಲಿಂಗಮ್ಮನು ಗರ್ಭವನ್ನು ಧರಿಸಿದಳು.

ಗರ್ಭಧಾರಣ ಮಾಡಿದಾಗ ಬಹುತರವಾಗಿ ಎಲ್ಲ ಸ್ತ್ರೀಯರಿಗೆ ದೇಹಾಲಸ್ಯವು ಉಂಟಾಗುವದು. ಮೈಭಾರವಾಗುವದು. ಕೈಕಾಲ ಕಸುವು ಕಡಿಮೆಯಾಗುವದು. ಕೂತರೆ ಎದ್ದರೆ ಉಬ್ಬಸವಾಗುವದು. ಓಕರಿಕೆ ಹೇಸಿಕೆಗಳು ಹುಟ್ಟುವವು. ಏನೇನೋ ತಿನ್ನುವ ಬಯಕೆಯಾಗುವದು. ಕೆಲವರಿಗಂತೂ ಮಣ್ಣುಹೆಂಟೆಗಳನ್ನು ತಿನ್ನುವ ಬಯಕೆಯು ಬಲವಾಗುವದಂತೆ. ಅದೇಕೋ ಕೆಟ್ಟ ಚಟವು! ನಮ್ಮ ಲಿಂಗಾಂಬೆಗೆ ಸಾಮಾನ್ಯ ಗರ್ಭಧಾರಣದ ಯಾವ ಲಕ್ಷಣಗಳೂ ಕಂಡು ಬರಲಿಲ್ಲ. ಶ್ರದ್ಧೆ, ನಿಷ್ಠೆ ಮೊದಲಾದ ಒಂಭತ್ತು ತರದ ಭಕ್ತಿಗಳೇ ಕ್ರಮ

ವಾಗಿ ಒಂಭತ್ತುತಿಂಗಳುಗಳಲ್ಲಿಯು ಆಕೆಯ ಬಯಕೆಗಳಾಗಿದ್ದವು. ಈ ಸಾರೆ ಕಷ್ಟಾಯಾಸಗಳು ಕಿಂಚಿತ್ತಾದರೂ ಕಾಣದಿರುವದರಿಂದ ಆ ಮಾನಿನಿಯು ಶಿವಯೋಗಿವರನ ಸಂಕಲ್ಪದಂತೆ ಆತನ ಸನ್ನಿಧಿಗೆ ತಕ್ಕ ಮಹಾಪುರುಷನನ್ನೇ ತಾನು ಹಡೆಯುವೆನೆಂದು ಭಾವಿಸಿದಳು. ಬರಬರುತ್ತ ಅವಳ ಭಾವನೆಯು ದೃಢವಾಯಿತು. "ಜ್ಞಾನವಿಲ್ಲದೆ ನಿಸ್ಸಾರವಾದ ಸಂಸಾರದಲ್ಲಿ ತೊಳಲುತ್ತ ಕಸಕಡ್ಡಿಗಳಂತಿರುವ ಹಣ ಕಾಸುಗಳನ್ನೇ ದೊರಕಿಸಿ, ಹಕ್ಕಿಪಕ್ಕಿಗಳಂತೆ ಬಾಳುವ ನೂರಾರು ಮಂದಿ ಮಕ್ಕಳನ್ನು ಹಡೆದು ಫಲವೇನು? ಮುಕ್ತಿಮಾನಿನಿಯ ಕೈ ಹಿಡಿದು ಮೆರೆವ ಒಬ್ಬ ಮಗನಿದ್ದರೆ ಸಾಕು. ಆದ್ದರಿಂದ ನಿಜವಾಗಿಯೂ ಅಂಥ ಶಂಭುಯೋಗಿಯನ್ನು ಪಡೆದರೆ ನಾನದೆಂತು ಧನ್ಯಳೋ?" ಎಂದು ಆನಂದದಲ್ಲಿ ಲೋಲಾಡುತ್ತಲಿದ್ದಳು. ಆನಂದಪರವಶಳಾಗಿ ತನ್ನ ಈ ಭಾವನೆಗಳನ್ನು ಪತಿಯ ಮುಂದೆ ಸ್ಪಷ್ಟವಾಗಿ ಆಡಿಬಿಡುತಲಿದ್ದಳು. ಆತನು ನೂತನ ವಾತಾವರಣದವನಾಗಿದ್ದರೆ ಇದೇನು ಮನೋರಾಜ್ಯದ ಹುಚ್ಚಾಟವೆಂದು ಪರಿಹಾಸಮಾಡಬಹುದಾಗಿತ್ತು. ಆದರೆ ಅವನು ಮುಗ್ಧನೂ ಶಿವಭಕ್ತಿಪರಾಯಣನೂ ಆಗಿದ್ದನು. ಎಂಟನೇ ತಿಂಗಳಿಗೆ ಲಿಂಗಾಂಬೆಯ ಗರ್ಭಕ್ಕೆ ಗುರುಗಳಿಂದ ಲಿಂಗಧಾರಣ ವನ್ನು ಮಾಡಿಸಿದನು.

ಇರಇರುತ್ತಿರಲು, ಒಂದುದಿನದ ರಾತ್ರಿ ಗಂಜಿಹಾಳದ ಜನರೆಲ್ಲರಿಗೆ ಅದೇಕೋ ಆನಂದವೇ ತೋರಹತ್ತಿತು. ಸದ್ಭಕ್ತರ ಬಲಗಣ್ಣು ಬಲಭುಜಗಳು ಹಾರಹತ್ತಿದವು. ಎಲ್ಲ ಕಡೆಗೂ ಶುಭವೇ ಇದ್ದಂತಾಗಿತ್ತು. ಕಾರಣವೇನು? ಕಾರಣವುಂಟು; ಸಕಲಜನನಯನ ಮನೋಹರನಾದ ಚಂದ್ರಮನು ಕ್ಷೀರಸಾಗರದಿಂದುದಯಿಸುವಂತೆ, ಸಕಲ ಜನಾನಂದಕರನೂ ಸುಖದಾಯಕನೂ ಆದ ಸುಕುಮಾರನು ಲಿಂಗಾಂಬೆಯ ಪುಣ್ಯೋದರದಿಂದ ಅಂದೇ ಜನಿಸಿದನು. ಆ ಕಾಲವು ಅತ್ಯಂತ ಶುಭಮುಹೂರ್ತವು; ಮಾಘ ಕೃಷ್ಣದ ಚತುರ್ದಶಿಯು; ಅಂಗೀರಸನಾಮಸಂವತ್ಸರವು; ಶಕೆ ೧೭೩೪. ಹನ್ನೆರಡನೆಯ ದಿವಸಕ್ಕೆ

ಸುಮಂಗಲೆಯರು ಬಂದು ಹಾಡಿ ವಿರೂಪಾಕ್ಷನೆಂದು ಹೆಸರಿಟ್ಟರು. ವಿರೂಪಾಕ್ಷನು ಶಿವಯೋಗ ಕಲ್ಪಾಗಮದ ಅಂಕುರದಂತೆ ದಿನೇದಿನೇ ಬೆಳೆಯತೊಡಗಿದನು.

ವಿರೂಪಾಕ್ಷನ ಬಾಲಲೀಲೆಗಳು ಕೌತುಕವನ್ನುಂಟು ಮಾಡುವಂಥವಿದ್ದವು. ತಾಯಿಯು ತನಗೆ ವಿಭೂತಿಯನ್ನಿಡದಿದ್ದರೆ ತಾನು ಮೊಲೆಯನ್ನು ಉಣ್ಣುತ್ತಿದ್ದಿಲ್ಲ. ಲೌಕಿಕದ ಅಂಥಿಂಥ ಹಾಡುಗಳನ್ನು ಹಾಡತೊಡಗಿದ ಕೂಡಲೆ ಆತನು ಅಳತೊಡಗುವನು. ಲಿಂಗಮ್ಮನೂ ನೆರೆಯವರೂ ಕೂಡಿ ಕುಳಿತಾಗ ವಿನೋದಕ್ಕಾಗಿ ಅಂಥ ಹಾಡುಗಳನ್ನು ಹಾಡಿ ಅವನನ್ನು ಅಳಿಸುವರು. ಆತನು ವಿಕಾರ ಮುಖದಿಂದ ಅಳುವದನ್ನು ನೋಡಿ ತಾವು ನಗುವರು. ಆತನು ಶಿವಲೀಲೆ ಶಿವಮಹಿಮೆಗಳುಳ್ಳ ಹಾಡುಗಳನ್ನು ಕೇಳಿದೊಡನೆಯೇ ಉಲ್ಲಾಸದಿಂದ 'ಗಾ, ಗೂ' ಎಂದು ಆಡುವನು. ಬಹಳ ಜನರಿಗೆ ಈ ಸಂಗತಿಯು ಆಶ್ಚರ್ಯವನ್ನುಂಟು ಮಾಡುತಲಿದ್ದಿತು. ಇದೇನು ಗರ್ಭಾಷ್ಟಕದಲ್ಲಿ ಧರಿಸಿದ ಲಿಂಗಮಹಿಮೆಯೋ ಗುರುಕೃಪೆಯ ಬಲವೋ ತಾಯಿತಂದೆಗಳ ಸದಾಚಾರದ ಫಲವೋ ತಿಳಿಯದ ಮಾತಾಗಿತ್ತು. ಇದೇ ಹೊಟ್ಟೆಯಿಂದ ಮೊದಲು ಹುಟ್ಟಿದ ಮರಿಬಸವನೂ ಬಾಲಲೀಲೆಗಳೊಡನೆ ಬೆಳೆಯುತ್ತಿದ್ದನು. ಆದರೆ ಅವರಿಬ್ಬರ ತೋರಿಕೆಗಳಲ್ಲಿ ಸಂಬಂಧವೇ ಇಲ್ಲ. ಮೋಹಾದಿಗಳನ್ನು ಗೆದ್ದು ವಿರತಿಯನ್ನು ಸಂಪಾದಿಸಿ ಧೀರಶಿವಯೋಗಿಯು ಪಾದಕ್ಕೆ ಸಲ್ಲುವ ವೀರವಟುವೆತ್ತ! ಸಹೋದರನಾಗಿದ್ದರೂ ಸಂಸಾರವನ್ನು ಕೈಕೊಂಡು ಮೋಹಾದಿಗಳ ಸೆರೆಯಲ್ಲಿ ಸಿಕ್ಕು ತೊಳಲಾಡಲಿರುವ ಮರಿಬಸವನೆತ್ತ!! ಬರುಹೋಗುವ ಜನರಾದರೂ ಮರಿಬಸವನನ್ನುಳಿದು ವಿರೂಪಾಕ್ಷನನ್ನೇ ನೋಡಿ ನಲಿಯುವರು: ಅಪ್ಪಿ ಆನಂದಪಡುವರು; ಎತ್ತಿ ಎದೆಗವಚಿಕೊಳ್ಳುವರು. ಯಾಕಂದರೆ ಹೆಜ್ಜಾಲಿಯ ಗಿಡದಡಿಯಲ್ಲಿ ನಿರ್ಜರತರು ಬೆಳೆಯುತ್ತಿರಲು ಸಜ್ಜನರು ಅದನ್ನುಳಿದು ಹೆಜ್ಜಾಲಿಯನ್ನಪ್ಪುವರೇ? ಸುದೈವದಿಂದ ದೊರೆತ ಹಾಲನ್ನು ಕುಡಿಯದೆ ಅಂಬಲಿಯನ್ನು ಅಪೇ

ಕ್ಷಿಸುವವರಾರು? ಮನೋಹರವಾದ ಇಂದ್ರನೀಲಮಣಿಯನ್ನು ಬಿಸುಡಿ ಗಾಜುಮಣಿಯನ್ನು ಧರಿಸುವ ಮೂರ್ಖರಿರುವರೆ? ಕಮಲವನ್ನು ಳಿದು ಹೊನ್ನವರಿಯ ಹೂವಿಗೆ ಮೋಹಿಸುವ ಅರಸಿಕರನ್ನು ಕಾಣ ಬಹುದೇ? ಇಲ್ಲ! ಇಲ್ಲ! ಹೆಚ್ಚೇನು, ಆ ಬಾಲನು ಕುಮಾರ ಸ್ವಾಮಿ ಯಂತೆಯೂ ಎಲ್ಲರಿಗೂ ಕಲ್ಪದ್ರುಮದಂತೆಯೂ ಒಪ್ಪಿದನು.

ಮರುವರ್ಷವೇ ಲಿಂಗಾಂಬೆಯು ಸಿದ್ಧಲಿಂಗನೆಂಬವನನ್ನು ಹಡೆ ದಳು. ನಾಲ್ಕು ವರ್ಷಗಳಲ್ಲಿ ಮೂರುಜನ ಮಕ್ಕಳು ಹುಟ್ಟಿ ಬೆಳೆದು ಹರಿದಾಡಹತ್ತಿದರು. ಒಮ್ಮೆ ಮುಪ್ಪಿನಬಸವಲಿಂಗದೇವನ ಕೃಪೆಯಿಂದ ಆ ದಂಪತಿಗಳ ಮಕ್ಕಳ ಬರವು ಹಿಂಗಿತು. ಮನಸ್ಸು ಮಕ್ಕಳ ಸುಖ ದಿಂದ ತಣಿಯಿತು. ಆದರೆ ಅವರು ಈ ಆನಂದದ ಭರದಲ್ಲಿ, ಮಕ್ಕಳ ಸಲುವಾಗಿ ಗುರುವಿನಡಿಯಲ್ಲಿ ಮೊರೆಯಿಟ್ಟಾಗ ನುಡಿದ ನುಡಿಯನ್ನು ಮರೆತಿರಲಿಲ್ಲ; ಮತ್ತು ನಿರ್ಮಲಗಾತ್ರನಾದ ಸುಗುಣಸ್ವರೂಪನಾದ ಬಾಲಕ ವಿರೂಪಾಕ್ಷನನ್ನು ಹೇಗೆ ಕೊಡುವೆವೆಂದು ಅನುಮಾನಿಸಲೂ ಇಲ್ಲ. ಗುರುಕೃಪೆಯಿಂದ ದೊರೆತ ಫಲವು ಗುರುಪಾದಕ್ಕೆ ಸಲ್ಲಲೆಂದು ತನ್ನ ವಚನದಂತೆ, ಸುಮಾರು ಐದಾರು ವರ್ಷದವರಾದಾಗ ವಿರೂ ಪಾಕ್ಷಸಿದ್ಧಲಿಂಗರನ್ನು ಸ್ವಾಮಿಗಳಿಗೆ ಅರ್ಪಿಸಿದರು. ಮುಪ್ಪಿನಬಸವ ಲಿಂಗಾರ್ಯನು ಮೊದಲಿನ ಎಂಟುಜನ ವಟುಗಳೊಡನೆ ಅವರಿಬ್ಬ ರನ್ನಿರಿಸಿಕೊಂಡು ಶಿವತತ್ವಗಳನ್ನು ಬೋಧಿಸುತ್ತ ಶಿವಮಾರ್ಗದಲ್ಲಿ ನಡೆಸಲಹುತ್ತಿದ್ದನು.

ಕೆಲವು ದಿವಸ ಕಳೆದ ಮೇಲೆ ಆ ಸ್ವಾಮಿಯು ವಿರೂಪಾಕ್ಷನ ಹತ್ತನೆಯ ವರ್ಷದಲ್ಲಿ ಅಂದರೆ ಚಿತ್ರಭಾನುಸಂವತ್ಸರ ವೈಶಾಖ ಶುದ್ಧ ಸಪ್ತಮಿಯಲ್ಲಿ ಮಠದ ಎಲ್ಲ ವಟುಗಳಿಗೆ ದೀಕ್ಷೆಯನ್ನು ಮಾಡಿಸು ವದನ್ನು ನಿಶ್ಚಯಿಸಿ ಭಕ್ತರಿಗೆ ಸೂಚಿಸಿದನು. ಭಕ್ತರು ಸಕಲ ಸಾಹಿತ್ಯ ಗಳನ್ನು ಸಿದ್ಧಗೊಳಿಸಿದರು. ಸದಾಚಾರ ಸಂಪನ್ನರಾದಂಥ, ಭಕ್ತರನ್ನು ಪರಿಪಾಲಿಸುವಂಥ ಶ್ರೀಷ್ಟರಾದಂಥ ಆಯಾಯ ಸೂತ್ರಾನುಸಾರಿಗ

ಳಾದ ಐವರು ಗುರುಗಳನ್ನು ಕರೆದುಕೊಂಡು ಬಂದರು. ಸುಂದರ, ಕುಲೀನರೂ ಆದ ಜೀಜಮರಿಗಳನ್ನು ಆಯಾಯ ಸೂತ್ರದ ವಟು ಗೆ ಜೋಡಿಸಿ ಸದಾಚಾರ–ಸುಜ್ಞಾನಗಳುಳ್ಳ ವೈದಿಕರಿಂದ ಶಾಸ್ತ್ರೋಕ್ತ ವಿಧಿವಿಧಾನಗಳನ್ನು ಮಾಡಿಸಿದರು. ಕಾರ್ಯಭಾಗವನ್ನೊಪ್ಪಿಸಿಕೊಂಡ ಭಕ್ತಪ್ರಮುಖರು ಈ ಮಂಗಲಕಾರ್ಯದಲ್ಲಿ ವೈಭವೋತ್ಸವಗಳನ್ನೂ ಮಹಾಗಣಸಂತರ್ಪಣೆಯನ್ನೂ ಮಾಡಿಸಿ ಗುರುಗಳಿಂದ ಆಶೀರ್ವಾದವನ್ನು ಹೊಂದಿ ತೆರಳಿದರು.

ಆ ಮಠದ ಎಲ್ಲ ವಟುಗಳಲ್ಲಿ ವಿರೂಪಾಕ್ಷನೇ ಭಕ್ತಿಗುಣಗಳಲ್ಲಿ ಮೇಲಾಗಿದ್ದನು. ಆತನು ನೀತಿಜ್ಞಾನಗಳುಳ್ಳವನಾಗಿ ಸದಾಚಾರಿಯೂ ಸತ್ಯಸಂಧನೂ ಆಗಿದ್ದನು. ನಿರ್ಮಲತ್ವದಲ್ಲಿ ಅವನಿಗೆ ಸರಿಯಿಲ್ಲ. ಗುರುಸೇವೆಯನ್ನು ನಿರ್ವಂಚನೆಯಿಂದ ಮಾಡುತ್ತಿದ್ದನು. ಶಿವಾನುಭವ ಗ್ರಂಥಗಳನ್ನು ಪರಿಶೀಲಿಸಿ ನೋಡುವದರಲ್ಲಿ ಅವನ ಕುತೂಹಲವು ಬಹಳ. ವಿಭೂತಿರುದ್ರಾಕ್ಷಿಗಳ ಧಾರಣದಲ್ಲಿಯೂ ಲಿಂಗಾರ್ಚನಾಸಂಭ್ರಮದಲ್ಲಿಯೂ ಅವನ ಪ್ರೀತಿ. ಅವನಲ್ಲಿ ಲೌಕಿಕದ ವಿಷಯೋಪಭೋಗದಲ್ಲಿ ಸ್ವಭಾವತಃ ಸ್ಥಿರವಾದ ವಿರತಿಯು ನೆಲೆಗೊಂಡಿತ್ತು. ಈತನ ಈ ಎಲ್ಲ ಅಮೌಲ್ಯವಾದ ಗುಣಗಳಿಗೆ ಮುಪ್ಪಿನ ಬಸವಲಿಂಗಯೋಗಿಯು ಮೆಚ್ಚಿದನು. ಅವನನ್ನು ತನ್ನ ಸನ್ನಿಧಿಯಲ್ಲಿಯೇ ಇಟ್ಟುಕೊಂಡು ದಯೆಯಿಂದ ನೋಡಹತ್ತಿದನು. ಶಿವಧರ್ಮವನ್ನು ತಿಳಿಸಿದನು. ಸದ್ವರ್ತನವನ್ನು ಕಲಿಸಿದನು. ಶಿವಯೋಗಮಾರ್ಗವನ್ನು ತೋರಿಸಿದನು. ಸೇವೆಯನ್ನು ಕೈಕೊಳ್ಳುತ್ತ ಆತನ ನಡೆನುಡಿಗಳನ್ನು ಮತ್ತೆ ಮತ್ತೆ ಚನ್ನಾಗಿ ಪರೀಕ್ಷಿಸಿದನು. ಯಾವದರಲ್ಲಿಯೂ ಎಷ್ಟುಮಾತ್ರವೂ ದೋಷವು ಕಾಣದಿರುವದನ್ನು ನೋಡಿ ಆ ಯತಿವರನು ಆನಂದಪಟ್ಟನು. ಮುಂದೆ ಇವನೇನಮ್ಮ ನಿರಂಜನ ಪಟ್ಟಕ್ಕೆ ತಕ್ಕವನೆಂದು ನಿಶ್ಚಯಿಸಿದನು. ಬಳಿಕ ಜನರಿಗೆ ಈ ವಟುವಿನ ಪರಿಚಯವನ್ನು ಮಾಡಿಕೊಡುವದಕ್ಕಾಗಿ ಅವನನ್ನು ಹಿಂದುಗೊಂಡು ಶಿವಭಕ್ತರಿದ್ದ ಕಡೆಗಳಲ್ಲಿ ಸುಖವಾಗಿ ಸಂಚರಿಸುತ್ತ ತಮ್ಮ

ಮಠಗಳಿದ್ದಲ್ಲೆಲ್ಲ ಹೋದನು. ಕಡೆಗೆ ಹಾಲಗೆರೆಯು ತಮ್ಮ ಮಠದಲ್ಲಿ ಆರುತಿಂಗಳ ವಾಸವಾಡಿ ಶಿವಯೋಗಲೋಲನಾಗಿದ್ದನು.

ಬಳಿಕ ಆ ಮುಪ್ಪಿನಬಸವಲಿಂಗಯತಿಯು ತಮ್ಮ ಅವಸಾನದ ಅವಧಿಯು ಸಮೀಪಿಸಿದ್ದನ್ನು ಅರಿದು, ಬೇಗ ಗಂಜಿಹಾಳಕ್ಕೆ ಹೋಗಬೇಕೆಂದು ನಿಶ್ಚಯಿಸಿ ಪದ್ಧತಿಯಂತೆ ಅಲ್ಲಿಯ ಸದ್ಭಕ್ತರನ್ನು ಕರೆಯಿಸಿ ಪ್ರೇಮದಿಂದ ಆಶೀರ್ವದಿಸಿ— "ಇನ್ನು ನಾವು ಹಲವು ಕೆಲಸಗಳ ಮೂಲಕ ಗಂಜಿಹಾಳಕ್ಕೆ ಹೋಗುವೆವು. ಮುಂದೆ ಇಲ್ಲಿಗೆ ಬರುವದಾಗುವಂತಿಲ್ಲ. ಇದೇ ಕಡೆಯ ದರ್ಶನವು."... ಎನ್ನುತ್ತಿರಲು, ಅವರ ಕಡೆಯ ವಾಕ್ಯವನ್ನು ಕೇಳಿದೊಡನೆಯೇ ಆ ಜನರ ಮುಖಕಳೆಯು ಜಗ್ಗನೇ ಇಳಿಯಿತು. ಅವರ ಹೃತ್ಪಟಲಗಳು ವೇಗವಾಗಿ ಬಡಿದುಕೊಳ್ಳಹತ್ತಿದವು. ಯಾಕಂದರೆ ಆ ಯತಿವರನ ವಿಷಯವಾಗಿ ಅವರು ನಿಸ್ಸೀಮಭಕ್ತಿಯುಳ್ಳವರಾಗಿದ್ದರು. ಆತನೂ ಅಂಥ ಮಹಿಮಾಶಾಲಿಯೇ ಆಗಿದ್ದನು. ಆಗ ಆ ಊರ ಪ್ರಮುಖನಾದ ಹೊನ್ನಪ್ಪಗೌಢನೂ ಅವನ ಪತ್ನಿ ಫಣಿಯಮ್ಮನೂ ಮುಂದೆ ಬಂದು ಕೈಮುಗಿದು— "ದೇವಾ ಈ ವರೆಗೆ ನಮ್ಮನ್ನು ಕರುಣದಿಂದ ಕಾಪಾಡಿದ ತಮ್ಮ ಈ ಪಾದಗಳನ್ನು ಇನ್ನು ಹ್ಯಾಗೆ ಅಗಲುವೆವು? ನಾವು ಅನಾಥರಾದೆವು! ಮುಂದೆ ನಮ್ಮನ್ನು ರಕ್ಷಿಸುವ ಚರೋತ್ತಮನು ಯಾರು?" ಎಂದು ಬಿನ್ನವಿಸಿದರು. ಅದಕ್ಕೆ ಆ ಯತಿವರನು "ಭಕ್ತಶ್ರೇಷ್ಠರೇ ಚಿಂತಿಸದಿರಿ! ಈ ವಿರೂಪಾಕ್ಷನೇ ನಿಮ್ಮನ್ನು ಪೊರೆವನು? ಈತನೇ ಈ ಮಹಾಶೂನ್ಯಸಿಂಹಾಸನವನ್ನು ಏರತಕ್ಕವನು. ನಿಮಗೆ ಇವನು ಅನ್ಯನಲ್ಲ; ಹಿಂದಾದ ಅನ್ನದಾನಿಯೇ ಈತನೆಂದು ಭಾವಿಸಿರಿ. ಇವನನ್ನು ಸೇವಿಸಿ ಕೃತಾರ್ಥರಾಗಿರಿ" ಎಂದು ಹೇಳಿ ಅದರಿಸಿದನು. ಆಗ ಆ ಜನರಿಗೆ, ಅಕಸ್ಮಾತ್ತಾಗಿ ಆಧಾರ ತಪ್ಪಿ ನಡುಮಡುವಿನೊಳು ಬಿದ್ದು ಒದ್ದಾಡುವವಗೆ ಸಂಗಡಿಗಾಯಿಯು ದೊರೆದಂತಾಯಿತು. ದರ್ಶನ ಮಾತ್ರದಿಂದ ಭಕ್ತಿಸದ್ಭಾವನೆಗಳನ್ನು ಹುಟ್ಟಿ

ಸುವ ಸನ್ಮೂರ್ತಿಯಾದ ವಿರೂಪಾಕ್ಷದೇವನನ್ನು ಕಂಡು ಅವರು ಹರ್ಷಿತರಾದರು. ಗುರುವಿಗೂ ಆತನಿಗೂ ವಂದಿಸಿ ತಾವು ಧನ್ಯರೆಂದು ಹೇಳಿಕೊಂಡರು. ಬಳಿಕ ಶಿವಯೋಗಿಯು ಅವರಿಗೆ ಫಲಾಶೀರ್ವಾದಗಳನ್ನು ಕೊಟ್ಟು ಕಳಿಸಿ ಗಂಜಿಹಾಳಕ್ಕೆ ತೆರಳಿದನು.

ಗಂಜಿಹಾಳದಲ್ಲಿ ವಿರೂಪಾಕ್ಷವಟುವು ತನ್ನ ಹದಿನಾರನೇ ವಯಸ್ಸಿನಲ್ಲಿ ಆ ಯೋಗಿವರನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ—"ನಿರಂಜನಜಗದ್ಗುರುವೇ ನನಗೆ ಭವನಾಶಕವಾದ ಶಿವಜ್ಞಾನೋಪದೇಶವನ್ನು ದಯಪಾಲಿಸು" ಎಂದು ಬೇಡಿಕೊಂಡನು. ಅದರಿಂದ ಗುರುವು ಕರುಣದಿಂದ ನೋಡಿ ವಿಧ್ಯುಕ್ತವಾಗಿ ಷಟ್‌ಸ್ಥಲ ಜ್ಞಾನೋಪದೇಶವನ್ನು ಕೊಟ್ಟನು. ಬಳಿಕ ಆತನನ್ನು ಕುರಿತು—"ಮಗನೇ, ನಿನಗೆ ಈ ಮಹಾಶೂನ್ಯಸಿಂಹಾಸನದ ಅಧಿಕಾರವನ್ನು ಕೊಡುವ ಸಂಕಲ್ಪವನ್ನು ಮಾಡಿದ್ದೇವೆ. ನೀನು ಚಿಕ್ಕವನು ಅದಕ್ಕೆ ತಕ್ಕ ಯೋಗ್ಯತೆಯನ್ನು ನೀನು ಇನ್ನೂ ಪಡೆಯಬೇಕು. ಯಾಕಂದರೆ ಈ ಸ್ಥಲವನ್ನು ಹೊಂದುವ ಪಾತ್ರತೆಯುಂಟಾಗಬೇಕಾದರೆ, ಪಾಪಸಂಕುಲನಿಲಯವಾದ ಯೌವನದ ಸೊಕ್ಕು ಸರಿಯಬೇಕು; ಎಲ್ಲ ವಿಷಯದಲ್ಲಿ ವಿರತಿಯು ಹುಟ್ಟಬೇಕು; ಶಿವಾನುಭವ ಶಾಸ್ತ್ರದಲ್ಲಿ ಬುದ್ಧಿಯು ಪರಿಣಮಿಸುತ್ತಿರಬೇಕು; ಆಲಸ್ಯನಿದ್ರೆಗಳ ಸದ್ದಿಲ್ಲದಂತಾಗಬೇಕು; ಶಾಂತಿಯು ಸುಳಿಯಬೇಕು. ಇವೆಲ್ಲವುಗಳನ್ನು ಹೆಚ್ಚಾಗಿ ಸಾಧಿಸುವದಕ್ಕಾಗಿ ನೀನು ಹಲವು ಚರೋತ್ತಮರ ಸೇವೆಯನ್ನು ಮಾಡಬೇಕಾಗುವದು. ಅದ್ದರಿಂದ ಮೈಸೂರ ಚರವರಾಧೀಶ ಸಿದ್ಧರಾಮರ ಸೇವೆಯನ್ನು ಕೈಕೊಂಡು ಹತ್ತು ಹನ್ನೊಂದು ವರ್ಷಗಳನ್ನು ಕಳೆದು ಈ ಉತ್ತಮೋತ್ತಮವಾದ ವಿರಕ್ತಾಶ್ರಮವನ್ನು ಹೊಂದು" ಎಂದನು. ಇದನ್ನು ಕೇಳಿ ವಿರೂಪಾಕ್ಷನು ಮನಸ್ಸಿನಲ್ಲಿ ಬೆದರಿ ಕೈಮುಗಿದು—"ಗುರುವೆ ಸನಕಾದಿಗಳಿಗೆ ಅಸಾಧ್ಯವಾದ ಈ ಆಶ್ರಮವೆತ್ತ! ಪಾಮರನಾದ ನಾನೆತ್ತ! ಆನೆಗೆ ತಕ್ಕುದಾದ ಅತಿಭಾರವನ್ನು ಆಡಿನ ಮೇಲೆ ಹೊರಿಸುವದುಂಟೆ? ಅಂಥ ಕಠಿಣವಾದ ವೃತ್ತಿಯು ನನಗೆ ಅಸಾಧ್ಯವಾದದ್ದು; ನನ್ನಿಂದ ನೀಗಲಾ

ರದು. ಭಕ್ತಿಯಿಂದ ಜಂಗಮಪದಸೇವೆಯನ್ನು ಮಾಡುವದೊಂದೇ ನನಗೆ ಎಂದೆಂದಿಗೂ ಇರಲಿ! ಅದರಿಂದ ಕೃತಾರ್ಥನಾಗುವೆನು! ದೇವಾ, ಬೇಡ! ನಾನು ಶಕ್ತಿಹೀನನು; ಹೊರಲಾರದ ಭಾರವನ್ನು ನನಗೆ ಹೊರಿಸುವದೇ? ಬೇಡ" ಎಂದನು. ಅದಕ್ಕೆ ನಸುನಕ್ಕು ಆ ಮುಪ್ಪಿನ ಬಸವಲಿಂಗಯತಿವರನು ಮಗುವೆ ಹೀಗೆ ನುಡಿಯಬೇಡ; ಈ ಪದದ ಮಹತ್ವವನ್ನು ಕಾಯ್ದುಕೊಂಡು ಹೋಗುವದಕ್ಕೆ **ನೀನಲ್ಲದೆ ಇನ್ನಾರು ತಕ್ಕವರು?** ಚಿಂತಿಸಬೇಡ. ನಿನ್ನಲ್ಲಿ ಅಂಥ ಮನೋಬಲವಿರುವದನ್ನು ನಾವು ಮನಗಂಡಿದ್ದೇವೆ. ಮೇಲಾಗಿ ಲಿಂಗಾನಂದಸಾಮ್ರಾಜ್ಯದಲ್ಲಿ ಲೀನನಾಗಿ ಹೋದ ಗುರುವನ್ನದಾನಿಯೇ ನಿನ್ನ ಅಂತರಂಗದಲ್ಲಿ ನೆಲಿಸಿ ಕೊರತೆಯೊದಗದಂತೆ ನಡಿಸುವನು; ಅನುಮಾನಿಸಬೇಡ. ನಮ್ಮ ಸಂಕಲ್ಪವನ್ನು ನಡಿಯಗೊಡಿಸು" ಎಂದು ಆತನ ತಲೆಯ ಮೇಲೆ ವರದ ಹಸ್ತವನ್ನಿಟ್ಟು ಅಭಯವನ್ನು ಕೊಟ್ಟು ಪ್ರೀತಿಯಿಂದ ಒಡಂಬಡಿಸಿದನು.

---

೩. ನಾನದೆಂತಹ ಭಕ್ತನು?

ಈ ಸ್ವಾಮಿಗಳಿಗೆ ಗಂಜಿಹಾಳ, ಇಟಗಿ, ಹಾಲಕೆರೆ ಮೊದಲಾದ ಕಡೆಗಳಲ್ಲಿ ಮಠಗಳಿದ್ದರೂ, ಮುಪ್ಪಿನಬಸವಲಿಂಗಯೋಗಿಯು ಗಂಜಿಹಾಳವಲ್ಲಿಯೇ ವಾಸಮಾಡುತ್ತಲಿದ್ದನು. ಮೇಲೆ ಹೇಳಿದಂತೆ ಆತನು ತಮ್ಮ ಮಠಗಳು ಇದ್ದಲ್ಲೆಲ್ಲ ಸಂಚರಿಸಿ ತಿರುಗಿ ಗಂಜಿಹಾಳಕ್ಕೆ ಬಂದನು. ಬಳಿಕ ಸ್ವಲ್ಪ ದಿವಸಗಳೊಳಗೆ ತಾನು ಮೊದಲು ಸೂಚಿಸಿದಂತೆ ಐಕ್ಯನಾದನು. ಈ ಮಹಾಸ್ವಾಮಿಯ ಲಿಂಗೈಕ್ಯದ ವಿಷಯವಾಗಿ ಉಕ್ತವಾಗಿರುವ ಮಹತ್ವದ ಸಂಗತಿಗಳೇನೆಂದರೆ.—

“ಐಕ್ಯವಾಗುವ ಅವಧಿಯು ಸಮೀಪಿಸಿದಾಗ ಸ್ವಾಮಿಗಳಿಗೆ ಮಾ-ಕಾರೋಗದ ಉಪದ್ರವವಾಯಿತು. ಆಗಲವರು ಭಕ್ತಮಂಡಲವನ್ನು ಕರೆದು— “ಮಹಾಜನರೆ, ದೇಹಸಹಿತವಾಗಿ ಶಿವಲೋಕಕ್ಕೆ ಹೋಗತಕ್ಕ ನಿಶ್ಚಲ ಸಂಕಲ್ಪವನ್ನು ನಾನು ಮಾಡಿದ್ದೆನು. ಅಷ್ಟರಲ್ಲಿಯೇ ಈ ಹೊಲತಿ ಮಾರಿಕೆಯು ನನ್ನನ್ನು ಕಾಡಲನುವಾದಳು; ನನ್ನ ದೇಹವನ್ನು ಮುಟ್ಟಿದಳು; ನನ್ನ ಪ್ರಯಾಣಕ್ಕೆ ತೊಂದರೆಯನ್ನು ಒಡ್ಡಿದಳು. ನಾನು ಶಿವಸಭೆಯಲ್ಲಿ ಈ ನೀಚಳ ಈ ಅಪಕೃತಿಯನ್ನು ದೂರಿ ನ್ಯಾಯವನ್ನು ಪಡೆದು ಮೂರುತಿಂಗಳೊಳಗಾಗಿ ತಿರುಗಿ ಬಂದು ಈ ಸ್ಥೂಲದೇಹವನ್ನು ತೆಗೆದುಕೊಂಡೊಯ್ವೆನು. ಆ ವರೆಗೆ ಇದನ್ನು ಜಾಗ್ರತವಾಗಿ ಕಾಯ್ದುಕೊಂಡಿರಬೇಕು” ಎಂದು ಆಜ್ಞಾಪಿಸಿದನು. ಬಳಿಕ ತಾನು ನಿಜಲಿಂಗನಿರೀಕ್ಷಣಮಾಡಿ ಸಮಾಧಿಯಲ್ಲಿ ಬೆರೆದನು. ಆ ಮೇಲೆ ಜನರು, ಆತನು ಶಿವೈಕ್ಯವಾದ ಮಂದಿರಕ್ಕೆ ಬೀಗಹಾಕಿ ಕಾವಲು ಮಾಡುತ್ತ ಇದ್ದರು. ಆದರೆ ಈ ಕ್ರಮವು ಕೆಲವು ತುಂಟರಿಗೂ ಪರಮತೀಯರಿಗೂ ಒಪ್ಪಿಗೆಯಾಗಲಿಲ್ಲ. ಹತ್ತೆಂಟು ದಿನಗಳು ಕಳೆದ ಬಳಿಕ ಅವರು ಪರಿಪರಿಯ ಪರಿಹಾಸದಿಂದ ಸ್ವಾಮಿಗಳನ್ನು ದೂಷಿಸುತ್ತ ಮಠಕ್ಕೆ ಬಂದು, ಜನರನ್ನು ಬೆದರಿಸಿ—“ಸ್ವರ್ಗದಿಂದ ಬಂದು ಹೆಣವನ್ನು ಒಯ್ಯುವನಂತೆ! ಅವನಂಥ ಹುಚ್ಚನು ಬೇರೆ ಯಾರಿರುವರು? ಅದನ್ನು ನಂಬಿದ ನಿಮ್ಮ ಮೂರ್ಖತನಕ್ಕೆ ಏನೆನ್ನಬೇಕು? ಪದ್ಧತಿಯಂತೆ ಸಂಸ್ಕರಿಸದೆ ಹೆಣವನ್ನು ಇಟ್ಟುಕೊಳ್ಳುವಿರಾ? ಇದರಿಂದ ಊರ ಆರೋಗ್ಯಕ್ಕೆ ಕುಂದುಂಟಾಗದೇ? ಸರಕಾರದ ದಂಡನೆಗೆ ಗುರಿಯಾದೀರಿ? ಎಚ್ಚರ!!” ಎಂದು ಗದ್ದರಿಸಿದರು. ಅರ್ಧಮರ್ಧ ಜಾಣರಾದ ಬಹುಮಂದಿಗೆ ಇಂದು ಈ ನುಡಿಯೂ ನಿಜವೆನಿಸಿತು. ಮೊದಲು ಗುರುವಿನ ನುಡಿಗಳನ್ನು ನಂಬಿ ನಡೆಯತೊಡಗಿದುದನ್ನು ಕೂಡಲೆ ಬಿಟ್ಟರು. ಕೆಲವು ಜನ ನಿಶ್ಚಲ ಭಕ್ತರಾದವರು ಮಾತ್ರ ಈ ಗದ್ದರಣೆಗೆ ಸೊಪ್ಪುಹಾಕಲಿಲ್ಲ. ಆದರೆ ಇವರನ್ನು ಕೇಳುವವರಾರು? ಬಹುಜನ ಸಮಾಜದವರು ಸ್ವಾಮಿ

ಗಳ ಶರೀರಕ್ಕೆ ಸಮಾಧಿಯನ್ನು ರಚಿಸಿ ಲಿಂಗಮುದ್ರೆಮಾಡುವದನ್ನು ಗೊತ್ತುಮಾಡಿಯೇ ಬಿಟ್ಟರು. ಸರಿ, ಆಗದವರಮಾತು ಸಾಧ್ಯವಾದಂತಾಯಿತು. ಕೂಡಲೆ ಸಂಭ್ರಮದಿಂದ ಯೋಗಿಯ ಅಂಗಕ್ಕೆ ಸಮಾಧಿಯನ್ನು ಮಾಡಿದರು. ಶಿವಯೋಗಿವರನ ಇಚ್ಛಿತವು ನೆರವೇರಲಿಲ್ಲೆಂದು ಬಲ್ಲವರು ಮರುಗಿ ಸುಮ್ಮನಾದರು. ಕೆಲವು ದಿವಸಗಳು ಕಳೆದವು.

"ಒಂದುದಿನ ಸಾಯಂಕಾಲದ ಸುಮಾರಿಗೆ ನದೀತೀರದಲ್ಲಿರುವ ಕಲ್ಲುಗುಂಪಿಯ ಮೇಲೆ ಒಂದು ಕಿರಿಬೆರಳಿನಷ್ಟು ಗಾತ್ರವಾದ ಚಕ್ರವಾಯುವು ಉದ್ಭವಿಸಿತು. ಹಿಂದೆ ಅನ್ನದಾನೀಶ್ವರನು ನದಿಯಲ್ಲಿ ಹೋದ ತಮ್ಮ ಇಷ್ಟಲಿಂಗವನ್ನು ಶಿವಯೋಗಬಲದಿಂದ ಬರಿಸಿದಾಗ ಆಸನವನ್ನಾಗಿ ಮಾಡಿಕೊಂಡದ್ದ ಕಲ್ಲುಗುಂಪಿಯು ಇದೇ. ಈಗ ಅಲ್ಲಿ ಹುಟ್ಟಿದ, ಉದ್ದವಾದ ಆ ಗಾಳಿಯ ಸುಳಿವು ಭೂಮಿಯಿಂದ ಆಕಾಶದ ವರೆಗೆ ಬೆಳೆದಂತೆ ತೋರುತ್ತಿತ್ತು. ಆ ಸುಂಟರಗಾಳಿಯು ಬರಬರುತ್ತ ದೊಡ್ಡದಾಗುತ್ತ ಇದ್ದ ಹುಡಿಯನ್ನೆಲ್ಲ ಹೊತ್ತುಕೊಂಡು ಊರ ಮೇಲೆ ಬಂದು ಏನೊಂದು ಕಾಣದಂತೆ ಮುಸುಗಿ ಭರದಿಂದ ಸುತ್ತುವರಿದು ತಿರುಗಹತ್ತಿತು. ಅದರ ರಭಸಕ್ಕೆ ಮನೆಯ ಚಪ್ಪರಗಳು ಹಾರಿಹೋದವು. ಹಳೆತರದ ಗಿಡಗಳು ಉರುಳಿದವು. ಕೊಟ್ಟಡಿಯೊಳಗಿನ ದನಕರುಗಳು ಗಾಬರಿಯಿಂದ ಚಡಪಡಿಸಿ ಜಿಗಿದಾಡಿದವು. ಚಿಕ್ಕಮಕ್ಕಳು ಅಂಜಿ ದೊಡ್ಡವರ ಕೊರಳನ್ನು ಅಪ್ಪಿದವು. ಇದೇನು ಪ್ರಳಯಕಾಲವೋ ಎಂದು ಜನರು ಬೆದರಿದರು. ಹೀಗಿರಲು ಮಠದಲ್ಲಿ ಸಾಸಿರಸಿಡಿಲುಗಳಂತೆ ಅತ್ಯದ್ಭುತವಾದ ಭೀಕರವಾದ ಧ್ವನಿಯೊಂದು ಉದ್ಭವಿಸಿತು. ಅದರ ಅಬ್ಬರಕ್ಕೆ ಸ್ತ್ರೀಯರ ಗರ್ಭಪಾತಗಳಾದವು. ಆನಂತರ ವಾಯುವು ಕ್ಷಣಮಾತ್ರದಲ್ಲಿ ಅಡಗಿತು. ಸುತ್ತಲೂ ಶಾಂತತೆಯು ನೆಲೆಗೊಂಡಿತು. ಎಲ್ಲಿಯೂ ಯಾವ ತರದ ನಷ್ಟವೂ ಸಂಭವಿಸಿರಲಿಲ್ಲ. ಗರ್ಭಪಾತವಾದವರ ಶಿಶುಗಳು ಸಹ ಸಜೀವವಾಗಿದ್ದು ಸುರಕ್ಷಿತವಾಗಿದ್ದವು. ಆ ಬಳಿಕ ಜನರೆಲ್ಲರು

‘ಮಠದಲ್ಲಿ ಹುಟ್ಟಿದ ಸಪ್ಪಳವೇತರದು? ಮಠಗಳ ಗತಿ ಏನಾಯಿತೋ
ನೋಡುವಾ’ ಎಂದು ಮಠಕ್ಕೆ ಹರಿದು ಬಂದರು; ಸುತ್ತಲೂ ನೋಡಿ
ದರು. ಎಲ್ಲವೂ ಸುರಕ್ಷಿತವಾಗಿದ್ದಿತು. ಆದರೆ ಮೊನ್ನೆ ಮೊನ್ನೆ
ಮಾಡಿದ ಮುಪ್ಪಿನಬಸವಲಿಂಗಯೋಗಿಗಳ ಸಮಾಧಿಯು, ಮೇಲೆ
ಮುಚ್ಚಿದ ಮಣ್ಣಿನಲ್ಲಿ ತಿಲಮಾತ್ರವೂ ಉಳಿಯದಂತೆ ಸಂಪೂರ್ಣವಾಗಿ
ಹಾರಿಹೋಗಿದೆ. ಅದನ್ನು ಕಂಡು ಜನರು ಆಶ್ಚರ್ಯಭರಿತರಾದರು;
ಕೇವಲ ತಗ್ಗು; ಆದರೆ ಒಳಗೆ ಎಣ್ಣೆಯಿಂದ ತುಂಬಿದ ಪಣತಿಯ
ದೀವಿಗೆಗಳು ಹಾಗೆಯೇ ಉರಿಯುತ್ತಿದ್ದವು. ಭಸ್ಮಘಟಿಕೆಗಳು,
ಕೊಪ್ಪಿಯು, ಕಮಂಡಲವು, ದಂಡ, ನಯವಾದ ಬಿಲ್ವದಲಗಳು ಇದ್ದ
ಕ್ಕಿದಂತೆಯೇ ಇದ್ದವು. ಕಂಥೆ, ಕೌಪೀನ, ರುದ್ರಾಕ್ಷಮಾಲೆಗಳ ಸಹಿ
ತವಾಗಿ ಮೂರ್ತಿಯು ಅದೃಶ್ಯವಾಗಿ ಹೋಗಿದ್ದಿತು. ಭೀಕರವಾದ
ಗಾಳಿಯೇನು! ಬಿಲ್ವದಲಗಳೂ ದೀವಿಗೆಗಳೂ ಉಳಿಯುವದೇನು!!
ಗಟ್ಟಿಯಾಗಿ ಕಟ್ಟಿದ ಕಲ್ಲುಮಣ್ಣುಗಳ ಸಮಾಧಿಯೂ ಜಡದೇಹವೂ
ಹೋಗುವದೇನು!! ಇದೆಲ್ಲವೂ ಆ ಯೋಗಿವರನ ಮಹಿಮೆಯಲ್ಲದೆ
ಮತ್ತೇನು!!! ಕಂಡ ಜನರಿಗೆ ಆಶ್ಚರ್ಯಭಯಭಕ್ತಿಗಳು ಹುಟ್ಟು
ವದರಲ್ಲಿ ಸಂಶಯವೇನು? ಮೊದಲು ಹೀಯಾಳಿಸಿದ ಪರವಾದಿಗಳು
ಬೆದರಿದರು. ಅವರು ಬಂದು ನೋಡಿ ಪಶ್ಚಾತ್ತಾಪದಿಂದ ಮುಖ
ವನ್ನು ತಗ್ಗಿಸಿದರು. ಕೂಡಿದವರು ಶಿವಯೋಗಿಯ ಸತ್ಯಮಹಿಮೆ
ಯನ್ನು ಕೊಂಡಾಡಿದರು. ಬಳಿಕ ಅವರು ಒಳಗಿಳಿದು ಕೊಪ್ಪಿಯನ್ನು
ಎತ್ತಿ ವಿರೂಪಾಕ್ಷಾರ್ಯನ ತಲೆಯ ಮೇಲಿಟ್ಟು ನಮಸ್ಕರಿಸಿದರು. ಒಳ
ಗಿನ ದೀವಿಗೆಗಳನ್ನು ತೆಗೆದು ಕಾಯ್ದುಕೊಳ್ಳಬೇಕೆಂದು ವಕ್ರಾಣಿಯ
ವರೆಂಬ ಶಿವಭಕ್ತ ಶಿರೋಮಣಿಗಳಿಗೆ ವಿರೂಪಾಕ್ಷದೇವನು ಆಜ್ಞಾಪಿ
ಸಿದನು. ಉಳಿದ ಸಾಮಾನುಗಳೊಡನೆ ಸಮಾಧಿಯನ್ನು ಮುಚ್ಚಿ
ಗದ್ದುಗೆ ಮಾಡಿದರು. ವಕ್ರಾಣಿಯವರು ಇಂದಿನವರೆಗೂ ಆ ದೀವಿಗೆ
ಗಳನ್ನು ಕಾಯ್ದಿರುವರು. ಅದರಿಂದ ಅವರು ಸತ್‌ಸಂತಾನೈಶ್ವರ್ಯಾ
ಭಿವೃದ್ಧಿಯಾಗಿ ಸುಖದಿಂದ ಕಾಲಕಳೆಯಹತ್ತಿದರು.

"ಗಂಜಿಹಾಳದಲ್ಲಿ ಸಮಾಧಿಯು ಕಿತ್ತುಹೋದ ದಿನವೇ ರಾತ್ರಿ ಆ ಸ್ವಾಮಿಯು ಇಟ್ಟಗಿಯಲ್ಲಿಯ ಬಕ್ಕಪ್ಪನೆಂಬ ಕುರುಬರವನ ಸ್ವಪ್ನದಲ್ಲಿ ಬಂದು 'ನಾಳೆ ನಾನು ಈ ಊರ ಸಮೀಪದಲ್ಲಿ ಬರುವೆನು. ಎಲ್ಲ ಜನರಿಗೆ ಭೆಟ್ಟಿಯಾಗಲು ತಿಳಿಸು' ಎಂದು ಸೂಚಿಸಿದನು. ಮತ್ತು ಶಾಂತಗಿರಿಯ ದೇಸಾಯರ ಸ್ವಪ್ನದಲ್ಲಿಯೂ ಈ ತರದ ಸೂಚನೆಯಾಯಿತು. ಆದನ್ನು ಕೇಳಿ ಊರವರು ಕುತೂಹಲದಿಂದ ನೋಡಬೇಕೆಂದು ಗಂಜಿಹಾಳದ ದಾರಿಯ ಮೇಲೆ ನೆರೆದರು. ಹೊತ್ತಿಗೆ ಸರಿಯಾಗಿ ಮುಪ್ಪಿನಬಸವಲಿಂಗಸ್ವಾಮಿಯೇ ತಮ್ಮ ಕೊನೆಯ ಅವಸ್ಥೆಯಲ್ಲಿ ಪ್ರಕಟವಾದನು. ಕೂಡಲೆ ಸರ್ಪವಾಗಿ ಹರಿದು ಊರಲ್ಲಿ ಬಂದು ತಮ್ಮ ಮಠದಲ್ಲಿ ನಲಿದಾಡಿ ಬಯಲಾದನು."

ಇರಲಿ; ಈ ಬಗೆಯಾಗಿ ಸ್ವಾಮಿಗಳು ಲಿಂಗೈಕ್ಯರಾದ ಸ್ವಲ್ಪ ದಿವಸಗಳಲ್ಲಿಯೇ ವಿರೂಪಾಕ್ಷದೇವನು ಗುರುವಿನ ಆಜ್ಞೆಯನ್ನು ಸ್ಮರಣೆಗೆ ತಂದು ಅದಕ್ಕನುಸರಿಸಿ ಹೋಗಿ ಮೈಸೂರ ಸಿದ್ಧರಾಮಚರಶ್ರೇಷ್ಠರ ಸೇವೆಯಲ್ಲಿ ನಿಂತುಕೊಂಡನು. ಅಲ್ಲಿಯ ಆತನ ಸೇವಾತತ್ಪರತೆಯೂ ವೃತ್ತಿಯೂ ವರ್ಣನೀಯವಾಗಿದ್ದವು. ಆತನು ನಾಲ್ಕುತರದ ಸೇವೆಗಳನ್ನು ಅಚ್ಚಳಿಯದೇ ಮಾಡುತಲಿದ್ದನು. ಆತನ ಗುರುಭಕ್ತಿಯಂತೂ ಅತ್ಯಂತ ಮಿಗಿಲಾದದ್ದಿತ್ತು. ಅವನು ಗುರುವಿನ ವಚನವೇ ಆಗಮಪುರಾಣೋಕ್ತಿಗಳೆಂದೂ ಗುರುಪಾದೋದಕವೇ ತೀರ್ಥಕ್ಕೆ ಮಿಗಿಲೆಂದೂ ಅನುರಾಗದಿಂದ ಗುರುವು ಹಿಡಿದ ಶಿಲೆಯೇ ಲಿಂಗವೆಂದೂ ಗುರುವು ಅಡಿಯಿಟ್ಟ ಹಾಳು ನೆಲವೇ ಕ್ಷೇತ್ರವೆಂದೂ ಭಾವಿಸಿದ್ದನಲ್ಲದೆ ಕಿಂಚಿತ್ತಾದರೂ ಬೇರೆಯಾಗಿ ತಿಳಿಯುತ್ತಿದ್ದಿಲ್ಲ. ಗುರುವು ಸಾಮಾನ್ಯನಲ್ಲ; ಆತನು ಹರನ ಸಮಾಗಮವನ್ನು ಒದಗಿಸಿಕೊಡುವ ಮಹಾಪುರುಷನು. ಆತನನ್ನು ನರನೆಂದು ಭಾವಿಸಿದರೆ ಶಿಷ್ಯನ ಪರಮಶಿಷ್ಯತ್ವವು ನಾಶವಾಗುವದು. ಹಾಲಿನಲ್ಲಿ ಉಪ್ಪು ಬೆರಸಿದಂತಾಗುವದು. ಇದನ್ನರಿತು ವಿರೂಪಾಕ್ಷನು ನಿರಂತರವೂ

ಗುರುವಿನನ್ನು ಹರಭಾವನೆಯಿಂದಲೇ ಕಾಣುತ್ತಿದ್ದನು. ಈತನ ಅದ್ವಿತೀಯವಾದ ಗುರುಭಕ್ತಿಯನ್ನು ನೋಡಿ ಸಾಧುಗಳು, 'ಸಿರಾಭಾರಿ ಗುರುತನವನ್ನು ಹೊಂದಿ ಹಿಂದೆ ಹೇಳಿದ ಗುರುವಿನ ಸಂಕಲ್ಪವನ್ನು ಎಂದು ನೆರವೇರಿಸುವೆನೋ ಎಂಬಾಶೆಯೊಂದಲ್ಲದೆ ಆತ್ಮಾರ್ಥವಾಗಿ ಬಂದು, ಸೇವಾವೃತ್ತಿಯಲ್ಲಿ ನಿಂದ ಪುರುಷನು ಇವನಲ್ಲ' ಎಂದು ಹೊಗಳಿದರು. ಮುಮುಕ್ಷುಗಳು ಹಿಂದಾಗದೆ ಈತನ ಗುರುಭಕ್ತಿಯನ್ನು ಕಲಿತರು. ದುಃಶಿಷ್ಯರು ಹೊಟ್ಟೆಯ ಕಿಚ್ಚಿನಿಂದ ಹೊರಳಿದರು. ಯತಿವರನ ಮನವನ್ನು ತಿಳಿದು ಕಾಲಾನುಸಾರವಾಗಿ ಸೇವೆಯಲ್ಲಿ ದುಡಿಯಲು ವಿರೂಪಾಕ್ಷನೇ ಬಲ್ಲಿದನಾಗಿದ್ದನು.

ಆತನು ಗುರುವಿನೆದುರಿನಲ್ಲಿ ಸರಸವಾಡಲಿಲ್ಲ; ನಗಲಿಲ್ಲ; ವಾದಿಸುವವರ ಸುದ್ದಿಯೇ ಇಲ್ಲ. ಮನಬಂದಂತೆ ಕೂತುಕೊಳ್ಳಲಿಲ್ಲ. ನಿರ್ಭಯದಿಂದ ತಿರುಗಾಡಲಿಲ್ಲ. ಮೈಮುರಿದು ಆಕಳಿಸುವದನ್ನಂತೂ ಮರತೇ ಬಿಟ್ಟಿದ್ದನು. ಎಚ್ಚರಗೇಡಿತನದ ಹಾಡುಗಳು ಅವನ ಬಾಯಿಯಲ್ಲಿ ಬರಲೇ ಇಲ್ಲ. ಗುರುವಿನ ಪಾದುಕೆಪಾದೋದಕಗಳನ್ನೂ ಹಾಸಿಗೆನೆಳಲುಗಳನ್ನೂ ಮರೆತಾಗಲಿ ಮೋಸದಿಂದಾಗಲಿ ಎಂದೂ ದಾಟಲಿಲ್ಲ. ಬೇಸತ್ತೆನೆಂದು ಗುರುವಿಗಿಂತ ಹಿಂದೆ ಹಾಸಿಗೆಯಿಂದ ಎಂದೂ ಏಳಲಿಲ್ಲ. ಮರೆತಾದರೂ ಗುರುಪ್ರಸಾದವಿಲ್ಲದೆ ಆಹಾರವನ್ನು ಕೊಳ್ಳಲಿಲ್ಲ. ಆತನು ಎದ್ದಾಗಿನಿಂದ ರಾತ್ರಿಯ ವರೆಗೆ ಅವಿಶ್ರಾಂತ ಶ್ರಮದಿಂದ ಹಲವು ತರದ ಕೆಲಸಗಳನ್ನು ಮಾಡಬೇಕಾಗುತ್ತಿತ್ತು. ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಶೌಚವಿಧಿಗಳನ್ನು ತೀರಿಸಿಕೊಂಡು ಜಂಗಮನಿಗೆ ನಮಸ್ಕರಿಸುವನು. ಬಳಿಕ ಮಠದ ಅಂಗಣವನ್ನು ಉಡುಗಿ ಸೂರ್ಯೋದಯಕ್ಕೆ ಸರಿಯಾಗಿ ನೀರು ಹೊಡೆದು ನರುಗಂಪನ್ನು ಪಸರಿಸುವನು. ಧೂಪವನ್ನು ಹಾಕಿ ಮಠದಲ್ಲಿ ಸುವಾಸನೆಯನ್ನು ಇಡಗಿಸುವನು. ಬಳಿಕ ಮಜ್ಜಿಗೆ ಮಾಡಿ ಬೆಣ್ಣೆಯನ್ನು ತೆಗೆಯುವನು. ಆಕಳುಗಳನ್ನು ಹಿಂಡಿಕೊಳ್ಳುವನು. ಇಷ್ಟಾದ

ಮೇಲೆ ತಾನು ಸ್ನಾನಮಾಡಿ ನೀರು ತುಂಬಿ ಶಿವಪೂಜಾಸ್ಥಾನವನ್ನು ಸಾರಣೆ ಮೊದಲಾದವುಗಳಿಂದ ಸಿದ್ಧಗೊಳಿಸಿ ಅಡಿಗೆಯನ್ನು ಮಾಡುವನು. ಆಮೇಲೆ ಗುರುವಿನ ಶಿವಪೂಜೆ, ಅರ್ಪಣಗಳನ್ನು ಮಾಡಿಸಿ ತಾನು ಪ್ರಸಾದವನ್ನು ಕೊಳ್ಳುವನು. ಇಷ್ಟಾದರೆ ಪೂರ್ವಾಹ್ನದ ಕೆಲಸವು ಮುಗಿಯಿತು. ನಂತರ ಇಳಿಹೊತ್ತಿನ ವರೆಗೆ ಪ್ರೀತಿಯಿಂದ ಗೋವುಗಳನ್ನಟ್ಟಿಕೊಂಡು ಅಡವಿಗೆ ಹೋಗಿ ಅವುಗಳನ್ನು ಮೇಯಿಸಿಕೊಂಡು ಬರುವನು. ಕೂಡಲೆ ಕಂಥೆಪಾವಡಗಳನ್ನು ಒಗೆದು ಹಾಕಿ ಮೃದುಲವಾದ ಬಿಲ್ವದಲಗಳನ್ನೂ ಹೂಗಳನ್ನೂ ಸಂಗ್ರಹಿಸಿ ತರುವನು. ದೀಪಗಳನ್ನು ಹಚ್ಚಿ ಗುರುವಿಗೆರಗುವನು. ಅತಿಥಿಗಳ ಸತ್ಕಾರ ಮಾಡುವನು. ಆಕಳುಗಳನ್ನು ಹಿಂಡಿಕೊಂಡು ಹಾಲು ಕಾಸುವನು. ಗುರುವಿನ ಸಾಯಂಕಾಲದ ಶಿವಪೂಜೆಗೆ ಅಣಿಮಾಡುವನು. ಭೋಜನೋತ್ತರದಲ್ಲಿ ಗುರುವಿನ ಉಪದೇಶವಚನಗಳನ್ನಾಲಿಸಿ ಅಪ್ಪಣೆ ಪಡೆದು ಮಲಗಿಕೊಳ್ಳುವನು. ಇಷ್ಟೆಲ್ಲವಲ್ಲದೆ ಊರೆಲ್ಲ ತಿರುಗಾಡಿ ಭಿಕ್ಷಾನ್ನವನ್ನು ತಂದು ಅತಿಥಿಗಳ ಹಾಗು ಉಳಿದ ವಟುಗಳ ಸಂರಕ್ಷಣೆಯನ್ನೂ ಮಾಡುತ್ತಿದ್ದನು. ಈತನ ಈ ತರದ ನಿಷ್ಠೆಯನ್ನೂ ನಿಯಮಿತತನವನ್ನೂ ಕಂಡು ಸಿದ್ಧರಾಮಸ್ವಾಮಿಯು ಮೆಚ್ಚಿಬಿಟ್ಟಿದ್ದನು. ವಿರೂಪಾಕ್ಷನ ಅಂತಸ್ಸತ್ವವನ್ನು ಪೂರ್ಣವಾಗಿ ಒರೆಗೆ ಹಚ್ಚಬೇಕೆಂದಾಗಲಿ ಅಥವಾ ಪ್ರಸಂಗಕ್ಕನುಸರಿಸಿಯಾಗಲಿ ಆತನು ಒಮ್ಮೊಮ್ಮೆ ಅತ್ಯಂತ ಬಿಕ್ಕಟ್ಟಿನ ಇಲ್ಲವೆ ಹೇಯವಾದ ಅಥವಾ ಅರ್ಥವುದ ಕಾರ್ಯಗಳನ್ನಾದರೂ ಹೇಳುತ್ತಿದ್ದನು. ಆದರೆ ವಿರೂಪಾಕ್ಷನು ಗುರುವಚನವೇ ಪ್ರಮಾಣವೆಂದು ಅಳುಕದೇ ಮಾಡುತ್ತಿದ್ದನು. ಆತನು ಎಂದೂ 'ನನ್ನಿಂದಾಗದು; ನನಗೇಕೆ ಇಂಥ ಕಷ್ಟ?' ಎಂದೂ 'ದಣಿದೆನು; ವಿಶ್ರಾಂತಿಯಿಲ್ಲದೆ ಬಳಲಿದೆನು' ಎಂದೂ ಅನ್ನಲಿಲ್ಲ. ಮುಖದ ಮೇಲೆ ಸಹ ಬೇಸರದ ಭಾವವನ್ನು ತೋರಿಸಲಿಲ್ಲ. ನಿಸ್ಪೃಹತೆಯಿಂದ ಎಂಥ ಕೆಲಸಗಳನ್ನಾದರೂ ಮಾಡಿದನು. ಗುರುವಿನ ಕ್ರೋಧಕ್ಕೆ ಉದಾಸೀನನಾಗಲಿಲ್ಲ; ಪ್ರಸನ್ನತೆಗೆ ಸಂತುಷ್ಟನಾಗಲಿಲ್ಲ. ಕೀಳು

ಕೆಲಸಗಳನ್ನು ಮಾಡಿದರೆ ಜನರ ಹಾಸ್ಯಕ್ಕೆ ಈಡಾಗುವೆನೆಂದು ಎಂದೂ ದುರಭಿಮಾನವನ್ನು ಹಿಡಿಯಲಿಲ್ಲ. ಆತನಿಗೆ ಒಮ್ಮೊಮ್ಮೆ ಬಿಸಿಲು ಮಳೆಚಳಿಗಾಳಿಗಳಲ್ಲಿಯೂ ಅರಣ್ಯಾಂಧಕಾರಗಳಲ್ಲಿಯೂ ಕಲ್ಲುಮುಳ್ಳು ಗಳಲ್ಲಿಯೂ ತಿರುಗುವ ಪ್ರಸಂಗವೂ ಬರುತ್ತಿತ್ತು. ಆದರೆ ಅವನು ಎಷ್ಟು ಕಷ್ಟವಾದರೂ ಧೈರ್ಯಗುಂದದೆ ತನಗಾದ ಕಷ್ಟವನ್ನು ಗುರು ವಿಗೆ ತೋರಗೊಡದೆ ಸದಾಸಮಾಧಾನದಿಂದಲೇ ಇದ್ದನು.

ಊರ ಭಕ್ತಜನರು ಒಂದುದಿನ ನಿತ್ಯದಂತೆ ಜಂಗಮ ದರ್ಶ ನಕ್ಕೆ ಮಠಕ್ಕೆ ಬಂದಾಗ ಕಾರ್ಯದಲ್ಲಿ ತೊಡಗಿದ ವಿರೂಪಾಕ್ಷನನ್ನು ಕಂಡು ಮನಮೊಲಿದು—“ದೇಶಿಕೋತ್ತಮನೇ ನೀನು ಯಾವಾಗಲೂ ಕಾರ್ಯತತ್ಪರನಾಗಿಯೇ ಇರುವೆ; ವಿಶ್ರಾಂತಿಯೇ ಇಲ್ಲ. ನಿಜವಾಗಿ ನೋಡಿದರೆ ನಿನ್ನಿಂದಲೇ ಈ ಮಠದಲ್ಲಿ ಸುವ್ಯವಸ್ಥೆಯು ನೆಲೆಗೊಂಡಿ ರುವದು. ವೈಭವವು ಗೋಚರಿಸಿರುವದು. ನಿನ್ನಂಥ ಗುರುಸೇವ ಕರನ್ನೇ ಕಾಣೆವು. ನೀನೇ ಜಿತೇಂದ್ರಿಯನು ಹೌದು! ಕೇವಲ ನಾವಷ್ಟೇ ಅಲ್ಲ; ಈ ಉರಲ್ಲಿ ಎಲ್ಲರೂ ನಿನ್ನ ಸದ್ವೃತ್ತಿಯನ್ನು ಬಣ್ಣಿ ಸುವರು. ನಮ್ಮ ಈ ಮಹಾಮಹಿಮರಿಗೆ ನಿನ್ನಂಥ ಶಿಷ್ಯರು ಹಿಂದೆ ಎಂದೂ ದೊರೆತಿರಲಿಲ್ಲ” ಎಂದು ಹೊಗಳುತ್ತಿರಲು ಆ ನುಡಿಗಳು ವಿರೂಪಾಕ್ಷ ನಿಗೆ ಕಾದ ಲೋಹರಸವನ್ನು ಕಿವಿಯಲ್ಲಿ ಸುರಿದಂತಾಗಲು ಆತನು— “ಸಭ್ಯರೇ ಒಳಿತನಾಡಿದಿರಿ! ನನ್ನ ದೋಷಗಳನ್ನುಕಂಡು ನನಗೆ ತಿಳಿಸಿಹೇಳಿದ್ದರೆ ನೆಟ್ಟಗಿತ್ತು. ಮಾಡುವದೇನು? ಹೇಸಿಗುಣದ ನನ್ನನ್ನು ಪರಿಹಾಸದಿಂದ ಅಣಕಿಸುವ ರೀತಿಯೇ ಇದು. ಪರಿಹಾ ಸಕ್ಕಲ್ಲದೆ ನಿಜವೆಂದು ತಿಳಿದು ನುಡಿದಿದ್ದರೆ ಅದು ಭ್ರಮೆಯಲ್ಲದೆ ಬೇರೆಯಲ್ಲ! ಗುರುಸೇವೆಯು ನನ್ನ ತಲೆಯಲ್ಲಿಯೇ ಹುಟ್ಟಿತೇ? ನಾನು ಮಾಡುವದೇನು ದೊಡ್ಡದು? ಈ ಎಳೆಹರಯದಲ್ಲಿ ನನ್ನ ಜಿತೇಂದ್ರಿಯತ್ವವನ್ನೇನು ಕಂಡಿರಿ ಹೇಳಬಾರದೇ? ಹಿರಿಯರೇ ನೀವಂ ದಂತೆ, ನನ್ನ ಗುರುವಿಗೆ ನನ್ನಂಥ ಕುಟಿಲಾತ್ಮಕರಾದ ಶಿಷ್ಯರು ದೊರೆ

ತಿರಲಿಲ್ಲ. ನಿಜವಲ್ಲವೇ? ಭೂಮಿಯಲ್ಲಿ ಸ್ವಾರ್ಥಿಗಳು ಮೂಢಾತ್ಮರು ಅಪಾತ್ರರನ್ನು ವ್ಯರ್ಥವಾಗಿ ಬಣ್ಣಿಸಿ ಮೆಚ್ಚಿಸುವರು. ಆದರೆ ಶಿವ ಯೋಗಿಯ ಚರಣವನ್ನು ನಂಬಿ ಬಾಳುವ ನೀವೇಕೆ ಹೀಗಾದಿರೋ ತಿಳಿಯದೆ ಅಚ್ಚರಿಯಾಗುವದು. 'ಮನವರಿಯದ ಪಾಪವಿಲ್ಲ, ಶಿವನರಿಯದ ಸಾವಿಲ್ಲ' ಎಂಬ ನಾಣ್ಣುಡಿಯಂತೆ ನನ್ನ ಪಾಪವನ್ನು ನನ್ನ ಮನೋದೇವತೆಯು ಹೇಳುವದು. ಅದನ್ನೇನು ಬಲ್ಲಿರಿ? ಕೈಗೂ ಲಿಯ ಮನುಷ್ಯನಿಂದ ಒಡೆಯನ ಐಶ್ವರ್ಯವು ಮೆರೆಯುವದೇ? ನನ್ನಂಥ ಸೇವಕನಿಂದ ಈ ಮಠದ ಸೌಭಾಗ್ಯವು ಹೆಚ್ಚಾಗುವದೇ? ಹಿಂದಿನ ಇಂದಿನ ಮುಂದಿನ ಚರಶಿಷ್ಯರಲ್ಲೆಲ್ಲ ಮಂದನೂ ಮೂಢನೂ ನಾನು. ಬಗೆದು ನೋಡಿದರೆ ಸದ್ಗುಣವೊಂದಾದರೂ ನನ್ನಲ್ಲಿಲ್ಲ; **ನಾನದೆಂತಹ ಭಕ್ತನು?** ಸದ್ಗುರುವಿನ ಪಾದವನ್ನು ಹೊಂದಿ ಕುಂದದೆ ಸೇವೆಯನ್ನು ಮಾಡಿ ಕೇವಲಾನಂದಸೌಖ್ಯವನ್ನು ಹೊಂದಿದ ಗುರು ಭಕ್ತನ ಚರಿತ್ರವನ್ನು ಕೇಳಿಲ್ಲವೇ? ನಾನು ಅವನಂತಿರುವೆನೇ? ನಿಮ್ಮಂಥವರ ಸ್ತೋತ್ರವು ಅವನಿಗೆ ಮಾತ್ರ ತಕ್ಕದ್ದು; ನನ್ನಂಥ ಡಾಂಭಿಕನಿಗೆ ತಕ್ಕದಲ್ಲ. ಗುರುವಿನ ಅತುಲಭಕ್ತಿಯ ಫಲವನ್ನು ನಾನೇನು ಬಲ್ಲೆನು? ನನ್ನಲ್ಲಿ ಚರದಾಸರ ದಾಸನ ಯೋಗ್ಯತೆಯೂ ಇರಲಿಕ್ಕಿಲ್ಲ." ಎಂದು ನುಡಿದು ಅಸಮಾಧಾನಗೊಳ್ಳುತ್ತಿರಲು ಆ ಜನರು ನಾಚಿ ಕ್ಷಮೆಯನ್ನು ಬೇಡಿಕೊಂಡರು. ವಾಚಕರೇ, ವಿರೂ ಪಾಕ್ಷನು ಎಂಥ ಘನಭಕ್ತಿಯುಳ್ಳವನಾಗಿದ್ದನೆಂಬದನ್ನು ನೀವು ಕಂಡು ಹಿಡಿದಿರಬಹುದು. ಮತ್ತೆ ಅವನ ನಿರ್ಮಲವಾದ ಮನದಲ್ಲಿ ಬೆಳಗುವ ನಿರಭಿಮಾನದಿಂದ ಆ ಭಕ್ತಿಗೆ ಎಷ್ಟು ಕಳೆಯೇರಿರುವದು ನೋಡಿ ದಿರಾ? ತಮ್ಮಲ್ಲಿ ಯಾವ ಹುರುಳಿಲ್ಲದಿದ್ದರೂ ಆತ್ಮಸ್ತುತಿ-ಅನ್ಯ ನಿಂದೆಗಳಿಂದಲೇ ತಮ್ಮ ಕೀರ್ತಿಯನ್ನು ಮೆರೆಯಿಸುವ ಮಹಾಶ ಯರೂ ಈ ಭೂಮಿಯಲ್ಲಿ ಎಷ್ಟೋ ಜನರುಂಟು. ಒಮ್ಮೊಮ್ಮೆ ಅದೇ ಉಪಜೀವನದ ಸಾಧನವೆಂದೂ ಅವರು ಬಗೆಯುವರು. ಆದರೆ ಈ ಎರಡೂ ದುರ್ಗುಣಗಳು ಅನಿಷ್ಟಕಾರಕವಾಗಿಯೇ ಇರುವವೆಂ

ಬದನ್ನು ಅವರೇನು ಬಲ್ಲರು? ಆತ್ಮಸ್ತುತಿ-ಅನ್ಯನಿಂದೆಗಳೆರಡೂ ಪರಸ್ಪರ ಜನ್ಮಭೂಮಿಗಳಾಗಿದ್ದರೂ ಆತ್ಮಸ್ತುತಿಯು ತೀವ್ರ ಕೆಡಕನ್ನುಂಟು ಮಾಡುವಂಥದು. ಆತ್ಮಸ್ತುತಿಯನ್ನು ಮಾಡಿಕೊಳ್ಳುವ ಮನುಷ್ಯನ ಕೀಳುತನವು ಕೂಡಲೆ ಹೊರಬಿದ್ದು ಅವನ ಗೌರವವು ಇಳಿದು ಹೋಗುತ್ತದೆ. ಬಲ್ಲವರು ಮರುಳರಂತೆ ಇದರ ಬಲೆಗೆ ಸಿಕ್ಕುವದಿಲ್ಲ. ವಿರೂಪಾಕ್ಷನಲ್ಲಿ ಇವರ ಗಾಳಿಯು ಸಹ ಸುಳಿಯದು. ಇದೊತ್ತಟ್ಟಿಗಿರಲಿ, ನಿಸ್ಪೃಹವೃತ್ತಿಯು ಅವನಲ್ಲಿ ಮೂರ್ತಿಮಂತವಾಗಿ ನೆಲೆಗೊಂಡಿತ್ತು! ಪರಮಗುಣಸಂಪನ್ನನಾದ ಈ ದೇಶಿಕ ಶಿಖಾಮಣಿಯು ಅತಿ ಧನ್ಯನು!!

ಸಿದ್ಧರಾಮಚರವರರ ಸೇವೆಯಲ್ಲಿ ವಿರೂಪಾಕ್ಷನು ಹದಿನಾಲ್ಕು ಹದಿನೈದು ವರ್ಷಗಳನ್ನು ಕಳೆದನು. ಅಷ್ಟು ಕಾಲದ ವರೆಗೆ ಒಂದು ದಿನವೂ ಕೂಡ ಆತನ ಮನಸ್ಸಿನಲ್ಲಿ 'ಹೀಗೆಯೇ ಎಷ್ಟು ದಿನಗಳನ್ನು ಕಳೆಯಲಿ? ಗುರುಕಾರುಣ್ಯವು ದೊರೆಯಲೇ ಇಲ್ಲವಲ್ಲ!' ಎಂಬ ಆಲೋಚನೆಯು ಬರಲೇ ಇಲ್ಲ. ಯಾಕಂದರೆ ಆತನು ಯಾವದೊಂದು ವಿಷಯದ ಸಲುವಾಗಿ ಗುರುವಿನ ಪ್ರಸನ್ನತೆಯನ್ನು ಪಡೆಯಲೆಂದು ದುಡಿಯದೆ ಕೇವಲ ಕರ್ತವ್ಯವೆಂದು ಸೇವೆಯನ್ನು ಮಾಡುತ್ತಿದ್ದನು. ತನಗೆ ದೊರೆಯಬಹುದಾದ ಅಧಿಕಾರದ ವಿಷಯವಾಗಿ ಮಾತು ಎತ್ತಿದ ಜನರ ಮುಂದೆ "ಗುರುಕಾರುಣ್ಯವಿಲ್ಲದ ನನಗೆ ಗುರುಚರಾಧಿಕಾರದ ಯೋಗ್ಯತೆಯೆಲ್ಲಿದೆ? ಅಥವಾ ಅದರ ಅಪೇಕ್ಷೆಯಾದರೂ ಏಕೆ? ಈ ನಿರಾಭಾರಿ ಸೇವೆಗಿಂತ ಅಧಿಕವಾದದ್ದು ಯಾವದಿದೆ? ಈ ಶಿಷ್ಯಾಧಿಕಾರವು ದೊರೆತದ್ದು ನನ್ನ ಪುಣ್ಯವೇ ಆಗಿದೆ" ಎಂದು ಅನ್ನುತ್ತಿದ್ದನು. ರೋಗವು ಹಿಮ್ಮೆಟ್ಟಿದಂತೆ ರೋಗಿಯು ಎಂಥ ಕಹಿಯಾದ ಔಷಧವನ್ನಾದರೂ ಪ್ರೀತಿಯಿಂದ ಕುಡಿಯುವಂತೆ ವಿರೂಪಾಕ್ಷನು ಮನಸ್ಸಿನ ಚಂಚಲತೆಯು ನಾಶವಾದ ಹಾಗೆಲ್ಲ ಕಷ್ಟಕರವಾದ ಸೇವೆಯನ್ನಾದರೂ ಹೆಚ್ಚು ಮನಸ್ಸಿನಿಂದ ಮಾಡಹತ್ತಿದನು. ಈ ದೀರ್ಘವಾದ ಕಾಲಾವಧಿಯಲ್ಲಿ ಸಿದ್ಧರಾಮಶಿವಯೋ

ಗಿಯು ಈತನನ್ನು ಚನ್ನಾಗಿ ಪರೀಕ್ಷಿಸಿ ನಿರಾಭಾರಿಯೊಡೆತನಕ್ಕೆ ಸಂಪೂರ್ಣ ಯೋಗ್ಯನಿರುವನೆಂದು ಮನಗಂಡನು.

ಅತ್ತ ಇಟ್ಟಗಿಯ ಭಕ್ತರೆಲ್ಲರು, ತಮ್ಮ ಮಠದ ಮಹಾಶೂನ್ಯ ಸಿಂಹಾಸನಾಧಿಕಾರವನ್ನು ವಿರೂಪಾಕ್ಷದೇವಗೆ ಕೊಟ್ಟು ಆತನಿಂದ ಧನ್ಯರಾಗಬೇಕೆಂದು ನಿಶ್ಚಯಿಸಿ 'ಕುದುರೇವೋತಿ'ಗೆ ಬಂದರು. ಯಾಕಂದರೆ ಸಿದ್ಧರಾಮಸ್ವಾಮಿಗಳು ಇತ್ತಿತ್ತ ಕುದುರೇವೋತಿ ಎಂಬಲ್ಲಿಯ ತಮ್ಮ ಮಠವಲ್ಲಿಯೇ ಬಂದು ಇದ್ದರು; ಇಟ್ಟಗಿಯ ಜನರು ಈ ಸ್ವಾಮಿಗಳಿಗೆ ನಮಸ್ಕರಿಸಿ— "ತಾವು ವಿರೂಪಾಕ್ಷದೇವನೊಡನೆ ನಮ್ಮೂರಿಗೆ ದಯಮಾಡಿಸಬೇಕು. ಕರುಣದಿಂದ ಆತನಿಗೆ ನಿರಾಭಾರಿಯೊಡೆತನವನ್ನಿತ್ತು ನಮ್ಮ ಇಷ್ಟವನ್ನು ಪೂರೈಸಬೇಕು" ಎಂದು ಬೇಡಿಕೊಂಡರು. ಸ್ವಾಮಿಗಳು ಸಂತೋಷದಿಂದ ಒಪ್ಪಿಕೊಂಡರು. ಕೂಡಲೆ ತಮ್ಮ ಶಿಷ್ಯಾಗ್ರಗಣ್ಯನೊಡನೆ ಇಟ್ಟಗಿಗೆ ಬರಲು, ಅಲ್ಲಿಯ ಜನರು ಮರ್ಯಾದೆಯಿಂದ ಅವರನ್ನು ಕಂಡು ಸತ್ಕರಿಸಿದರು.

ಪ್ರಮುಖರಾದವರು ಸಿಂಹಾಸನಾರೋಹಣಕ್ಕೆ ತಕ್ಕ ಸುಮುಹೂರ್ತವನ್ನು ಶೋಧಿಸಿ ನಿರ್ಣಯಿಸಿದರು. ಸಕಲ ಸನ್ನಾಹಗಳನ್ನು ಅಣಿಮಾಡಿದರು. ನಿರ್ಮಲಚಿತ್ತದ ಸದ್ಭಕ್ತರೆಲ್ಲರೂ ಆ ಶುಭದಿವಸದ ಎದುರು ನೋಡುತ್ತಿದ್ದರು. ಆದರೆ ಅಷ್ಟರಲ್ಲಿಯೇ ಆ ಮಹಾಕಾರ್ಯಕ್ಕೆ ದೊಡ್ಡ ತೊಂದರೆಯೊಂದೊದಗಿತು! ದುಷ್ಟರು ಗಂಡಾಂತರವನ್ನು ತಂದು ಒಡ್ಡಿದರು!!

೪. ಶೂನ್ಯಸಿಂಹಾಸನಾರೋಹಣ.

ಸಜ್ಜನರು ಮಾಡುವ ಸತ್ಕಾರ್ಯಗಳಿಗೆ ತೊಂದರೆಯನ್ನು ತಂದೊಡ್ಡುವ ದುಷ್ಟಸಮಾಜವು ಎಲ್ಲಿ ಹೋದರೂ ಇದ್ದದ್ದೇ. ಆದರ ಬಲವು ಒಂದು ಹೆಜ್ಜೆ ಮುಂದೇ ಸರಿ. ಸರ್ವಸಮ್ಮತವಾಗುವಂತೆ ಕಾರ್ಯ ಮಾಡುವದೇ ಆಗದ ಮಾತು. ಜಗತ್ಕಲ್ಯಾಣಕರರಾದ ಸೂರ್ಯಚಂದ್ರಾದಿಗಳ ಅವಿಶ್ರಾಂತ ಶ್ರಮದ ಸಂಚಾರವು ಕೂಡ ಚೋರ-ವಿರಹಿ ಜನಗಳಿಗೆ ಸಹಿಸದ ಮಾತು. ಒಂದುವೇಳೆ ಮಹತ್ಪ್ರಯತ್ನದಿಂದ ಜನವಿರೋಧವಾಗದಂತೆ ನಡೆದರೂ ಅನಿಮಿತ್ತ ಶತ್ರುಗಳಾದರೂ ಸರ್ವತ್ರ ಸರ್ವರಿಗೂ ಇದ್ದೇ ಇರುತ್ತಾರಂತೆ. ಅಂತೇ ಮಹಾಕಾರ್ಯಗಳನ್ನು ಮಾಡಹೋದರೆ ತೊಂದರೆಗಳು ಕಟ್ಟಿಟ್ಟವುಗಳೇ. ಅವುಗಳನ್ನು ಲೆಕ್ಕಿಸದೆ ಕೈಕೊಂಡುದನ್ನು ಕೊನೆಗಾಣಿಸುವದೇ ಧೀರರ ಕೆಲಸವು. ನಿರ್ವಿಘ್ನವಾಗಿ ಕೀರ್ತಿಯನ್ನು ಸಾಧಿಸಲು ಸಾಧ್ಯವಿಲ್ಲೆಂಬದನ್ನು ಅವರು ಲಕ್ಷದಲ್ಲಿಡಬೇಕು.

ವಿರೂಪಾಕ್ಷದೇವನು ಅಂಗಗುಣಗಳನ್ನು ಗೆದ್ದ ಧೀರನು! ಬ್ರಹ್ಮಚರ್ಯಾಶ್ರಮಭೂಷಣನು! ಅಖಂಡವಾದ ಗುರುಕೃಪೆಯನ್ನು ಹೊಂದಿದವನು! ಭಕ್ತೋದ್ಧಾರಪ್ರವೀಣನು! ಇಂಥವನನ್ನು ನಿರಂಜನ ಪೀಠದಲ್ಲಿ ಪ್ರತಿಷ್ಠಾಪನೆ ಮಾಡಿ ಸೇವಿಸಿ ಕೃತಾರ್ಥರಾಗಬೇಕೆಂದು ಹವಣಿಸುವದು ಭಕ್ತಜನವು!! ಇದಾದರೂ ಸಣ್ಣ ಕೆಲಸವಲ್ಲ. ಇದಕ್ಕೂ ತೊಂದರೆಗಳೊದಗುವವೇ! ದುಷ್ಟರು ಪ್ರತಿಬಂಧಿಸಲೆಳಸುವವರೇ! ಸರಿ. ಲಿಂಗೈಕ್ಯರಾದ ಮುಪ್ಪಿನ ಬಸವಲಿಂಗದೇವನಿಗೆ ಹಲವು ಜನ ವಟುಗಳಿದ್ದರೆಂಬದನ್ನು ಹೇಳಿದೆಯಷ್ಟೇ? ಅವರಲ್ಲಿ ರುದ್ರದೇವನೆಂಬವನು ಹಿರಿಯನಾಗಿದ್ದನು. ಕಲಹಪ್ರಿಯರಾದ ಜನರು ಆತನನ್ನು ಮುಂದೆ ಮಾಡಿಕೊಂಡು, ವಿರೂಪಾಕ್ಷದೇವನ ಶೂನ್ಯ

ಸಿಂಹಾಸನಾರೋಹಣವನ್ನು ತಡೆಯಲು ಯತ್ನಿಸಿದರು. ರುದ್ರದೇವನೂ ಆತ್ಮಪ್ರತಿಷ್ಠೆಯ ಮನುಷ್ಯನು; ಅಧಿಕಾರಪ್ರಿಯನು; ಆತನು "ಹಿರಿಯನು ನಾನು! ಮಠದ ವ್ಯವಹಾರಗಳನ್ನು ಬಹುಕಾಲದಿಂದ ಸಾಗಿಸುತ್ತ ಬಂದವನು ನಾನು! ಆ ಕಾರ್ಯದಲ್ಲಿ ಚತುರನು ನಾನು!! ಸಕಲ ಭಕ್ತಜನಕ್ಕೆ ಪರಿಚಿತನು ನಾನು! ನಾನಲ್ಲದೆ ಇನ್ನೊಬ್ಬರು ಈ ಅಧಿಕಾರಕ್ಕೆ ಬಾಧ್ಯಸ್ಥರಲ್ಲ. ಹೀಗಿರುವದನ್ನು ಲಕ್ಷಿಸದೆ ನಿಮ್ಮ ಪುಂಡಾಟಿಕೆಯನ್ನೇ ನಡಿಸಿದರೆ ನಾನು ನಡಿಯಗೊಡುವೆನೇ?" ಎಂದು ಬಂಡು ಹೂಡಿದನು. ಮೇಲೆ ಹೇಳಿದಂತೆ ಅವನಿಗೆ ದುರ್ಜನರ ಬೆಂಬಲವಂತೂ ಇದ್ದದ್ದೇ. ಆದರೆ ಸದ್ಭಕ್ತಮಹಾಶಯರು ಆ ತುಂಟರೊಡನೆ ತುಂಟತನವನ್ನು ಮಾಡಲಸಮರ್ಥರಾಗಿ ಆ ಭಾಗದ ನ್ಯಾಯಸ್ಥಾನದಲ್ಲಿ ತಮ್ಮ ದೂರನ್ನು ಹೇಳಿಕೊಂಡರು. ಇಟ್ಟಗಿಯು ಮೊಗಲಾಯಿಯ ನಾಡಿಗೆ ಸೇರಿದ್ದು. ಕೊಪ್ಪಳ ಜಿಲ್ಹೆಯಲ್ಲಿರುವದು. ಕೊಪ್ಪಳದ ನ್ಯಾಯಾಧೀಶನು, ಇದೆಲ್ಲವನ್ನು ಕೇಳಿಕೊಂಡನು. ಯಾರಿಗೆ ಪೀಠಾಧಿಕಾರವನ್ನು ಕೊಡುವದರಿಂದ ಬಹುಜನರಿಗೆ ಸಂತೋಷವಾಗುವದೆಂಬದನ್ನು ತಿಳಿದುಕೊಳ್ಳುವದಕ್ಕೆ ಸ್ವತಃ ಇಟ್ಟಗಿಗೆ ಬಂದನು. ಪ್ರಮುಖರಾದವರನ್ನೆಲ್ಲ ಕರೆಯಿಸಿ ಕೇಳಿದನು. ಅವನಿಗೂ ಬಿತ್ತ್ತಿದಿಗಿಲು! ನ್ಯಾಯನಿರ್ಣಯದಲ್ಲಿ ಬಹು ಜನರಿಗೆ ಅಸಂತೋಷವಾಗದಂತೆ ಮಾಡುವದು ಅಶಕ್ಯವೆಂದೇ ನಿರ್ಣಯಿಸಿದನವನು! ಯಾಕಂದರೆ ವಿರೂಪಾಕ್ಷದೇವನೇ ತಮಗೆ ಗುರುವಾಗಬೇಕೆಂದು ಅಪೇಕ್ಷಿಸುವವರು ಬಹುಜನರಿದ್ದರೂ, ರುದ್ರದೇವನ ಜನರು ಇಲ್ಲದ ಸಲ್ಲದ ಆಧಾರಗಳನ್ನು ತೋರಿಸಿಯೂ ಮಠದ ಮೇಲಿನ ಡಾಂಭಿಕತನದ ಭಕ್ತಿಯಿಂದ ಡಂಭಾಚಾರವನ್ನು ಮಾಡಿಯೂ ಬಾಯಿಬಡಕತನದಿಂದ ನ್ಯಾಯಾಧಿಕಾರಿಯ ತಲೆಯನ್ನು ಕೆಡಿಸುವದರಲ್ಲಿ ಹಿಂದೆಗೆಯಲಿಲ್ಲ. ಆದರಿಂದ ನ್ಯಾಯಾಧೀಶನು—"ಉಭಯ ಪಟುಗಳನ್ನು ಮಠದಲ್ಲಿ ಕೂಡ್ರಿಸಿರಿ. ನಾನು ಅಲ್ಲಿಗೆ ಬಂದು ನೋಡಿ, ನನಗೆ ತಿಳಿದವರನ್ನು ನೇಮಿಸುವೆನು" ಎಂದು ಆಜ್ಞಾಪಿಸಿದನು. ವಾಚಕರೇ ನೋಡಿದಿರಾ ಅಂತಃಕಲಹದ

ಸತ್ವವನ್ನು! ಸಮಾಜದ ತೇಜವನ್ನು ಅದೆಷ್ಟು ಕುಗ್ಗಿಸುವದು! ಆತ್ಮೋದ್ಧಾರಕ್ಕಾಗಿ ತಮಗೆ ಯೋಗ್ಯವಾದ ಗುರುವಿನನ್ನು ಪಡೆಯು ವದರಲ್ಲಿ ಸಹ ಪರಮತೀಯರು ಆ ಗುರುವಿನ ಯೋಗ್ಯತೆಯನ್ನು ನಿರ್ಣಯಿಸುವದಾಯಿತು!! ಜ್ಞಾನಾಂಶವು ಲೇಶವಾದರೂ ಇರದಿ ದ್ದರೂ, ಭಕ್ತೋದ್ಧಾರದ ಬಗೆಯನು ಅರಿಯದಿದ್ದರೂ, ತಾವೇ ದೊಡ್ಡ ಸ್ವಾಮಿಗಳಾಗುವೆವೆಂದು ಮುಂದೆ ಬಂದು ಸಮಾಜದಲ್ಲಿ ಇತ್ತಂಡವಾದವನ್ನು ಹೂಡಿಸಿ ಆರಂಭದಲ್ಲಿಯೇ ಇಂಥ ದುಷ್ಪರಿಣಾ ಮಗಳಿಗೆ ಕಾರಣರಾದ ಮೇಲೆ ಇವರು ಗುರುಗಳಾದ ಬಳಿಕಾದರೂ ಮಾಡುವ ಶೂರತನವೇನು? ಅದೂ ಅಂಥವೇ! ತಾವೇ ಮೋಹಾದಿ ಮಾಯಾಗುಣಗಳಿಗೆ ಅಂಕಿತರಾಗಿರುವಾಗ ಭಕ್ತರ ಮಾಯಾವಿಚ್ಛೇದನವ ನ್ನೇನು ಮಾಡುವರು? ವೀರಶೈವರಲ್ಲಿ ಇಂಥ ದುರಭಿಮಾನಿಗಳೂ, ಕಲಹ ಪ್ರಿಯರೂ ಇರುವವರೆಗೆ ಅವರು ಪರರ ಹಾಸ್ಯಕಾಸ್ಪದರಾಗಿ ದುಸ್ಥಿತಿ ಯಲ್ಲಿಯೇ ಉಳಿಯುವರೆಂಬಲ್ಲಿ ಸಂದೇಹವಿಲ್ಲ; ಇರಲಿ, ಇತ್ತ ಉಭಯ ವಟುಗಳು ತಮ್ಮ ಯೋಗ್ಯತೆಯ ಪರೀಕ್ಷೆಗಾಗಿ ಸಿದ್ಧರಾಗತೊಡಗಿದು ದನ್ನು ನೋಡಿರಿ.

ರುದ್ರದೇವನು ರೇಶಿಮೆಯ ಜರದ ಮುಡಿ, ಹೂವಿನಂಚಿನ ಪಂಜೆ, ಹೊಳೆಯುವ ಉಣ್ಣೆಯ ಅಂಗಿ ಮೊದಲಾದ ಉಡಿಗೆತೊಡಿಗೆಗಳನ್ನು ಧರಿಸಿದನು. ಮೇಲೆ ಸಕಲಾತಿಯನ್ನು ಹೊತ್ತನು. ಬೆಲೆಯುಳ್ಳ ಅಲಂಕಾರಗಳನ್ನಿಟ್ಟನು. ಅಧಿಕಾರಿಯ ಮನವನ್ನು ಮೋಹಗೊಳಿಸು ವವನಂತೆ ಮಠದಲ್ಲಿ ಬಂದು ಆಡಂಬರದಿಂದ ಆಸನದಲ್ಲಿ ಕುಳಿತು ಕೊಂಡನು. ಇತ್ತ ವಿರೂಪಾಕ್ಷದೇವನಿಗೆ ಬಾಹ್ಯಾಡಂಬರವು ಮೊದಲೇ ಬೇಡ; ಅದರಲ್ಲಿಯೇ ಈ ಗೊಂದಲವೊಂದೇಳಲು ಮನಸ್ಸು ಮತ್ತಿಷ್ಟು ಮರುಗಿತು. ಮನವಾರೆ ಜಂಗಮ ಸೇವೆಯನ್ನೇ ಮಾಡಿ ಆತ್ಮೋನ್ನ ತಿಯನ್ನು ಮಾಡಿಕೊಳ್ಳಬೇಕೆಂದು ಅವನ ಸಂಕಲ್ಪ. ಆದರೆ ಆತನಿಗೆ ಹಾಗೆಯೇ ನಡೆಯಲು ಅವಕಾಶವೆಲ್ಲಿ? ಭಕ್ತರ ಭಕ್ತಿಪಾಶದಲ್ಲಿ ಆತನು ಸಿಲುಕಿಕೊಂಡಿದ್ದನು. ಭಕ್ತರ ಆಗ್ರಹವನ್ನು ಮೀರುವದು ಸಾಧ್ಯವೇ?

ಆದರಿಂದ ಆವನು ನಿರ್ವಾಹವಿಲ್ಲದೆ ತನ್ನ ಸಹಜವಾದ ಕಾಷಾಯಾಂಬರಗಳೊಡನೆ ಮಠದಲ್ಲಿ ಬಂದು ಕುಳಿತುಕೊಂಡನು. ಆತನ ಹಣೆಯ ಮೇಲೆ ಭಸ್ಮತ್ರಿಪುಂಡ್ರವು ಶೋಭಿಸುತ್ತಿತ್ತು; ಕಂಠದಲ್ಲಿಯ ರುದ್ರಾಕ್ಷಿ ಮಾಲೆಯೂ, ಕಾವಿಯ ಅಂಗಿಯೂ, ಶಾಟಿಯೂ, ದಂಡವೂ ಕಂಗೊಳಿಸಿ, ನೋಡುವವರಿಗೆ ಪ್ರತ್ಯಕ್ಷ ಶಂಕರನೆಂಬ ಭಾವನೆಯನ್ನು ಹುಟ್ಟಿಸುತ್ತಿದ್ದವು.

ಇವರಿಬ್ಬರಲ್ಲಿರುವ ಈ ವೇಷಭೂಷಣಗಳ ಅಂತರವು ವರ್ಣನೀಯವೇ ಆಗಿತ್ತು. ಅಲ್ಲಿ ಕಸ್ತೂರಿಯ ತಿಲಕ, ಇಲ್ಲಿ ಭಸ್ಮದ ಬೆಳಗು! ಅಲ್ಲಿ ಮೌಕ್ತಿಕ ಹಾರ, ಇಲ್ಲಿ ರುದ್ರಾಕ್ಷಿಯ ಮಾಲೆ! ಅಲ್ಲಿ ರನ್ನದ ಕಡಗಗಳಿಂದ ಕಾಂತಿಗೂಡಿದ ಮುಂಗೈ, ಇಲ್ಲಿ ವರಪ್ರದಾನದ ಬಲದಿಂದ ಮೆರೆವ ಬರಿಯಅಂಗೈ!! ಅಲ್ಲಿ ಚಿತ್ರಾಂಬರ, ಇಲ್ಲಿ ಕಾವಿಯ ವಸ್ತ್ರಾಂಬರ!! ಅಲ್ಲಿ ನರವೇಷ, ಇಲ್ಲಿ ಹರವೇಷ! ರಾಗದ್ವೇಷಗಳ ಸುಳಿವು ಅಲ್ಲಿ, ವಿರತಿಸದ್ಭಾವಗಳ ನೆಲೆಯು ಇಲ್ಲಿ! ಮೋಹದ ಮೊಟ್ಟೆ ಅದು, ಮೋಹವಿದಾರಕ ಕುಠಾರವಿದು! ಅಜ್ಞಾನಾಂಧಕಾರದಲ್ಲಿ ಮುಳುಗಿದವನು ರುದ್ರದೇವನು! ಅಜ್ಞಾನಾಂಧಕಾರವನ್ನು ತೊಲಗಿಸುವ ತಿಳುಹಿನ ಬೆಳಗಿನ ರೂಪದಲ್ಲಿರುವವನು ವಿರೂಪಾಕ್ಷದೇವನು!! ಇಂತಿರುವ ಇವರ ಸ್ವಭಾವಭೇದವನ್ನು ಸ್ಪಷ್ಟವಾಗಿ ತಿಳಿದು ನೋಡಿದವರು ಕೂಡಲೆ ನಿರಾಭಾರಿಸಿಂಹಾಸನಕ್ಕೆ ತಕ್ಕವನಾರೆಂಬದನ್ನು ನಿರ್ಣಯಿಸರೆ? ರುದ್ರದೇವನ ಈ ಕೇವಲ ಲೌಕಿಕವೃತ್ತಿಯು ಆತನ ಅನುಯಾಯಿಗಳಿಗೆ ಸಹ ಹೇಯವಾದದ್ದೆಂದೆನಿಸಿತು. ಆದರೆ ಒಮ್ಮಿಂದೊಮ್ಮೆ ತೊಲಗುವದೆಲ್ಲಿ ಅವರ ದುರಭಿಮಾನವು? ನಿಯಮಿತ ವೇಳೆಗೆ ಬಂದನು ನ್ಯಾಯಾಧೀಶನು; ವಿರೂಪಾಕ್ಷದೇವನ ಕಡೆಗೆ ಸ್ವಾಭಾವಿಕವಾಗಿಯೇ ಹರಿಯಿತು ಆತನ ಮನಸ್ಸು; ಬಳಿಕ ಆತನು ಯಾರ ಮಾತನ್ನೂ ಕೇಳಲಿಲ್ಲ. "ಕಾಮನ ಸೊಬಗಿನಿಂದ ಕಂಗೊಳಿಸುವ ರುದ್ರಾರ್ಯನು ಈ ಶೂನ್ಯಸಿಂಹಾಸನಕ್ಕೆ ತಕ್ಕವನಲ್ಲ. ಜನವನುದ್ಧ

ರಿಸುವ ಸಾಮರ್ಥ್ಯವು ಸಹಜವಾಗಿ ಒಡಮೂಡಿ ಪರಿಶೋಭಿಸುತ್ತಿರು ವದು ವಿರೂಪಾಕ್ಷದೇವನಲ್ಲಿ; ಇವನೇ ತಕ್ಕವನು.” ಎಂದು ನಿರ್ಣಯ ವನ್ನು ಬರೆದುಕೊಟ್ಟು ಭಕ್ತರನ್ನು ಸಂತಸಗೊಳಿಸಿ ತೆರಳಿದನು.

ರುದ್ರದೇವನು ಮನಬಂದಂತೆ ಉಂಡುತಿಂದು ಬಲವಂತನಾಗಿರಬ ಹುದು, ಚೆಲುವಚನ್ನಿಗನಾಗಿರಬಹುದು! ಮಠದ ಆಯವನ್ನು ಬಹು ದಿನಗಳಿಂದ ಹೊಂದಿ ಧನಿಕನಾಗಿರಬಹುದು, ಜನರ ಗಳಿಸಿರಬಹುದು! ಲೌಕಿಕದ ವ್ಯವಹಾರಗಳನ್ನು ನಡಿಸಿ ನಡಿಸಿ ಲೌಕಿಕರ ಮನ್ನಣೆಯ ಪಡೆದಿರಬಹುದು, ಚತುರನೆನಿಸಿರಬಹುದು! ಅಸಂಖ್ಯ ಗ್ರಂಥಗಳನ್ನು ಓದಿಓದಿ ಮುಖೋದ್ಗತವಾಗಿ ಮಾಡಿಕೊಂಡಿರಬಹುದು, ಅದರಿಂದ ವಾಕ್ಪಟುವಾಗಿರಬಹುದು!! ಯುಕ್ತಿಯಿಂದ ನಾಡಿಗರ ಸಹಾಯವನ್ನು ಪಡೆಯುತ್ತಲೂ ಇರಬಹುದು!!! ಆದರೆ ಆತನು ಮುಪ್ಪಿನಬಸವ ಲಿಂಗ ಯತೀಶ್ವರನ ದಿವ್ಯಸಂಕೇತವನ್ನು ಸುಳ್ಳುಮಾಡಲು ಸಮರ್ಥನೇ? ಅಥವಾ ಆತನು ಗುಣಭೂಷಣನಾದ ವಿರೂಪಾಕ್ಷದೇವನಿಂದ ಹಿರಿಯ ನಾಗುವನೇ? ಅಥವಾ ಕಳೆದಾಯುಷ್ಯದಲ್ಲೆಲ್ಲ ಜಂಗಮಸೇವೆಯನ್ನು ಮಾಡುವಾಗಿನ ವಿರೂಪಾಕ್ಷದೇವನ ಮನೋನಿಗ್ರಹದ ಫಲವು ಸಿದ್ಧಿ ಸುವದನ್ನು ತಪ್ಪಿಸುವನೇ? ಕುಲ, ಭವ್ಯಮುದ್ರೆ, ಚರವೇಷ, ಸಮಾ ಧಾನ, ಸುಶೀಲತೆ, ಷಟ್‌ಸ್ಥಲಜ್ಞಾನ, ಲಿಂಗಪೂಜಾಪ್ರೀತಿ, ಮತೋ ದ್ಧಾರಾಭಿಲಾಷೆ, ಗುರುಸೇವೆಯೊಲವು ಇವೆಲ್ಲವುಗಳಿಂದ ಕೂಡಿದ ಪರಮನಿರ್ಮಲನಾದ ವಿರೂಪಾಕ್ಷದೇವನ ದರ್ಶನವು ಯಾರ ಮನ ದಲ್ಲಿ ಪೂಜ್ಯಭಾವನೆಯನ್ನು ಹುಟ್ಟಿಸಲಿಕ್ಕಿಲ್ಲ? ಬರಬರುತ್ತ ವಿರುದ್ಧ ಪಕ್ಷದ ಜನರ ಒಲವು ಸಹ ಆತನ ಕಡೆಗೆಯೇ ಒಲಿಯಿತು. ಎಲ್ಲರೂ ಉತ್ಸಾಹಗೊಂಡರು.

ಬಳಿಕ ವಿರೂಪಾಕ್ಷದೇವನು ಶಿವಾಗಮೋಕ್ತವಾಗಿ ವಿಧಿಗನುಸ ರಿಸಿ ಶುಚಿರ್ಭೂತನಾಗಿ, ವಿಭೂತಿರುದ್ರಾಕ್ಷಿಗಳನ್ನು ಧರಿಸಿ, ಕಾಷಾಯ, ಕೊಪ್ಪಿ, ಕೌಪೀನ, ಪಾವುಗೆ, ದಂಡ, ಭಿಕ್ಷಾಪಾತ್ರೆ ಮೊದಲಾದ

ಜಂಗಮಸಾಮಗ್ರಿಗಳನ್ನು ತಕ್ಕೊಂಡು ಗುರುಸಿದ್ಧರಾಮಸ್ವಾಮಿಗಳ ಪದಕೆ ಸಾಷ್ಟಾಂಗವಾಗಿ ಎರಗಿ, ವಿನಯಪೂರಿತನಾಗಿ--"ಗುರುವೆ, ನನ್ನಲ್ಲಿ ಕೃಪೆಯನ್ನಿಡು. ಚರಾಶ್ರಮವನಿತ್ತು ನನ್ನನ್ನು ರಕ್ಷಿಸು. ಲೌಕಿಕವನೊಲ್ಲೆ; ಇದರ ಬಾಧೆಯಿಂದ ನನ್ನನ್ನುದ್ಧರಿಸು; ನಿನ್ನನ್ನೇ ನಂಬಿರುವೆ" ಎಂದು ಬೇಡಿಕೊಂಡನು. ಗುರುವು ಕರುಣದಿಂದ ನೋಡಿ ಅನುಗ್ರಹಿಸಲನುವಾದನು.

ಸಿದ್ಧರಾಮಶಿವಯೋಗಿಗಳು ವಿರೂಪಾಕ್ಷಾರ್ಯನಿಗೆ ಶಿವತತ್ವೋಪದೇಶವನ್ನು ಮಾಡಿದ ಬಳಿಕ ಆತನನ್ನು ಕುರಿತು--"ಎಲೈ ಸುಕೃತಮತಿಯೆ, ವಿರಕ್ತಾಶ್ರಮವು ಸುಲಭವಲ್ಲ; ಕಷ್ಟಸಾಧ್ಯವು. ಎಲ್ಲರಿಗೂ ಅಸದಳವು. ನೀನಾದರೋ ಇದನ್ನು ಹೊಂದುವೆ. ನೀನೀ ವಿರತಿಧರ್ಮಪ್ರತಿಪಾಲನೆಯಲ್ಲಿ ಯಶಸ್ವಿಯಾಗಬೇಕಾದರೆ ಲಿಂಗಪೂಜೆಯಲ್ಲಿ ನಿರಂತರವೂ ಬೆರೆಯಬೇಕು. ಶಿವಶಾಸ್ತ್ರವನ್ನರಿದು ಮನಮುಟ್ಟಿ ಸತ್ಕ್ರಿಯೆಗಳಿಂದ ಆಚರಿಸಬೇಕು. ಸ್ತ್ರೀವಿಷಯಾದಿ ಭೋಗಗಳಿಗೆ ಮನಗರಗದಿರಬೇಕು. ಹೀಗಿದ್ದು ಮುಕ್ತಿಮಾರ್ಗದಲ್ಲಿಯೇ ಚರಿಸುತ್ತಿರಬೇಕು. ಸಕಲವಿಷಯಗಳಲ್ಲಿ ಹೆಣ್ಣುಹೊನ್ನುಮಣ್ಣುಗಳೇ ಮೋಹಕಗಳಾಗಿರುವವು. ಅವುಗಳಲ್ಲಿಯೂ ಹೆಣ್ಣುಬಲವುಳ್ಳದ್ದು. ಅದು ಮುಕ್ತಿಗೆ ಮಾರಿಯಾಗಿ ನರಕದ ದಾರಿಯನ್ನು ತೋರುವದು! ಬ್ರಹ್ಮಚಾರಿಗಳಿಗೆ ವೈರಿಯಾಗಿ ಕಾಮನಿಗೆ ಸಹಕಾರಿಯಾಗುವದು! ಪರಮವಿಕಾರದಿಂದ ಭಕ್ತರಪಕಾರವನ್ನು ಕೋರುವದು! ಅವಿಚಾರಕಾರಣವಾಗಿ ಗೌರವ-ಕೀರ್ತಿ-ಲಾಭಗಳ ಅಪಹಾರವನ್ನು ಮಾಡುವದು!! ವಿಷವು ತನ್ನ ತಿಂದಾಗ ಕೊಲ್ಲುವದು; ಆದರೆ ಈ ಬಿಸಜಾಕ್ಷಿಯೆಂಬ ವಿಷವು ದೂರದಿಂದ ನೆನೆದ ಮಾತ್ರಕ್ಕೆ ಹಿಂಸೆಯಿಂದ ಕೊಲ್ಲತೊಡಗುವದು. ಇದನ್ನು ಕನಸಿನೊಳಗಾದರೂ ನೆನೆಯದವನೇ ಶಿವಯೋಗಿಯು. ನೋಡಿದರೆ ಚಿತ್ತವನ್ನೂ ಮುಟ್ಟಿದೊಡೆ ವಿತ್ತವನ್ನೂ, ಸಮಾಗಮದಲ್ಲಿ ಸತ್ವಮಹತ್ವಗಳನ್ನೂ ಸೆಳಕೊಂಡು ಮನೆಗಾವ ನಾಯಿಯಂತೆ ಮಾಡಿ ಪಾತಕದ ರಾಶಿಯನ್ನು ಹೊರಿಸಿ ಗತಿಗೆಡಿಸುವದಿದು;

ನಚ್ಚಬಹುದೇ ಇದನ್ನು? ಬೇಡಿದ್ದನ್ನೆಲ್ಲ ಈಡುಮಾಡಿ, ಸುಖದುಃಖ ಗಳನ್ನೆಲ್ಲ ತನ್ನವೆಂದು ಭಾವಿಸಿ, ಕಾಪಾಡುವ ಚಲುವಬಲವಂತ ನನ್ನು ಹೊಂದಿದ ಹೆಣ್ಣು ಸಹ, ಬಯಸುವದು ಮತ್ತೊಬ್ಬನನ್ನು! ಕೇಡಾಗದಿಹುದೇ ಇದನ್ನು ನಂಬಿದರೆ? ನೋಡಲಾಗದಿದನ್ನು ನೋಡ ಲಾಗದು! ಮರೆತಾದರೂ ನೋಡಲಾಗದು!! ನಗೆ, ನುಡಿ, ನಡಿಗೆ, ನೋಟ, ಆಟ, ಹಾವಭಾವ, ಬಿನದ, ಭೀತಿ, ಬೇಸರ, ಸೆಡವು, ಕೋಪ, ವಿನಯ, ಅನುಕೂಲ, ಕೊಡುವಕೊಳ್ಳುವಬಗೆ, ಮಲಗು ವೇಳುವರೀತಿ, ಕೂಡುನಿಲ್ಲುವಂದ ಇವುಗಳಲ್ಲೆಲ್ಲ ಸ್ತ್ರೀಯು ಕಾಮುಕ ಲೆಗಳಿಂದ ಕೂಡಿದವಳು. ಆದರಿಂದ ಮರೆದಾದರೂ ನೋಡಲಾ ಗದು, ನೋಡಲಾಗದವಳ!! ವೀರ್ಯವನ್ನು ತಡೆದವನು ಪರಮ ಸತ್ವಶಾಲಿಯಾಗುವನು. ಅರಿಯದವನು ರತ್ನವನ್ನು ಭಾವಿಯಲ್ಲಿ ಬಿಸುಡುವಂತೆ ಭ್ರಾಂತಿಷ್ಟರು ದಿವ್ಯಬಿಂದುವನ್ನು ಸ್ತ್ರೀಯಳಲ್ಲಿ ಚಲ್ಲು ವರು. ಆ ಬಿಂದುವು ಅಮೃತವೆಂದೂ ಜ್ಞಾನಕಳೆಯೆಂದೂ ಉಪನಿ ಷತ್ತುಗಳು ಹೇಳುವದನ್ನು ಬಲ್ಲನೇನು ಅವನು? ನಾಯಿಯು ಮೂಳೆಯ ನೆಕ್ಕುವದಷ್ಟೆ? ತನ್ನ ಲಾಲಾರಸದ ಸವಿಯನೇ ತಿರುಗಿ ತಿರುಗಿ ಸವಿದು ಅದು ಭ್ರಾಂತಿಯಿಂದ ಮೂಳೆಯಲ್ಲಿ ಸವಿಯಿರುವ ದೆಂದು ಭಾವಿಸಿ ಮೋಹಿಸುವದು; ತನ್ನ ಬಿಂದುವು ಜಾರಿಹೋಗು ವಾಗ ತನಗೆ ಸುಖಕೊಡುತ್ತಿರಲು ಮನುಷ್ಯನು ಸ್ತ್ರೀಯಿಂದ ಆ ಸುಖವು ದೊರೆವುದೆಂದು ಭ್ರಾಂತಿಗೊಳ್ಳುತ್ತಿರುವನು. ನಿಜವಾಗಿ ನೋಡಿದರೆ ಈಳಿಗನಿಂದ ಈಚಲಮರವು ಚಲುವನಳಿವಂತೆ ಸ್ತ್ರೀಯಿಂದ ಪುರು ಷನು ನಿಸ್ಸಾರತೆಯನ್ನು ಹೊಂದುವನು. ಸ್ತ್ರೀಲೋಲುಪನ ಕಣ್ಣು, ಕಿವಿ, ಹಲ್ಲುಗಳ ಬಲವಳಿವುದು; ಧೈರ್ಯಗುಂದುವುದು; ಕೈಕಾಲಶಕ್ತಿ ಕುಗ್ಗುವುದು; ಆಲಸ್ಯಾಯಾಸಗಳೊದಗುವವು; ಮೇಹ ತಲೆದೋರು ವದು; ಸಹಿಸನವನು ಬಿಸಿಲುಮಳೆಗಾಳಿಗಳನು! ಅವನ ಕಳೆಯೇ ರುವದು ಹೆಣದಂತೆ! ಮುಪ್ಪು ಬರುವದು ಬೇಗ ಕರೆದಂತೆ! ಬಿಂದು ವನ್ನು ನಿಗ್ರಹಿಸದಿದ್ದರೆ ಇಷ್ಟೆಲ್ಲ ಅನರ್ಥ! ಬಿಂದುವೇ ಪರವಸ್ತು! ಬಿಂದು

ವಿನಿಂದಲೇ ದಶೇಂದ್ರಿಯಗಳ ಬಲ! ಅದರಿಂದಲೇ ಕಾಯದಕಾಂತಿ! ಕಣ್ಣಿನತೇಜ! ಮುಖದ ರಕ್ತಗೆಂಪು!! ಬಿಂದುವಿನಿಂದಲೇ ಶಾಂತಿ-ಧರ್ಮ-ಸಾಹಸೋತ್ಸಾಹಗಳ ಅಭಿವೃದ್ಧಿ!!! "ಬಿಂದುಮೂತ್ರಗಳೆರಡು ಪೊಂದೆಮಾರ್ಗದಿಬರ್ಕು। ವೊಂದು ಬಿಟ್ಟೊಂದು ತಡೆದರೆ ಪರಬ್ರಹ್ಮ ಪದು। ಮುಂದೆ ಬಂದಿಹುದು" ಎಂದ ಸರ್ವಜ್ಞಕವಿಯ ವಚನವು ಸುಳ್ಳೇ? ಅದರ ಮಹತ್ವವನ್ನು ವರ್ಣಿಸಲಳವಲ್ಲ.

"ವಟೂತ್ತಮ! ಈ ವಿಷಯದಲ್ಲಿ ನಿನ್ನ ಗುರುವು ಅತ್ಯಂತ ದೃಢಚಿತ್ತನಾಗಿದ್ದನು. ಈ ಪ್ರಸಂಗದಲ್ಲಿ ಆತನಿಗೊದಗಿದ ಒಂದು ಮಹತ್ವದ ಸಂಗತಿಯು ನೆನಪಾಗುವದು, ಅದನ್ನು ಕೇಳು. ಆ ನಿನ್ನ ಗುರುವರನಾದ ಮುಪ್ಪಿನಬಸವಲಿಂಗಯತಿಯು ಕಾಲಕಾಲೇಶ್ವರ ಕ್ಷೇತ್ರಕ್ಕೆ ಹೋಗಿ ಅಲ್ಲಿಯ 'ಸಂಗಮಗವಿ' ಎಂಬಲ್ಲಿ ಅನುಷ್ಠಾನಕ್ಕೆ ಕುಳಿತನು. ಅಲ್ಲಿ ಸಮೀಪದಲ್ಲಿ ಮಲಿಯಮ್ಮನೆಂಬ ಉಗ್ರದೇವತೆ ಯಿರುವಳು. ಆಕೆಯು ಶಿವಯೋಗಿಯ ತಪಃಪ್ರಭಾವಕ್ಕೆ ಭೀತಿಗೊಂಡಳು; ಮತ್ತು ಅದರಿಂದ ತನ್ನ ಸ್ವೇಚ್ಛಾಚಾರಕ್ಕೆ ಅಡ್ಡಿಯಾಗುವದನ್ನು ತಿಳಿದು ಆಕೆಯು ಹೇಗಾದರೂ ಆತನ ತಪಸ್ಸನ್ನು ಕೆಡಿಸಬೇಕೆಂದು ಧೈರ್ಯದಿಂದ ನಿರ್ಣಯಿಸಿದಳು. ಮುನಿಗಳನ್ನು ಕಾಮವಾಸನೆಯಲ್ಲಿ ಕೆಡಹಲು ಯತ್ನಿಸುವದೇ ಅವರ ತಪಸ್ಸನ್ನು ಕೆಡಿಸುವ ಮುಖ್ಯಸಾಧನವು. ಅದರಿಂದಲವಳು ಕೂಡಲೇ ಸುಕುಮಾರದೇಹದ ಲಲನೆಯಾದಳು; ಹೊಳೆವ ಪೀತಾಂಬರವನುಟ್ಟಳು; ಮಿನುಗುವ ಹೂವುಳ್ಳ ಹಸರು ಕುಪ್ಪಸವ ತೊಟ್ಟಳು. ಚಿನ್ನವಜ್ರಗಳ ಸಕಲ ಅಲಂಕಾರಗಳನ್ನಿಟ್ಟಳು. ಮೋಹಿನೀ ರೂಪವು! ಅದರಲ್ಲಿ ನವಯೌವನದ ಬೆಡಗು! ಮೇಲೆ ಭೂಷಣಕೆ ಭೂಷಣಗಳಾದ ಆಭರಣಗಳ ಎಸೆಗೆಯು! ವರ್ಣನೆಗೆ ಮಿಗಿಲಾದ ಸೌಂದರ್ಯದಿಂದ ಕೂಡಿದಳು. ನೇತ್ರಗಳ ಶೋಭೆಯು ನೀರಜದಂತೆ, ದೇಹವರ್ಣವು ಸುವರ್ಣದಂತೆ, ಮುಖವು ಹಿಮಕರನಂತೆ, ರದನ ಪಂಕ್ತಿಯು ದಾಡಿಮೀ ಪಂಕ್ತಿಯಂತೆ, ಮೂಗು ಚಂಪಕದಂತೆ, ಕುಚಾಗ್ರವು ಕುಮುದಗಳ

ಕುಟ್ಮಲದಂತೆ, ನೀಲಕುಂತಲಗಳು ಅಳಿಮಾಲೆಯಂತೆ, ಅವಳಲಂಪಿನ ಪೆಂಪು ಅತುಲವಾಗಿರಲು ಅದೆಷ್ಟೋ ರಂಜಿಸಿದಳು. ಮಾಯೆಯು ಜಗತ್ತಾಗಿ ನಾನಾವಿಧಾಕಾರವನ್ನು ತಾಳಿದಂತೆ ಈ ಮೋಹಿನೀ ಮಾಯೆಯು ಕೂಡ ಆ ಪರ್ವತವನಾದಿಗಳ ಸೌಂದರ್ಯವನ್ನು ತಾಳ್ದಳೆಂಬಂತೆ ಭಾಸವಾಗುತ್ತಿತ್ತು. ಯಾಕಂದರೆ ನಿಡಿದಾದ ಪರ್ವತಾವಳಿಯಂತೆ ದೀರ್ಘವಾದ ಬಾಹುಗಳೂ ಮನೋಹರವಾದ ಉಪವನದಂತೆ ಸುಳಿಮುಂಗುರುಳುಗಳೂ ಮುನಿಗಳ ಕಣ್ಮನಗಳನ್ನು ಸೆರೆಯಲ್ಲಿಡುವಂತಿದ್ದವು. ಕಾಲ್ಬೆರಳುಗಳ ಪಿಲ್ಲೆ, ಹಾಗು ಅಂದವಾದ ನೂಪುರದ ಬಂಧುರವಾದ ಶಬ್ದವು! ನಡುವಿನಲ್ಲಿದ್ದ ಚಿನ್ನದೊಡ್ಯಾಣದಲ್ಲಿ ಮೆರೆವ ಗೆಜ್ಜೆಗಳ ಝಣತ್ಕಾರವು! ಪರಡೆ ಕಂಕಣಗಳ ಗಲ್ಕಿನಿಂಚರವು! ಮೇಲೆ ಕರದ್ದೊಳಗಿನ ವೀಣೆಯ ನಿನಾದವು!! ಅಡಿಗಡಿಗೆ ಕಾಮಕಲೆಯು ಹೊರಸೂಸುತಿರೆ ಆ ಜಾಣೆಯು ಇಲ್ಲದ ಲಜ್ಜಾಭಯಗಳನ್ನು ನಟಿಸುತ್ತ ಒನಪುಒಯ್ಯಾರಗಳಿಂದ ಸೌಂದರ್ಯವನ್ನು ಸಾರಿ ಪುರುಷನನ್ನು ಕೈಬೀಸಿ ಕರೆವ ಲಕ್ಷಣದಿಂದ ಯತಿಯ ಅನುಷ್ಠಾನಮಂಟಪವನ್ನು ಹೊಕ್ಕಳು.

"ಆಗ ಆ ರತಿಗೆ ಸದೃಶಳಾದ ಅಂಗನೆಯು ಆ ಚರವರನ ಮುಂದೆ ವಿನಯದಿಂದ ಬಾಗಿ ಓರೆಯಾಗಿ ನಿಂದು, ಕಡೆನೋಟಗಳ ನೆಸೆದು, ರತಿಕೇಳಿಯ ಬಯಕೆಯನ್ನು ಪ್ರಕಟಿಸಿದಳು; ಒನಪಿನಿಂದ ಆಲಿದಾಡಿದಳು; ಮೆಚ್ಚಿ ಮೈಸೋತು ಮುಂದೆ ಕುಳಿತಳು. ಕೈಯೆತ್ತಿ ಮೈಮುರಿದು ನಸುನಗೆಯ ಬೀರಿದಳು; ಇಷ್ಟರಿಂದ ಆತನ ಭಾವನೆಯಲ್ಲಿ ಹೆಚ್ಚುಕಡಿಮೆಯಾಗದಿರುವದನ್ನು ನೋಡಿ ಅವಳಿಗೆ ನಿರಾಶೆಯೇನೂ ಆಗಲಿಲ್ಲ. ಬಳಿಕ ಅವಳು ಮೊಲೆಗೆಲವ ಸುಣ್ಣ ಹೊರಹೊಮ್ಮಿ ಕಾಣುವಂತೆ ನಳಿತೋಳನೆತ್ತಿ ಕೋಮಲ ಕರಾಂಗುಲಿಗಳನ್ನು ವೀಣೆಯ ತಂತಿಗಳ ಮೇಲಾಡಿಸಿ ಗಾನವನ್ನು ಆರಂಭಿಸಿದಳು; ವೀಣೆಯಲ್ಲಿ ದನಿಗೂಡಿ, ದಿವ್ಯರಾಗವಮಾಡಿ, ಕಾಮವಿಲಾಸ ಸಮಯದ ಶೃಂಗಾರಗೀತಗಳನ್ನು ಹಲವಾಗಿ ಹಾಡಿದಳು.

ಆ ಗಾಯನದಿಂಪಿಗೆ ಹರಿಣಿಗಳು ಹರಿದು ಬಂದು ಸಪ್ಪಿಲ್ಲದೆ ನಿಂತಾಲಿಸಿ ತಲೆದೂಗಿದವು; ಹಾವುಗಳು ಹೋರಿನ ಹೊರಗೆ ತಲೆಹಾಕಿ ಹೆಡೆಯೆತ್ತಿ ಆನಂದವನ್ನು ಬೀರಿದವು; ಬಹಳವೇನು? ಆ ಸಂಗೀತ ರಸಪ್ರವಾಹದ ತಾಕಲಾಟದಿಂದ ಸತ್ತವರು ಚೇತರಿಸುವಂತಿತ್ತು. ಆದರೆ ಆ ಮುಪ್ಪಿನಬಸವಲಿಂಗದೇವನು ಲವಲೇಶವಾದರೂ ಮಿಸುಕದಿರ್ದನು. ಆತನು ಕಲ್ಮರಗಳಂತೆ ಕದಲದೆ ಜಡವಾಗಿ ಹಾಗೆಯೇ ಕುಳಿತುಕೊಂಡಿದ್ದನು. ಇದರಿಂದ ಅವಳಲ್ಲಿ ಹೇವವು ಹುಟ್ಟಿತು. ಆ ಯತಿಯ ತೇಜಸ್ಸಿಗೂ ವೈಯಸೊಬಗಿಗೂ ಸೋತು ಮೋಹಿತಳೂ ಆದಳು. ತಪವನ್ನು ಕೆಡಿಸಲೆಂದಾಗಲಿ, ಸಮಾಗಮವನ್ನು ಹೊಂದಲೆಂದಾಗಲಿ ಆತನ ಮನವನೊಲಿಸಲು ನಿಶ್ಚಯಿಸಿದಳು. ಬಳಿಕ ಈ ಶಿವರೂಪದ ಸ್ವಾಮಿಯು ಗಾನಕ್ಕೆ ಒಲಿಯನೆಂದು ಬಗೆದು ರತಿವಿಲಾಸವಭಿನಯದೊಡನೆ ರಾಮಣೀಯಕವಾದ ನರ್ತನವನ್ನು ಆರಂಭಿಸಿದಳು. ಆಗ ಕಾಲಂದುಗೆಗಳು ಉಲಿದವು! ಕಣ್ಣದಿರುಗಳು ಸೂಸಿದವು! ನಳನಳಿಸುವ ತೋಳುಗಳು ಮುರಿದು ತಿರುಗಿದವು! ಮೊಲೆಯ ಭಾರಕ್ಕೆ ಬಡನಡುವು ನಡುಗಿದುದು! ಹೆಳಲಿನೊಳಗಿನ ಮಾಲೆ ಹರಿಯಲು ಗಮಗಮಿಪ ಕಮ್ಮಲರುಗಳು ಸುತ್ತಲೂ ಚೆಲ್ಲುವರಿದುವು! ರತ್ನದೋಲೆಗಳ ಬೆಳಗು ನೆಲದೊಳಾವರಿಸಿ ಬೆಳಕಾದುದು! ಅಂಥ ಆ ನರ್ತನದ ಸೊಗಸನ್ನು ವರ್ಣಿಸಲು ಸಾಧ್ಯವೇ? ಇಷ್ಟೆಲ್ಲವಾದರೂ ಆ ಯತಿಯು ಅವಳ ಕೂಡಲೆಳಿಸುವದೊತ್ತಟ್ಟಿಗಿರಲಿ ಕಣ್ಣೆತ್ತಿ ನೋಡಲಿಲ್ಲ! ಗಾನವನ್ನು ಕೇಳಲಿಲ್ಲ!! ಅವಳ ತನುಗಂಧವೂ ಕೂಡ ಆತನನ್ನು ಮುಟ್ಟಲಿಲ್ಲ!!! ಆತನು ಕುರುಡನು, ಮೂಕನು, ಷಂಢನು, ಕೇವಲ ಬಧಿರನು.!

“ಬರಬರುತ್ತ ಆಕೆಯಲ್ಲಿದ್ದ ತಪವ ಕೆಡಿಸುವೆನೆಂಬ ಭ್ರಮೆಯು ಬದಿಗಾಯಿತು. ಆತನಿಗೆ ಪೂರ್ಣವಾಗಿ ಮೋಹಿಸಿದ ಅವಳು ಸಮಾಗಮೇಚ್ಛೆಯಿಂದ ಪೀಡಿತಳಾಗಹತ್ತಿದಳು. ವಿರಹತಾಪವು ಹೆಚ್ಚಿತು; ನಡಗು ಹೊಡೆಯಿತು; ಮೈ ಬಳುಕಿತು; ಕೂದಲುಗಳೇಳ್ದುವು; ಹಾಗೆಯೇ

ನೆಲಕ್ಕಿಳಿದು ಬಿಟ್ಟಳು. ನಿಟ್ಟುಸಿರನಿಟ್ಟಳು. ಯತಿಯಿಂದ ಅಪಮಾನಿತನಾದ ಕಾಮನ ಬಾಣಜಾಲಕ್ಕೆ ಅವಳೇ ಸಂಪೂರ್ಣವಾಗಿ ತುತ್ತಾದಳು. ಈತನನ್ನು ಬಿಟ್ಟು 'ಕಣ್ಣು-ಮನಗಳು ಕದಲದಾದವಲ್ಲ' ಎಂದು ಪೌಹಾರಿದಳು. ಬಳಿಕ 'ತಾಳೆನು ಈ ತಾಪವನ್ನು! ಈತನನ್ನು ಮುಟ್ಟುವೆನು ಏನಾದರಾಗಲಿ!!' ಎಂದು ಎದ್ದು ಮುಂದುವರಿದಳು. ಮತ್ತೆ ಭಯದಿಂದ ಹಿಂದೆ ಸರಿದು ಉಸುರ್ಗರೆದಳು. ಕಾಮನು ಶಿವನ ಮೇಲೆ ಸುಮಶರಗಳೆನ್ನೆಸೆವಾಗ ಹುದುಗಿದಂತಾಯ್ತು! ಮತ್ತೆ ಅವಳು ಕಂಗೆಟ್ಟು ಬಿಟ್ಟುಹೋಗುವದಾಗದೆಂದು ಮುಂದುವರಿದಳು; ಆದರೆ ಅದೆಂಥ ಸುಯೋಗವೋ, ಯತಿಯು ಎಡಬದಿಗೆ ಬೀಳ್ದ ನಿರ್ಮಾಲ್ಯಗಳನ್ನು ತುಳಿಯದೆ ಬದಿಗೆ ತೆಗೆಯಲೆಂದು ಅವಳು ಅವುಗಳನ್ನು ಹಿಡಿದೊಡನೆಯೇ ಜಗ್ರನೇ ಜರಿಯಿತು ಅವಳ ಕಾಮವಾಸನೆಯು! ಮನಸ್ಸು ನಿರ್ಮಲವಾಯಿತು! ಸಾತ್ವಿಕವೃತ್ತಿಯುಂಟಾಯಿತು! ಕರ್ಮಕಥೆಯು ದೋಷದ ಮೊಟ್ಟೆಯಂತೆ ಕಾಣಹತ್ತಿತು!! ಪಶ್ಚಾತ್ತಾಪಬಟ್ಟ ಅವಳು "ಕೆಟ್ಟೆನು ಕೆಟ್ಟೆನು, ನನ್ನಂಥ ನೀಚಳಿಹಳೇ? ನನ್ನ ಅವಸ್ಥೆಯಾದರೂ ಏನು? ಈತನ ಮನವ ಮೋಹಗೊಳಿಸಲೆಂದು ಬಂದು ಅನೇಕ ಚೇಷ್ಟೆಗಳನ್ನು ಮಾಡಿ ನಾನೇ ಈತನನ್ನು ಮೋಹಿಸಿ ಸಿಲುಕಿಕೊಂಡೆನು. ಛೀ, ಛೀ, ಅಧಮಳಾದೆನು ನಾನು!!" ಎಂದು ಹಳಿದುಕೊಳ್ಳುತ್ತ ಹಿಂದಿರುಗಿದಳು. ಮತ್ತು ಹಾಗೆಯೇ ಮನದಲ್ಲಿ "ಶಿವಯೋಗಿಯ ನಿರ್ಮಾಲ್ಯಗಳ ಸ್ಪರ್ಶದಿಂದಲೇ ಹೀಗೆ ಚಿತ್ತಶುದ್ಧಿಯುಂಟಾಗುತ್ತಿರಲು ಪ್ರತ್ಯಕ್ಷವಾಗಿ ಶಿವಯೋಗಿಯ ಪಾದಪೂಜೆಯನ್ನು ಮಾಡಿದರೆ ನಿಶ್ಚಯವಾಗಿ ಪುನೀತಳಾಗೆನೇ? ನನಗೀ ಬಯಕೆಯೇಕೆ ಆಗಲಿಲ್ಲ? ದುರ್ನೀತಿಯಿಂದ ಆತನ ಸಮಾಗಮವನ್ನೇ ಬಯಸಿದೆನಲ್ಲವೇ? ಈ ಅನೀತಿಗಾಶ್ರಯವಾದ ತನುಸೂತಕವನ್ನು ಹೇಗೆ ನೀಗಲಿ? ಇದಕ್ಕೆ ಈ ಮಹಿಮನ ಚರಣಕ್ಕೆ ಶರಣು ಹೋಗುವದೇ ತಕ್ಕ ಉಪಾಯವಲ್ಲವೇ?" ಎಂದು ಆಲೋಚಿಸುತ್ತ ಮುಂದಿನ ತಿಳಿಗೊಳಕ್ಕೆ ಬಂದಳು. ಅಲ್ಲಿ ವಿಕಾರಕಾಸ್ಪದವಾದ ವಸ್ತ್ರಭೂಷಣಗಳನ್ನೆಲ್ಲ ತೆಗೆದು

ಬಿಸುಡಿದಳು; ತನುಶೋಭೆಯನ್ನು ಹಳಿದಳು. ಆ ತೀರ್ಥಗೊಳದಲ್ಲಿಳಿದಳು; ಆಶೀರ್ಷಸ್ನಾನವನ್ನು ಮಾಡಿ ಮೇಲೆ ಬಂದು ಶಿವಪಾದಸ್ಮರಣೆಯನ್ನು ಮಾಡುತ್ತ ಮಡಿಯನುಟ್ಟಳು; ವಿಭೂತಿಯನ್ನು ಧರಿಸಿ ಕುಂಕುಮದ ತಿಲಕವನ್ನಿಟ್ಟಳು; ರುದ್ರಾಕ್ಷಿಮಾಲೆಗಳನ್ನು ಹಾಕಿದಳು; ಕೈಯಲ್ಲಿ ಪತ್ರಿಪುಷ್ಪಫಲಗಳನ್ನು ತೆಗೆದುಕೊಂಡು ಬಂದು ಯತಿವರನ ಪಾದಕ್ಕೆರಗಿ ಕ್ಷಮಿಸೆಂದಳು. ಯತಿಯು ಕಣ್ದೆರೆದು ಕೈಯೆತ್ತಿ ಹರಸಿದನು. ಅದೆಷ್ಟೋ ಮನೋಹರವಾದ ಸಂಗೀತದಿಂದ ವರ್ಣಿಸಿದಾಗ ವಿಮುಗವ ಯೋಗಿಯು ಭಕ್ತಿಯಿಂದ ಬಂದಾಗ ನೋಡಿ ಹರಸಿದನು. ಲೋಕದಲ್ಲಿ ಭಕ್ತಿಗೆ ವಶವಾಗದಿರುವ ದೈವವಿಲ್ಲೆಂಬುದು ನಿಜವೇ ಸರಿ.

"ಆಗ ಮಲಿಯದೇವತೆಯು 'ಈ ಪಾದಮಹಿಮೆಯನ್ನು ತಿಳಿಯದೆ ಅಜ್ಞಾನದಿಂದ ಮಾಡಿದ ತಪ್ಪನ್ನು ಕ್ಷಮಿಸಿ ಕರುಣದಿಂದ ನೋಡಿ ಪೊರೆಯಬೇಕು' ಎಂದು ಮತ್ತೆ ಎರಗಿ ಬೇಡಿಕೊಂಡಳು. ಆಗ ಯತಿಯು ಎಲ್ಲವನ್ನು ಬಲ್ಲವನಾದರೂ—"ಅಮ್ಮ ನೀನಾರು? ನೀನಾವ ತಪ್ಪನು ಮಾಡಿದೆ?" ಎಂದು ಕೇಳಿದನು. ಅದಕ್ಕವಳು ತನ್ನ ಕರ್ಮಕಥೆಯನ್ನು ಹೇಳಿ ಮತ್ತೆ ಪಶ್ಚಾತ್ತಾಪವನ್ನು ಪ್ರಕಟಿಸಿದಳು. ಯತಿಯು ಅಭಯವಚನವನ್ನು ಕೊಟ್ಟು ಪೊರೆದನು. ಅವಳು ಅಲ್ಲಿರುವ ಘನಶಿಲೆಯಲ್ಲಿ ಅಡಗಿ ಮೋಕ್ಷವನ್ನು ಹೊಂದಿದಳು. ಆ ಶಿಲಾಮೂರ್ತಿಯನ್ನು ಈಗಲೂ ಅಲ್ಲಿ ಕಾಣಬಹುದು.

"ನೀನು ಅಂಥ ಮಹಿಮರ ಪೀಠಾಧಿಕಾರಿಯಾಗತಕ್ಕವನು. ತಪೋನಿಷ್ಠನಾಗು; ಅಭಿಮಾನವ ಮಾಡಿ ಮಠದ ಕೀರ್ತಿಗೆ ಕುಂದು ತರಬೇಡ. ಕೇವಲ 'ಶ್ರೀಮನ್ನಿರಂಜನ ಜಗದ್ಗುರು ಷಟ್‌ಸ್ಥಲಜ್ಞಾನಿ' ಎಂಬ ಹೆಸರು ಮಾತ್ರವೇ ಬೇಡ. ನಿಜವಾಗಿಯೂ ಶಿವಾನುಭವಿಯಾಗು" ಎಂದು ಸಮಾಧಾನದಿಂದ ಬೋಧಿಸಿದನು.

ವಿರೂಪಾಕ್ಷದೇವನು—"ಮಗನನ್ನು ಸಂರಕ್ಷಿಸುವ ಭಾರವು ತಂದೆಯದಲ್ಲವೆ? ಪರಮಪಾಲಕನಾದ ಗುರುವು ನೀನಿರಲು ಸ್ವತಂತ್ರತೆಯೆ

ನಗೆಲ್ಲಿ! ನಿನ್ನವಲ್ಲವೆ ಹಾನಿವೃದ್ಧಿಗಳು? ನೀನು ನಡಿಸಿದಂತೆ ನಡೆವೆನು ನಾನು! ಸುಜ್ಞಾನನಿಧಿಯೇ ನೀನಲ್ಲದೆ ನನಗೊಡೆಯರಾರು?" ಎಂದು ಗುರುವಿನ ಪಾದಕ್ಕೆರಗಿದನು.

ಶಕೆ ೧೭೬೫, ಶೋಭಕೃತ ಸಂವತ್ಸರ ವೈಶಾಖ ಶು॥ ೫ ಗೆ **ಶೂನ್ಯಸಿಂಹಾಸನಾರೋಹಣ** ಸಮಾರಂಭವು ನೆರವೇರಿತು. ಮಹಿಮ ಸಿದ್ಧರಾಮಸ್ವಾಮಿಯು, ಭಕ್ತರನುಮತಿಯಿಂದ ವಿರೂಪಾಕ್ಷದೇವನಿಗೆ **ಅನ್ನದಾನಿಸ್ವಾಮಿ** ಎಂಬ ನಾಮವನ್ನಿಟ್ಟು ನೋಡಿ ಉತ್ತಮವಾದ ವಿರಕ್ತಾಶ್ರಮವನ್ನೂ ಆ ಮಠದ ಅಧಿಕಾರವನ್ನೂ ಕೊಟ್ಟನು. ಅತು ಲಗಣಾರಾಧನೆಯಾಯಿತು. ಆಂದೋಲಿಕೋತ್ಸವವು ವಿಜೃಂಭಣೆಯಿಂದ ನಡೆಯಿತು; ಭಕ್ತಗಣವು ಆನಂದೋತ್ಸಾಹಗಳಲ್ಲಿ ಲೋಲಾಡಿತು.

---

೫. ಶಿವಯೋಗಸಿದ್ಧನಹುದಹುದು!

ದುರಭಿಮಾನಿಗಳ ಛಲವು ಶೀಘ್ರವೇ ಅಳಿದು ಹೋಗುವದಿಲ್ಲ. ಅವರಲ್ಲಿರುವ ಮಹತ್ವಾಕಾಂಕ್ಷೆಯು, ಮನಸ್ಸಿನ ಹೇತುವು ಸಾಧ್ಯವಾಗುವ ವರೆಗೆ ಅವರನ್ನು ಸುಮ್ಮನೆ ಕೂಡಗೊಡುವದಿಲ್ಲ; ಯುಕ್ತಿಪ್ರಯುಕ್ತಿಗಳನ್ನೆಲ್ಲ ಮಾಡಹಚ್ಚುವದು. ಅದರಂತೆ ರುದ್ರದೇವನು ತನ್ನ ಮನಸ್ಸಿನ ಇಚ್ಛೆಯು ಪೂರ್ಣವಾಗದಿರುವದರಿಂದ ಪ್ರತಿಪಕ್ಷಕ್ಕೆ ಕೇಡನ್ನಾದರೂ ಮಾಡಿಯೇ ತೀರಬೇಕೆಂದು ನಿಶ್ಚಯಿಸಿದನು. ದುಷ್ಟರ ಮನಸ್ಸು ಎಲ್ಲಿಯ ವರೆಗೆ ದುರ್ನೀತಿಯಲ್ಲಿ ಪಸರಿಸುತ್ತದೆಂಬದನ್ನು ತಿಳಿಯುವದಶಕ್ಯವು. ರುದ್ರದೇವನ ಸ್ವಭಾವವನ್ನರಿತ ಗೃಹಸ್ಥರು ಶ್ರೀಮದನ್ನದಾನಿ ಮಹಾಸ್ವಾಮಿಗಳಿಗೆ 'ಆತನನ್ನು ಬಿಟ್ಟು ಇರಬೇಕು; ಇಲ್ಲದಿದ್ದರೆ ಅವ

ನಿಂದ ಕೇಡಾಗುವದು ನಿಶ್ಚಯ' ಎಂದು ಹೇಳಿದರು. ಅದಕ್ಕವರು ಒಪ್ಪಲಿಲ್ಲ. 'ಲಿಂಗಾಣತಿಯಿಂದ ಬರುವದೆಲ್ಲ ಬಂದೇ ತೀರಲಿ! ಅನಾಥನಾದ ರುದ್ರದೇವನನ್ನು ಹೊರಹೊರಡಿಸಿದರೆ ಆತನು ಎಲ್ಲಿಗೆ ಹೋಗಬೇಕು?' ಎಂದು ಅಂತಃಕರಣದಿಂದ ಅವನನ್ನು ಕೂಡಿಕೊಂಡೇ ಇದ್ದರು. ಇದಕ್ಕೆ ಆ ರುದ್ರದೇವನು ನಾಚಲಿಲ್ಲ; ಆ ಬಂಟನು ಸಮಯಸಾಧಿಸಿ ಸ್ವಾಮಿಗಳಿಗೆ ವಿಷವನಿಕ್ಕಿದನೇ! 'ಶಿವನೇ ಸಿರಾಭಾರಿಯಾಗಿ ಬಂದಿಹನು, ಆತನ ಅನುಗ್ರಹದಿಂದ ಸುಜ್ಞಾನವನ್ನು ಪಡೆಯಬೇಕು' ಎನ್ನ



ಹಾಲಗೆರೆಯ ಅನ್ನದಾನೀಶ್ವರರು.

ಬೆ ಗುರುವನ್ನೇ ಕೊಲ್ಲಲು ಯತ್ನಿಸಿದ ಈತನು ಅದೆಷ್ಟು ನೀಚನು? ಮಾತೆಯ ಮೇಲೆ ಮುನಿದು ಆಕೆಗೆ ದುಃಖ ಕೊಡುವದಕ್ಕಾಗಿ ತಂದೆಯನ್ನು ಕೊಲ್ಲಲು ಯತ್ನಿಸಿದಂತಲ್ಲವೆ? ಆತನ ದುಷ್ಟತನವು ಬೇಗನೇ ಹೊರಬಿದ್ದಿತು. ಕೇಳಿದವರೆಲ್ಲ ತಿರಸ್ಕರಿಸ ಹತ್ತಿದರು. ಆದರೆ ಸನ್ಯಾಸಿಯು ಕಚ್ಚಿದ ನಾಯಿಗೆ ಸದ್ಗತಿಯಾದರೇನು, ದುರ್ಗತಿಯಾದರೇನು? ಸನ್ಯಾಸಿಗೆ ಆದ ಬಾಧೆಯು ನಿಜವೇ ಸರಿ. ಅನ್ನದಾನಿಗಳಿಗೆ ಬಿದ್ದ ವಿಷವು ಬಾಧಿಸತಕ್ಕದ್ದೇ! ಬಹು ಜನ್ಮದ ಪುಣ್ಯದಿಂದ

ದೊರೆತ ಸದ್ಗುರುವಿಗಾದ ಬಾಧೆಯಿಂದ ಜನರು ಮರುಗಹತ್ತಿದರು. ರುದ್ರದೇವನನ್ನು ಕಂಡವರು ಕಂಡಂತೆ ನಿಂದಿಸಹತ್ತಿದರು.

"ಬುತ್ತಿಗಳ್ಳನಿಗೆ ಎಂಜಲಂಜಿಕೆಯಲ್ಲಿ? ಪರದ್ರವ್ಯಾಪಹಾರಿಗೆ ಪಾತಕದ ಭಯವೆಲ್ಲಿ? ಪರಸ್ತ್ರೀವ್ಯಸನಿಗೆ ಕುಲವಿಚಾರವೆಲ್ಲಿ? ಸುರಾಪಾನಿಗೆ ಆಚಾರವಿಹುದೆ? ಒತ್ತೆವೆಣ್ಣಿಗೆ ಸತೀತ್ವವಿರುವದೆ? ಹಾಗೆಯೇ ಮೋಹಾಂಧನಾದ ಈ ರುದ್ರನಿಗೆ ಗುರುಪದಭಕ್ತಿಯಿರುವದೇ?" ಎಂದು ಕೆಲವರು ನುಡಿದರು.

"ಗೂಗೆಯು ಸೂರ್ಯನ ಕಿರಣಗಳ ಶೋಭೆಯನ್ನೇನು ಬಲ್ಲುದೇ? ಕಾಗೆಯು ಮಾವಿನ ಮಾಧುರ್ಯವನರಿವುದೇ? ನಪುಂಸಕನು ನಾಗವೇಣೀವಿಲಾಸಸುಖವ ತಿಳಿವನೇ? ವಿಷಯಾಂಧನು ವೈರಾಗ್ಯ ಸುಖದ ಮಹತ್ವವ ಗಣಿಸುವನೇ? ಕಪ್ಪೆಯು ಅಮೃತಸಾಗರದ ಸವಿಯನರಿವುದೇ? ಮಹಾಪಾಪಿಯು ಮಹಿಮಾನ್ವಿತ ಗುರುವರೇಣ್ಯನನ್ನು ಬಗೆವನೇ?" ಎಂದು ಹಲವರಂದರು.

"ಆಚಾರಹೀನರು, ಪರಹಿಂಸಾಪರರಾದ ನೀಚರು, ವಿಶ್ವಾಸಘಾತಕರು, ನಾಚಿಗೆಯ ಬಿಟ್ಟವರು, ಕೋಪವನ್ನು ತೊಟ್ಟವರು, ನಿಂದೆಗಂಜದವರು, ಕೂಟಸಾಕ್ಷಿಯ ಹೇಳುವವರು ಇವರೆಲ್ಲರಲ್ಲಿ ಗುರುಭಕ್ತಿಯು ಹುಟ್ಟದು ಹುಟ್ಟದು!!" ಎಂದು ಮತ್ತುಳಿದವರು ತಲೆಗೊಟ್ಟರು.

"ಅನ್ಯರ ಉನ್ನತಿಗೆ ಅಸೂಯೆಪಡುವ, ಧನ್ಯರಿಗೆ ಮೆಚ್ಚದಿರುವ, ಸಜ್ಜನರ ನಿಂದಿಸುವ ಈ ರುದ್ರದೇವನು! ಇಷ್ಟಲಿಂಗಾರ್ಚನಾವಿಮುಖನಾದ ಜಂಗಮಕುಲಕಲಂಕನಾದ ಈ ರುದ್ರದೇವನು! ದೈನ್ಯಭಾವಕ್ಕೆ ಕರಗದ ಮರುಗದ ಕಠಿಣಮನದ, ನಿಷ್ಠುರನಾದ ಅಧಮಾಧಮನಾದ ಈ ರುದ್ರದೇವನು ಗುರುವನರಿವನೇ?" ಎಂದು ಗುರುಭಕ್ತಿಪರವಶರಾದವರು ಆವೇಶದಿಂದ ನುಡಿದರು. ಮತ್ತೆ ಬೇರೆ ಬೇರೆ ಜನರು "ಚರಶ್ರೇಷ್ಠನಿಗೆ ಪಟುವಾದರೇನು? ಯತಿಯ ವೇಷವ ಧರಿಸಿದ

ರೇನು? ವಿರಕ್ತಾಶ್ರಮಿಯೆನಿಸಿದರೇನು? ದುರಭಿಮಾನವ ಬಿಟ್ಟು ಎಲ್ಲ ಗುರುಹಿರಿಯರೊಪ್ಪುವ ಹಾಗೆ ಹೊರಗೊಳಗೂ ಸದ್ಭಕ್ತಿಯಿಂದಿರದ ಕಾವಿಯು ವಿರಕ್ತನಹನೇ? ಮಾನವರನು ಉದ್ಧರಿಸುವದಕ್ಕೆ ಶಿವಾನುಭವಚರಾಶ್ರಮವನ್ನು ಹೊಂದಿಯೂ ಭ್ರಮಿಸಿ, ಅಸ್ಥಿರವಾದ ಮತ್ತು ಹುರುಳಿಲ್ಲದ ಕೀರ್ತಿಯನ್ನೂ ಇಂದ್ರಿಯ ಭೋಗಸುಖವನ್ನೂ ಬಯಸಿ ಮಾನವಿಲ್ಲದೆ ಜನರಿಂದ ಬುದ್ಧಿಯ ಹೇಳಿಸಿಕೊಳ್ಳುವವನು ವಿರಕ್ತನೇ? ಬರಿಯ ಹೆಸರಿನ ವಿರಕ್ತನಿಂದ ಲೋಕಕ್ಕೆ ಉಪಯೋಗವುಂಟೇ? ಈತನು ನಮ್ಮ ಸ್ವಾಮಿಯಾಗಲಿಲ್ಲ! ಇದೊಂದು ನಮ್ಮ ಸುದೈವವೇ!" ಎಂದು ಮೋರೆಯ ಮುಂದೆಯೇ ನುಡಿಯುತ್ತಿದ್ದರು.

ಔಷಧೋಪಚಾರವನ್ನು ಮಾಡಿಸಬೇಕೆಂದರೆ ಅನ್ನದಾನೀಶ್ವರರು ಒಪ್ಪಲಿಲ್ಲ. ಘಂಟಾನಿನಾದದಂತೆ ದೇಹವು ದಿನದಿನಕ್ಕೆ ಸೊರಗಿತು. ಮುಖವು ಗ್ರಹಣವಿಡಿದಂತಾಯಿತು. ಮೈಯಬಣ್ಣವು ಮಸಿಯ ಅರವಿಯಂತಾಯಿತು. ಗುರ್ತು ಸಿಗದಂತಾಯಿತು. ಆದರೆ ಮನಸ್ಸಿನಲ್ಲಿ ಅನುತಾಪವು ಮಾತ್ರ ಕಿಂಚಿತ್ತಾದರೂ ಉಂಟಾಗಲಿಲ್ಲ. ಮೇಘಮುಚ್ಚಿದ ರವಿಯಂತೆ, ಮಂಜುಮುಸುಕಿದ ಗಿರಿಯಂತೆ, ವಿಷದಿಂದ ಕಂದಿ ಕಪ್ಪಾಗಿದ್ದರೂ, ಸ್ವಾಮಿಯ ತಪಃಪ್ರಭಾವವೂ ಧೈರ್ಯವೂ ಕಳೆಯೇರಿ ಮೆರೆಯುತ್ತಿದ್ದವು. "ಗುರುಕೃಪೆಯೇ ಮಂತ್ರತಂತ್ರ ದಿವ್ಯೌಷಧವು. ಗುರುವಿನನ್ನು ನಂಬದೆ ಸುಖದಾಶೆಗಾಗಿ ಬೇರೆ ಬಹು ಯತ್ನವ ಮಾಡಿ ನರಳುತಿರುವರು. ನನಗೆ ಗುರುವೇ ಸರ್ವರಕ್ಷಕನು; ಹರನು ತೊರೆದರೆ ಗುರುವು ಪೊರೆವನು; ಗುರುಕೃಪೆಯು ಮರೆಯಾದರೆ ಹರನು ಕೈವಿಡಿಯಲಾರನು. ಶ್ರುತಿಯು 'ನಗುರೋರಧಿಕಂ' ಎಂದು ಲಿಯುತಿದೆ. ಗುರುವಿನಿಂದಲೇ ಭೋಗ; ಗುರುವಿನಿಂದಲೇ ಕೈವಲ್ಯ; ನನ್ನ ಚಿಂತೆಯೆಲ್ಲ ಗುರುವಿಗೆ; ಮಂತ್ರೌಷಧಾದಿಗಳು ಚರಪದಕ್ಕೆ ತಕ್ಕುಪಾಯಗಳಲ್ಲ!" ಎಂದು ಸ್ವಾಮಿಗಳು ನಿಶ್ಚಿಂತರಾಗಿದ್ದರು.

ಲೋಕದಲ್ಲಿ ಭೀಕರ ವಸ್ತುಗಳು ಅಂಜಿದರೆ ಅಂಜಿಸುವವು; ಅಂಜಿಸಿದರೆ ಅಂಜುವವು. ಆ ನಂಜು ಅಂಜದಿರುವ 'ಶಿವಯೋಗಿ

ಯಲ್ಲಿ ಇರುವವಕ್ಕೆ ಸೊಗಸುಗಾಣದೆ ಅಂಜಿ ಕಾಲ್ಕಿತ್ತಿಗೆಯಿತು. ಗುರು ಕೃಪೆಯು ಪ್ರಕಟವಾಯಿತು. ಷಟ್‌ಸ್ಥಲಜ್ಞಾನಿ ಜಂಗಮ.ಗೆ ಮೃತ್ಯುವೇ ಅಂಜುವಾಗ ಅಂಜದಿರುವರಾರು? ಶಿವನಿಗೆ ವಿಷವು ಮಾಡಿದ ಕಪ್ಪು ಈಗಲೂ ಇರುವದು. ಈ ಶಿವಯೋಗಿಯು ಶಿವನಿಗಿಂತ ಶ್ರೇಷ್ಠನೆಂಬುದನ್ನು ತೋರಿಸುವದಕ್ಕಾಗಿ ಆ ವಿಷವು ಕಲೆಯನ್ನುಳಿಸದೆ ತೊಲಗಿಹೋಯಿತು. ವಿಷವಿಳಿಯಿತು; ಬೇನೆ ಬದಿಗಾಯಿತು; ಕ್ಷೀಣತೆಯು ಕಾಣದಾಯಿತು; ಕಾಂತಿಯು ಕಂಗೊಳಿಸಿತು. ಇದನ್ನು ಕಂಡು ರುದ್ರದೇವನು ಒಡಲಲ್ಲಿ ಉರಿಬಿದ್ದು ಮರುಗಿ--'ಉಳಿದನಲ್ಲ ವೈರಿ! ಇವನನ್ನು ಕೊಂದು ಮೂರುದಿನವಾದರೂ ಅಧಿಕಾರವನ್ನು ಹೊಂದದಿದ್ದರೆ ನನ್ನ ಹೆಸರಲ್ಲ!' ಎಂದು ಹಲ್ಲು ಮಸೆಯುತ್ತ ಕೊಂಡೆಮಂಚಣ್ಣನು ಬಸವರಾಜನನ್ನು ಕಾಡಿದಂತೆ ಸ್ವಾಮಿಗಳನ್ನು ಕಾಡಲನುವಾದನು. ಎಷ್ಟಾದರೂ ಗೆಲುವಿಲ್ಲದೆ ಕೇವಲ ಬಂಡನೆನಿಸಿದನು. ಆದರೂ ಆತನು ಬಿಡಲೇ ಇಲ್ಲ ವೈರವನ್ನು! ಯಮನ ಅಂಜಿಕೆಯಿಲ್ಲದ ಹಾವುಚೇಳುಗಳು ಕಾರಣವಿಲ್ಲದೆ ಬಾಧಿಸವು; ಯಮನ ಅಂಜಿಕೆಯು ಮನದೊಳು ಅಳುಕುತ್ತಿದ್ದರೂ ದುಷ್ಟರು ನಿಷ್ಕಾರಣವಾಗಿ ಸಜ್ಜನರನ್ನು ಪೀಡಿಸುವರು. ಬ್ರಹ್ಮನು ಇವರನ್ನು ಹುಟ್ಟಿಸಿಯೇ ಜಡಜಭವನೆನಿಸಿರಬಹುದೇನು? ಹೌದು! ನಿಜವೇ ಸರಿ.

ರುದ್ರದೇವನ ಕುಟಿಲತಂತ್ರಗಳನ್ನು ನೆನಿಸಿ ಹೊನ್ನಪ್ಪಗೌಡನು ಸ್ವಾಮಿಗಳನ್ನೂ ಅವರ ವಟುಗಳನ್ನೂ ಇಟ್ಟಗಿಯಿಂದ ಹಾಲಗೆರೆಗೆ ಕರತಂದನು. ಬರಬರುತ್ತ ರುದ್ರದೇವನೂ ಹತಾಶನಾದನು; ಪತಂಗದ ಹುಳುವು ಬೆಂಕಿಯನ್ನು ಕೆಣಕಿ ರೆಕ್ಕೆಯನ್ನು ಸುಟ್ಟುಕೊಂಡು ಬಾಯ್ಬಿರೆವಂತೆ, ಆತನು ಶಿವಯೋಗಿಯನ್ನು ಕೆಣಕಿ ಕಡೆಗೆ ಪರಿತಾಪಕ್ಕೆ ಈಡಾದನು. ಯತಿಯ ಶಾಪವೇನೂ ಇಲ್ಲ; ತಾ ಮಾಡಿದ ಪಾಪವೇ ಪಾಪಿಯ ಕಾಡಲನುವಾಯಿತು. ಆತನನ್ನು ಮುಂದೆ ಕರೆವವರಿಲ್ಲ; ಕೇಳಿ ಮನ್ನಿಸುವವರಿಲ್ಲ; ಅವನ ಮನದಲ್ಲಿ ಉತ್ಸಾಹವಿಲ್ಲ! ಅನ್ನವಸ್ತ್ರಗಳಿಗೆ ಗತಿಯಿಲ್ಲ!! ಆಶ್ಚರ್ಯವಾದರೂ ಏನು? ಪತಿಗೆ ಅಹಿ

ತವನ್ನು ಬಗೆದ ಸತಿಯು, ಸ್ವಾಮಿದ್ರೋಹವನ್ನು ಮಾಡಿದ ಸೇವಕನು ಅರಸನ ಕೋಪಕ್ಕೆ ಸಿಕ್ಕ ನರನು, ಯತಿಯ ಶಾಪದಿಂದ ಹತನಾದ ನರನು, ಗುರುವಿನ ನಾಶವನ್ನು ಬಯಸಿದ ಶಿಷ್ಯನು ಇವರೆಲ್ಲರನ್ನು ಜನರು ಮನ್ನಿಸುವರೇ? ಅವರ ಬಾಳು ಹಾಳಾಗದೇ?

ಹೀಗೆ ಅನ್ನದಾನೀಶ್ವರರ ಚರಣವನ್ನು ಶರಣು ಹೊಗಲೊಲ್ಲದೆ ಪ್ರತಿಯಾಗಿ ಯತ್ನಿಸಿ ಕಡೆಗೆ ಫಲಗಾಣದೆ ಕಂಗೆಟ್ಟು ಪಶ್ಚಾತ್ತಾಪ ದಿಂದ ರುದ್ರದೇವನು ಅದೇ ಮಹಿಮರ ಪಾದಗಳಿಗೆ ಮೊರೆಬಿದ್ದನು; ದೈನ್ಯಾವಸ್ಥೆಯನ್ನು ಹೇಳಿಕೊಂಡನು; ಕ್ಷಮಿಸಬೇಕೆಂದು ಬೇಡಿಕೊಂ ಡನು. ಯತೀಶ್ವರರು ಅವನ ತಪ್ಪನ್ನು ಕ್ಷಮಿಸಿದರು; ಪಿಳ್ಳಿಯ ಚರಾ ಶ್ರಮವನ್ನು ಕೊಟ್ಟರು; ಬಂಡಿಯ ಮಠದೊಳಿರಿಸಿ ಪಾಲಿಸಿದರು. ವಾಚಕರೇ ಬೆಣ್ಣೆಯು ಮೃದುವೆನ್ನುವರು ಜನರು! ಆದರೆ ಅದಲ್ಲ; ಅದಕ್ಕೂ ಮೃದುವಾದುದು ಸಜ್ಜನರ ಎದೆಯು! ಯಾಕಂದರೆ ತನಗೆ ತಾಪವಾದಾಗ ಕರಗುವದು ಬೆಣ್ಣೆಯು! ಪರರ ಪರಿತಾಪದಿಂದಲೇ ಕರಗುವದು ಸುಜನರ ಹೃದಯವು!! ಮಹಾತ್ಮರು ಅನ್ಯರ ಅಪ ಕಾರಕ್ಕೆ ನೋಯರು; ಪರರ ಕಷ್ಟವ ಸೈರಿಸರು; ಪರೋಪಕಾರವ ಮಾಡುವರು; ಪರರದೋಷವ ಕಳೆವರು; ಮರೆದಾದರೂ ಕನಸಿನಲ್ಲಿ ಕೂಡ ಸ್ವಾರ್ಥಕ್ಕೆಳಸರು; ಆದ್ದರಿಂದಲೇ ಅವರು ದೇವರಿಗೆ ಸರಿಯಾ ದವರೆಂಬುದು ಸುಳ್ಳೇ?

ಅದಿರಲಿ, ಮುಂದೆ ಕೆಲವು ಕಾಲ ಸ್ವಾಮಿಗಳ ಮನಸ್ಸು, ಶಿವ ಯೋಗಿಗಳ ಮಹಿಮೆಯನ್ನು ತೋರಿಸುವದಕ್ಕಾಗಿಯೋ ಎನ್ನೋ, ಲೌಕಿಕದ ಹಲವು ಲೀಲೆಗಳನ್ನು ಮಾಡುವದರಲ್ಲಿ ಒಲಿಯಿತು. ಚ್ಯುತಿ ಯಿಲ್ಲದೆ ಶಿವಪೂಜೆಯೊಂದನ್ನು ಮಾಡುತ್ತಿದ್ದರಲ್ಲದೆ ಉಳಿದ ಶಿವಾನು ಭವಶಾಸ್ತ್ರವನ್ನು ವಿಚಾರಿಸಲೇ ಇಲ್ಲ. ಹುಡುಗರ ಹಾಗು ತರುಣರ ಕೂಡ ಲೆತ್ತ, ಚದುರಂಗ ಮೊದಲಾದ ಆಟಗಳನ್ನು ಆಡುವದರಲ್ಲಿ ಹಸಿ ವೆಯ ಪರಿವೆಯೇ ಇರುತ್ತಿದ್ದಿಲ್ಲ. ಆಟ ಅಂಗಸಾಧನೆ ಮೊದಲಾದ

ವುಗಳೊಳಗೆ ಸ್ಪರ್ಧೆಯನ್ನು ತಾಳುವದರಲ್ಲಿ ಯಾರ ಮುರವತ್ತನ್ನೊ ಹಿಡಿಯುತ್ತಿರಲಿಲ್ಲ. ಹೀಗಿದ್ದರೂ ಅವರ ದೃಷ್ಟಿಪಥದಲ್ಲಿ ಸ್ತ್ರೀಯರ ಸುಳುವಿಗೆ ಆಸ್ಪದವೇ ಇದ್ದಿಲ್ಲ. ಜಿತೇಂದ್ರಿಯತ್ವ-ದುಷ್ಕೃತಿನಿವೃತ್ತಿ-ಶುದ್ಧಬುದ್ಧಿಗಳಲ್ಲಿ ಲೇಶವಾದರೂ ಕೊರತೆಯಿದ್ದಿಲ್ಲ. ಲೌಕಿಕದ ಅನೇಕ ವಿದ್ಯೆಗಳು ಇವರಿಗೆ ಅಸಾಧ್ಯವಾಗಲಿಲ್ಲ. ಇವರು ವೀಣೆ, ಸಾರಂಗ, ಮೃದಂಗಾದಿಗಳನ್ನು ಬಾರಿಸುವವರಲ್ಲಿ ಜಾಣರು; ಎರಕ ದೊಡವೆ, ಮಂಚ, ರಥ, ಹಗ್ಗ, ಹೆಣಿಕೆ ಮೊದಲಾದವುಗಳನ್ನು ಮಾಡುವದರಲ್ಲಿ ಕುಶಲರು; ಶಿಲ್ಪದಲ್ಲಿ ಪ್ರವೀಣರು; ಸುಂದರವಾದ ಶೈವಮೂರ್ತಿಗಳನ್ನು ಬಣ್ಣದಿಂದ ಮಾಡುವರು. ಜಾಣರಾದ ಬಡಿಗರೇ ಮೊದಲಾದ ಕೈಗಾರಿಕೆಯುವರು ಇವರಲ್ಲಿದ್ದು ಶಿಕ್ಷಣವನ್ನು ಹೊಂದುತಲಿದ್ದರು. ತಾವೇ ಶಿಕ್ಷಣಕೊಟ್ಟ ಲಿಂಗಾಂಗಿಗಳಿಂದಲೇ ತಮ್ಮ ಮಠವನ್ನು ಕಟ್ಟಿಸಿದರು! ಮಲ್ಲಮಲ್ಲರೂ ತೊಂಟರೂ ಮಠದಲ್ಲಿ ಗೊಂದಲಹಾಕುತ್ತಿದ್ದರು. ಆದರೂ ಹೊರಗಿನಪವಾದವು ಬರದಂತೆ ಗುರುತ್ವವನ್ನು ಕಾಯ್ದುಕೊಂಡಿದ್ದರು.

ಸ್ವಾಮಿಗಳು ಶಿವಧರ್ಮಿಗಳಾಗಿದ್ದರೂ ಎಲ್ಲ ಕುಲಧರ್ಮದವರನ್ನೂ ಒಂದೇ ರೂಪದಿಂದ ಕಾಣುತ್ತಿದ್ದರು; ಅತ್ಯಂತ ನಿಷ್ಪಕ್ಷಪಾತಿಗಳಾಗಿದ್ದರು. ಒಂದುದಿನ 'ಮೋಹರಮು' ಹಬ್ಬದ ಮಂದಿಯನ್ನು ಕರೆಯಿಸಿ ತಮ್ಮ ಮಠದ ಮುಂದೆ ಅಲಾವಿಯ ಹಾಡುಗಳನ್ನು ಹಾಡಿಸಿದರು. ನೆರೆದ ಜನರ ಸಂದಣಿಯೊಡನೆ ತಾವೂ ಅವುಗಳನ್ನು ಆಲಿಸಿದರು. ಇದಕ್ಕಾಗಿ ಕೂಡಿದವರು "ಸ್ವಾಮಿಗಳ ಶೀಲಕ್ಕೆ ಸರಿಯಲ್ಲವು ಈ ಕಾರ್ಯ; ಲಘುತರವಾದುದು ಇದು" ಎಂದು ಹಿಂದುಮುಂದೆ ಆಡಿಕೊಳ್ಳುತ್ತ ನಡೆದರು. ಇದು ಸಹಜವೇ; ಶ್ರುತಿಗೆ ಅಗೋಚರನಾದ ಶಿವನನ್ನು ಒಲಿಸಿದ ಮತಿವಂತರು ಎಷ್ಟೋ ಜನರುಂಟು; ಈ ವಿಧವಿಧದ ಮನುಷ್ಯರ ಮನವೊಲಿಸಿದ ಮಹಿಮನೊಬ್ಬನನ್ನೂ ಎಂದೆಂದೂ ಕಾಣದಾಗಿದೆ. ಆದ್ದರಿಂದ ಈ ಯತೀಶ್ವರನ ನಿಂದಿಸಿದುದರಲ್ಲಿ ಆಶ್ಚರ್ಯವೇನು? ಹಾಲಗೆರೆಯ ಹೊನ್ನಪ್ಪಗೌಡನು ಈ ಬಗೆಯನ್ನು ತಿಳಿ

ದೆವನಾದರೂ ಜನರ ನಿಂದೆಯನ್ನು ಸೈರಿಸದೆ ಕ್ರುದ್ಧನಾಗಿ ಮನೆಗೆ ಬಂದನು. ಮತ್ತು ಸ್ವಾಮಿಗಳ ವಿಷಯವಾಗಿ ಅಭಿಮಾನವನ್ನು ತಾಳುತ್ತಿದ್ದ ತನ್ನ ಪತ್ನಿ ಫಣಿಯಮ್ಮನನ್ನು ಕರೆದು-“ನಿನ್ನ ಸ್ವಾಮಿಯ ಗುಣ ಕೆಟ್ಟಿತು. ಅಧಮರನ್ನು ಕರೆದು ಮಠದಲ್ಲಿ ಅಲಾವಿಯನ್ನು ಆಡಿಸಿದನು. ಊರಲ್ಲಿ ಕಂಡವರೆಲ್ಲರು ಕೆಂಡದಂತಾಗಿ ನಿಂದಿಸುತ್ತಿರುವರು. ನಂಬಿದ ಭಕ್ತರಿಗೆ ಒಳ್ಳೇ ಕೀರ್ತಿಯನ್ನು ಕೊಟ್ಟನು! ನಾವು ಧನ್ಯರಾದೆವು!!” ಎಂದು ನುಡಿದು ಮೂದಲಿಸಿದನು.

ಫಣಿಯಮ್ಮನು ಅತ್ಯಂತ ಸದ್ಗುಣಿಯು; ಆಕೆಯು ಅನ್ನದಾನೀಶ್ವರರನ್ನು ಫಲಾಶೆಯಿಲ್ಲದ ತಾಯಿಯು ತನ್ನ ಮಗನನ್ನು ಹೇಗೋ ಹಾಗೆ ಪೋಷಿಸುತ್ತಿದ್ದಳು. ವಿನಯದಿಂದ ಅವರನ್ನು ಮನೆಗೆ ಕರೆದೊಯ್ದು ಶಿವಪೂಜೆಯ ಮಾಡಿಸುತ್ತಿದ್ದಳು. ಲೀಲಾಸ್ವಕ್ರರಾದ ಈ ಸ್ವಾಮಿಗಳು ಬರಲು ತಡಮಾಡಿದರೆ, ಇಲ್ಲವೆ ಬರದಿದ್ದರೆ, ಉಪವಾಸವನ್ನೇ ಮಾಡುತ್ತಿದ್ದಳು. ಅವಳು ಸ್ವಾಮಿಗಳ ಲಿಂಗಪೂಜಾ ಕಾಲದಲ್ಲಿ ಚಾತಕವು ಮೇಘವನ್ನು ಹೇಗೋ ಹಾಗೆ ಅವರನ್ನು ನಿರೀಕ್ಷಿಸುವಳು. ಪರಿಪರಿಯ ಭಕ್ಷ್ಯಗಳಿಂದ ಅರ್ಪಣವ ಮಾಡಿಸುವಳು. ಇರಲಿ; ಆಕೆಯು ಪತಿಯ ಮಾತನ್ನು ಕೇಳಿ ಸಿಟ್ಟಿನಿಂದ-“ಆ ಮಹಾತ್ಮನ ಮಹಿಮೆಯನ್ನು ಜನರೇನು ಬಲ್ಲರು? ತಿಳಿದು ನೋಡಿರಿ; ಅವನ ಗುಣವು ಕೆಡಲುಂಟೇ? ಮತಿಮಂದರಾಗಬೇಡಿರಿ; ನೀವು ಅವನನ್ನು ಪ್ರೀತಿಸಿದ್ದು ನಿಮಗಾಗಿ! ಅವನುಪಕಾರಕಲ್ಲ! ನಿಮಗೆ ತಿಳಿಯದೇ, ಸೂರ್ಯನು ಪಶ್ಚಿಮದಲ್ಲಿ ಮೂಡಬಹುದು, ಗಿರಿಶಿಖರದಗ್ರದಲ್ಲಿ ಕಮಲಗಳರಳಬಹುದು, ಮೇರುಗಿರಿಯು ಚಲಿಸಬಹುದು, ಮೃಗಜಲದಲ್ಲಿ ತೃಷೆಯು ನೀಗಿಸಬಹುದು; ಆದರೆ ಶಿವಯೋಗಿಯ ಮನಸ್ಸು ಕೆಡದು. ಲೌಕಿಕದಲ್ಲಿದ್ದು ಲೌಕಿಕ ಲೀಲೆಗಳನ್ನು ಮಾಡಿದರೇನು? ಉದ್ದೇಶವೇ ಬೇರುಂಟು. ಅವನು ಮಾಡುವ ಲೀಲೆಗಳು ಲೋಕಹಿತಕ್ಕಾಗಿಯೇ. ಕುಂಬಾರ ಹುಳುವು ಕೆಸರಿನಲ್ಲಿದ್ದರೂ ಕೆಸರನಂಟಿಸಿಕೊಳ್ಳದಂತೆ, ನೀರೊಳು ಬೆಳೆದ ಕಮಲವು ನೀರನಂಟಿಸಿಕೊಳ್ಳದಂತೆ, ಯಾವದನ್ನು ಮಾಡಿದರೂ ಈ ಶಿವ

ಯೋಗಿಯು ಸರ್ವದಾ ನಿರ್ಲಿಪ್ತನಾಗಿರುವನು. ಸುಜನರಕ್ಷಣೆಯಲ್ಲಿ, ಧರ್ಮವೃದ್ಧಿಯಲ್ಲಿ, ದುಷ್ಟಜನಸುಧಾರಣೆಯಲ್ಲಿ ಶಿವಭಕ್ತರ ಮಹಿಮೆಗಳನ್ನು ತೋರಿಸುವಲ್ಲಿ ಯೋಗೀಶ್ವರರ ನಡೆನುಡಿಗಳು ಯಾವಾಗಲೂ ಉಪಯುಕ್ತವಾಗಿಯೇ ಇವೆ. ಅವುಗಳಲ್ಲಿ ನೀಚತನವನ್ನು ಕಲ್ಪಿಸುವದು ದೋಷವೆಂದು ಬಗೆವು ಬಲ್ಲವರು ಭಜಿಸುವರು. ಯೋಗಿಗಳ ವರ್ತನವು ಕುಂದಿಡಲು ತಕ್ಕದ್ದೇ? ಅಲ್ಲಲ್ಲ; ಅವರ ವರ್ತನವು ಅತಿಕ್ರಮಿಸಿದಂತೆ ತೋರಿದರೂ ಅದರಿಂದಲೂ ಅವರಿಗೆ ಕೀರ್ತಿಪುಣ್ಯಗಳೇ ಲಭಿಸುವವು. ಸ್ಫಟಿಕದ ಕೊಡದಲ್ಲಿದ್ದ ದೀವಿಗೆಯು ಒಳಗೂ ಹೊರಗೂ ಸಮನಾಗಿ ಕಾಣುವಂತೆ ಹೊರಗೊಳಗೊಂದಾಗಿ ಬಾಳುತ್ತಿರುವ ಅನ್ನದಾನೀಶ್ವರರನ್ನೇ ಜರೆದ ಬಳಿಕ ಉಳಿದವರ ಪಾಡೇನು? ಕೆಡುವ ಗುಣವುಳ್ಳವನಾದರೆ ಮುಪ್ಪಿನಬಸವಲಿಂಗದೇವನು ಆಶ್ರಿತರಾದ ನಮಗೆ ಈತನನ್ನು ಕೊಡುತ್ತಿದ್ದನೇ? ಈತನು ನಿಮ್ಮನ್ನು ಪೊರೆಯ ಬಂದ ಹಿಂದಾದ ಅನ್ನದಾನಿಯೇ ಎಂದು ಇದೇ ಮಠದಲ್ಲಿ ಅಪ್ಪಣೆಕೊಟ್ಟುದನ್ನು ಮರೆಯದಿರಿ. ಈತನ ವಿರತಿಗೆ ಸ್ವಲ್ಪಾದರೂ ಕುಂದು ಬಂದಿದ್ದರೆ ಹೇಳಿರಿ; ಸದಾಚಾರಕ್ಕೆ ಭಂಗವುಂಟಾದರೆ ಹೇಳಿರಿ; ಮಿಕ್ಕ ದೋಷ-ವಿಷಯಗಳಿಗೆ ಒಲಿದಿದ್ದರೆ ಹೇಳಿರಿ. ಮರುಳರ ಮಾತಿನಿಂದ ನಿರಾಧಾರವಾದ ಕಲ್ಪನೆಯಿಂದ ಸ್ವಾಮಿಯನ್ನು ಜರೆದರೆ ನಾನು ನನ್ನ ಪ್ರಾಣವನ್ನೇ ನೀಗುವೆನು; ನಿಮ್ಮಾಣೆ ನಿಶ್ಚಯವೆಂದು ತಿಳಿಯಿರಿ!" ಎಂದಳು. ಹೊನ್ನಪ್ಪಗೌಡನು—"ಒಳಿತು, ಒಳಿತಾಗಲಿ; ಮರುಳೆ, ನೀನೇನು ಬಲ್ಲೆ? ಅಪವಾದವು ಬರದಂತೆ ವರ್ತಿಸುವದು ತಕ್ಕದ್ದು. ಹಿಂದೆ ದುರ್ವಾಸನು ಕರಿಕೆಯ ರಸವನ್ನು ತೆಗೆದು ಕುಡಿಯುತ್ತಿರುವದನ್ನು ಕಂಡ ಗೋಪಾಲಕರು ದುರ್ವಾಸಋಷಿಯು ಸುರಾಪಾನವನ್ನು ಮಾಡುವನೆಂದು ಹೇಳತೊಡಗಿದರು. ಈ ಅಪವಾದ ಮೂಲಕವಾಗಿ ಆತನಿಗೆ ಶಿವಸಭೆಯಲ್ಲಿ ಪ್ರವೇಶಿಸಲು ಅಪ್ಪಣೆಯಾಗಲಿಲ್ಲ. ಅದರಿಂದ ದುರ್ವಾಸನು ಗೋಪಾಲಕರನ್ನು ಕೂಡಿಸಿ ಕರಿಕೆಯ ರಸವನ್ನು ತೆಗೆದು ಸುರಿಯುಂತೆ ಅದರಲ್ಲಿಯೂ ಬುರುಗು ಬರುವುದನ್ನು ತೋರಿಸಿಕೊ

ಟ್ಟನು. ಇದರಿಂದ ಅಪವಾದವನ್ನು ಕಳೆದುಕೊಂಡ ಬಳಿಕ ಆತನಿಗೆ ಶಿವದರ್ಶನವಾಯಿತು. ಅದರಿಂದ ನೀನು ಆತನಿಗೆ ಕುಂದು ಬರದಂತೆ ಆಚರಿಸೆಂದು ಬುದ್ಧಿಯನ್ನು ಹೇಳು; ನಿನ್ನ ಮಾತುಗಳನ್ನು ಪ್ರೀತಿಯಿಂದ ಆದರಿಸುವನು. ಇನ್ನುಳಿದವರ ಮಾತುಗಳನ್ನು ಈಗಿನ ಇಂಥ ವೃತ್ತಿಯಲ್ಲಿ ಕೇಳಲಿಕ್ಕಿಲ್ಲ.

"ಲೋಕದಲ್ಲಿ ಹಾನಿಯನ್ನು ಸೈರಿಸಬಹುದು; ಅಪವಾದವನ್ನು ಸೈರಿಸಲಾಗದು. ಬಂಗಾರವು ಜನರ ಮನ್ನಣೆಯನ್ನು ಪಡೆದಿದ್ದರೂ ಅಗ್ನಿಯು ಆಶ್ರಯಮಾಡಿ ಸುತ್ತಿಗೆಯಿಂದ ಹೊಡಿಸಿಕೊಳ್ಳುವದು. ಪಾಮರರ ಮತ್ತು ಅಧಮರ ಸಂಗದಿಂದ ಗೌರವವುಳ್ಳವರಿಗೆ ಸಂಕಟವು ಬರಲಾರದೇ? ಇವರ ಗುರುಗಳು ಹೀಗಿದ್ದರೇ? ಶಾಸ್ತ್ರವು ಹೀಗೆಯೇ ಹೇಳುವದೇ? ದೊಡ್ಡವರು ನಡೆದಂತೆ ಸಣ್ಣವರು ನಡೆಯುವದು ಸಹಜವು. ನಿರಾಭಾರಿಗುರುವೇ ಹೀಗಾದ ಮೇಲೆ ಶಿವಭಕ್ತರೆಲ್ಲ ಅಲಾವಿಯಲ್ಲಿಯೇ ಕುಣಿಯುವರು. ತಿಳಿದವರು ಧರ್ಮಹಾನಿಯು ಇಂಥವರಿಂದಲೇ ಎಂದು ಕುಂದಿಡದೆ ಬಿಡುವರೆಲ್ಲಿ? ತಾವು ಈಶತ್ವವನ್ನು ಹೊಂದಿದ್ದರೂ ಲೋಕಸಂಗ್ರಹಕ್ಕಾಗಿ ಅನುಕರಣೀಯವಾದ ರೀತಿಯಿಂದ ನಡೆಯಬೇಕಾಗುವದು. ಬೆಣ್ಣೆಯು ಬೆಂಕಿಯ ನೆರೆಯಲ್ಲಿ ಕರಗದಿರದಂತೆ, ಸಾಧಕ ವಿರಕ್ತರ ಮನಸ್ಸು ಚಲುವಹೆಣ್ಣುಗಳ ಬಳಿಯಲ್ಲಿ ಕರಗದಿರದು. ನಿರ್ಜನ ಪ್ರದೇಶದಲ್ಲಿ ನಿಂತು, ಗಡ್ಡೆಗೆಣಸುಗಳನ್ನು ತಿಂದು ನಾರುಮಡಿಗಳನ್ನುಟ್ಟು ಸಣ್ಣಾಗಿ ಮುನಿಗಳು ವೈರಾಗ್ಯವನ್ನು ಕಾಯ್ದುಕೊಂಡುದನ್ನು ಕೇಳಿಲ್ಲವೆ?

"ನೆರೆದ ಸಮೂಹದಲ್ಲಿ ಧರ್ಮಕ್ಕಂತರಿಸಿದ ಪದಗಳನ್ನು ಕೇಳುವ ತಿಂಡಿಯು ಇವನಿಗೇಕೆ? ಇದು ಹರಕೆಯೋ, ಹೊಸಪದ್ಧತಿಯನ್ನು ನೆಲೆಗೊಳಿಸುವ ರೀತಿಯೋ, ತಿಳಿಗೇಡಿತನವೋ ಏನು? 'ಚರವರೇಣ್ಯರು ನಾವು, ನಮಗಾರು ಕೇಳ್ವರು?' ಎಂಬ ಬಿರವಿನಿಂದೋ? ಶಿವಭಕ್ತರ ಸನ್ಮಾನವು ಸರಿದೋರದೇನು? ಅಥವಾ ಅದು ಸಾಲದೇನು? ಅನ್ಯರ ಹಬ್ಬವು ತನಗೇನು ಕಾರಣಬೇಕು?

“ಹಾದಿಗನು ಹರಿವ ಹರಗೋಲಿಂದ ಹೊಳೆಯನ್ನು ದಾಟು ವನೆಂತು? ನಾವಿಕನೊಡನೆ ಸಹವೇ ಮುಳುಗದೆ ಬಿಡುವನೇ ಅವನು? ಹಾಗೆಯೇ ಭವಸಾಗರದ ನಾವಿಕನಾದ ಈತನು ಛಿದ್ರವೃತ್ತಿಯುವ ನಾದರೆ ಇವನನ್ನು ನಂಬಿ ನಾವು ಸದ್ಗತಿಯ ಪಡವನ್ನು ಕಾಣು ವದೆಂತು? ಆದ್ದರಿಂದ ಸದ್ವೃತ್ತಿಯಿಂದಿರಲೆಂದು ಹೇಳಿದೆನು. ಈತನ ಸದ್ಗುಣಗಳು ಬೆಳೆದರೆ ನಮಗೇನು ಕೊರತೆ? ತಾಯಿಯು ಉಂಡರೆ ಮಗನಿಗೆ ಹಾಲು ದೊರೆಯುವಂತೆ ಗುರುವಿನ ಶುದ್ಧವೃತ್ತಿಯಿಂದ ನಮಗೆ ಕೈವಲ್ಯವು ಸುಲಭವಾಗಿ ಸಿಗಲು ಅನುವಾಗುವದು. ಅನ್ನದಾನೀ ಶ್ವರನು ನೀತಿಯನ್ನು ಬಿಟ್ಟಿರುವನೆಂದು ನಿನಗೆ ಹೇಳುವ ಮಾತಲ್ಲ! ಅಪವಾದವು ಬರದಂತೆ ಇರಲೆಂದು ಹೇಳಿದೆನು ಇಷ್ಟೇ!” ಎಂದು ಹೆಂಡತಿಯ ತಲೆದೂಗಿಸಿ ಬಿಟ್ಟನು. ಶಿವಯೋಗಿಗಳಿಗೆ ಆಚಾರವ ಕಲಿಸುವದು ಅಸಾಧ್ಯವೆಂದು ಹೇಳಿದವು ನಿಗಮಾಗಮಗಳು. ಶಿವ ಯೋಗಿಗೆ ಹಿತವಾಗಬೇಕೆಂದೂ ನಡತೆಯನ್ನು ಕಲಿಸಬೇಕೆಂದೂ ಎಳ ಸಿದವನು ಹೊನ್ನಪ್ಪಗೌಡನು!! ಈ ಭಕ್ತನು ಆ ನಿಗಮಾಗಮಗ ಳಿಂತ ಹೆಚ್ಚಿನವನೆಂದು ಹೊಗಳದಿರುವರಾರು?

ಕೆಲವು ದಿವಸಗಳ ತರುವಾಯ ಗದಗದ ಮಡಿವಾಳಶಿವ ಯೋಗಿಗಳು ಮುಪ್ಪಿನಬಸವಲಿಂಗಾರ್ಯರ ಸಂತರ ವಿರಕ್ತಚರ ಮೂರ್ತಿಗಳಾದ ಇವರನ್ನು ನೋಡಬೇಕೆಂದು ಇಟ್ಟಿಗಿಗೆ ಬಂದರು. ಮತ್ತು ರೋಣದ ಗೌಡನೊಡನೆ ಹಾಲಗೆರೆಗೆ ತಾವುಬಂದ ಸುದ್ದಿ ಯನ್ನು ಹೇಳಿ ಕಳುಹಿದರು. ಇತ್ತ ಅನ್ನದಾನೀಶ್ವರರು ಜ್ಞಾನದೃಷ್ಟಿ ಯಿಂದ ಈ ಸಂಗತಿಯನ್ನು ಮೊದಲೇ ತಿಳಿದು ಮಡಿವಾಳಯತಿ ಗಳ ದರ್ಶನವಾಗುವದೆಂದು ಮಠದಲ್ಲಿ ಕೂಡಿದವರಿಗೆ ಹೇಳಿದ್ದರಲ್ಲದೆ ಹೊನ್ನಪ್ಪಗೌಡನೊಡನೆ ಇಟ್ಟಿಗಿಗೆ ಹೊರಟಿದ್ದರು. ಇದನ್ನು ಕಂಡು ರೋಣದ ಗೌಡರು ಬೆರಗಾದರು. ಎಲ್ಲರೂ ಇಟ್ಟಿಗಿಗೆ ಬಂದರು, ಆ ಶಿವಯೋಗಿವರ್ಯರೀರ್ವರು ಪರಸ್ಪರರನ್ನು ಕಂಡರು. ಆನಂದದಿಂದ ಶಿವಸೂಕ್ತಿಗಳನ್ನಾಡಿ ಮನದೊಪ್ಪಿದರು.

ಮಡಿವಾಳಯೋಗಿಗಳು ಪ್ರಸಾದವಾಣಿಯಿಂದ—“ಎಲೈ ಚರೋತ್ತಮನೇ, ನಿನ್ನ ಗುರುಮೂರ್ತಿಯು ಬೋಧೆಯಿಂದ ಶಿವಾನುಭವಶಾಸ್ತ್ರವನ್ನು ತಿಳಿದು ಭಾವಿಸು, ಮರೆಯಬೇಡ. ಅದರ ಸಹಾಯದಿಂದ ಸಂಸಾರದ ಬಾಧೆಯಲ್ಲಿದ್ದ ಸದಾಚಾರಿಗಳನ್ನು ಉದ್ಧರಿಸು. ಮನಸ್ಸು ಚಲಿಸದಂತಿರು; ವೀರಶೈವಾಭಿಮಾನವಿರಲಿ; ಶಿವಯೋಗದಲ್ಲಿ ಬೇಸರವಾದರೆ ಭೋಗದಾಶೆಯು ಬರುವದು ಎಚ್ಚರ! ಧರೆಯ ಮನ್ನಣೆಗಾಗಲಿ ಸಂಪದಕಾಗಲಿ ಹಿಗ್ಗಬೇಡ; ಕೆಟ್ಟಕಾಲವಿದು, ಆಶೆಯನ್ನು ತಾಳಿ ಜನರ ಅಳುಕಿನಲ್ಲಿ ಸಿಲುಕಬೇಡ. ನೂರೊಂದುಸ್ಥಲದ ಕೀಲನರಿದು ಶಿವಯೋಗಿಯೊಡನೆ ಸಂವಾದ ಮಾಡುವವರಲ್ಲಿ ಕಾಲವನ್ನು ಕಳೆ.

“ಯೌವನದ ಆಟಪಾಟಗಳು ನಿನಗೇಕೆ? ಅದರಿಂದ ಅಪವಾದವು ಬರದಿರುವದೇ? ಭೋಗಿರಾಗಿಗಳಿಗೆ ಮುಕ್ತಿಯೇ ಇಲ್ಲ. ಶಿವಯೋಗಿಗಳಿಗೆ ಸಂಸಾರದ ತೊಡಕೇಕೆ? ಸ್ವಾಮಿಗಳ ಪದ್ಧತಿಯು ಹೇಗೆಂಬದನ್ನು ಚನ್ನಾಗಿ ತಿಳಿ. ಹಿಂದಿನವರು ಅನೇಕ ಮಹತ್ವಗಳನ್ನು ಮಾಡಿದರು. ಹಿಂದೆ ಯೋಗಭ್ರಷ್ಟನಾದ ನೀನು ಗುರುಕೃಪೆಯಿಂದ ಶಿವಭಕ್ತರ ತಪಃಶಕ್ತಿಯಿಂದ ಲೋಕಾನುಗ್ರಹಕ್ಕೆ ತಕ್ಕವನಾಗಿ ಅವತರಿಸಿರುವೆ. ಅದರಿಂದ ಶಾಸ್ತ್ರಸಮ್ಮತವಾಗಿ ನಡೆ; ವೈಯಾಕರಣಿಯಾಗು; ಮೌನಿಪಥವನ್ನು ಬಿಟ್ಟುಬಿಡು.

“ನಿನ್ನ ಗುರುವಿನ ಗುರುಗಳಾದ ಅನ್ನದಾನೀಶ್ವರರು ಅತ್ಯಂತ ಯೋಗಸಾಮರ್ಥ್ಯವುಳ್ಳವರಾಗಿದ್ದರು. ಅದನ್ನು ತಿಳಿಯಬೇಕಾದರೆ ಅವರಿಗೊದಗಿದ ಒಂದು ಸಂಗತಿಯನ್ನು ಕೇಳು. ಗಂಜಿಹಾಳದ ಮಠದಲ್ಲಿರುವಾಗ ಆ ಗುರುವರರಾದ ಅನ್ನದಾನೀಶ್ವರರು ಒಂದುದಿನ ಶೌಚವಿಧಿಯನ್ನು ತೀರಿಸಿ ನದಿಯಲ್ಲಿ ಕೈಕಾಲುಮೋರೆ ತೊಳೆದುಕೊಂಡು ಹಲ್ಲುಜ್ಜುವದಕ್ಕೆ ಕಲ್ಲುಗುಂಪಿಯ ಮೇಲೆ ಕುಳಿತುಕೊಂಡರು. ಬಳಿಕ ಉಜ್ಜುಗಡ್ಡಿಯನ್ನು ಲಿಂಗಾರ್ಪಣಮಾಡುವದಕ್ಕಾಗಿ ಕರಡಿಗೆಯೊಳಗಿನ

ಇಷ್ಟಲಿಂಗವನ್ನು ಹೊರಗೆ ತೆಗೆಯಲು, ಕೈತಪ್ಪಿ ಉರುಳಿ ಲಿಂಗವು ನದಿಯೊಳಗೆ ಮುಳುಗಿಹೋಯಿತು. ಅದನ್ನು ಕಂಡು ಕಡುಮರುಗಿ ಅದೇ ಶಿಲಾಸಮೂಹದ ಮೇಲೆಯೇ ಹಾಗೆಯೇ ಸಮಾಧಿಸ್ಥರಾಗಿ ಕುಳಿತು ಬಿಟ್ಟರು. ಶ್ವಾಸೋಚ್ಛ್ವಾಸಗಳಿಲ್ಲ; ಚಲನವಲನಗಳಿಲ್ಲ. ಆಗ ಇದನ್ನು ಕಂಡವರು ಊರೊಳಗೆ ಹೇಳಿದರು. ಬಹುಜನರು ಹರಿದು ಬಂದು ನಮಸ್ಕರಿಸಿ ಮೇಲೆ ಹಂದರಹಾಕಿ ಕಾಯ ತೊಡಗಿದರು. ದಿನಗಳು ಒಂದರ ಮೇಲೊಂದು ಕಳೆದು ಹೋದಂತೆ ಸುತ್ತಲಿನ ಊರುಗಳ ಜನರೂ ನೆರೆಯತೊಡಗಿದರು. ನೆರೆನೆರೆದು ಅಲ್ಲಿಯೇ ನಿಲ್ಲತೊಡಗಿದರು. ಹೆಚ್ಚಿನ ಲಾಭಕ್ಕಾಗಿ ಜನರ ನೆರವನು ಬಯಸುವ ಕೈಗಾರಿಕೆಯವರು ತಂಡು ತಂಡಾಗಿ ಬಂದು ಕೂಡಿದರು. ಜನರ ಸುಖದ ಕಾಲಕ್ಷೇಪಕ್ಕಾಗಿ ಆಟ ನೋಟಗಳು ನಡೆದವು. ದೊಡ್ಡ ಜಾತ್ರೆಯ ಭರವನ್ನು ಹೀಯಾಳಿಸುವಂತೆ ಆ ಜನಸಂಘವು ಸೊಬಗಿನಿಂದ ಮೆರೆಯುತ್ತಿತ್ತು. ಆದರೆ ಮಹಿಮರ ಲೀಲೆಯು ಅದೆಲ್ಲಿಗೆ ಪರ್ಯವಸಾನವನ್ನು ಹೊಂದುವದೆಂಬದನ್ನು ಯಾರು ಬಲ್ಲರು? ಮಲಾಪಹಾರಿಯು ಅಕಸ್ಮಾತ್ತಾಗಿ ತುಂಬಿ ಬಂದಿತು. ಆ ಮಹಾಪೂರದ ರಭಸಕ್ಕೆ ಜನರು ದಿಕ್ಪಾಪಾಲಾದರು. ಶಿವಯೋಗಿಗಳ ಯೋಗಭಂಗಕ್ಕಾಗಲಿ, ಕರೆದೊಯ್ಯಲಾಗಲಿ ಯಾರೂ ಇಚ್ಛಿಸಲಿಲ್ಲ. ಏನೊಂದು ವಿಚಾರವಿಲ್ಲದೆ ದೇಹಮೋಹಕ್ಕೊಳಪಟ್ಟ ಆ ಜನರೆಲ್ಲರು ಹರಿದುಹೋಗಿಬಿಟ್ಟರು. ನದಿಯನೀರು ಯತಿಯ ಸ್ಥಾನವನ್ನು ದಾಟಿ ಏರಿ ಬಂದಿತು. ಯತಿಗಳು ಮುಳುಗಿ ಕಾಣದಂತಾದರು. ಹಂದರವು ಕಿತ್ತೋಡಿತು. ಭಕ್ತರೆಲ್ಲರು ಮರುಗಿ ಗೋಳಿಟ್ಟರು. 'ಅಯ್ಯೋ? ಸ್ವಾಮಿಗಳು ಹೋದರು; ಪೂಜ್ಯಪಾದಗಳು ಮರೆಯಾದವು; ನಿರಂತರವೂ ಸೇವಿಸಿ ಆನಂದಪಡುತಲಿದ್ದೆವು, ನಾವೆಷ್ಟು ಪಾಪಿಗಳು? ಈ ನದೀಲಲನೆಯು ದುಷ್ಕರ್ಮಕಾರಿಯಾದ ಚಾಂಡಾಲಿನಿಯು. ಇವಳು ಮಲಾಪಹಾರಿಯಲ್ಲ; ವಿಮಲಕೀರ್ತಿಯುತನಾದ ಗುರುವನ್ನೊಯ್ದು ಅಮಲಾಪಹಾರಿ ಎಂಬ ಹೆಸರಿಗೇ ತಕ್ಕವಳಾದಳು. ದೃಷ್ಟಿಮಾತ್ರದಿಂದ ಪಾಪಪರಿಹಾರವನ್ನು ಮಾಡುವ ಈ ಶಿವ

ಯೋಗಿಯು ತನಗಿಂತ ಮೇಲಾದವನೆಂದು ಅಸೂಯೆಯಿಂದ ಗುರುವರನನ್ನು ಕೊಂದೊಯ್ದಳು. ಗುರುವೆ, ತೊರೆದೆಯಾ? ಹರನೆ, ಕರೆದೊಯ್ದೆಯಾ? ಪುಣ್ಯದ ಬರವು ಧರೆಗೆ ತೋರಿತೇ? ನಮ್ಮ ಪ್ರಾರಬ್ಧವೇ?'' ಎಂದು ಇನ್ನೂ ಹಲವು ಬಗೆಯಾಗಿ ಚಿಂತಿಸಿ ದುಃಖಿಸಿದರು.

"ಮುಂದೆ ನಾಲ್ಕಾರು ದಿನಗಳಲ್ಲಿ ನದಿಯಿಳಿಯಿತು; ಮಹಾಪೂರದಿಂದ ಹರಿದುಬಂದ ಮಣ್ಣುಮಳಲಾಗಿ ಎರಡೂ ದಂಡೆಗಳಲ್ಲಿ ತೆರಪಿಲ್ಲದೆ ನಿಂತು ಬಿಟ್ಟಿತ್ತು. ಸ್ವಾಮಿಗಳು ಕುಳಿತ ಕಲ್ಲುಗುಂಪಿಯೂ ಮುಚ್ಚಿಹೋಗಿತ್ತು. ಒಮ್ಮೆ ಗೋಪಾಲಕರು ಆ ಸ್ಥಳಕ್ಕೆ ಹೋದಾಗ ಒಬ್ಬ ಬಾಲಕನು ನಮ್ಮ ಸ್ವಾಮಿಗಳು ಇಲ್ಲಿಯೇ ಕುಳಿತಿದ್ದರೆಂದೂ, ಮತ್ತೊಬ್ಬನು ಅದಲ್ಲ ಇಲ್ಲಿಯೆಂದೂ, ಇನ್ನೊಬ್ಬನು ಅಲ್ಲಲ್ಲ, ಇಲ್ಲಿಯೆಂದೂ, ಕೈಗೊಂದು ಕಲ್ಲು ಒಗೆದೊಗೆದು ಕೆಸರಿನಲ್ಲಿ ಸ್ಥಳವನ್ನು ತೋರಿಸುತ್ತಿದ್ದರು. ಆಗಲೊಂದು ಕಲ್ಲಿನಿಂದ 'ಕಟ್' ಎಂದು ಸಪ್ಪಳವಾಯಿತು. ಅದನ್ನು ಕೇಳಿ ಕುತೂಹಲದಿಂದ ಆತನು ಮತ್ತೊಂದು ಕಲ್ಲನ್ನು ನೋಡ ಹೊಡೆದನು. ಕೂಡಲೆ ಜಟಾಮಂಡಲವು ಹೊರಬಿದ್ದು ಕಾಣ ಹತ್ತಿತು. ಕೂಡಲೆ ಹುಡುಗರು ಓಡಿ ಬಂದವರೇ ಊರಲ್ಲಿ ಹರಿಬಿದ್ದು ಹೇಳಿಬಿಟ್ಟರು. ಅದರಿಂದ ಎಲ್ಲೆಲ್ಲಿಯೂ ಆನಂದ! ಆಶ್ಚರ್ಯ! ಆತುರ!! ಜನರು ಗುಂಪಾಗಿ ಹರಿದು ಬಂದರು. ಕೆಸರನಗಿದ. ಬಯಲ ಮಾಡಿದರು. ಮೈಯ ತೊಳೆದರು. ಸಾಷ್ಟಾಂಗವಾಗಿ ಎರಗಿದರು. ಯೋಗಿಗಳು ಕಣ್ದೆರೆದರು. ಜನರು 'ಜಯ ನಮಃ ಪಾರ್ವತಿ ಪತೇ ಮಹಾದೇವ' ಎಂದು ಪ್ರಾರ್ಥನೆ ಮಾಡಿದರು. ತನ್ನನ್ನು ಹೊತ್ತು ಕಾಪಾಡುವ ಶಿವನನ್ನು ಗಂಗೆಯು ಕಾಪಾಡಳೇ ಎಂದು ಜನರು ಆನಂದದಿಂದ ವಿನೋದ ಮಾಡಿದರು. ಬಳಿಕ ಯತಿವರರು ಆ ಭಕ್ತಾಗ್ರೇಸರರನ್ನು ಕುರಿತು— "ನಾಳೆ ಮಧ್ಯಾಹ್ನದಲ್ಲಿ ಅಗಲಿ ಹೋದ ಲಿಂಗಯ್ಯನು ಮರಳಿ ಬಂದು ಕೂಡಿಕೊಳ್ಳುವನು. ಆಗ ನೀವೆಲ್ಲರೂ ಇಲ್ಲಿಗೆ ಬನ್ನಿರಿ" ಎಂದು, ಕಳಿಸಿ ಪುನಃ ಯೋಗಾಸಕ್ತರಾದರು.

"ಜನರೆಲ್ಲರಿಗೆ ಅದೆಷ್ಟು ಆನಂದ! ಅದೆಷ್ಟು ಉತ್ಸಾಹ!! ಅದೆಷ್ಟು ಕೌತುಕ!!! ವರ್ಣಿಸಲಸಾಧ್ಯವಾಗಿತ್ತು. ಅವರಿಗೆ ಬೆಳಗಾಗುವದು ಮೊದಲು ತಡವಾಯಿತು. ಬಳಿಕ ಸೂರ್ಯನೇರುವದು ತಡವಾಯಿತು. ಯತಿವರರ ಅಪ್ಪಣೆಯಂತೆ ಸಾವಿರಾರ ಜನರು ಗೊತ್ತಾದ ವೇಳೆಗೆ ಸರಿಯಾಗಿ ನದೀತೀರಕ್ಕೆ ಬಂದು, ಎರಗಿ ನುತಿಸಿ ನಿಂತರು. ಆಗ ಲಿಂಗದ ಹುಳುವು ನೀರ ಮೇಲೆ ನಲಿದಾಡುವಂತೆ ಲಿಂಗಯ್ಯನು ಪ್ರಣವಾಕೃತಿಯಿಂದ ಸುಳಿದಾಡಿ ಹರಿದು ಬಂದು ಯೋಗಿಗಳ ಪಾಣಿಪೀಠವನೇರಿದನು. ಲಿಂಗಾಂಗಿಗಳು ಪ್ರತ್ಯಕ್ಷವಾಗಿ ಕಂಡು ಧನ್ಯರಾದರು. ಭವಿಗಳ ಕಣ್ಣು ಕಾಣಲೇ ಇಲ್ಲ. "ಇಷ್ಟಲಿಂಗದ ಬಹಿಸ್ಸೂತ್ರವು ಅಗಲಿದರೇನು? ಅಂತರಂಗದ ಶ್ರದ್ಧಾಭಕ್ತಿರೂಪದ ಅಂತಸ್ಸೂತ್ರದಿಂದ ಕಟ್ಟಿದ ಲಿಂಗವು ಅಗಲುವದುಂಟೆ? ಚರಮಹಿಮೆಯನ್ನು ತೋರುವದಕ್ಕಾಗಿ ಇಂತು ಮಾಡಿದರಲ್ಲದೆ ಬೇರೆಯಲ್ಲವು" ಎಂದು ಗುರುಮಹಿಮೆಯನ್ನು ಹೊಗಳಿ ಭಕ್ತರು ಆನಂದರಸದೊಳು ಲೋಲಾಡಿದರು. ಬಳಿಕ ಸ್ವಾಮಿಗಳನ್ನು ಮಠಕ್ಕೆ ಕರೆತಂದರು. ಸಂಭ್ರಮದಿಂದ ಅನ್ನಸಂತರ್ಪಣೆಯನ್ನು ಮಾಡಿದರು. ಆ ಮಹಾಘಟನೆಯ ಸುದ್ದಿಯು ಸುತ್ತಲೂ ಪಸರಿಸಿತು.

"ಚರೋತ್ತಮ, ಲಿಂಗವು ಅಂತಸ್ಸೂತ್ರದಿಂದ ಅಗಲಿದುದೇ? ಅಗಲಿದರೆ ಬರಲುಂಟೆ? ಆ ಮಹಿಮರು ಶಿವಯೋಗಸಾಮರ್ಥ್ಯದಿಂದ ಅಗಾಧಲೀಲೆಯನ್ನು ತೋರಿಸಿದರು. ಆ ಪ್ರಭುವರನ ಗದ್ದುಗೆಯ ನೇರಿದ ನೀನು ಮನಬಂದಂತೆ ಹುಡುಗಾಟಿಕೆಯಿಂದ ನಡೆಯುವದು ಲಘುತರವಾದದ್ದು. ಬ್ರಹ್ಮಕಲ್ಪದ ವರೆಗೂ ಪದವಿಯನ್ನು ಬಯಸದೆ, ವಿಷಯಗಳನ್ನು ವಿಷದಂತೆ ತಿಳಿದು ತ್ರಿಕರಣಗಳಿಂದಲೂ ದೂರಿರುವದೇ ವಿರತಿಮಾರ್ಗವು. ಪತಿವ್ರತೆಯಾದರೂ ಪುಸಿಯಿಂದಲೂ, ಚಂಚಲತೆಯಿಂದಲೂ ಗೌರವಹೀನಳಾಗುವಳು. ನೀನು ಲಿಂಗಾರ್ಚನಾಸಕ್ತನಾದರೂ ಹೊನ್ನುಹೆಣ್ಣುಮಣ್ಣುಗಳನ್ನು ಬಿಡದಿದ್ದರೆ ಕೀರ್ತಿಹೀನ

ನಾಗುವೆ. ನಿರಂತರವೂ ಯೋಗದೊಳಿರು. ಅದರಿಂದಲೇ ಸಕಲವೂ ಸಿದ್ಧಿಸುವವು" ಎಂದು ಹಿತವಚನಗಳನ್ನು ಆಡಿದರು.

ಬಳಿಕ ಅವರು ಮರಳಿ ಹಾಲಕೆರೆಗೆ ಹೊರಟರು. ಮಾರ್ಗದಲ್ಲಿ ಅನ್ನದಾನೀಶ್ವರರು ಕುಳಿತ ಕುದುರೆಯು ತುಂಟತನದಿಂದ ಜಿಗಿದಾಡಿ ಸ್ವಾಮಿಗಳನ್ನು ತೂರಿ ಚೆಲ್ಲಿತು. ತತ್‌ಕ್ಷಣವೇ ಮಡಿವಾಳಯೋಗಿಗಳು 'ಹಾ, ಬಿದ್ದೆ, ಬಿದ್ದೆಯಯ್ಯಾ!' ಎಂದು ಗಾಬರಿಯಿಂದ ನುಡಿಯು ತ್ತಿದ್ದರು, ಆದರೆ ಅದೇನು ಚಪಲತೆಯೋ ಲೀಲೆಯೋ ತಪಶ್ಶಕ್ತಿಯೋ ಅವರ ಬಾಯಿಂದ ಇವೆರಡೇ ಶಬ್ದಗಳು ಹೊರಬೀಳುವಷ್ಟರಲ್ಲಿ ಅನ್ನ ದಾನೀಶ್ವರರು 'ಇಲ್ಲ, ಬೀಳಲಿಲ್ಲ.' ಎನ್ನುತ್ತ ಮತ್ತೆ ಕುದುರೆಯ ಮೇಲೆಯೇ ಕಂಡರು. ಕುದುರೆಯು ಸಮಾಧಾನದಿಂದ ಸಾಗಿತ್ತು. ಇದನ್ನು ಕಂಡು ಮಡಿವಾಳಶಿವಯೋಗಿಗಳು ಸಾನಂದಾಶ್ಚರ್ಯದಿಂದ ಕುದುರೆಯನ್ನು ಇಳಿದು ಅನ್ನದಾನಿಗಳನ್ನು ಸನ್ಮಾನಿಸಿ—"ಚರಮರೇ ಣ್ಯನೇ, ನಿನ್ನ ಅಂತಶ್ಶಕ್ತಿಯು ಅಗಾಧವಾದದ್ದು. ನೀನು ಯೋಗ ಬಲದಿಂದ ಅಸಾಧಾರಣವಾದ ಚಪಲತೆಯನ್ನು ತೋರಿಸಿ ಬಿಟ್ಟೆ! ನೀನು ಶಿವಯೋಗಸಿದ್ಧನಹುದು!! ನಿನ್ನ ಗುರು ಮುಪ್ಪಿನಬಸವಲಿಂಗ ದೇವನೊಮ್ಮೆ ಅಗಾಧವಾದ ಲೀಲೆಯನ್ನು ತೋರಿಸಿದ್ದನು. ಆತ ನೊಮ್ಮೆ ಕುದುರೆಯ ಮೇಲೆ ಚಿತ್ರಗಿಗೆ ಹೊರಟಿದ್ದನು. ದಾರಿಯು ಅಮೀನಗಡದ ಮೇಲೆ. ಆ ಊರನ್ನು ದಾಟುವಾಗ ಕುದುರೆಯು ಅಕಸ್ಮಾತ್ತಾಗಿ ಹಟಗಾರ ಓಣಿಯಲ್ಲಿ ಹಾಯ್ದು ನಡೆಯಿತು. ಕುದು ರೆಯನ್ನೇರಿ ತಮ್ಮ ಓಣಿಯಲ್ಲಿ ಹಾಯುವದು ಆ ಜನರಿಗೆ ಅಪಮಾ ನವಂತೆ. ಆದರಿಂದ ನಾಲ್ಕೆಂಟು ಜನ ತುಂಟರು ಬಂದು ಹಿಡಿದರು. ಇಳಿಯೆಂದು ಗದ್ದರಿಸಿದರು. ಆದರೆ ಈ ವರೆಗೆ ಕುಳಿತು ಬಂದು ನಡು ಓಣಿಯಲ್ಲಿ ನೆರೆದ ಮಂದಿಯಲ್ಲಿ ಕೆಳಗೆ ಇಳಿಯುವದೆಂತು? ಆ ಯೋಗಸಿದ್ಧನು ಸ್ಥಿರಚಿತ್ತದಿಂದ ಯೋಚಿಸಿ, ಕಡಿವಾಣವನ್ನು ಮುಂದೆ ಹಾರಿಸಿ ಬಿಸುಡಿ ಕುದುರೆಯನ್ನು ತೊಡೆಯಲ್ಲಿ ಅಮುಕಿದನು. ಕೂಡಲೆ

ಕಡಿವಾಣವು ಆ ಜನರ ಕೈಯಲ್ಲಿ ಉಳಿಯಿತು, ಕುದುರೆಯು ಜಿಗಿದು ಓಡಿಬಿಟ್ಟಿತು! ಛಲಕ್ಕೆ ಬಿದ್ದ ಆ ಜನರು ಬೊಣ್ಣೆಗಳನ್ನು ತೆಗೆದುಕೊಂಡು ಭರದಿಂದ ಬೆನ್ನಟ್ಟಿದರು. ಎಷ್ಟು ದೂರ ಬಂದರೂ ಓಡುವ ಕುದುರೆಯು ಸಿಗಬಲ್ಲದೇ? ಆದರೆ ಮುಂದೆ ತುಂಬಿಹರಿಯುವ ಮಲಾಪಹಾರಿಣೀ ನದಿಯು. ನದಿಯ ಸಮೀಪದ ವರೆಗೆ ಬೆನ್ನಟ್ಟಿ ಬಂದ ಆ ಜನರು “ಸಿಕ್ಕನಯ್ಯನು! ಇನ್ನೆಲ್ಲಿ ಹೋಗುವನು?” ಎಂದು ಬೊಬ್ಬಿರಿದರು. ಆದರೆ ಅಯ್ಯನ ಅಳವನ್ನು ಅವರೇನು ಬಲ್ಲರು? ಓಡಿ ಬಂದ ಕುದುರೆಯು ಹಾಗೆಯೇ ಪ್ರವಾಹವನ್ನೇ ಹೊಕ್ಕಿತು. ಹೋಗ ಹೋಗುತ್ತ ಮುಳುಗಿ ಕಾಣದಂತಾಯಿತು. ಓಡಿ ಬಂದ ಆ ಬಂಟರು ತೀರದ ಮೇಲೆ ನಿಂತರು. ಅವರೇನೋ “ಹೇವಕ್ಕೆ ಬಿದ್ದ ಜಂಗಮನು ನದಿಯಲ್ಲಿ ಮುಳುಗಿ ಹೋದನು! ನೋಡಿದಿರಾ ಶೂರತನವನ್ನು!!” ಎಂದಂದುಕೊಳ್ಳುತ್ತಿದ್ದರು, ಅಷ್ಟರಲ್ಲಿ ಆಚೆಯ ದಂಡೆಗೆ ಸ್ವಾಮಿಯೊಡನೆ ಹೊರಬಿದ್ದ ಕುದುರೆಯು ಚಟಪಟನೆ ಕಿವಿಜಾಡಿಸಿ ಓಡಿಹೋಗುವದು ಅವರ ಕಣ್ಣಿಗೆ ಬಿತ್ತು. ಅದರಿಂದ ಆಶ್ಚರ್ಯಗೊಂಡು ಆ ಜನರು “ಅಬ್ಬಬ್ಬಾ! ಇವನೆಂಥ ಮಹಾತ್ಮನು ಕಂಡಿರಾ? ನಾವು ತಿಳಿಯದಾದೆವು” ಎಂದು ಆ ದಿಕ್ಕಿಗೆ ದಂಡಪ್ರಣಾಮವನ್ನು ಮಾಡಿ ತಿರುತಿರುಗಿ ನೋಡುತ್ತ ಮರಳಿ ಹೊರಟರು. ಅನ್ನದಾನೀಶಾ, ಹೇಳುತ್ತ ಹೋದರೆ ಈ ಮುಪ್ಪಿನಬಸವಲಿಂಗಾರ್ಯನ ಮಹಿಮಾದರ್ಶಕ ವರ್ತನಗಳು ಎಷ್ಟೋ ನೆನಪಾಗುವವು. ಒಮ್ಮೆ ಆತನು ಪಾದಚಾರಿಯಾಗಿ ಹೊರಟಿರುವಾಗ ತುಂಬಿದ ನದಿಯನ್ನು ದಾಟಬೇಕಾಯಿತು. ನಾವಿನ ಅನುಕೂಲವಲ್ಲಿದ್ದಿಲ್ಲ. ಕೂಡಲೆ ಆತನು ಕ್ಷಣಹೊತ್ತು ದಿಟ್ಟಿಸಿ ನೋಡಿ ತಲೆಯ ಮೇಲಿನ ಕೊಪ್ಪಿಯನ್ನು ತೆಗೆದು ನೀರ ಮೇಲೆ ಗದ್ದುಗೆ ಹಾಕಿದನು; ಮೇಲೆ ಕುಳಿತನು; ಮಾರ್ಗಸ್ಥರು ನೋಡನೋಡುತ್ತಿರಲು ಸಿಂಗಡಿಯನೇರಿದವನಂತೆ ನದಿಯನ್ನು ದಾಟಿ ಹೋದನು. ಆತನ ತಪಶ್ಶಕ್ತಿಯು ಅಷ್ಟು ಅಮೋಘವಾದದ್ದಿತ್ತು. ಆ ಮಹಿಮನ ಹಸ್ತಜಾತನಾದ ನೀನೂ ಇಂದು ಸರ್ವತ್ರ ಮನಸನ್ನು

ತಣಿಸಿದೆ. ಪ್ರಭುದೇವಪರಂಪರೆಗೆ ನೀನು ಸಾರ್ಥಕನಾದೆ” ಎಂದು ಕೊಂಡಾಡಿದರು. ಬಳಿಕ ತಮ್ಮ ಟೊಪ್ಪಿಗೆಯನ್ನು ತೆಗೆದು ಅವರ ತಲೆಯಮೇಲಿಟ್ಟು—“ಗುರೂತ್ತಮನ ಮುಕುಟವಿದು, ಇದರಿಂದಲೇ ಸಕಲಶುಭವಾಗುವದು, ಬಿಡದಿರಿದನು.” ಎಂದು ಮತ್ತೆ ಹೊನ್ನಪ್ಪಗೌಡನನ್ನು ಕುರಿತು—‘ನಿಮ್ಮ ಪೂರ್ವಪುಣ್ಯದ ಬಲದಿಂದ ನಿಮಗೆ ಇಂಥ ಚರೋತ್ತಮನ ಪಾದದೆಡೆಯು ದೊರೆತಿದೆ. ಈತನು ಯುಕ್ತಿವಂತನು; ಜಿತೇಂದ್ರಿಯನು; ಲಿಂಗಾಸಕ್ತನು; ಕಲಾವಿದನು; ಶಾಂತನು; ಅಲ್ಲದೆ ಷಟ್‌ಸ್ಥಲಜ್ಞಾನಿಯೂ ಆಗಿರುತ್ತಾನೆ. ಸಂದೇಹವಿಲ್ಲ. ಇವನನ್ನು ಹೊಂದಿ ಮುಕ್ತಿಯನ್ನು ಪಡೆಯಿರಿ” ಎಂದು ಮುಂದೆ ನಡೆದು ಬಿಟ್ಟರು.

ಈ ಪ್ರಸಂಗಗಳಲ್ಲಿ ಹೊನ್ನಪ್ಪಗೌಡನು ಹಲವು ಕೌತುಕದ ಸಂಗತಿಗಳನ್ನು ಕಂಡನು. ಆತನು ಮನದಲ್ಲಿ—‘ಮಡಿವಾಳಶಿವಯೋಗಿಗಳು ಬರುವರೆಂದು ಈ ಅನ್ನದಾನೀಶ್ವರನು ಮೊದಲೇ ತಿಳಿದು ಹೇಳಿದನು. ಇವನು ಹುಡುಗರೊಡನಾಡುವುದನ್ನು ಅವನು ಮೊದಲೇ ತಿಳಿದಿದ್ದನು. ಅರಿದರಿದು! ಶಿವಯೋಗಿಗಳ ಮಹಿಮೆಯು ತಿಳಿಯಲರಿದು! ನಮ್ಮ ಅನ್ನದಾನೀಶ್ವರ ಸ್ವಾಮಿಯು ಸಾಧಕನೆಂದು ತಿಳಿದಿದ್ದೆವು. ನಮ್ಮ ಬುದ್ಧಿಗೆ ಧಿಕ್ಕಾರವಿರಲಿ! ಈತನು ನಿಜವಾಗಿಯೂ **ಶಿವಯೋಗಸಿದ್ಧನಹುದಹುದು!**” ಎಂದು ಹೊಗಳಿದನು.

೬. ಭಕ್ತಿಪಾಶದ ಎಳೆತ.

ಹಾಲಗೇರಿಯ ಮಠದಲ್ಲಿ ಸಾಧಾರಣ ತರದ್ದೊಂದು ಕೋಣೆಯು. ಅದು ಅಷ್ಟು ಸಣ್ಣದೂ ಅಲ್ಲ; ದೊಡ್ಡದೂ ಅಲ್ಲ; ಅದರ ಗೋಡೆಗಳಿಗೆ ಒಳಗೂ ಹೊರಗೂ ಸುಣ್ಣಬಣ್ಣಗಳಿಲ್ಲ; ಅವು ಕೇವಲ ಗೋಮಯದಿಂದಲೇ ಲೇಪಿತವಾದವುಗಳಿದ್ದವು. ಆದರೂ ನುಣುಪಾಗಿ ಪಾವಿತ್ರ್ಯತೆಯ ಸೊಬಗಿನಿಂದ ಕಂಗೊಳಿಸುತ್ತಿದ್ದವು. ಅದರ ಬಾಗಿಲವು ಒಬ್ಬರೇ ಬಾಗಿ ಹಾಯ್ದು ಹೋಗಬಹುದಾದಷ್ಟು ಸಣ್ಣದು; ಅದರ ಮಧ್ಯದಲ್ಲಿ ಪೀಠವು; ಮೇಲೆ ಪುಲಿದೊವಲ ಪಾಸು; ಅದರದೊಂದು ಮಗ್ಗಲಿಗೆ ಯೋಗದಂಡ ಮೊದಲಾದ ಒಂದೆರಡೇ ಒಡವೆಗಳು; ಒಳಗೆಲ್ಲ ಶ್ರೀಗಂಧಚಂದನಾದಿಗಳ ಪರಿಮಳವು ಇಡಗಿರುತ್ತಿತ್ತು. ಈ ಪರಮಶ್ರೇಷ್ಠವಾದ ಏಕಾಂತದ ಕೋಣೆಯೇ ಅನ್ನದಾನೀಶ್ವರರ ಯೋಗಾನುಷ್ಠಾನದ ಸ್ಥಳವು! ಶಿವಯೋಗಮಂಟಪವು!!

ಚಿತ್ತವೃತ್ತಿಯನ್ನು ನಿರೋಧಿಸುವದೇ ಯೋಗಕ್ಕೆ ಸಾಧನವು. ಲಿಂಗಾಂಗಸಾಮರಸ್ಯಜ್ಞಾನವೇ ಸಾಧ್ಯವು. ಈ ಚಿತ್ತನಿರೋಧದಿಂದ ಆ ಜ್ಞಾನವನ್ನು ಸಾಧ್ಯಮಾಡಿಕೊಂಡರೆ ಅಂದರೆ ಇವೆರಡರ ಪರಸ್ಪರ ಸಂಬಂಧವಾದರೆ ಯೋಗವಾಗುವದು. ಯೋಗಸಾಧನಗಳಲ್ಲಿ ವಾಯುನಿರೋಧವ ಮಾಡುವ ಹಠಯೋಗಸಾಧನವು, ದೃಷ್ಟಿನಿರೋಧವ ಮಾಡುವ ತಾರಕಯೋಗಸಾಧನವು, ಮನೋನಿರೋಧವ ಮಾಡುವ ಮನಸ್ಕಯೋಗಸಾಧನವು ಎಂದು ಮೂರು ಪ್ರಕಾರಗಳು. ಇವುಗಳಲ್ಲಿ ಹಠಯೋಗವು ಕ್ರಮ ಹಿಡಿದು ಮಾಡಿದರೆ ತೀವ್ರ ಸಿದ್ಧಿಸುವದು; ಕ್ರಮ ತಪ್ಪಿದಲ್ಲಿ ತೀವ್ರ ಅಪಾಯವನ್ನುಂಟು ಮಾಡುವದು. ತಾರಕಯೋಗಸಾಧನವು ಅಪಾಯವಿಲ್ಲದೆ ಮೆಲ್ಲಮೆಲ್ಲನೆ ಕಾಲಾವಧಿಯಿಂದ ಸಿದ್ಧಿಸುವದರಿಂದ ಸುಲಭಸಾಧ್ಯವು. ಮನಸ್ಕಯೋಗವು

ಅಪೂರ್ಣವಾಗಿಯೂ ಚಂಚಲವಾಗಿಯೂ ಇರುವದರಿಂದ ಸುಲಭ ಸಾಧ್ಯವಲ್ಲ. ಆದ್ದರಿಂದ ವೀರಶೈವರು ಮುಖ್ಯವಾಗಿ ತಾರಕಯೋಗ ವನ್ನೇ ಆಚರಿಸುವರು. ಯೋಗಸಾಧನಕೆ ಎಲ್ಲರೂ ಅಧಿಕಾರಿಗಳು. ಅವರಲ್ಲಿ ವಿಶಿಷ್ಟತನವನ್ನು ಪಡೆದವರು ಯಾರೂ ಇಲ್ಲ. ಬೇಕಾದವರು ಆಚರಿಸಿ ನ್ಯೂನತೆಯನ್ನು ನೀಗಬಹುದು. ಶಿವನು ಮಾನವರಿಗಾಗಿ ವೇದಗಳಲ್ಲಿ ಯೋಗವನ್ನು ಅನೇಕ ಭೇದಗಳಿಂದ ಬೋಧಿಸಿರುವನು. ಗುರುವರನು ಅಧಿಕಾರತಾರತಮ್ಯಾನುಗುಣವಾಗಿ ಒಂದೊಂದು ರೀತಿ ಯನ್ನು ಬೋಧಿಸಿ ಅನುಗ್ರಹಿಸಬೇಕು.

ಕರಣಗಳ ಉರವಣೆಯಡಗಿ ಬಾಹ್ಯದೃಷ್ಟಿಗಳು ಒಳಗೆ ಹರಿದು ಭ್ರೂಮಧ್ಯದಲ್ಲಿ ಕೂಡಿ ತ್ರಿಕೂಟದಲ್ಲಿ ಪ್ರಾಣವಾಯುವು ನಿಂತರೆ ಮನಸ್ಸು ಆನಂದದೊಡನೆ ಕೂಡಿ ಪರಿಣಮಿಸುವದು. ಯತಿಗಳು ಇಂಥ ಶಿವಯೋಗಸಾಮ್ರಾಜ್ಯದ ಸುಖವನ್ನು ಅವಿಚ್ಛಿನ್ನವಾಗಿ ಅನು ಭೋಗಿಸುವರು. ಇದಲ್ಲದೆ ಅಂತರಂಗದಲ್ಲಿ ಮೂಲಮಂತ್ರದ ನಾದವು ಉದ್ಭವಿಸಿ ಮನವು ಅದರೊಡನೆ ಮಗ್ನವಾದೊಡನೆ ಅಗಣಿತವಾದ ದಿವ್ಯತೇಜಸ್ಸು ಉದ್ಭವಿಸಿ ತುಂಬಿ ಲಿಂಗಾನಂದವಾಗುವದು. ಶಿವ ಯೋಗಿಗಳು ಆ ಮಹಾಲಿಂಗದಲ್ಲಿ ಲೀನವಾಗಿ ಆ ಚಿತ್‌ಸುಧಾರಸ ಶರಧಿಯಲ್ಲಿ ಮುಳುಗಿ ಎಚ್ಚರವಿಲ್ಲದವರಾಗುವರು. ಉತ್ತಮೋತ್ತಮ ವಾದ ಸುಖಗಳನ್ನು ಬಯಸದೆ ಅನುಭವಿಸುವರು. ಇಂಥ ಶ್ರೇಷ್ಠ ತಮವಾದ ಶಿವಯೋಗದ ಮಹಿಮೆಯನ್ನು ಮನಮುಟ್ಟಿ ತಿಳಿದು ಅನ್ನದಾನೀಶ್ವರಸ್ವಾಮಿಗಳು ಅದನ್ನು ಆಚರಿಸುತ್ತಿದ್ದರು.

ಸ್ವಾಮಿಗಳು ಶಿವಯೋಗಮಂಟಪವನ್ನು ಹೊಕ್ಕು ಯೋಗಾ ರೂಢರಾದ ಕೂಡಲೆ ಫಣಿಯಮ್ಮನು ಬಾಗಿಲಲ್ಲಿ ಕೈಮುಗಿದುಕೊಂಡು ಶಿವಮಂತ್ರವನ್ನು ಪಠಿಸುತ್ತ ಕುಳಿತುಕೊಳ್ಳುತ್ತಿದ್ದಳು. ಹೀಗಿರುವಾಗ ಆಕೆಗೆ ಮನೆಯ ಇಲ್ಲವೆ ಗಂಡನ ಅಥವಾ ಮಕ್ಕಳ ಪರಿವೆಯೇ ಇರು ತ್ತಿದ್ದಿಲ್ಲ. ಹಸಿವೆ-ನೀರಡಿಕೆ-ನಿದ್ರೆಗಳ ಬಾಧೆಯೇ ಆಗುತ್ತಿದ್ದಿಲ್ಲ. ಸ್ವಾಮಿಗಳು ಒಮ್ಮೊಮ್ಮೆ ನಾಲ್ಕು, ಆರು, ಒಂಭತ್ತು, ಹತ್ತು ದಿನಗಳ

ವರೆಗೆ ಅಖಂಡವಾಗಿ ಯೋಗಾರೂಢರಾದರೂ ಫಣಿಯಮ್ಮನ ಆ ಕ್ರಮದಲ್ಲಿ ಸ್ಥಿರವಾದ ಮನಸ್ಸು ಎಂದೂ ಚಲಿಸುತ್ತಿದ್ದಿಲ್ಲ. ಆಕೆಯು 'ತನುವು ಗುರುಸೇವೆಗೆ ಸವಿಯಬೇಕು. ಮನವು ಶಿವಲಿಂಗ ಪೂಜೆಯಲ್ಲಿ ನೆಲೆಗೊಳ್ಳಬೇಕು. ಧನವು ಜಂಗಮದಾಸೋಹಕ್ಕೆ ಸಲ್ಲಬೇಕು. ಹೀಗಲ್ಲದೆ ಪೂರ್ವಪುಣ್ಯದಿಂದ ದೊರೆತ ಈ ಕರಣೋಪಕರಣಗಳನ್ನು ಕೇವಲ ಸಂಸಾರಕ್ಕಾಗಿಯೇ ಉಪಯೋಗಿಸುವದು ಅನುಚಿತವು. ಅದರಿಂದ ನನಗೆ ದೊರೆತ ಈ ಸೇವೆಯು ಘನವಾದದ್ದು' ಎನ್ನುತ್ತಿದ್ದಳು. ಬಹುಜನರು ತಮಗಿದ್ದುದರಲ್ಲಿ ಜಂಗಮಕ್ಕೆ ಕೊಟ್ಟು ಉಣಿಸಿ ತೃಪ್ತಿಬಡಿಸಿ ಅನುಕೂಲರಾಗಬಹುದು. ಆದರೆ ಈ ವೃದ್ಧಳು ಪತಿಸುತರ ಮೋಹವನ್ನೇ ತೊರೆದು, ಹಸಿವೆ ತೃಷೆ ನಿದ್ರೆಗಳನೆಣಿಸದೆ ನಿಶ್ಚಲಮನದಿಂದ ಸೇವೆಯನ್ನು ಮಾಡುತಲಿದ್ದಳು.

ಆ ಚರಮೂರ್ತಿಯು ಎದ್ದು ಹೊರಗೆ ಬಂದೊಡನೆಯೇ ಫಣಿಯಮ್ಮನು ಮನೆಗೆ ಹೋಗಿ ಕಾಲಮಾನಕ್ಕೂ ಗುರುವಿನ ಪ್ರಕೃತಿಗೂ ತಕ್ಕ ಸಾತ್ವಿಕಾಹಾರಗಳನ್ನು ಮಾಡಿಕೊಂಡು ಬಂದು ನಿರತಿಶಯ ಪ್ರೀತಿಯಿಂದ ಪಡೆದು ಉಣ್ಣಿಸುತ್ತಿದ್ದಳು. ಒಮ್ಮೆ ಅನ್ನದಾನೀಶ್ವರರು ಸಮಾಧಿಸುಖದಲ್ಲಿ ಬೆರೆದವರು ಹಾಗೆಯೇ ಹದಿಮೂರು ದಿನಗಳ ವರೆಗೆ ಕುಳಿತು ಬಿಟ್ಟರು. ಭಕ್ತಜನರು ಬೇರೆಬೇರೆ ತರದ ಊಹೆಗಳನ್ನು ಮಾಡಿ ಭಯಗೊಂಡರು. ಯಾಕೆಂದರೆ ಇಷ್ಟು ದೀರ್ಘಕಾಲ ಅವರು ಎಂದೂ ಒಂದೇಸಮನೆ ಸಮಾಧಿಸ್ಥರಾಗಿದ್ದಿಲ್ಲ. ಕಡೆಗವರು ಕೋಣೆಯ ಬಿನ್ನಗೋಡೆಯನ್ನು ಒಡೆದು ನೋಡಬೇಕೆಂದು ಹವಣಿಸಿದರು. ಆದರೆ ಹೊನ್ನಪ್ಪಗೌಡನು ಇದನ್ನರಿತು ಆ ಜನರಿಗೆ 'ಸರ್ವಸಮರ್ಥರಾದ ಶಿವಯೋಗಿಗಳ ಬಲವು ತರ್ಕಿಸಲಸಾಧ್ಯವು! ನೀವು ಮಾಡುವುದು ಮೂರ್ಖತನವಾದೀತು? ಬೇಡ, ಎಂದು ಸಿಟ್ಟುಮಾಡಿ ಬಿಡಿಸಿದನು. ಮರುದಿನ ಸ್ವಾಮಿಗಳು ಸಮಾಧಿಯನ್ನು ಇಳಿಸಿ ಹೊರಗೆ ಬಂದರು. ಕೂಡಲೆ ಫಣಿಯಮ್ಮನ ಅಖಂಡವಾದ ನಿಷ್ಠೆಯು ಮನಸ್ಸಿಗೆ ತಟ್ಟನೆ ಹೊಳೆಯಿತು. ಆಗ ಅನ್ನದಾನೀಶ್ವರರು—'ಅಮ್ಮಾ, ನಿನ್ನ ನಿಶ್ಚಲಭಕ್ತಿಗೆ

ನನ್ನ ಮನಸ್ಸು ಮೆಚ್ಚಿದೆ. ನಿನ್ನ ಇಷ್ಟಾರ್ಥವೇನು? ನೀನು ಅಪೇಕ್ಷಿಸಿದುದನ್ನು ಕೊಡಲು ನನ್ನ ಮನವು ಹಾತೊರೆಯುವದು.

ಫಣಿಯಮ್ಮನು— ಗುರುವೇ ಬೇಡದಿರುವಾಗ ಬೇಡಿದಿಷ್ಟಾರ್ಥವನ್ನು ಕೊಡುವೆನೆಂಬರೆ? ಕೊಡುಕೊಳ್ಳುವದಿದೇನು? ನಿನ್ನ ಪದಗಳನ್ನು ಗಟ್ಟಿಯಾಗಿ ನಂಬಿ ನಡೆದರೆ ಸಕಲವೂ ತಾನೆ ಸಿದ್ಧಿಸದೆ? ನಿನ್ನ ಕೃಪೆಯಿಂದ ನನ್ನ ಸರ್ವ ಇಚ್ಛೆಯೂ ಪೂರ್ಣವಾಗುತ್ತಲಿದೆ. ನಾನೊಂದು ವೇಳೆ ಬೇಡಿದರೆ ಕೊಡಬಹುದು. ಆದರೆ ಬೇಡದಿರುವ ನನ್ನ ಮನವನ್ನು ನೀನು ತಿಳಿಯಲಿಲ್ಲವೇಕೆ? 'ಬೇಡುವವರಿಲ್ಲದೆ ಅಂಗಮಿದು ಬಡವಾಯ್ತು' ಎಂದ ಬಸವರಾಜನಿಗೆ ಮಾಚಯ್ಯನಿಂದ ಕೇಡಾದುದನ್ನು ಅರಿಯೆಯಾ? ಈ ಹದನವನ್ನು ನೀನು ತಿಳಿಯದವನೂ ಅಲ್ಲ. ಹಾಗಿದ್ದರೆ ಅದನ್ನು ಮರೆದೆಯಾ? ಅಥವಾ ನನ್ನನ್ನು ಪರೀಕ್ಷಿಸುವೆಯೋ ಏನು? ತಂದೆ, ನಿನ್ನ ಮಗಳು ನಾನು, ಅಂದಮೇಲೆ ಕೂಲಿಗಾಗಿ ದುಡಿಯುವವಳೇ? ಫಲವನೆಳಸದೆ ದುಡಿದರೆ ಮಾತ್ರ ಭೋಗಮೋಕ್ಷಗಳೆರಡೂ ದೊರೆವವೆಂದು ನೀನೇ ಹೇಳುವೆ. ಚರವರ, ನನಗೆ ಇವುಗಳಿಗಿಂತ ಹೆಚ್ಚಾದ ನಿನ್ನ ಸೇವೆಯಿದೆ ಸಾಕು! ಇದಕ್ಕೂ ಅಧಿಕವಾದದ್ದು ಯಾವದು? ಇನ್ನುಳಿದ ಫಲವನ್ನೇನು ಅಪೇಕ್ಷಿಸುವೆನು?

ಅನ್ನದಾನೀಶ್ವರ— ತಾಯೀ, ನಾನೆ ಕೊಡುವೆನೆಂದು ಎಂದೂ ಅಂದವನಲ್ಲ; ಕೊಡುವವನು ನಾನಲ್ಲ; ನಿನ್ನೊಲುಮೆಗೆ ಮೆಚ್ಚಿ ಕರುಣಾರಸದ ಭರದಲ್ಲಿ ಮರೆತು ನುಡಿದೆನು. ನಿನ್ನ ಅತುಲವಾದ ಭಕ್ತಿಯು ನನ್ನ ಮನವನ್ನು ಹಿಡಿದೆಳೆಯುತ್ತಿದೆ. ಅದರ ಅಳವಿಗೆ ಸಿಕ್ಕ ಮನವು ನನ್ನ ಕೈಮೀರಿತು. ನಾನೇನು ಮಾಡಲಿ! ನಿನ್ನ ಈ ನಿಸ್ಪೃಹತೆಗೆ ಒಲಿದ ಮನವು ಈಗ ಮತ್ತಿಷ್ಟು ಹರಿಗೆ ಬಿತ್ತು. ಈಗಲೂ ನನ್ನ ಭಾವವು ಬದಲಾಗದು ಉಪಾಯವಿಲ್ಲ.

ಫಣಿ— ಗುರುವೆ, ಹಾಗಿದ್ದರೆ ನಾನು ಪರಮಪುಣ್ಯವಂತಳೇ ಸರಿ. ಯಾವ ಬಯಕೆಯು ಕಾಣೆನೆಂದರೂ ವಿಚಾರದ ಕೊನೆಯೊ

ಕೊಂದು ದೊಡ್ಡ ಫಲದ ಆಶೆಯು ನನಗಾಗಿ ತೋರುತ್ತಿರುವದು. ತನು ವಿಯೋಗದಲ್ಲಿ ಘನಮಹಿಮನಾದ ಅಭವನನ್ನು ನೆನೆಯಬೇಕಷ್ಟೆ? ಆದರೆ ಸಂಸಾರದ ಭ್ರಾಂತಿಯಿಂದ ಮರೆತು ಎಷ್ಟೋ ಜೀವಿಗಳು ಸುಖ ಗಾಣದೆ ತೊಳಲುವವು. ಸಹಜ ಸಿದ್ಧವಾದ ಅಜ್ಞಾನವು ನನ್ನನೂ ಆಗ ಆವರಿಸಬಹುದು. ಪರಶಿವಸ್ವರೂಪನಾದ ನೀನೇ ಪ್ರತ್ಯಕ್ಷವಾಗಿ ಉದ್ಧರಿಸಬೇಕು. ಇದಲ್ಲದೆ ಇನ್ನೊಂದನು ತಿಲಮಾತ್ರವೂ ಬಯಸೆನು.

ಅನ್ನ.-- ತಾಯೆ, ಆಗಲಿ ನಿನ್ನ ಅಭೀಷ್ಟವು ನೆರವೇರುವದು.''

ಹೀಗೆ ಗುರುವಿನ ಕೃಪೆಯನ್ನು ಪಡೆದ ದಿವಸ ಅತಿಶಯವಾದ ಸಂತೋಷವು ಫಣಿಯಮ್ಮನಿಗೆ; ಅವಳು ಕೂಡಲೆ ಮನೆಗೆ ಹೋಗಿ ಸಂಭ್ರಮದಿಂದ ಸಕಲ ಭಕ್ಷ್ಯಗಳನ್ನು ಸಿದ್ಧಪಡಿಸಿಕೊಂಡು ಬಂದು ಲಿಂಗನೈವೇದ್ಯವನ್ನು ಮಾಡಿಸಿ ತೃಪ್ತಿಬಡಿಸಿದಳು. ಇರಲಿ, ವಾಚಕರೆ, ಸ್ವಾಮಿಗಳ ಸೇವಕ ಶಿರೋಮಣಿಗಳಿಬ್ಬರ ಪರಿಚಯವನ್ನಷ್ಟು ಇಲ್ಲಿ ನಿಮಗೆ ಅವಶ್ಯವಾಗಿ ಹೇಳಬೇಕಾಗಿದೆ, ಕೇಳಿರಿ. ಭಗವತಿ ಎಂಬ ಗ್ರಾಮದಲ್ಲಿ ಶಿವಪೂಜಾರ್ಯನೆಂಬ ಮಹೇಶ್ವರನಿದ್ದನು. ಆತನು ಹಗ ಲಿರುಳು ಲಿಂಗಾಸಕ್ತಿಯಿಂದಿದ್ದು ಲಿಂಗಪ್ರಾಣಿಯೆನಿಸಿದ್ದನು. ಮನಸ್ಸು ಸಂಸಾರಕ್ಕೆ ಹೇಸಿ ಪರವಸ್ತುಸಾಧನದ ಕಡೆಗೆ ಒಲಿದಿತ್ತು. ಮೊದ ಲೊಂದು ಕಾಲದಲ್ಲಿ ಗಂಟುಬಿದ್ದ ಸಂಸಾರವು ಹೆಂಡರುಮಕ್ಕಳ ತೊಡ ಕಿನಿಂದ ಬೆನ್ನು ಬಿಡದಂತಾಗಿತ್ತು. ಹೀಗಿರಲು ಜೇಡುವೊಡವೆಯನು ಅಡಿಯೊಳು ಎಡಹಿ ಕಂಡಂತೆ ಆ ಸತಿಸುತರೆಲ್ಲ ಸತ್ತು ತಾನೊಬ್ಬನೇ ಉಳಿದನು. ಅವನಿಗೆ ಅದರಿಂದ ಆನಂದವೇ ಆನಂದ. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಈ ಅನ್ನದಾನೀಶ್ವರರ ಸೇವೆಯಲ್ಲಿ ನಿಂತನು. ಗುರು ವಿನ ಮನೋಗತವನ್ನು ತಿಳಿದುಕೊಂಡು ಮಠದ ವ್ಯವಸ್ಥೆಯನ್ನಿಡು ತ್ತಿದ್ದನು. ಆತನು ಪರೇಂಗಿತಜ್ಞನೂ ಸತ್ಯನಿಷ್ಠುರನೂ ಆಗಿದ್ದನು. ಒಮ್ಮೆ ಒಬ್ಬ ಹೊಟ್ಟೆಗಾಗಿ ತಿರುಗುವ ಜಂಗಮನು ಬಂದು 'ಸ್ವಾಮಿಗಳ ಟೊಪ್ಪಿಗೆಯನ್ನು ಕೊಡು' ಎಂದು ಶಿವಪೂಜನನ್ನು ಕೇಳಿದನು. ಅದಕ್ಕೆ

ಶಿವಪೂಜನು--‘ಅದೇಕೆಬೇಕು ನಿನಗೆ? ದೂರನಾಡಿಗೆ ಹೋಗಿ ದೊಡ್ಡ ಸ್ವಾಮಿಯೆಂದು ಹೇಳಿ ಜನರನ್ನು ಠಕ್ಕಿಸಿ ಸುಲಿಯುವ ಹಂಚಿಕೆಯಲ್ಲಿರುವೆಯೋ? ಚನ್ನಾಗಿದೆ. ಮೊದಲು ಏಳು ಇಲ್ಲಿಂದ’ ಎಂದು ಹೊರಡಿಸಿದನು. ಇವನಿಗೆ ಯಾರ ಹಂಗೂ ಇದ್ದಿಲ್ಲ. ಸುಖದುಃಖಗಳಿಗೆ ಹಿಗ್ಗುವ ಕೊರಗುವ ಚಟವೇ ಇಲ್ಲ. ಇವನ ಹೆಂಡರುಮಕ್ಕಳು ಸತ್ತಾಗ ಜನರು ಅವರ ಗುಣವಿಶೇಷಗಳನ್ನು ನೆನೆನೆನೆದು ಅತ್ತರೂ, ಇವನು ಲೇಶವೂ ದುಃಖಿಸಲಿಲ್ಲವಂತೆ. ಇರಲಿ, ಸ್ವಾಮಿಗಳ ಸನ್ನಿಧಿಯಲ್ಲಿ ಮುಪ್ಪಿನದೇಶಿಕನೆಂಬ ದೇಶಿಕವರನೊಬ್ಬನಿದ್ದನು. ಆತನು ಶಿವಯೋಗಿಯ ಸಹವಾಸಫಲದಿಂದ ಜಂಗಮತ್ವವನ್ನು ಹೊಂದಿದ್ದನು. ಈತನಿಗೆ ಶತ್ರುಮಿತ್ರರೂ, ಉಚ್ಚನೀಚರೂ, ಧನಿಕದರಿದ್ರರೂ, ಸಮವಾಗಿ ಕಾಣಿಸುತ್ತಿದ್ದರು. ಇವನಿಗೆ ಅಹಂಕಾರವಿರಲಿಲ್ಲ. ಯಾವಾಗಲೂ ಲಿಂಗಾಂಗ ಸಾಮರಸ್ಯಜ್ಞಾನದಲ್ಲಿ ಲೋಲಾಡುತ್ತಿದ್ದನು. ಅವನೆಂದೂ ಗುರುವಿನೆದುರಿನಲ್ಲಿ ನಗಲಿಲ್ಲ; ಹಾವುಗೆಯ ಮೆಟ್ಟಲಿಲ್ಲ. ಗುರುವಿನುಪಕರಣಗಳನು ಬಳಿಸಲಿಲ್ಲ. ಎಂಥ ಕಾಲದಲ್ಲಾದರೂ ಗುರ್ವಾಜ್ಞೆಯನ್ನು ಅನುಮಾನಿಸದೆ ಪಾಲಿಸುವದರಲ್ಲಿ ಹಿಂದಾಗುತ್ತಿದ್ದಿಲ್ಲ. ಇವನೊಮ್ಮೆ ಮಠದ ಕಟ್ಟಡಕ್ಕಾಗಿ ಕಲ್ಲು ಹೇರಿಸಿಕೊಂಡು ಬರುವದಕ್ಕಾಗಿ ಸರ್ಜಾಪುರಕ್ಕೆ ಹೋಗಿ ಅಲ್ಲಿ ಬೂದನಗೌಡನ ಮನೆಯಲ್ಲಿ ಇಳಿದಿದ್ದನು. ಆಗ ಅಕಸ್ಮಾತ್ತಾಗಿ ಗೌಡನು ಹಾವಿನ ಕಡತದಿಂದ ಮೃತ್ಯುವಿನ ಮುಖಕ್ಕೆ ಬಿದ್ದನು. ಯಾರಿಂದಲೂ ಆ ಬಾಧೆಯಿಂದ ಉಳಿಸುವದಾಗಲಿಲ್ಲ. ಈ ದೇಶಿಕನು ತನ್ನ ಕೈಮುಟ್ಟಿ ಸರ್ವಾಂಗಕ್ಕೆ ಭಸ್ಮವನ್ನು ಲೇಪಿಸಿ ಅಂಬಲಿಯ ಕುಡಿಸಿ ಎಬ್ಬಿಸಿದನು. ಆತನು ಹೀಗೆ ಮಹಿಮಾನ್ವಿತನೂ ಆಗಿದ್ದನು.

ಅನ್ನದಾನೀಶ್ವರರು, ಶಿವಪೂಜನ ಹಾಗು ಮುಪ್ಪಿನದೇಶಿಕನ ಗುಣಗಳಿಗೂ ಚಿತ್ತವೃತ್ತಿಗಳಿಗೂ ಮೆಚ್ಚಿದ್ದರು. ಅವರು ಒಮ್ಮೆ ಲೋಕಾನುಗ್ರಹಕ್ಕಾಗಿ ಅಖಿಲಕ್ಷೇತ್ರಂಗಳಿಗೆ ಹೊರಟು ಶಿವಪೂಜನನ್ನು ತಮ್ಮ ಸೇವೆಗಾಗಿ ಸಂಗಡ ಕರೆನೊಯ್ಯಬೇಕೆಂತಲೂ ಮುಪ್ಪಿನದೇಶಿ

ಕನನ್ನು ಮಠದಲ್ಲಿರಿಸಬೇಕೆಂತಲೂ ಗೊತ್ತುಮಾಡಿದರು. ಸೂರ್ಯನು ಅಸ್ತಮಿಸುವಾಗ ತನ್ನ ತೇಜದ ಅಂಶವನ್ನು ಚಂದ್ರನಿಗೂ ತಾರಾಗಣಕ್ಕೂ ಕೊಡುವಂತೆ ಅನ್ನದಾನೀಶ್ವರರು ದೇಶಾಂತರಕ್ಕೆ ತೆರಳುವಾಗ ಮುಪ್ಪಿನ ದೇಶಿಕೋತ್ತಮನಿಗೆ ಜಂಗಮಾಶ್ರಮವನ್ನು ಕೊಟ್ಟು ಮಠದ ಅಧಿಕಾರವನ್ನು ಒಪ್ಪಿಸಿದರು. 'ಮಠದಲ್ಲಿ ಅನುಷ್ಠಾನವನ್ನು ಮಾಡುತ್ತ ಭಕ್ತರ ಭಕ್ತಿಯನ್ನು ಕೈಕೊಳ್ಳುತ್ತ ಇರು' ಎಂದು ಆಜ್ಞಾಪಿಸಿದರು.

ಕಾಲಾನುಕಾಲದಲ್ಲಿ ಅಸಂಖ್ಯ ಜನರ ದರ್ಶನದಿಂದಲೋ ಏನೋ ಮಹಾಕ್ಷೇತ್ರಗಳಲ್ಲಿಯ ಲಿಂಗಗಳ ಕಳೆಯು ಇಳಿಯುವದು. ಮಹಿಮೆಯು ಕುಂದುವದು. ಇವುಗಳ ಸಂಬಂಧವಾಗಿ ಪುರಾಣೇತಿಹಾಸಗಳಲ್ಲಿ ಮೊದಲು ಹೇಳಲ್ಪಟ್ಟ ಸಂಗತಿಗಳನ್ನೂ ಈಗಿನ ಸ್ಥಿತಿಯನ್ನೂ ಹೋಲಿಸಿ ನೋಡಿದರೆ ಈ ಮಾತಿನ ನಿಜತ್ವವು ಕಂಡುಬರುವದು. ಹೀಗಾದಾಗಲೆಲ್ಲ, ಮಹಾಯೋಗಿಗಳು ಆ ಕ್ಷೇತ್ರಗಳಿಗೆ ಹೋಗಿ ತಮ್ಮ ತಪದ ಮಹಿಮೆಯನ್ನು ತುಂಬಿ ಆ ಲಿಂಗಗಳಲ್ಲಿ ಕಳೆಯ ಕಾಣಿಸಿ ಭಕ್ತಜನರು ಸುಲಭವಾಗಿ ಹೊಂದುವಂತೆ ಮಾಡುವದುಂಟು. ಆದ್ದರಿಂದ ಮಹಾಯೋಗೀಶ್ವರರು ಫಲದಾಶೆಗಾಗಿ ತೀರ್ಥಯಾತ್ರೆಗಳನ್ನು ಮಾಡುವದಿಲ್ಲವೆಂಬುದು ನಿರ್ವಿವಾದವು. ಕುಟುಂಬಿಗನು ಕೂಡಿಸಿದ ಧನಧಾನ್ಯಗಳ ಸಂಗ್ರಹವನ್ನು ಕುಟುಂಬದವರೆಲ್ಲ ಹೊಂದಿ ಜೀವಿಸುವಂತೆ ಜಗತ್ಕುಟುಂಬಿಗಳಾದ ಯೋಗಿಗಳು ಕೂಡಿಸಿದ ತಪದ ಫಲವನ್ನು ಜಗದ ಜನರೆಲ್ಲರೂ ಅನುಭವಿಸುವರು. ಅದರಿಂದ ಶಿವಯೋಗಿಗಳು ಹೋದ ಹೋದಲ್ಲೆಲ್ಲ ಸುಖಕ್ಷೇಮಗಳು ನೆಲೆಗೊಳ್ಳುವವು. ದುರಪೇಕ್ಷೆಯು ದೂರಾಗುವದು.

ಇರಲಿ, ಅನ್ನದಾನೀಶ್ವರರು ಶಿವಕ್ಷೇತ್ರ, ನದೀತೀರ, ಪುಣ್ಯಾರಣ್ಯ, ಶಿಖರ, ಸಾಗರ ಮೊದಲಾದವುಗಳನ್ನೂ ಅಲ್ಲಲ್ಲಿ ಮಹಾತ್ಮರನ್ನೂ ಕಾಣುತ್ತ ಶಿವಾನುಭವಸುಖವನ್ನು ಅನುಭವಿಸುತ್ತ ಸಂಚರಿಸಿದರು. ಅವರು ಉಳವಿ, ಗೋಕರ್ಣ, ಕಪ್ಪಡಿಸಂಗಮ, ಮಹಾಕಾಳಿ, ಹಂಪೆ,

ಕಾಲಕಾಲೇಶ. ಕಂಚಿ, ಕಾಳಹಸ್ತಿ, ಚಿದಂಬರ, ಅರುಣೇಶ್ವರ, ಪಕ್ಷಿ ತೀರ್ಥ, ಶ್ರೀಶೈಲ, ಅರುಣಾಚಲ, ಮಹಾನಂದಿ, ಮಹಾಸೇತುಬಂಧ ರಾಮೇಶ್ವರ, ಜಂಬುಕೇಶ, ಚಾಮುಂಡಿ, ನಂಜನಗೂಡು, ಶಂಭು ಲಿಂಗನಬೆಟ್ಟ, ಅರ್ಕೋಣಂ, ಕುಂಭಕೋಣಂ, ಸಿದ್ಧಗಂಗಾ ಮೊದ ಲಾದ ಕ್ಷೇತ್ರಗಳನ್ನು ಪಾದಚಾರಿಗಳಾಗಿ ಸಂಚರಿಸಿದರು. ಅಲ್ಲಲ್ಲಿ ಹರ ಭಕ್ತರನ್ನು ನೋಡಿ ಮುಟ್ಟಿ ಮಾತಾಡಿ ಬಂಧುರಸುಖದೊಳೋಲಾಡಿಸಿ ಕೀರ್ತಿಯನ್ನು ಪಡೆದು ಜಗತ್ತನ್ನು ಉದ್ಧರಿಸಿದರು. ಬಳಿಕ ಉತ್ತರಕ್ಕೆ ತಿರುಗಿ ನಾಸಿಕ, ಗಯಾ, ಕುರುಕ್ಷೇತ್ರ, ಪ್ರಯಾಗ, ಕಾಶಿ ಮುಂತಾದ ವಿಸ್ತೀರ್ಣ ಪ್ರದೇಶಗಳಲ್ಲಿ ಸಂಚರಿಸಿ ಕಾಶ್ಮೀರಕ್ಕೆ ಬಂದರು. ಅಲ್ಲಿ ಹದಿ ನೈದು ದಿವಸ ಶಿವಪೂಜಾಸುಖದಲ್ಲಿದ್ದರು. ಕಡೆಯ ದಿನ ಪರಮದಾಸ ಭಾವದ ಶಿವಪೂಜನು ಕೈಮುಗಿದು ವಿನಯದಿಂದ–'ಗುರುವೆ, ಇನ್ನಾವ ಕಡೆಗೆ ಹೋಗುವದು?' ಎಂದು ಕೇಳಿದನು. ಸ್ವಾಮಿಗಳು–'ಹದಿ ನೆಂಟು ಶಕ್ತಿಪೀಠಗಳನ್ನೂ ನೋಡಿದೆವು. ಆದರೆ ಹನ್ನೊಂದು ಜ್ಯೋತಿ ರ್ಲಿಂಗಗಳನ್ನು ನೋಡಿದೆವು ಇನ್ನೊಂದುಳಿಯಿತು. ಅದುವೇ ಕೇದಾ ರವು. ಇನ್ನು ಅಲ್ಲಿಗೆ ಹೋಗತಕ್ಕದ್ದು' ಎಂದರು. ಅಂದೇ ಭೋಜನೋ ತ್ತರ ಮುಂದೆ ಹೊರಟರು. ಹಿಮಾಲಯದ ದಕ್ಷಿಣದ ಇಳುಕಲಿನ ಮೇಲಿನ ಮಾರ್ಗವನ್ನು ಹಿಡಿದರು. ಹಾದಿಯಲ್ಲಿ ನಿಬಿಡವಾದ ವನ ಗಳು, ಗಿರಿಗಂಹರಗಳು, ಮುಗಿಲ ಮುದ್ದಿಸುವ ಶಿಖರಗಳು, ರಮಣೀ ಯವಾದ ಸರೋವರಗಳು, ಘನವಾಗಿ ಗರ್ಜಿಸುವ ದಬದಬೆಗಳು ಇವೆ ಲ್ಲವುಗಳಿಂದ ಮನೋಹರವಾಗಿರುವ ಸೃಷ್ಟಿಸೌಂದರ್ಯವನ್ನು ನಿರೀ ಕ್ಷಿಸುತ್ತ ಆನಂದದಿಂದ ಸಾಗಿದರು. ಮಾರ್ಗದ ಒಂದು ಬದಿಯಲ್ಲಿ ಮೇಘಮಾಲೆಯಿಂದ ಮುಸುಕಿದ ಪರ್ವತಶ್ರೇಣಿಯು ಕಂಗೊಳಿಸು ತ್ತಿದ್ದರೆ, ಇನ್ನೊಂದು ಬದಿಗೆ ಭೀತಿದಾಯಕವಾದ ಪಾತಾಳವೇ ಎಂಬಂತೆ ತೋರುವ ಆಳವಾದ ಕೊಳ್ಳಗಳು ಕಾಣುತ್ತಿದ್ದವು. ಒಂದೆಡೆಗೆ, ಕಮ ನೀಯವಾದ ಫಲಪುಷ್ಪಗಳಿಂದ ಕೂಡಿದ ವನೋಪವನಗಳು ಪರಿ

ಶೋಭಿಸಿದರೆ ಮತ್ತೊಂದೆಡೆಗೆ ಕರಡಿ, ಹುಲಿ, ಸಿಂಹಾದಿ ಕ್ರೂರಮೃಗ ಗಳಿಂದ ಕೂಡಿದ ಕಾಡಡವಿಗಳು ಭೀತಿಗೊಳಿಸುತ್ತಿದ್ದವು.

ಹೀಗಿರಲು ನಮ್ಮ ಪ್ರವಾಸಿಕರು ಒಂದುದಿನದ ಮಧ್ಯಾಹ್ನದಲ್ಲಿ ತಿಳಿನೀರು ತುಂಬಿ ಜುಳುಜುಳನೆ ಹರಿಯುವ ತಿಳಿಗೊಳದ ಕೋಡಿ ಯಲ್ಲಿ ಶಿವಾರ್ಚನೆಗಾಗಿ ಇಳಿದರು; ಸ್ನಾನಗೈದರು; ಲಿಂಗಪೂಜೆಗೆ ಕುಳಿತರು. ಆಗ "ಚರವರ, ನೀನು ಫಣಿಯಮ್ಮನಿಗೆ ನಿನ್ನ ಅಂತ್ಯದಲ್ಲಿ ದರ್ಶನಗೊಡುವೆನೆಂದು ವಚನವನ್ನಿತ್ತಿರುವೆ. ಈಗ ದೂರ ಸಿಲುಕಿದೆ. ಆಕೆಗೆ ಈಗ ಅಂತ್ಯಬಂದಿದೆ. ಇನ್ನು ಮೂರೇ ತಿಂಗಳದ ಅವಧಿಯಿದೆ. ಈಗಲೇ ನೀನು ತಿರುಗಿವರೆ ನಿನ್ನವಚನವನ್ನು ನಡಿಸಲು ಸಮರ್ಥ ನಾಗುವೆ. ಅದರಿಂದ ಹೊರಳು; ಮುಂದೆ ಹೋಗುವ ಹವ್ಯಾಸವ ಬಿಡು" ಎಂದು ಸ್ವಾಮಿಗಳಿಗೆ ಲಿಂಗಾಣತಿಯಾಯಿತು. ಆದ್ದರಿಂದ ಅವರು ಊಟವಾದ ಬಳಿಕ ಶಿವಪೂಜನನ್ನು ಕುರಿತು–"ತಮ್ಮಾ, ಈಗ ಊರಿಗೆ ನಡೆ; ಸಿದ್ಧನಾಗು; ಮುಂದೆ ಅನುಕೂಲಕಾಲವನ್ನು ನೋಡಿ ಮತ್ತೆ ಬರೋಣ" ಎಂದರು. ಶಿವಪೂಜನು ಇದರಿಂದ ಖೇದವನ್ನು ತಾಳಿದರೂ ಧೈರ್ಯದಿಂದ ಅವರ ಪಾದಕ್ಕೆರಗಿ ವಿನಯದಿಂದ–"ಹರಿ ದ್ವಾರದ ಸಮೀಪದಲ್ಲಿ ಬಂದಿರುವೆವು; ಇನ್ನು ಹದಿನೈದು ದಿವಸದ ಹಾದಿಮಾತ್ರ; ಹಿಂದಿರುಗುವದೇಕೆ? ಮುಂದೆ ಹನ್ನೆರಡೇ ದಿವಸಗ ಳಲ್ಲಿ ಮಹಾಕ್ಷೇತ್ರವನ್ನು ಸೇರುವೆವು. ನಾಲ್ಕೈದು ವರ್ಷ ಬಂದು ಇನ್ನೆ ರಡು ತಿಂಗಳುಗಳಿಗಾಗಿ ಅವಸರವೇಕೆ? ಇಷ್ಟಕ್ಕಾಗಿಯೇ ಮುಂದೆ ಬರುವದಾಗುವದೇ? ಈಗ ಹೋಗುವ ಕಾರಣವೇನು? ಹಾಗಿದ್ದರೆ ಕಾಶ್ಮೀರದಿಂದಲೇ ತಿರುಗಿದ್ದರೆ ಒಳಿತಾಗುತ್ತಿತ್ತು. ಸುಮ್ಮನೆ ಬೇಸರ ವೇಕೆ? ಗುರುವೆ, ಮುಂದೆ ದಯಮಾಡಿಸು" ಎಂದನು. ಅದಕ್ಕೆ ಸ್ವಾಮಿಗಳು "ನಿನಗೇಕೆ ಹಿರಿಯತನ? ತೀವ್ರ ನಡೆ. ಹೋಗಬೇಕಾಗಿ ದೆಯೆಂದರೆ ಸುಮ್ಮನೆ ನಡೆವರಾಯಿತು" ಎಂದರು. ಅದರಿಂದ ಅತ್ಯಂತ ಉದಾಸೀನನಾದ ಶಿವಪೂಜನು ಶಿವಾರ್ಚನೆಯ ಪೆಟ್ಟಿಗೆ ಮೊದಲಾದವುಗಳನ್ನು ಮುಂದಿಟ್ಟು 'ನೋಡಿಕೊಳ್ಳಿರಿ; ನನಗೇನೂ

ತಿಳಿಯದು' ಎಂದು ದೂರಹೋಗಿ ಕುಳಿತನು. ಮತ್ತು "ಮಾಯೆಯು ಹೊಂದದ ಪುರುಷರುಂಟೇ? ಶಿವ ಶಿವಾ ವಿರಕ್ತರಬಾಳ್ವೆ ಹೀಗಾಯಿತೇ? ನನ್ನದೇಹ, ಚಂದವಾದ ಮಠ, ಊರು ಎಂಬರು ವಿರಕ್ತರೇ? ನಾನು ಬರಬಾರದಿತ್ತು! ಈಗ ನಾನೊಬ್ಬನೇ ಮುಂದೆ ಹೋಗಬಹುದೇನು? ಆದರೆ ಇವನನ್ನು ಅಗಲುವದೆಂತು? ಏನು ಮಾಡಲಿ?" ಎಂದು ಆಲೋಚಿಸುತ್ತಿದ್ದರೂ ಮೇಲೆ ಒಳ್ಳೇ ಸೆಡವಿನಿಂದಲೇ ಮಣ್ಣುಗೊಂಬೆಯಂತೆ ಕುಳಿತುಬಿಟ್ಟನು ಗುರುವಿನ ತೇಜದಿಂದ ಹುಟ್ಟಿ ಗುರುವನ್ನು ಮುಟ್ಟಿ ಅವನು ಅಂಜುವನೇಕೆ? ಸತಿಯು ಪತಿಯ ನಡತೆಗೆ ಸೆಡೆದಂತೆ ಸೆಡೆದರೆ ತಪ್ಪೆನಿಸುವದೇ? ಅದರಿಂದ ಗುರುವರನು ಅವನ ಅಂತರಂಗವ ತಿಳಿದು ಹಿಗ್ಗಿ ಹೊರಗೆ ತೋರಗೊಡದೆ--"ಶಿವಪೂಜನೇ ಸೆಡವೇಕೆ ಸಿಡಿಮಿಡಿಯೇಕೆ? ನಾವು ಮುಂದೆ ಬರುವಂತಿಲ್ಲ. ನೀನು ಹೋಗುವದಾದರೆ ಹೋಗು, ಅಪ್ಪಣೆಯುಂಟು" ಎನಲು ಶಿವಪೂಜನು ಉಪಾಯಗಾಣದೆ ಎದ್ದು--"ಗುರುವೆ, ತಮ್ಮ ಈ ಹಟದ ಕಾರಣವಾದರೂ ಏನು? ನನಗೆ ತಿಳಿಯಬಾರದೇ?" ಎಂದನು. "ಫಣಿಯಮ್ಮನು ಹಾಸಿಗೆ ಹಿಡಿದಿರುವಳು; ಇನ್ನು ಮೂರುತಿಂಗಳಿಗೆ ಅವಳಂತ್ಯವಾಗುವುದು. ಇದೀಗ ಇಷ್ಟಲಿಂಗದಿಂದ ತಿಳಿಯಿತು. ಅಂತ್ಯದಲ್ಲಿ ದರ್ಶನವ ಕೊಡುವೆನೆಂದು ಆಕೆಗೆ ವಚನಕೊಟ್ಟಿರುವೆನು. ಆ ವಚನಪಾಲನೆಗೆ ಈಗಲೇ ತಿರುಗಬೇಕಾಗಿದೆ" ಎಂದು ಸ್ವಾಮಿಗಳು ಹೇಳಿದರು. "ಮೊದಲೆ ಹೀಗೆ ಅಪ್ಪಣೆಯಾಗಬಾರದೇ ಗುರವೆ? ನಾನೇನು ಬಲ್ಲೆನು? ಸರಿಯೇ ಅವಶ್ಯವಾಗಿ ತಿರುಗಲೇಬೇಕು! ಇಲ್ಲದಿದ್ದರೆ ಶಿವಭಕ್ತಳು ನೊಂದಪಾಪವು ಬರದಿರದು! ಏಳಬೇಕಿನ್ನು ಗುರುವೇ ತಡಮಾಡಿ ಉಪಯೋಗವಿಲ್ಲ." ಎಂದು ಶಿವಪೂಜನು ಗಂಟುಮೊಟ್ಟೆಗಳನ್ನು ಹಾಗೆ ಹೀಗೆ ಸಾವರಿಸಿ ಹೊತ್ತುಕೊಂಡು ಮುಂದೆ ಮುಂದೆ ಓಡಿದನು. ಗುರುಗಳು ನಕ್ಕುನಕ್ಕು ಸಾಕಾಗಿ ಹಾದೀ ಹಿಡಿದರು. ಅವರಿಬ್ಬರು **ಭಕ್ತಿಪಾಶದ ಎಳೆತ**ದಿಂದ ವೇಗವಾಗಿ ಬರುತ್ತಿದ್ದರು.

ಇತ್ತ ಫಣಿಯಮ್ಮನಿಗೆ ಉಂಟಾದ ಬೇನೆಯು ಬೆಳೆದು ವೇದನೆಯು ಹೆಚ್ಚಾದರೂ ಅವಳಿಗೆ ಅದರ ಅರಿವಿಲ್ಲ; ಅನ್ನದಾನೀಶ್ವರರ ಸ್ಮರಣೆಯಲ್ಲದೆ ಮತ್ತೊಂದರ ನೆನಹಿಲ್ಲ. 'ಅನ್ನದಾನಿಯ ಕಾಣುವ ವರೆಗೆ ಅರಿವನುಳಿಯೆನು' ಎಂದು ಜೀವವನ್ನು ಹಿಡಿದು ನುತಿಸುತ್ತಿದ್ದಳು. ಆಕೆಯು ತನ್ನಲ್ಲಿ ತಾನು--'ತಂದೆ, ನೀನಂದು ಹಾಗೆ ಹೇಳಲಿಲ್ಲವೇ? ಆ ಮಾತು ಬರಡವಾಯಿತೇ? ಅಥವಾ ಮೋಸಮಾಳ್ಪೆಯಾ? ಕಳ್ಳನೆನಿಸಲಿಚ್ಛೆಯೋ ನಿನಗೆ? ಶರಣು ಬಂದೆನು ನಾನು; ನಿನ್ನ ಅರಿವಿನಿಂದ ಶಿವನೊಳು ಬೆರೆವುದನ್ನು ಕರುಣಿಸು; ನಿರಂಜನಗುರುವರ, ನಿನ್ನ ದರ್ಶನದ ಹೊರತು ಹೋಗಬಾರದೆಂದಿರುವೆನು. ಕೃಪಾವಾರಿಧಿಯೇ ನಿನ್ನ ದರ್ಶನದ ಹಸಿವೆಯಿಂದ ಬಳಲುತ್ತಿರುವೆನು. ಈ ದರ್ಶನಾನ್ನವನ್ನು ಕೊಡದಿದ್ದರೆ ನೀನು ಅನ್ನದಾನಿಯೇ? ನಿನ್ನ ಮಹಿಮೆಗೆ ಮಸಿಯಕೊಳ್ಳುವೆಯಾ ಸನ್ನೆಗೇಡೀ? ಕೊಡುಕೊಡು ನಿನ್ನ ಪಾದದರ್ಶನವನ್ನು! ಮನ್ನಿಸು ಬನ್ನಬಡುವೆನು! ಎಲ ಎಲಾ! ಅನಾದಿಯೇ, ನನ್ನ ಮರುಗನು ಕೇಳದಂಥ ಕಿವುಡನಾದೆಯಾ? ಭವಗೇಡಿಯೇ ಶಿವಪುರಿಗೆ ಹೋಗುವ ಮಗಳನ್ನು ಕಳಿಸದಿರುವೆ; ನಾನು ಮಾಡಿದ ಅಪರಾಧವೇನು? ನೀನರಿಯೆಯಾ ನನ್ನ ಮನವನ್ನು? ಸುವಿಚಾರ ಕರುಣಗಳನ್ನೆಲ್ಲ ನೀಗಿವೆಯಾ? ನಿರ್ವಾಣೀ ತಪ್ಪಿಸಿದೆಯಲ್ಲೋ! ಆಗ ಸುಮ್ಮನಿರಲಿಲ್ಲವೇಕೆ? ಸುಳ್ಳು ಹೇಳೆಂದರಾರು? ಹೇಳಿ ಮಾರುವದು ಯತಿಗಳ ಗುಣವೇ ಗುಣಗೇಡೀ? ಕೇಳಿದವರು ನಗದಿರುವರೇ? ಭವಸಾಗರನಾವಿಕನಲ್ಲವೇ ನೀನು? ನಿನ್ನ ನೆನಹಿನಿಂದ ಈ ವರೆಗೆ ಬಾಳಿರುವೆ; ವ್ಯರ್ಥಕಾಲಕಳೆದವಳಲ್ಲ; ಇಂಥವಳ ಮೇಲೆ ಮುನಿವುದೇ? ನಿರಾಕರಿಸಬೇಡ. ನನ್ನ ಬಿನ್ನಪವನ್ನು ಅವಲೋಕಿಸು." ಎಂದು ಬೇಡಿಕೊಳ್ಳುತ್ತಿದ್ದಳು.

ಫಣಿಯಮ್ಮನ ಸತ್ಪುತ್ರನಾದ ಬಸವನಗೌಡನು ದಿನಾಲು ಮಠಕ್ಕೆ ಬಂದು ಮುಪ್ಪಿನದೇಶಿಕನಿಗೆ 'ಸ್ವಾಮಿಗಳೆಂದು ಬರುವರು? ತಾಯಿಗೆ ಅವಸಾನವು ಸಮೀಪಿಸಿತು, ಎಂದು ಕೇಳುತ್ತಿದ್ದನು. ಹೀಗಿರಲು

ಒಂದುದಿನ ಆ ದೇಶಿಕೋತ್ತಮನ ಸ್ವಪ್ನದಲ್ಲಿ ಅನ್ನದಾನೀಶ್ವರರು ಬಂದು 'ನಾವು ಇಂದು ಗಂಜಿಹಾಳಕ್ಕೆ ಬಂದೆವು; ನಾಡದು ಹಾಲ ಕೆರೆಗೆ ಬರುವೆವು' ಎಂದು ಹೇಳಿದರು. ದೇಶಿಕನು ಬೆಳಗಿನಲ್ಲಿ ಬಸ ವನಗೌಡನಿಗೆ—'ತಾಯಿಗೆ ಬಳಲಿಕೆ ಬಹಳವಾಯಿತಲ್ಲವೆ? ಸ್ವಾಮಿ ಗಳು ಗಂಜಿಹಾಳಕ್ಕೆ ಬಂದಿರಬಹುದು. ಹೋಗಿ ನೋಡಿ ಬಾ' ಎಂದು ಆಜ್ಞಾಪಿಸಿದನು. ಬಸವನಗೌಡನು ಕೂಡಲೆ ಗಂಜಿಹಾಳಕ್ಕೆ ಬಂದನು. ಅನ್ನದಾನೀಶ್ವರರ ಪಾದವನ್ನು ಕಂಡನು. ಆತನು ಸಾಷ್ಟಾಂಗವಾಗಿ ಎರಗಿ—"ಮುಪ್ಪು, ಬೇನೆಗಳಿಂದ ಮೂರುತಿಂಗಳು ತಾಯಿಯು ಅನ್ನೋದಕವಿಲ್ಲದಿರುವಳು. ತವ್ಮಡಿಯ ದರ್ಶನವಿಲ್ಲದೆ ಜೀವವನ್ನು ತೊರೆಯೆನೆಂದಿರುವಳು; ಕರುಣಿಸಬೇಕು" ಎಂದು ಬೇಡಿಕೊಂಡನು. ಅನ್ನದಾನೀಶ್ವರರು ಒಪ್ಪಿದರು. ಮರುದಿನವೇ ಮೂವರೂ ಹಾಲಗೆರೆಗೆ ಬಂದರು. ಶರಣೆಯ ದರ್ಶನಕ್ಕೆ ಆತುರಗೊಂಡು ಮಠದೊಳಗೆ ಸಹ ಹೋಗದೆ ಹೊರಗಿನಿಂದಲೇ ಮುಪ್ಪಿನದೇಶಿಕನನ್ನು ಕರೆದು ಕೂಡಿ ಕೊಂಡು ಫಣಿಯಮ್ಮನ ಮನೆಗೆ ಬಂದರು.

ಆಕೆಯ ತಲೆಯ ಕಡೆಗೆ ಆಸನಹಾಕಿ ಸ್ವಾಮಿಗಳನ್ನು ಕೂಡಿ ಸಿದರು. ಸ್ವಾಮಿಗಳು ಬಂದಿರುವರೆಂದು ಮಕ್ಕಳು ಕೂಗಿ ಹೇಳಿದರು. ನೈಸೋತು ಏಳಬಾರದಂತಿದ್ದರೂ ಅವಸಾನವಾಗಿದ್ದರೂ ಕೇಳಿ ಫಣಿ ಯಮ್ಮನು ಕಣ್ದೆರೆದು ಕೈಯೆತ್ತಲು, ಅದನ್ನು ತಿಳಿದು ಎಬ್ಬಿಸಿ ಕುಳ್ಳಿ ರಿಸಿದರು. ಆಕೆಯು ಹಾಗೆಯೇ 'ಅನ್ನದಾನಿಯೇ ಸಾಕು' ಎಂದು ಮುಂದೆ ನೈಯಿಕ್ಕಿನಮಿಸಿದಳು. ಆಗ ಎಲ್ಲರೂ ತಾಯಿ, 'ಸ್ವಾಮಿ ಗಳು ಇತ್ತ ಮುಂದಿಲ್ಲ; ಹಿಂಬದಿಗಿರುವರು' ಎಂದರು. ಕುಗ್ಗಿದ ದನಿಯಿಂದ ಫಣಿಯಮ್ಮನು—"ಹುಚ್ಚರೆ, ಕೈಲಾಸದಲ್ಲಿ ಅತ್ತೇನು ಇತ್ತೇನು? ಬೇರೆ ಆಲೋಚನೆಯೇಕೆ?" ಎಂದು ಮತ್ತೆ ಕೈಮುಗಿ ದಳು. ಬಳಿಕ ಮನವು ಲಿಂಗದಲ್ಲಿ ಲೋಲವಾಗಲು 'ಶಿವಶಿವ' ಎನ್ನುತ್ತ ಕಣ್ಣುಮುಚ್ಚಿದಳು. ಸುತ್ತುವರಿದು ನಿಂದವರು ಉಫೇ ಉಫೇ!! ಎಂದು ಚಪ್ಪಾಳೆಗಳನಿಕ್ಕಿದರು.

ಉತ್ಸಾಹದಿಂದ ಹದಿನೆಂಟುನೂರು ಗಣಗಳು ನೆರೆದರು. ಮಹಾ ಸಂತರ್ಪಣೆಯಾಯಿತು. ಸಂಭ್ರಮದಿಂದ ಸಂಸ್ಕಾರವನ್ನು ನೆರವೇರಿಸಿದರು. ಶಕೆ ೧೭೭೫ರ ಶ್ರೀಮುಖಸಂವತ್ಸರದ ಕಾರ್ತಿಕ ಶುದ್ಧ ೧೩ ದಿವಸ ಫಣಿಯಮ್ಮನು ಈ ಪ್ರಕಾರ ಲಿಂಗೈಕ್ಯಳಾದಳು.

ಬಾಲರಾಗಲಿ ಸ್ತ್ರೀಯರಾಗಲಿ ಇದ್ದರೇನು? ಕಲಿಕಾಲವಿದ್ದರೇನು? ಒಂದೆ ಸದ್ಭಕ್ತಿಯಿಂದಿದ್ದರೆ ಎಳೆಗಂದಿ ಕರುವಿನೆಡೆಗೈತರುವಂತೆ ಶಿವನು ಬಂದೇ ಬರುವನು. ಸಚ್ಛೀಲನಾದ ಗುರುವು ಬಂದುದೇನೂ ಆಶ್ಚರ್ಯವಲ್ಲ; ಆದರೆ ಆ ವರೆಗೆ ಶರಣೆ ಪ್ರಾಣವನ್ನು ಹಿಡಿದುದೇ ಆಶ್ಚರ್ಯಕರವು.

೭. ಗುರುವರನ ಮಹಿಮೆಯಲ್ಲದೆ ಮತ್ತೇನು?

ಮುಪ್ಪಿನಬಸವಲಿಂಗದೇವನಿಂದ ಚರಾಶ್ರಮವನ್ನೂ ಮಠಾಧಿಕಾರವನ್ನೂ ಹೊಂದಿದ ಸಂಗಮೇಶ್ವರಸ್ವಾಮಿಯೆಂಬ ವಿರಕ್ತಗುರುವರನು ಇಟ್ಟಗಿಯ ಮಠವಲ್ಲಿರುತ್ತಿದ್ದನು. ಮಠದ ಮುಂದೆಯೇ ಇಟ್ಟಗಿಯ ಜನರು ಕುಡಿಯುವ ನೀರಿನ ಬಾವಿಯು. ನೀರಿಗೆ ಬರುವ ಸ್ತ್ರೈಣಯುವತಿಯೊಬ್ಬಳು ದಿನಾಲು ಸ್ವಾಮಿಗಳನ್ನು ನೋಡಿ ನೋಡಿ ಅವರನ್ನು ಮೋಹಿಸಿ ಮನಸೋತಳು. ಬಳಿಕ ಬರಬರುತ್ತ ಯಾರಿಲ್ಲದ ಸಮಯದಲ್ಲಿ ಕಾಲಿಗೆರಗುವ ನೆವದಿಂದ ಮಠದಲ್ಲಿ ಬರುತ್ತ ಒನಪು ಒಯ್ಯಾರಗಳನ್ನು ಬೀರಹತ್ತಿದಳು; ಮನದಿಂಗಿತವ ತೀಸುವ ವ್ಯಂಗ್ಯೋಕ್ತಿಗಳನ್ನು ಆಡಹತ್ತಿದಳು; ಹೆಚ್ಚು ಹೆಚ್ಚಾಗಿ ಸುಳಿಯಹತ್ತಿದಳು. ಇದಾವದರ ಸುಳಿವೇ ಸಂಗಮದೇವಗೆ ತಾಗಲಿಲ್ಲ. ಅವನು

ಮೋಸವನ್ನರಿಯದೆ ತಾಯಕ್ಕತಂಗಿಯರಂತೆಯೇ ತಿಳಿಯುತ್ತಿದ್ದನು. ಕೆಲವೊಂದು ದಿನಗಳು ಕಳೆಯಲು ಮನಸ್ಸಿನ ತಾಪವನ್ನು ತಾಳದೆ ಲಜ್ಜಾಭಯಗಳನ್ನು ತೊರೆದು ಕಂಗೆಟ್ಟಾಗಿನ ಧೈರ್ಯವನ್ನು ತಂದು ಕೊಂಡು ಆ

ಯುವತಿಯು— ಮಹಿಮನೆ, ಈ ವರೆಗೂ ನನ್ನ ಮನದಿಂಗಿತವನೇ ತಿಳಿಯದಾದೆ. ಮಹಾತ್ಮರು ಇಷ್ಟಾರ್ಥದಾಯಕರೆಂಬರು. ನನ್ನ ಬಯಕೆಯೊಂದನ್ನು ತೀರಿಸಬಾರದೇ? ನನ್ನ ಮನವು ನಿನ್ನ ಅಂಗ ಸಂಗವನ್ನು ಬಯಸಿ ಕೊರಗುತ್ತಲಿದೆ. ಅನುಕೂಲನಾಗಿ ಬಹಳ ದಿನದ ಹಂಬಲವನ್ನು ತೊಲಗಿಸಬಾರದೇ?

ಸಂಗಮದೇವ— ಮಗಳೆ, ನಿನಗೇಕೆ ಈ ಬುದ್ಧಿ ಬಂತು? ಸೂಳೆತನವು ಹಾಳುಗಾರಿಕೆಯು; ಇದನೇಕೆ ಬಯಸಿದೆ? ನುಡಿಯದಿರು ಇನ್ನೊಮ್ಮೆ ಹೀಗೆ; ಸುಶೀಲಳಾಗಿರು ಹೋಗು.

ಯುವತಿ— ಹಾಗಾದರೆ ಮಹಿಮರು ಬೇಡಿದವರ ಬಯಕೆಗಳನ್ನು ನೀಡುವರೆಂಬುದೆಲ್ಲಿ? (ಕೈಮುಗಿದು) ಭದ್ರ! ವಿಶ್ವಾಮಿತ್ರಪರಾಶರಾದಿ ಮುನಿಗಳು ಕೂಡ, ಕೂಡಲಿಲ್ಲವೇ ತರುಣಿಯರನ್ನು? ಲೌಕಿಕದಲ್ಲಿ ರತಿಸೌಖ್ಯವೇ ಸೌಖ್ಯವು; ಕಮಲಮುಖಿಯಾದ ಯುವತಿಯು ತಾನಾಗಿ ಬರಲು ಪುರುಷರು ನೂಕುವರೇ? ಕರುಣಿಸು; ನನ್ನಂಗ ಶಾಂತಿಯ ಉಪಕಾರವನ್ನು ಕಟ್ಟಿಕೊಳ್ಳು.

ಸಂಗಮ— ಲಲನೆಯೇ, ವಿಚಾರಿಸು; ನಿನ್ನ ವರ್ತನವನ್ನು ವಿರಾಗಿಗಳು ಸೈರಿಸರು. ಬೆಂಕಿಯಿಂದ ಅಡಿಗೆಯನ್ನು ಮಾಡಿಕೊಳ್ಳಬೇಕಲ್ಲದೆ ಮನೆಯನ್ನು ಸುಟ್ಟುಕೊಳ್ಳಬಾರದು. ಮಹಿಮರಿಂದ ಪಾರಮಾರ್ಥದ ಸುಖವನ್ನು ಪಡೆಯಬೇಕಲ್ಲದೆ ಅವರ ಕೋಪಕ್ಕೆ ಪಕ್ಕಾಗಿ ಹಾನಿಯನ್ನು ತಂದುಕೊಳ್ಳುವದುಂಟೇ? ಪಾಪಾಚರಣೆಗೆ ಅನುಕೂಲವಾಗುವದು ಉಪಕಾರವೇ? ಜಾರಕರ್ಮದಿಂದ ಎಷ್ಟು ಹಾನಿಗಳಿವೆ ಬಲ್ಲೆಯಾ? ಮನವು ಕೆಡುವದು; ದುಡಿಮೆ ನಿಲ್ಲುವದು; ಧನವು ಹಾಳಾಗುವದು; ಜನರೊಳು ನಾಚಿಗೆಗೇಡಾಗುವದು; ದೇಹಕಾಂತಿಯಳಿಯು

ವದು; ರೋಗಪೀಡೆಯಾಗುವದು; ಜನರೊಳು ಅಪಮಾನವಾಗುವದು; ದುಷ್ಟನಡತೆಗಳು ಕಾಲೂರುವವು; ಪುಣ್ಯವು ಹಾಳಾಗುವದು; ದುರಭಿಮಾನವು ಬೆಳೆಯುವದು; ಕುಲಜಾತಿಶೀಲಗಳು ತೊಲಗುವವು; ಮೋಹವಂಟೆ ಪೀಳಿಗೆಯು ಬಲಹೀನವಾಗುವದು; ಆಯುಷ್ಯವು ಇಳಿಯುವದು; ಅಪಜಯವು ಎದುರಿಸುವದು; ನರಕದ ದಾರಿಯು ತೋರುವದು. ಹೀಗೆ ಒಂದೇ ಎರಡೇ ಅನಂತ ನಷ್ಟಗಳು ಸಂಭವಿಸುವವು. ಕಾಮಣಿಯಾದವಗೆ ಜಗತ್ತೆಲ್ಲ ಹಸುರಾಗಿಯೇ ಕಾಣುವಂತೆ ಕಾಮಿನಿಗೆಲ್ಲರು ಕಾಮಾಂಧರಾಗಿಯೇ ತೋರುವರು. ವಿಶ್ವಾಮಿತ್ರ ಪರಾಶರಾದಿಗಳ ಯೋಗ್ಯತೆಯನ್ನೇನು ಬಲ್ಲೆ? ಕಾಮಸುಖವೊಂದಲ್ಲದೆ ಇನ್ನೊಂದನ್ನು ನೀನು ಅರಿಯೆ! ನಿನಗಿದೇ ಮೇಲು!! ರನ್ನದ ಗುರುತುಳ್ಳವನು ಗಾಜುಮಣಿಗೊಲಿಯುವನೇ? ಹಾಗೆಯೇ ಮುಕ್ತಿಸುಖವನ್ನು ಬಲ್ಲವನು ಸ್ತ್ರೀಸುಖಕ್ಕೊಲಿವನೇ? ನಿನ್ನ ಹಂಬಲವ ಬಿಡು; ಮನೆಗೆ ನಡೆ; ನಿನ್ನ ಗಂಡನಲ್ಲಿ ಕಾಮಶಾಂತಿಯನ್ನು ಹೊಂದು; ಆತನನ್ನು ಸೇವಿಸಿ ಸದ್ಗತಿಯನ್ನು ಪಡೆ.

ಯುವತಿ—ಮಹಿಮಾನಿಧಿಯೇ ಅಲ್ಲಗಳೆಯಬೇಡ; ನನ್ನ ಮನವು ತಿರುಗದು. ಸ್ತ್ರೀಭೋಗದ ಸುಖದ ಸವಿಯನ್ನು ವರ್ಣಿಸಲಶಕ್ಯವು; ಅದನ್ನು ಭೋಗಿಸದವನ ಬಾಳು ಬಾಳೇ ಅಲ್ಲ; ನೀನೊಮ್ಮೆ ಅದನ್ನು ಕಾಣು; ನನ್ನ ನಿರಾಕರಿಸಬೇಡ; ಕರುಣಿಸು.

ಸಂಗಮ—ತಾಯೆ, ಇನ್ನೇನು ಹೇಳಲಿ? ನಿನ್ನಂತೆ ರೂಪದಿಂದಿದ್ದಳು ನನ್ನ ತಾಯಿ! ನಿನ್ನ ನೋಡಿದರೆ ಅವಳ ನೋಡಿದಂತಾಗುವದು! ಇನ್ನು ವಿಲಾಸದಿಚ್ಛೆಯೆಲ್ಲಿಂದ ಬರಬೇಕು?

ಯುವತಿ—ಇದೇನು ಮರುಳತನ? ತಾಯಿಯೊಡನೆ ಮಾಡುವ ಶಿಶುಕೇಳಿಯೆತ್ತ? ಯುವತಿಯೊಡಗೂಡಿದ ರತಿಕೇಳಿಯೆತ್ತ? ಕಂಡಕಂಡವರು ತಾಯಿಯಂತೆಯೇ ಆಗುವರೇ? ಸ್ತ್ರೀಭೋಗವು ಸರ್ವರಿಗೂ ಸಹಜವು. ನಿನಗೆ ಹುಚ್ಚುಹಿಡಿದಿದೆಯೋ? ನಪುಂಸಕನಿರುವೆಯೋ? ಅಥವಾ ಪುರುಷನಲ್ಲೇ?

ಸಂಗಮ— ನಿಜ; ರಾಗಿಗಳ ಕಣ್ಣಿಗೆ ವಿರಾಗಿಗಳಾದ ನಾವು ಮರುಳರೇ. ನಾಗವೇಣಿಯ ಇಚ್ಛೆಗೆ ಒಪ್ಪದಿದ್ದರೆ ನಪುಂಸಕರಾದುದೂ ಸರಿಯೇ. ಇನ್ನು ಉದ್ಯೋಗವನ್ನುಳಿದು ತಿರಕೊಂಬುವವರು ಪುರುಷರೂ ಅಲ್ಲ. ಸರಿ, ಇಷ್ಟು ತಿಳಿದ ನೀನಿನ್ನು ಸುಮ್ಮನೆ ನಡೆಯಂದರಾಯಿತು.

ಆ ಯುವತಿಯ ಮನವು ಮತ್ತಿಷ್ಟು ತಳಮಳಗೊಂಡಿತು. ವಿರಹವ್ಯಥೆಯನ್ನು ತಡೆಯುವದಾಗಲಿಲ್ಲ. ಭಯಬಿಟ್ಟಳು; ನಾಣಗೆಟ್ಟಳು; ಅರಿವನುಳಿದಳು. ಕಾಮಾಂಧಳಾಗಿ ಮೇಲೆ ಬೀಳಲು ಆತುರಿಸಿ ಬರಲು ದೇಶಿಕನು ಕ್ರುದ್ಧನಾಗಿ ಹಿಂದೆ ಸರಿದು ಎದೆಗೊದೆದನು. ಆಕೆ ಸಿಡಿದು ಬಿದ್ದಳು. ಸಾವರಿಸಿಕೊಂಡೇಳುತ್ತ ಅಳುತ್ತ ಚಿಟುಕು ಮುರಿದು "ಹೆಣ್ಣಿನ ಗೋಳಕಟ್ಟಿಕೊಂಡ ಪಾಪೀ ಹಾಳಾಗಿ ಹೋಗು. ಇದಾವ ದೊಡ್ಡಸ್ತಿಕೆ? ಬೇಡಿಕೊಂಡವಳನ್ನು ನೋಡದಿಹ ನಿಷ್ಠುರನೇ ನಿನಗೀಗೋಳ ಇಟ್ಟಿರಲಿ! ಇಷ್ಟೊಂದು ಮಾಡಿದ ಕೋಪಿಷ್ಟನೇ ಒಮ್ಮೆ ನೋಡುತ್ತೇನೆ ನಿನ್ನ ಗಟ್ಟಿಮನಸ್ಸಿನ ಬಲವನ್ನು! ಕಡೆಗಾದರೂ ನಿನ್ನ ಕೂಡದಿದ್ದರೆ ನಾನು ಹೆಣ್ಣಲ್ಲ!!" ಎಂದು ದುಃಖದಿಂದಲೂ ಹೇವದ ಉರಿಯಿಂದಲೂ ತಳಮಳಗೊಳ್ಳುತ್ತ ಮನೆಗೆ ಬಂದಳು. ಕಾಮಾದಿ ಷಡ್ರಿಪುಗಳನ್ನು ಆ ದೇಶಿಕನು ಸಂಪೂರ್ಣ ಜಯಸಿದ್ದನು. ಕಾಮನಿಗ್ರಹಕ್ಕಾಗಿ ಅವನಿಗೆ ಇಷ್ಟಾದರೂ ಸಿಟ್ಟುಬಂದದ್ದು ಆಶ್ಚರ್ಯಕರವು.

ಈ ಸಂಗಮ ದೇಶಿಕನು ಲಿಂಗೈಕ್ಯನಾದ ಎರಡು ವರ್ಷಕ್ಕೆ ಅವಳು ತೀರಿದರೂ, ತನ್ನ ಪ್ರತಿಜ್ಞೆಯ ಸಂಕೇತದಂತೆ ದೇಶಿಕನ ಗದ್ದುಗೆಯ ಬುಡದಲ್ಲಿ ಬನ್ನಿಯ ಗಿಡವಾಗಿ ಹುಟ್ಟಿದಳು. ಗಿಡವೂ ಬಲಾತ್ಕಾರವಾಗಿ ಗದ್ದುಗೆಯನ್ನು ಸೀಳಿಸುತ್ತಿತ್ತು. ಎಷ್ಟುಸಾರೆ ಕಡಿದರೂ ಚಿಗಿತು ಬೆಳೆಯುತ್ತಲೇ ಇತ್ತು. ಇದಲ್ಲದೆ ಆಕೆಯು ಪೂರ್ವವಾಸನೆಯ ಬಲದಿಂದ ಪಿಶಾಚಿಯಾಗಿ ಮಠವನ್ನು ಸೇರಿದಳು. ಆಕೆಯು ಒಮ್ಮೊಂದೊಮ್ಮೆ ಪ್ರಕಟವಾಗಿ ತಿರುಗಾಡಿ ಮಾಯವಾಗುವಳು. ಆಭ

ರಣಗಳನ್ನು ಅಲುಗಿಸುವಳು. ಮತ್ತೊಮ್ಮೆ ಮದ್ದಾನೆಯಂತೆ ಸೌಂದರ್ಯದಿಂದ ಚರಿಸುವಳು. ಮಲಗಿದವರ ಕಾಲು ಹಿಡಿದು ಎಳೆಯುವಳು. ಇಟ್ಟ ಒಡವೆಗಳನ್ನು ಅಡಗಿಸುವಳು.

ಅನ್ನದಾನೀಶ್ವರರೊಮ್ಮೆ ಆ ಮಠಕ್ಕೆ ಬಂದಾಗ ಸ್ವತಃ ಆ ಗಿಡವನ್ನು ಕಡಿಸಿದರು. ಅವರ ತೇಜಃಪ್ರಭಾವಕ್ಕೆ ಭಯಗೊಂಡು ಆ ಮಾಯಾಸ್ತ್ರೀಯು ಅವರ ಕಾಲಿಗೆರಗಿ ತನ್ನನ್ನು ಉದ್ಧರಿಸಬೇಕೆಂದು ಬೇಡಿಕೊಂಡಳು. ಸ್ವಾಮಿಗಳು ಆಕೆಗೆ--"ನೀನು ಛಲವನ್ನು ಬಿಟ್ಟು ಶಾಂತತೆಯಿಂದ ಇರಬೇಕಾಗಿದ್ದರೆ ದೇಶಿಕನ ಗದ್ದುಗೆಯ ಬುಡವನ್ನು ಬಿಟ್ಟು ಮುಂದಿನ ಸ್ಥಳದಲ್ಲಿ ಬೆಳೆದಿರು" ಎಂದರು. ಆಕೆ ಯೊಪ್ಪಿದಳು. ಮುಂದೆ ಮಠದೊಳಗಿನ ಆ ಸದ್ದೂ ಅಡಗಿತು. ಆ ಗದ್ದುಗೆಯ ಮುಂದೆ ಮುಳ್ಳಿಲ್ಲದ ಮೃದುಲವಾದ ಬನ್ನಿಯ ಗಿಡವು ಮತ್ತೆ ಹುಟ್ಟಿ ಬೆಳೆಯಿತು.

ಹಾಲಗೆರೆಯಲ್ಲಿ ಪ್ರತಿವರ್ಷ ಮಾರ್ಗಶಿರ್ಷ ಕೃಷ್ಣ ೫ಗೆ ನಿರಂಜನ ಜಗದ್ಗುರುಗಳ ಗದ್ದುಗೆಯ ದೊಡ್ಡ ಜಾತ್ರೆಯಾಗುವದು. ಪ್ರತಿವರ್ಷ ಅಸಂಖ್ಯ ಜನರಿಗೆ ಅನ್ನಸಂತರ್ಪಣೆಯಾಗುವದು. ಒಂದು ವರ್ಷ ಪ್ರತಿ ವರ್ಷಕ್ಕಿಂತ ಮಿಕ್ಕಿ ಅಗಣಿತ ಜನರು ಕೂಡಿದರು. ಒಳ್ಳೇ ಹೊತ್ತಿಗೆ ತುಪ್ಪವು ಕಡಿಮೆ ಬಿದ್ದಿತು. ಸ್ವಾಮಿಗಳು ಕೇಳಿದರು. "ಕುಡಿಯುವ ನೀರಿನ ಕೆರೆಯಲ್ಲಿ ಆರು ಕೊಡ ತುಪ್ಪವನ್ನು 'ಕಡ' ತನ್ನಿ"ರೆಂದು ಆಜ್ಞಾಪಿಸಿದರು. ಕೂಡಲೆ ಕೆರೆಗೆ ಹೋಗಿ ಆರು ಕೊಡಗಳನ್ನು ತುಂಬಿ ತಂದರು. ಆ ನೀರೇ ಘಮಘಮಿಸುವ ತುಪ್ಪವಾಗಿತ್ತಂತೆ. ಜಾತ್ರೆಯ ತರುವಾಯ ಬೇರೆ ಕಡೆಯ ತುಪ್ಪವನ್ನು ತರಿಸಿ ಕಡ ತಂದ ತುಪ್ಪವನ್ನು ಕೊಟ್ಟು ಬರ್ರಿ, ಎಂದು ಹೇಳಿದರು. ಕೂಡಲೆ ಅಷ್ಟು ತುಪ್ಪವನ್ನು ಕೆರೆಯಲ್ಲಿ ಸುರುವಿದರು. ಅದು ನೀರಾಗಿ ನೀರೊಡನೆ ಕೂಡಿಬಿಟ್ಟಿತು.

ಮರುವರ್ಷದ ಜಾತ್ರೆಯ ಗಣಾರಾಧನೆಯಲ್ಲಿ ಜಂಗಮನೋರ್ವನು ಎಲ್ಲರಂತೆ ಎಲೆಯಲ್ಲಿ ಉಣ್ಣದೆ ಎಡೆಯ ಬಟ್ಟಲವೇ ಬೇಕೆಂದು ಹಟ ಹಿಡಿದನು. ಎಡೆ ಮಾಡುವವರು, ನಿನಗೊಬ್ಬನಿಗೇ ಬೇರೆ ಏಕೆ?

ಎಂದು ಕೊಡಲೊಲ್ಲದೆ ಕೋಪಿಸಲು, ಅವನು ಎದ್ದು ಹೋದನು. ಇದನ್ನು ಕೇಳಿ ಸ್ವಾಮಿಗಳು ಅವನನ್ನು ಹುಡುಕಿಸಿದರೂ ಸಿಗಲಿಲ್ಲ. ಆಗ ಅವರು ಆ ಕೆಲಸಗಾರರನ್ನು ಕರೆದು ಸಿಟ್ಟು ಮಾಡಿ—"ಭಕ್ತಿಯಿಲ್ಲದೆ ನೀವೆಷ್ಟು ದೊಡ್ಡ ಗಣಾರಾಧನೆಯನ್ನು ಮಾಡಿದರೂ ಪ್ರಯೋಜನವಿಲ್ಲ. ಶಿವನು ಐಶ್ವರ್ಯ, ಅಧಿಕಾರ, ಜಾಣ್ಮೆಗಳಿಗೆ ಒಲಿಯನು. ವಿಶ್ವಾಸದಿಂದ ತನ್ನನು ಕಾಣುವವರಿಗೆ ಭವಬಾಧೆಯಿಲ್ಲೆಂದು ಸಾರಿರುವನು. ಬಸವೇಶ್ವರಾದಿಗಳು ಭಕ್ತಿಯಿಂದಲೇ ಮಹಿಮರಾದರು. ಭಕ್ತಿಯು ಶ್ರೇಷ್ಠವಾದದ್ದು. ಭಕ್ತಿಯಿಂದಲೇ ಮುಕ್ತಿ. ಬೇಕಾದ ಕಾಲದಲ್ಲಿಯೂ ಬೇಕಾದೆಡೆಯಲ್ಲಿಯೂ ತನ್ನ ಮೇಲೆ ಮಮತೆಯಿರುವಂತೆಯೇ ಗುರುದೇವತೆಗಳಲ್ಲಿ ಅನುರಾಗವಿರುವದೇ ಭಕ್ತಿ. ಸತಿಸುತಾದಿಗಳ ಮೇಲಿನ ಪ್ರೀತಿಯು ಮೋಹವೆನಿಸುವದು; ಗುರುದೇವತೆಗಳ ಮೇಲಿನ ಪ್ರೀತಿಯು ಭಕ್ತಿಯೆನಿಸುವದು. ಮೋಹವು ಯಮನ ಶಿಕ್ಷೆಗೆ ಗುರಿಮಾಡುವದು; ಭಕ್ತಿಯು ವಿಖ್ಯಾತಪರಿಪೂತಸುಖವ ಕೊಡುವದು. ಮಾಂಗಲ್ಯವೊಂದಿಲ್ಲದಿದ್ದರೆ ಸರ್ವಾಭರಣಗಳು ಶೋಭಿಸವು; ಭಕ್ತಿಯೊಂದಿಲ್ಲದಿದ್ದರೆ ನಾನಾತರದ ಜಪತಪಾದಿಗಳು ಫಲಿಸವು. ಭಕ್ತಿಯು ಸರ್ವೋತ್ತಮವಾದದ್ದು. ಬಂದ ಮಾಹೇಶ್ವರನು ಮುನಿದು ಹೋದದ್ದು ಭಕ್ತಿಗೆ ಕುಂದು; ಶಿವರೂಪಿಯಾದ ಜಂಗಮನಿಗೆ ಸರ್ವಸ್ವವನ್ನು ಒಪ್ಪಿಸುವದೇ ಭಕ್ತಿಯು; ಜಂಗಮನೇ ಲಿಂಗಮುಖವು; ಆತನನ್ನು ತೃಪ್ತಿಗೊಳಿಸಿದರೆ ಗುರುಲಿಂಗಜಂಗಮಪ್ರಸಾದವುಂಟಾಗುವದು. ಬರೇ ಲಿಂಗವನ್ನು ತಣಿಸುವವನು ಬರಿಗೈ ಬಂಟನು. ಬೇರಿಗೆ ನೀರು ಹಾಕಿದರೆ ಟೊಂಗೆ ಹೂ-ಕಾಯಿಗಳು ಕಳೆಗೊಳ್ಳುವವು. ಜಂಗಮನನ್ನು ತಣಿಸಿದರೆ ಬ್ರಹ್ಮಾಂಡವು ಸಂತೃಪ್ತಿಗೊಳ್ಳುವದು. ಜಂಗಮಸತ್ಕಾರವೇ ಭಕ್ತವರ್ತನವೆಂಬ ನಿಗಮೋಕ್ತಿಯನ್ನು ಮೀರಿದ ನಿಮ್ಮ ಜಾಣತನವು ಮಣ್ಣುಗೂಡಿತು. ಮನೆಯಲ್ಲಿ ಅತಿಥಿಗೆ ಭೇದವ ಮಾಡಿದ ಹೆಂಡರನ್ನು ಬಿಟ್ಟ ಮಹನೀಯರುಂಟು. ನೀವಿನ್ನು ಹೀಗಾಗದಂತೆ ನಡೆಯಿರಿ. ಮನಕ್ಕೆ ಎಚ್ಚರವಿರಲಿ! ಆತನು ಸಾಮಾನ್ಯ ಜಂಗಮ

ನಲ್ಲ; ಶಿವನೇ ತಾನು ಹೀಗೆ ಬಂದು ಹೋದನು, ನಿಶ್ಚಯ!" ಎಂದು ಹೇಳಿದರು. ಮತ್ತು ತಾವು ಆ ಹೊತ್ತು ಅಡಿಗೆಯಲ್ಲಿ ಹಾಕಿದ ಎಲ್ಲ ಜೀನಸುಗಳನ್ನು ಬಿಟ್ಟು ಉಪ್ಪಿಲ್ಲದ ಸಾವಕ್ಕಿಯ ಅಂಬಲಿಮಜ್ಜಿಗೆಗಳನ್ನು ಅರ್ಪಣಮಾಡಹತ್ತಿದರು. ಅದನ್ನು ನೋಡಿ ಆ ಜನರು "ತಮ್ಮಿಂದ ಅಪರಾಧವಾಯಿತು. ಸ್ವಾಮಿದ್ರೋಹವನ್ನು ಮಾಡಿದೆವು. ಇದು ಎಂದು ಪರಿಹಾರವಾಗುವದೋ?" ಎಂದು ಮರುಗಿ ಪಶ್ಚಾತ್ತಾಪಬಟ್ಟರು.

ಮುಂದಿನವರ್ಷದ ಗಣಾರಾಧನೆಯಲ್ಲಿಯೂ ಪಂಕ್ತಿಯಲ್ಲಿ ಅವನಿರುವದನ್ನು ಗುರ್ತಿಸಿ ಕಂಡು ಕಾರ್ಯನಿರ್ವಾಹಕರು ಆನಂದದಿಂದ ಓಡಿಬಂದರು. ಸ್ವಾಮಿಗಳಿಗರುಹಿದರು. "ಬೇರೆ ಆಲೋಚನೆಯಿಲ್ಲದೆ ತೃಪ್ತಿಬಡಿಸಿರಿ" ಎಂದವರು ಆಜ್ಞಾಪಿಸಿದರು. ಆತನು ಮತ್ತೆ ಎಡೆಯ ಬಟ್ಟಲವನ್ನೇ ಬೇಡಿದನು; ಕೊಟ್ಟು ಸರಿಯಾಗಿ ಎಡೆಯ ಮಾಡಿದರು. ಸ್ವಾಮಿಗಳು ಪಂಕ್ತಿಯಲ್ಲಿ ತಿರುಗಾಡಿ ಆತನ ನಿಜಸ್ವರೂಪವನ್ನು ತಿಳಿದು, ಆನಂದದಿಂದ ಪುಲಕಿತರಾಗಿ ಮೇಲೆ ಮೇಲೆ ಒಂದೊಂದು ನೆವಗಳಿಂದ ಮಾತಾಡಿದರು. ನೋಡಿ ನೋಡಿ ತೃಪ್ತಿಗೊಂಡು ಒಳಗೆ ಹೋದರು.

ಇತ್ತಲಾ ಜಂಗಮನು ಹೊರಗೆ ಹೋಗುವಾಗ ಭಕ್ತರು ಆತುರದಿಂದ 'ನಿಮ್ಮ ಊರು ಆವದು? ನಿಮ್ಮ ಕಾಯಕವೇನು? ಎಲ್ಲಿ ಇಳಕೊಂಡಿರುವಿರಿ? ಎಂದು ಕೇಳಿದರು. "ನಮಗಾವ ಊರು? ಕಾಯಕವೆಲ್ಲಿಯದು? ಇಲ್ಲಿಯೇ ಇಳಿದಿರುವೆನು" ಎಂದು ಹಾಗೂ ಹೀಗೂ ಹೇಳುತ್ತ ಹಾಗೇ ನಡೆದನು. ಜನರು ಇನ್ನೂ ಬೆಂಬಳಿಸಿರಲು ಅಷ್ಟರೊಳಗಲ್ಲಿಯೇ ಬಯಲಾದನು. ಇದನ್ನು ಕೇಳಿ ಸ್ವಾಮಿಗಳು ಆ ಜನರಿಗೆ--ಶಿವಲೀಲೆ ತಿಳಿಯದು. ಆತನಗೊಡವೆ ನಿಮಗೇಕೆ? ಗಣಸಮೂಹದಲ್ಲಿ ಆತನು ಚರಿಸುತ್ತಲೇ ಇರುವನು. ಶಿವನರಿವು ಶಿವಜ್ಞಾನಿಗಳಿಗೇ ಸರಿ" ಎಂದರು.

ಆ ಜನರು—“ಶಿವನೊಡನೆ ಜಗಳಾಡಿ ಮಾತಾಡಿ ನೋಡಿ ಶಿವನೆಂಬವನ್ನು ತಿಳಿಯದಾದೆವು ಅಧಮರು ನಾವು! ಚಿಂತಾಮಣಿಯು ಮೂಸಿನೋಡಿ ಚಲ್ಲುವ ಮಂಗನ ಬಾಳೂ ನಮ್ಮ ಬಾಳೂ ಒಂದೇ. ಆ ಜಂಗಮನು ಇಲ್ಲಿಯೇ ಈ ಮಠದಲ್ಲಿಯೇ ಇರುವೆನೆಂದನು. ಆ ಶಿವನು ಈ ಸ್ವಾಮಿಯಲ್ಲದೆ ಇನ್ನಾರು? ಸಂದೇಹವೇನಿದಕ್ಕೆ? ಇವ ನಲ್ಲದೆ ಬೇರೆ ಶಿವನನ್ನು ಅರಸುವದುಂಟೆ?” ಎಂದು ಗುರುವಿನ ಕಾಲುಗಳಿಗೆರಗಿ “ನೀನೆ ಶಿವನು; ಶಿವನಿರುವಸ್ಥಾನವೂ ನೀನು; ನಿನ್ನ ಮಹಿಮೆಯೇ ಘನವಾದುದು” ಎಂದು ಹೊಗಳಿದರು. ಸ್ವಾಮಿ ಗಳು ನಸುನಕ್ಕು—“ಹಿಂದೆ ನಮ್ಮ ಗುರುವರರು ಎಷ್ಟೋ ತಪಸ್ಸನ್ನು ಮಾಡಿ ಈ ಸ್ಥಳದಲ್ಲಿ ಅಗಣಿತಪುಣ್ಯರಾಶಿಯನ್ನು ತುಂಬಿರುವರು. ಆದರಿಂದ ಮಹತ್ತ್ವಸಂಗದಲ್ಲೆಲ್ಲ ಶಿವನು ತಪ್ಪದೆ ಬರುವನು. ಬೇರೆ ಬಗೆಯಿಂದಾದ ಮಹಿಮೆಗಳು ತನ್ನವೆಂದು ನಂಬಿ ಸೊಕ್ಕಿ ತಾಪ ವನ್ನ ಪೊಂದಿದವರುಂಟು. ಆದರಿಂದ ಮಹಿಮರಾದ ಹಿಂದಿನ ಗುರು ವರರನ್ನು ಹೊಗಳಿರಿ” ಎಂದರು. ಎಲ್ಲರೂ ಆ ಸದುಕ್ತಿಗಳ ಸದ್ಭಾವ ಬೋಧನೆಯಿಂದ ಆನಂದತುಂದಿಲರಾದರು.

ಅನ್ನದಾನೀಶ್ವರಸ್ವಾಮಿಗಳು ಮಠದಲ್ಲಿ ಮಂದಿಯಲ್ಲಿ ಇರಲು ಬೇಸತ್ತು ಆಗಾಗ ಶಿವಪುರ (ಕೋಡೀಕೊಪ್ಪ)ದ ರಮ್ಯವಾದ ತೋಟ ಗಳಲ್ಲಿ ಬಂದು ಯೋಗಸಾಧನದಲ್ಲಿರುತ್ತಿದ್ದರು. ಅಲ್ಲಿ ತೋಟಿಗರೂ ಭಕ್ತರೂ ಆಶ್ರಮವನ್ನು ರಚಿಸಿ ಅನೇಕ ಅನುಕೂಲಗಳನ್ನು ಮಾಡಿ ಕೊಡುತ್ತಿದ್ದರು. ಕಂದಮೂಲಾದಿ ಸಾಹಿತ್ಯಗಳಿಂದಲೂ ವಟುಗ ಳಿಂದಲೂ ಆಶ್ರಮವು ರಂಜಿಸುತಲಿದ್ದಿತು.

ಆದೇ ಆಶ್ರಮದಲ್ಲಿ ಒಮ್ಮೆ ಬಸವಪುರಾಣವನ್ನು ಹಚ್ಚಿದರು. ಪುರಾಣಸಮಾಪ್ತಿಯ ಗಣಾರಾಧನೆಗೆ ಏಳೆಂಟುಸಾವಿರ ಗಣಂಗಳಿಗೆ ಸಾಲುವಷ್ಟು ಅಡಿಗೆಯನ್ನು ಮಾಡಿಸಿದ್ದರು. ಆದರೆ ಹದಿನೆಂಟು ಸಾವಿರಜನರು ಕೂಡಿದರು. ಆರಂಭದಲ್ಲಿಯೇ ಅನ್ನವು ಅರ್ಧಸರಿ

ಯಿತು; ಪ್ರಮುಖರು ವಿಚಾರಕ್ಕೆ ಬಿದ್ದರು; ಅಪವಾದಕ್ಕೆ ಅಂಜಿದರು; ಕೂಡಲೇ ಅವರು ಒಲೆಯ ಮೇಲೆ ಹಂಡೆಗಳನ್ನು ಇಡಿಸಿ, ಅಕ್ಕಿಗಾಗಿ ನರೆಗಲ್ಲಿಗೆ ಚಕ್ಕಡಿಗಳನ್ನು ಹೂಡಿದರು. ಸ್ವಾಮಿಗಳು ಕೇಳಿದರು; ಮುಂದೆ ಬಂದರು; 'ಬೇಡ ಇನ್ನು ನಿಮ್ಮ ಹಂಚಿಕೆ ನೆರವೇರದು; ಹೊತ್ತು ಉಳಿದಿಲ್ಲ. ಇದೇ ಸಾಲಬಹುದು. ಆಲೋಚನೆಯಿಲ್ಲದೆ ನೀಡಿರಿ' ಎಂದು ಅನ್ನದರಾಶಿಗೆ ಪಾದೋದಕವನಿಕ್ಕಿ ಸಾಗಿಸಿದರು. ಎಲ್ಲರೂ ಉಂಡರು. ಮರುದಿನವೂ ನಾಲ್ಕೈದು ಸಾವಿರ ಜನರು ಅದೇ ಅಡಿಗೆಯಿಂದ ತೃಪ್ತಿಗೊಂಡರು. ಬಲವುಳ್ಳವನೆಂಬ ಹೆಮ್ಮೆಯಿಂದ ಬಹುಮಂದಿಗೆ ಊಟಮಾಡಿ ಸಾಲುವದೋ ಸಾಲದೋ ಎಂದು ಸಂಶಯಗೊಂಡರೆ ಸಾಲದೇ ಹೋಗಬಹುದು. ಭಕ್ತಿಯಿಂದ ಮಾಡಿದ ಅಡಿಗೆಯನ್ನು ಶಿವಸಂಸ್ಕಾರಗೊಳಿಸಿ ನೀಡಿದರೆ ಕೊರತೆಯಾಗುವದೇ?

ಅಲ್ಲಿ ಪುರಾಣಕ್ಕೆಂದು ಮತ್ತೊಂದು ವಿಸ್ತೀರ್ಣವಾದ ಪರ್ಣಶಾಲೆಯನ್ನು ರಚಿಸಿದ್ದರು. ಸುತ್ತಲಿನ ನೆಲದ ಸೊಬಗಿನಿಂದಲೂ ಸುಳಿಗಾಳಿಯ ಸುಳಿವಿನಿಂದಲೂ ಗಿಡಗಳ ಗುಂಪಿನ ತಂಪಿನಿಂದಲೂ ಆ ಶಾಲೆಯು ಆಹ್ಲಾದದಾಯಕವಾಗಿತ್ತು. ಸ್ವಾಮಿಗಳು ಮುಂದೆ ಅದೇ ಮಂಟಪದಲ್ಲಿ ಕುಳಿತು ಭಕ್ತಜನರೊಡನೆ ಶಿವಗೋಷ್ಠಿಗಳನ್ನಾಡುತ್ತಿದ್ದರು. ಎರಡು ತಿಂಗಳು ಕಳೆದ ಬಳಿಕ ಅವರು ಹಿಮಾಲಯ ಯಾತ್ರೆಗಾಗಿ ಹೊರಟರು. ಭಕ್ತವರ್ಗವು ವಿನಯದಿಂದ—"ಗುರುವೆ, ಅಲ್ಲಿ ಅತಿಶೀತ; ಪ್ರಕೃತಿಗೆ ತಡೆಯಲಿಕ್ಕಿಲ್ಲ. ತೊಂದರೆಯೇನಾದರೂ ಆದರೆ ನಮಗಿಲ್ಲಿ ತಿಳಿಯದು. ಬರುವದಕ್ಕೆ ಎಷ್ಟೋ ದಿನವಾಗಬಹುದು. ಇದಕ್ಕಾಗಿ ಕಳವಳವಾಗುವದು" ಎಂದು ಕೇಳಿಕೊಂಡರು. ಅದಕ್ಕೆ ಸ್ವಾಮಿಗಳು—"ಕೊರಗದಿರಿ; ನಮಗೆ ತಿರುಗಿ ಬರಲು ಎರಡು ವರ್ಷ ಹಿಡಿಯಬಹುದು. ನಿಮಗೆ ಈ ಮಂಟಪದಲ್ಲಿ ಎಲ್ಲಿಯ ವರೆಗೆ ಆನಂದ ಆಶ್ಚರ್ಯಗಳೆನಿಸುವವೋ ಅಲ್ಲಿಯ ವರೆಗೆ ನಮ್ಮ ಪ್ರವಾಸವು ಸುಖಕ

ರವೆಂದು ತಿಳಿಯಿರಿ" ಎಂದು ಹೇಳಿ ಸರ್ವಸಿದ್ಧತೆಯಿಂದ ಶಿವಪೂಜನೇ ಮೊದಲಾದ ಕೆಲಜನರೊಡನೆ ಹೊರಟುಹೋದರು.

ಭಕ್ತಜನರು ದಿನಾಲೂ ಆ ಮಂಟಪಕ್ಕೆ ಬಂದು ವಿರಮಿಸುತ್ತಿದ್ದರು. ಒಂದುದಿನ ಕೆಲವರು "ಈ ಸ್ಥಳವೇ ಸೊಬಗಿನದಾಗಿದೆ; ಆನಂದವಾಗುವದು ಸಹಜವು. ಇದರಿಂದ ಸ್ವಾಮಿಗಳ ಪ್ರವಾಸದಲ್ಲಿಯ ಸೌಖ್ಯವು ಹೇಗೆ ತಿಳಿಯಬೇಕು? ಇಲ್ಲಿ ವಿಶೇಷ ಆಶ್ಚರ್ಯವೇನಾದರೂ ಒದಗಲಿರುವದೇ? ಇಲ್ಲ" ಎಂದು ಆಕ್ಷೇಪಿಸಿದರು. ಮರುದಿವಸ ಅವರು ನಿತ್ಯದಂತೆ ಬಂದು ನೋಡುತ್ತಾರೆ, ಅತ್ಯಂತ ಆಶ್ಚರ್ಯ! ನಾಲ್ಕಾರುತಿಂಗಳ ಹಿಂದೆ ಕಡಿದು ಮೇಲೆ ಹಾಕಿದ ಬೇವಿನ ತೊಲೆಜಂತೆಗಳು ಚಿಗಿತಿವೆ. ಹೂ ಕಾಯಿಗಳು ಏಕಕಾಲದಲ್ಲಿಯೇ ಆಗಿವೆ. ಬೇವು ಫಲಿಸುವಕಾಲವೂ ಅದಲ್ಲ. ಆ ಜನರು, ಪರಮಾಶ್ಚರ್ಯವೆಂದೂ ಗುರುವಿನ ಮಹಿಮೆಯೆಂದೂ ಕೊಂಡಾಡಿದರು. ಇಂಥ ಘನಮಹಿಮನಿಗೆ ಪ್ರಕೃತಿಯು ತೊಂದರೆಯನ್ನೀಯಲು ಸಮರ್ಥವೇ? ಎಂದು ಆನಂದಗೊಂಡರು.

ಇದೇ ಪ್ರಸಂಗದಲ್ಲಿ ಅನ್ನದಾನೀಶ್ವರರ ಹಿಮವತ್ಕೇದಾರೇಶ್ವರ ಯಾತ್ರೆಯ ಸಂತಿಗಳನ್ನಷ್ಟು ವಾಚಕರಿಗೆ ತಿಳಿಸುವದು ಯುಕ್ತವಾಗಿ ಕಾಣುತ್ತದೆ. ಅವರು ಇಲ್ಲಿಂದ ಹೊರಟು ಮೊದಲು ನಾಸಿಕದಲ್ಲಿ ತ್ರ್ಯಂಬಕೇಶ್ವರನಿಗೆ ದರ್ಶನಕೊಟ್ಟರು. ಬಳಿಕ ನರ್ಮದಾತೀರದಲ್ಲಿ ಓಂಕಾರೇಶ್ವರನನ್ನು ಕಾಣಿಸಿಕೊಂಡರು. ನಂತರ ಹರಿದ್ವಾರಕ್ಕೆ ಹೋಗಿ ಗಂಗಾತೀರದಲ್ಲಿ ಅನುಷ್ಠಾನವನ್ನು ಮಾಡಿದರು. ಬದರಿಕಾಶ್ರಮಕ್ಕೆ ಬಂದು ಕೇದಾರಪೀಠದ ಆಚಾರ್ಯರಿಂದ ಸತ್ಕಾರವನ್ನು ಹೊಂದಿದರು. ಗುಪ್ತಕಾಶಿಗೆ ಬಂದು ಊಖೀಮಠದಲ್ಲಿ ಎಂಟುದಿನವಿದ್ದರು. ಗೋಮುಖದಿಂದ ಹೊರಡುವ ಭಾಗೀರಥಿಯ ಪ್ರವಾಹಕ್ಕೆ ಅಲ್ಲಿ ಬಿಸಿನೀರಿನ ಪ್ರವಾಹವೊಂದು ಬಂದು ಕೂಡುವದು. ಅದರ ನೀರಿಗೆ ಹಳದಿಯ ಬಣ್ಣವಿರುವದು. ಪಾರ್ವತಿಯು ಮಗನನ್ನು ಪಡೆದಂಥ ಆ

ಉಷ್ಣೋದಕದಲ್ಲಿ ಸ್ನಾನಮಾಡಲು ಆ ದೇವಿಯ ಮೈಯ ಅರಿಷಿಣವು ಕೂಡಿ ನೀರಿನ ಬಣ್ಣವು ಹೀಗಾಗಿರುವದೆಂದು ಅಲ್ಲಿಯ ಜನರ ನಂಬಿಗೆಯಿದೆ. ಸ್ವಾಮಿಗಳು ಅಲ್ಲಿ ಸ್ನಾನವನ್ನು ಮಾಡಿ ಶಿವಪೂಜೆಗೈದರು.

ಮುಂದೆ ಹಿಮಬಾಧೆಯು ತಡೆಯಲಶಕ್ಯವಾದುದೆಂದು ಉಳಿದವರನ್ನು ಬಿಟ್ಟು ಶಿವಪೂಜನೊಬ್ಬನನ್ನೇ ಕರೆದುಕೊಂಡು ಹಿಮಾಲಯದಲ್ಲಿ ಕೇದಾರನಾಥನ ಕಡೆಗೆ ಹೊರಟರು. ಗಿರಿಗಹ್ವರ-ಕಂದರಗಳಿಗೂ, ಕಾಡಿಗೂ, ಹುಲಿಸಿಂಹ ಮೊದಲಾದ ಕ್ರೂರ ಶ್ವಾಪದಗಳಿಗೂ ಭೀತಿಗೊಳ್ಳುತ್ತಿದ್ದ ಶಿವಪೂಜನಿಗೆ ಅನ್ನದಾನೀಶ್ವರರು ಗುರು ಕಾಯ್ವನೆಂದು ಆಗಾಗ ಧೈರ್ಯ ಹೇಳುತ್ತಿದ್ದರು. ಸಂಶಯವಿದ್ದಲ್ಲಿಯೇ ಹೊತ್ತು ಮುಳುಗಿತೆಂಬಂತೆ, ಒಂದು ದಿನ ರಾತ್ರಿ ಮಲಗಿದಾಗ ಒಂದು ಹುಲಿಯು ಶಿವಪೂಜನ ಕಾಲನ್ನು ಹಿಡಿಯಿತು. ಕೂಡಲೆ 'ಗುರುವೆ' ಎಂದು ಚಿಟ್ಟನೇ ಚೀರಿದನು. ಹುಲಿಯು ಸರಿಯಿತು. ಹಾಗೆಯೇ ಬಿಟ್ಟು ನಡೆಯಿತು. ಸ್ವಾಮಿಗಳು ನಕ್ಕು ಗಾಯವನ್ನು ಮಾಣಿಸಿ ಸಂತಸಗೊಳಿಸಿ— "ಇಂಥ ತನುಮೋಹವು ನಿನಗಿರಲು ಗುರುಸೇವೆಯು ಹೇಗೆ ನಡೆಯುವದು? ಹೆಂಡರಮಕ್ಕಳನೆಂತು ಅಗಲಿದೆ? ಸೈ ಸೈ" ಎಂದರು. "ಗುರುವೆ, ತನುಮೋಹವು ನನಗಿಲ್ಲ. ಬಹುದಿವಸ ವ್ಯವಹರಿಸಿದ ರೂಢಿಯು ನನಗಿಂತು ಮಾಡಿಸಿತು" ಎಂದು ನುಡಿದು ಶಿವಪೂಜನು ನಮಿಸಿದನು. ಮುಂದೆ ನಡೆದರು.

ಕೇದಾರೇಶನ ನಿಲಯವನ್ನು ಮುಟ್ಟಿ ಅಲ್ಲಿ ಹನ್ನೆರಡು ದಿನ ಉಳಿದರು. ಬೇಸಿಗೆಯಲ್ಲಿ ಮಾತ್ರ ಅಲ್ಲಿ ಜನರಿದ್ದು ಪೂಜಾದಿಗಳನ್ನು ಮಾಡುವರು. ಮಳೆಗಾಲ ಚಳಿಗಾಲಗಳಲ್ಲಿ ಬಾಗಿಲು ಹಾಕಿ ಹೋಗಿಬಿಡುವರು. ಆಗ ದೇವತೆಗಳು ಬಂದು ಆತನನ್ನು ಪೂಜಿಸುವರಂತೆ. ಯಾಕಂದರೆ ಮರು ಬೇಸಿಗೆಯ ಮೊದಲು ಬಾಗಿಲು ತೆಗೆದಾಗ ಅದೇ ಆಗಿನ ಮೃದುಲವಾದ ಬಿಲ್ವದಲಗಳೂ ಗುಗ್ಗಳ ಸುವಾಸನೆಯೂ ಅಲ್ಲಿರುವವಂತೆ.

ಮುಂದೆ ಗೌರೀಶಂಕರ ಶಿಖರವನ್ನು ಕಾಣಲು ಹೊರಟರು. ಅಲ್ಲಿಯ ಅತ್ಯಧಿಕಶೀತವನ್ನು ತಡೆಯಲು ಶಿವಪೂಜನು ಸಮರ್ಥನಲ್ಲೆಂದು ಆತನನ್ನು ಕೇದಾರನಾಥನಲ್ಲಿಯೇ ಬಿಟ್ಟರು. ಒಬ್ಬರೇ ಧೈರ್ಯದಿಂದ ಸಾಗಿ ಶಿಖರವನ್ನು ಮುಟ್ಟಿ ಪಾರ್ವತಿಯು ಶಿವನಿಗಾಗಿ ತಪಸ್ಸನ್ನು ಮಾಡಿದ ಗುಹೆಯನ್ನು ಹೊಂದಿ ಲಿಂಗಾರ್ಚನೆಯನ್ನು ಮಾಡಿದರು. ಹನ್ನೊಂದು ದಿವಸಕ್ಕೆ ಮರಳಿ ಕೇದಾರನಾಥನ ದೇವಾಲಯಕ್ಕೆ ಬಂದರು. ಅಲ್ಲಿಂದ ಇಬ್ಬರೂ ಹೊರಟು ಊಖೀಮಠಕ್ಕೆ ಬಂದು ಸಕಲ ಭಕ್ತರೊಡನೆ ಹೊರಟರು. ಪರ್ವತಪ್ರದೇಶದಲ್ಲಿ ಬರುವಾಗ ತಿಬೇಟದ ಜನರ ಸ್ವರೂಪವನ್ನು ನೋಡಿ ಕೆಲವರು ನಗಲು ಕ್ರೋಧಯುಕ್ತರಾದ ಆ ಕಾಡುಜನರು ಬಂದು ಅಡ್ಡಗಟ್ಟಿದರು. ಸ್ವಾಮಿಗಳು ತಪಸ್ತೇಜದಿಂದ ಆ ಸಂಕಟವನ್ನು ನಿವಾರಿಸಿದರು. ಸಮಾಧಾನದಿಂದ ಪಯಣದ ಮೇಲೆ ಪಯಣಮಾಡಿ ಹಾಲಗೆರೆಗೆ ಬಂದರು.

ಪರೇಂಗಿತವನ್ನು ತಿಳಿಯುವ ಪರದೇಶಸ್ಥರನ್ನು ಬಾಗಿಸುವ ಪ್ರಸಂಗಾವಧಾನದಿಂದ ಕಾರ್ಯಮಾಡುವ ಗುಣವಿಶೇಷಗಳೂ ವಿಚಾರಗಳೂ ಈ ಶಿವಯೋಗಿಗಳಲ್ಲಿ ಮನೆಮಾಡಿಕೊಂಡಿದ್ದರಿಂದ ಇವರಿಗೆ ಬಹುದೇಶ-ಬಹುಜನಾಂಗಗಳಲ್ಲಿಯೂ ಕೀರ್ತಿಜಯಗಳೇ ಸುಲಭವಾಗಿ ದೊರೆತವು.

ಒಂದು ವರ್ಷ ಹಾಲಗೆರೆಯ ಕೆರೆಯೊಳಗೆ ನೀರಿಲ್ಲದಂತಾಯಿತು. ಭಕ್ತರು "ನೀರಿಲ್ಲದೆ ಜಾತ್ರೆ ಹೇಗೆ ನಡೆಯುವದು? ಈ ವರ್ಷ ನಿಲ್ಲಿಸಬೇಕು." ಎಂದು ಸ್ವಾಮಿಗಳ ಸನ್ನಿಧಿಗೆ ಕೇಳಿಕೊಂಡರು. ಅವರು– "ಏನು? ನಡು ಊರಲ್ಲಿ ನೀರಿಲ್ಲವೆಂಬುವದೇ? ಜಾತ್ರೆಯ ಬಿಡಲುಂಟೆ? ಅದರ ಚಿಂತೆಬೇಡ, ಮಾಡುವಂತೆ ಮಾಡಿರಿ" ಎಂದರು. ಸರ್ವವೂ ಸಿದ್ಧವಾಗ ತೊಡಗಿತು. 'ಊರಲ್ಲಿ ಒಂದೇಬಾವಿ. ಕೊಡನೀರು ಮೇಲೆ ಬರಬೇಕಾದರೆ ಎರಡೂ ಕಡೆಯ ಕಣ್ಣೀರು ಕೊಡಕೊಡ ಹೋಗಬೇಕು! ಜಾತ್ರೆಯ ಮಾಡುವದುಂಟೇ?' ಎಂದು ಕೆಲವರು ಹೀಯಾಳಿಸಿದರು.

ಊರಲ್ಲಿ ಅದಕ್ಕೂ ಸ್ವಲ್ಪ ಮೊದಲು ಕೊಪ್ಪದ ವೀರಭದ್ರಪ್ಪನೆಂಬವನಿಗೆ ಬಹಳ ಬೇನೆಯಿಂದ ಕಡೆಗಾಲವೇ ಒದಗಿತ್ತು. ವೈದ್ಯರೆಲ್ಲರೂ ಬಂದು 'ಹೋಗಿಬಾ ಮಹಾರಾಯಾ' ಎಂದು ಹೇಳಿದ್ದರು. ಆದರೂ ಆತನು ಧೈರ್ಯಗೆಡದೆ ಭಕ್ತಿಯಿಂದ ಅನ್ನದಾನಿಯನ್ನು ಸ್ತುತಿಸಿ ತನ್ನ ಬೇನೆಯು ಮೂರು ದಿನಗಳಲ್ಲಿ ಗುಣವಾದರೆ ಜಾತ್ರೆಗೆ ಬೇಕಾಗುವ ನೀರನ್ನು ಪೂರೈಸುವೆನೆಂದು ಹರಕೆಯನ್ನು ಹೊತ್ತು ಆತನ ಪಾದೋದಕವ ತಕ್ಕೊಂಡನು. ರೋಗವು ಹಾಗೆಯೇ ಹೋಗಿಬಿಟ್ಟಿತು. ಅವಕ್ಕಾಗಿ ಅತ್ಯಂತ ಸಂತೋಷದಿಂದ ಆತನು ಜಾತ್ರೆಯ ಮೊದಲನೇ ದಿನ ಬಂದು, ಜಾತ್ರೆಗೆ ಬೇಕಾಗುವಷ್ಟು ನೀರನ್ನು ಮೂರು ದಿನಗಳವರೆಗೆ ಪೂರೈಸುವೆನೆಂದು ನಮಸ್ಕರಿಸಿದನು. ಎಲ್ಲರೂ ಗುರುವಿನನ್ನೂ ಭಕ್ತನನ್ನೂ ಕೊಂಡಾಡಿದರು.

ಮರುದಿನವೇ ಇಪ್ಪತ್ತೆಂಟು ಬಂಡಿಗಳನ್ನು ಹೂಡಿದನು. ಊರಿನಿಂದ ಸ್ವಲ್ಪ ದೂರವಲ್ಲಿರುವ ನೀರನ್ನು ತರಿಸಿ ತರಿಸಿ ನೀರು ನೀರೆಂದು ಕರೆಕರೆದು ಕೊಟ್ಟು ತೃಪ್ತಿಬಡಿಸಿದನು. ಆ ವರ್ಷ ಎಲ್ಲರೂ ಇಳಿದಲ್ಲಿಯೇ ನೀರು! ಅನ್ನದಾನೀಶ್ವರರು ಕೊಟ್ಟ ನೀರೆಷ್ಟು? ಈಗ ಅವನಿಂದ ತೆಗೆದುಕೊಂಡ ನೀರೆಷ್ಟು? ಘನವಾದ ಪಾದಜಲದ ಮಹಿಮೆಯನ್ನು ವರ್ಣಿಸಲು ಸಾಧ್ಯವೇ?

ಕೋಚಲಾಪುರದ ಆಚಾರವತಿಯಾದ ದೇವಕಿಯೆಂಬ ಪಂಚಾಲಕುಲದ ಸ್ತ್ರೀಯಳಿಗೆ ಪ್ರಾರಬ್ಧಯೋಗದಿಂದ ಮಹಾರೋಗವಾಗಿತ್ತು. ಕೈಕಾಲು ಊದೇರಿ ಹುಣ್ಣು ಬಿದ್ದು ಸೋರುತ್ತಿದ್ದವು. ಅವಳನ್ನು ನೋಡಿ ಮಕ್ಕಳು ಕೂಡ ಹೇಸುತ್ತಿದ್ದರು. ಮರಣವೂ ಮುಟ್ಟದಷ್ಟು ಅವಳು ಎಲ್ಲರಿಗೂ ಬೇಸರವಾಗಿದ್ದಳು. ಅನ್ನದಾನೀಶ್ವರರ ಮಹಿಮೆಯನ್ನು ಕೇಳಿ ಆಕೆಯು ಹಾಲಗೆರೆಗೆ ಬಂದು ಸ್ವಾಮಿಗಳ ಬಚ್ಚಲ ನೀರಿನಲ್ಲಿ ಸ್ನಾನಮಾಡಿ ಪಾದೋದಕಪ್ರಸಾದಗಳನ್ನು ಸ್ವೀಕರಿಸಹತ್ತಿದಳು. ಹನ್ನೊಂದು ತಿಂಗಳ ಕಾಲವು ಕಳೆಯುವದರೊ

ಳಗೆ ಹೊಸದೇಹವನ್ನು ಪಡೆದಳೆಂಬಂತೆ ಕಾಂತಿಯುಕ್ತಳಾದಳು. ದೇವಕಿಯು ತನ್ನೆಲ್ಲ ಬಂಧುಬಳಗವು ನೀವೇ ಎಂದು ಸ್ವಾಮಿಗ ಳನ್ನು ಕೊಂಡಾಡಿ ಮಠದಲ್ಲಿಯೇ ನಿಂತಳು. ಬೇನಿಗರಿಗೆ ಮಠದಂ ಗಣದ ಹುಡಿಯನ್ನು ಗುಗ್ಗಳಾದಿಗಳು ಸುಟ್ಟಬೂದಿಯನ್ನು ಕೊಡುತ್ತ ಗುಣಪಡಿಸುತ್ತಿದ್ದಳು. ಅವಳ ನಿಷ್ಠೆಯಿಂದ ಕೈಗುಣವೇ ಹಾಗಾ ಯಿತು. ತನ್ನ ಸಾವನ್ನು ಮೊದಲೇ ತಿಳಿದು ಗುರುವಿಗೆ ಬೆಳ್ಳಿಯ ಪಾದುಕೆಗಳನ್ನು ಮಾಡಿಸಿ ಐಕ್ಯಳಾದಳು.

ಹಂಪಸಾಗರದ ಮುತ್ತೂರವರೆಂಬ ಒಬ್ಬ ಶ್ರೀಮಂತರ ಹೆಂಡ ತಿಗೆ ಗ್ರಹಬಾಧೆಯಾಗಿ ಹುಚ್ಚುಹುಚ್ಚು ಮಾಡುತ್ತಿರಲು ಅವಳನ್ನು ಅನ್ನದಾನೀಶ್ವರರ ಮಠಕ್ಕೆ ಕರತಂದರು. ಆ ದಿವಸದ ರಾತ್ರಿ ಅವಳು ದಿಗಂಬರೆಯಾಗಿ ಕುಣಿದಾಡಿ ಮಂದಿಯ ಮೈಮೇಲೆ ಹೋಗುತ್ತಿರಲು ಸ್ವಾಮಿಗಳು ಎದ್ದು ಬೆದರಿಸಿದರು. ಗ್ರಹವು ಹಾದಿಯನ್ನೇ ಹಿಡಿ ಯಿತು. ಆಕೆ ಸುವಿಚಾರವತಿಯಾಗಿ ಗುರುವಿಗೆರಗಿದಳು. ಮುಂದೆ ಪುತ್ರವತಿಯಾದಳು.

ಹೀಗೆಯೇ ಒಂದಲ್ಲ ಎರಡಲ್ಲ ಹಲವಾಗಿ ಒದಗಿದ ಅಘಟಿತ ಘಟನೆಗಳನ್ನು ಕಣ್ಣಾರೆ ಕಂಡ ಸದ್ಭಕ್ತಜನರೆಲ್ಲರು "ಇದೆಲ್ಲವೂ ಈ ನಿರಂಜನ **ಜಗದ್ಗುರುವರನ ಮಹಿಮೆಯಲ್ಲದೆ ಮತ್ತೇನು?**" ಎಂದು ನಂಬಿ, ನಲಿದು, ಭಕ್ತಿಯಿಂದ ಬಾಗಿ ನಡೆದುಕೊಳ್ಳುತ್ತಿದ್ದರು.

೮. ಘನವಂತರಾಗಮನ.

ಬಹುಜನರು ದುರಭಿಮಾನದ ಛಲದಿಂದ ತಮ್ಮತಮ್ಮೊಳಗೆ ಪಕ್ಷಭೇದಗಳನ್ನು ಮಾಡಿ ವ್ಯರ್ಥವಾಗಿ ಕಲಹವನ್ನು ಮಾಡುವರು. ಹಿರಿಯರೂ ಬುದ್ಧಿವಂತರೂ ಜಾಣರೂ ಆದವರು ಕೂಡ ಈ ಪಂಗಡದ ಬಲೆಯಲ್ಲಿ ಸಿಲುಕಿ ಕೀಳರೆನಿಸುವರು. ಅಧಿಕವಾದುದ್ಯೋಗ, ವಿದ್ಯೆ, ಕಲೆ, ಸಂಪತ್ತುಗಳಿಂದಲೂ ಸುಖಶಾಂತಿಸದಾಚಾರಗಳಿಂದಲೂ ಊರು ತುಂಬಿ ತುಳುಕುತ್ತಿದ್ದರೂ ಇತ್ತಂಡಿಗದು ಈಡಾದೊಡನೆಯೇ ಅವೆಲ್ಲ ಮಣ್ಣುಪಾಲಾಗುವವು. ಮದಕ್ರೋಧಾದಿಗಳಿಗೆ ಆ ಊರು ತವರೂರಾಗುವದು. ಇಂಥ ಊರೊಳಿರಬಾರದೆಂದು ಹಿತೋಕ್ತಿಯದೆ. ದುರಾಲೋಚನೆಯಂಥ ಪಿಡಗು ಮತ್ತೊಂದಿಲ್ಲ. ಅದೆಂಥ ದುರಭಿಮಾನವೋ ಕಾಣೆ! ಕುಲಕೆಡಲಿ, ಧರ್ಮವಳಿಯಲಿ, ಮತ್ತು ಸುಗುಣಗಳು ರಸಾತಳಕ್ಕೆ ಇಳಿಯಲಿ, ದಯಾಭಾವವು ಮುಳುಗಲಿ, ನೀಚರಕೆರಹಿಗೆ ತನ್ನ ತಲೆಯು ಗದ್ದುಗೆಯಾಗಲಿ, ಗಳಿಸಿದ್ದ ಹಣ ಬೆಳ್ಳಿಬಂಗಾರ ಹೊಲ ಮನೆಗಳೆಲ್ಲ ಹಾಳಾಗಲಿ, ಕಡೆಗೆ ಜೀವಹೋಗಲಿ, ನನ್ನ ಛಲವೇ ನಡಿಯಲಿ, ಎಂದು ಒಲಿದು ಬಣವನ್ನು ಕಟ್ಟುವ ಮೂಢರುಂಟು. ಅವರು ಆತ್ಮದ್ರೋಹಿಗಳಲ್ಲಿ ಅಗ್ರಗಣ್ಯರು!! ರಾಮರಾವಣರಂಥ ಬಲವಂತರಲ್ಲ; ಕುಬೇರನಂಥ ಧನವಂತರಲ್ಲ; ಇಂದ್ರನಂತೆ ಸಂಜೀವನ ಮಹಾಮಂತ್ರ ಸಿದ್ಧರಲ್ಲ; ಬ್ರಹ್ಮನ ಆಯುಷ್ಯವನ್ನು ಪಡೆದಿಲ್ಲ; ಆದರೂ ಕಲಹವನ್ನು ಮಾತ್ರ ಬಿಡಲು ಮನಸ್ಸಿಲ್ಲ. ಮೂರ್ಖರು, ದೀನರು, ದುರ್ಬಲರು, ಗತಾಯುಗಳು ಆದ ಮಾನವರ ಮಾತು ಬೇರೆಯಿರಲಿ! ಧರ್ಮಾದಿಗಳು, ಅಪ್ರತಿಮ ವಿಕ್ರಮರು, ಮರ್ಮಜ್ಞರು, ನ್ಯಾಯಮೂರ್ತಿಗಳು, ಕ್ಷಾತ್ರವರ್ತಿಗಳು ಎಂದು ಹೆಸರು ಹೊಂದಿಯೂ ಬಾಂಧವರೊಡನೆ ಹೋರಾಡಿ ಅಡವೀಪಾಲಾಗಿ ಎಷ್ಟೋ ಕಾಲಕಳೆದರು. ದುರ್ಜನರಿಗೆದುರಾಗಿ ಪಂಗಡಕಟ್ಟುವವರಲ್ಲಿ ಸೊಗಸೇನೋ ಕಾಣೆವು!

ಕೆಲವರು ಕೇವಲ ಫಲಕ್ಕಾಗಿ, ಕೆಲರು ಹೊಲಮನೆಗಳಿಗಾಗಿ ಕಲಹ ಮಾಡುವರು. ಕೆಲವರು ಇದರಿಂದಲೇ ಹೊಟ್ಟೆಹೊರೆದುಕೊಂಡು ಪುಂಡರೂ ಆಗಿರುವರು. ಹೀಗಿರುವ ಜನರಿಗೆ ಬಣವು ಬೇಕು. ಅದು ಇಲ್ಲದಿದ್ದರೆ ಬಣವನ್ನು ಮಾಡಿ ಕಲಹವೆಬ್ಬಿಸುವ ಸಾಹಸಪಡಲು ಹಿಂದೆಗೆವರಲ್ಲ! ಜಗದೊಡೆಯನು ಮನುಜನ ಹಿತಾಹಿತಗಳನ್ನೆಲ್ಲ ನಿಯಮಿಸುವನು. ಬಣಗಳಮಾಡಿ ವೈರಿಗಳನ್ನು ಸಂಗ್ರಹಿಸಿಕೊಂಡು ತಾನು ಕಷ್ಟವನ್ನನುಭೋಗಿಸುವದಲ್ಲದೆ ಅನ್ಯರ ಸುಖವ ಕೆಡಿಸುವದಿದೆತ್ತಣ ಹರಕೆ? ಅರಸರಿಗೆ ಮಾತ್ರ ಭೂಮಿಗಾಗಿ ಕಾದುವದು ತಕ್ಕದ್ದು; ಪ್ರಜೆಗಳ ಕಲಹಕ್ಕೆ ಅವಿಚಾರವೇ ಮೂಲವು; ಕಲಹಗಾರನ ಆಯುಷ್ಯವು ಕಷ್ಟದಲ್ಲಿಯೇ ಮುಗಿಯುವದು; ಕಾಲಕೆದರಿ ಕಾದುವ ದುರ್ಜನನು ಕೋಣನಿಗಿಂತ ಅಧಿಕನು. ವೈರಿಯನ್ನು ಮುರಿವೆನೆಂಬ ಅಭಿಮಾನವೇಕೆ? ವೈರಿಗಳನ್ನು ಜಗತ್ಪಾಲಕನು ಪಾಲಿಸನೇ? ತನಗೆ ವೈರಿಗಳು, ಈಶ್ವರಗೆ ವೈರಿಗಳೇ? ಎಲ್ಲರೂ ನನ್ನಂತೆಂದು ಮರೆಯದೆ ಅರಿತರೆ, ಅರಿಗಳ ಅರಿತನವಡಗುವದು; ಅರಿಗಳನ್ನು ಮುರಿಯಲು ಕರುಣವೇ ಸಾಧನವು. ಜಾಣರು ಪಂಗಡಕ್ಕೆಡೆಗೊಡರು. ದುರ್ದೈವದಿಂದ ಈಗಿನ ಕಾಲದಲ್ಲಿ ಅವಿಚಾರಿಗಳಾಗಿ ದ್ವೇಷವನ್ನು ಬೆಳಿಸಿ ತಾವು ಕೆಟ್ಟು ಪರರನ್ನು ಕೆಡಿಸಿ ನಿರ್ವಿಣ್ಣರಾಗಿ ಬಿಕ್ಕೆಯ ಬೇಡುವ ಹೇವದ ಬಂಟರೇ ಬಹುಜನರಿರುವರು. ದೇಶವು ಬಹುಶಃ ಇದರಿಂದಲೇ ಹಿಂದುಳಿದಿರುವದು.

ಇಟ್ಟಿಗೆಯ ಮಠದಲ್ಲಿ ಒಮ್ಮೆ ಪುರಾಣಸಮಾಪ್ತಿಯ ಗಣಾರಾಧನೆಯು ನಡೆಯಿತು. ಇಂಥ ಸತ್ಕಾರ್ಯಗಳಲ್ಲಿಯಂತೂ ಪಂಗಡದವರ ಪುಂಡಾಟಿಕೆಯು ಬಹಳ. ಒಂದು ಪಂಗಡದವರು ಒಬ್ಬ ದೂಷಿತಕುಲದವನನ್ನು ತಂದು ಪಂಕ್ತಿಯಲ್ಲಿ ಹೊಗಿಸಿದರು. ಮತ್ತೊಂದು ಪಂಗಡದವರು ಕೋಪಿಸಿದರು. ಇತ್ತಂಡವಾದವುದ್ಭವಿಸಿತು. ಭಯಂಕರಕಲಹವಾಯಿತು. ಸ್ವಾಮಿಗಳು ಅಲ್ಲಿಗೆ ಬಂದು 'ನೀವು ಮಾಡಿದುದು ಡಾಂಭಿಕತನಕ್ಕೆ, ಭಕ್ತಿಯಿಂದಲ್ಲ; ನಿಮ್ಮ ಬಾಳ್

ಸುಡಲಿ; ನಿಮ್ಮಡಿಗೆಯನ್ನು ನಾಯಿ ಮುಟ್ಟಲಿ.' ಎಂದು ಶಪಿಸಿ ನಡೆದುಬಿಟ್ಟರು. ಕರೆತರುವದೆಂದರೆ ಸಾಧ್ಯವೇ? ಉಪಾಯವಿಲ್ಲದೆ ಅವರು ಬಂದವರನುಣಿಸದೆ ಕಳುಹಲಾಗದೆಂದು ಅನ್ನಸಂಗ್ರಹದ ಕಡೆಗೆ ಹೋದರು. ಅಲ್ಲಿ ನಾಯಿಯೊಂದು ನಿಂತುಕೊಂಡಿತ್ತೇ! ಕೂಡಲೆ ಹೊಡೆ ಕುಟ್ಟೆಂದು ಬೆನ್ನಟ್ಟಿ ಬೆದರಿಸೆ ಅದು ಪಂಗ್ತಿಯೊಳಗೆಲ್ಲ ಓಡಾಡಿ ಮೋರಿಯಿಂದ ಹಾದುಹೋಗಿಬಿಟ್ಟಿತು. ತಿಳಿಯದೇ ಬಂದುದೆಂತು? ಸಣ್ಣಮೋರಿಯಿಂದ ಹೋದುದೆಂತು? ಎಂದು ಜನರು ಕೌತುಕಗೊಂಡರು. ಅನ್ನವನ್ನೆಲ್ಲವ ಚಲ್ಲಿದರು. ನೆರೆದ ಗಣಂಗಳು ಹಾಗೆಯೇ ಎದ್ದುಹೋದರು. ಪ್ರಮುಖರು 'ಅಲಲಾ! ನಾವು ಅಪರಾಧಿಗಳಾದೆವು. ಅಪಹಾಸ್ಯಕೀಡಾದೆವು. ಅಡಿಕೆಗೆ ಹೋದ ಮಾನವು ಆನೆಕೊಟ್ಟರೂ ಬರಲಾಗದು. ಇನ್ನು ಸಾವಿರ ಗಣಾರಾಧನೆಗಳನ್ನು ಮಾಡಿಸಿದರೂ ಮೂರ್ಖರೆಂದೇ ಅನಿಸಿಕೊಳ್ಳುವೆವು' ಎಂದು ಚಿಂತಿಸಿದರು.

"ಇದು ಯತಿವರನ ಲೀಲೆಯಲ್ಲದೆ ನಾಯಿಯಲ್ಲ; ಇಂಥ ಅತ್ಯದ್ಭುತವಾದ ಜನದಟ್ಟಣೆಯಲ್ಲಿ ಧೈರ್ಯದಿಂದ ಬರುವ ನಾಯಿಯದಾವುದು? ನೀಚನ ಒಳಹೊಗಿಸಿ ಕೆಡಿಸಲೆಳಿಸಿದವರು ಎಂಥ ದುಷ್ಟರು? ವಿರುದ್ಧ ಪಕ್ಷದವರಿಗಿದ್ದ ಕುಲವು ತಮಗಿಲ್ಲವ್ರೋ?" ಎಂದು ಸುಜ್ಞರು ಹಳಹಳಿಸಿದರು.

'ಗಣಂಗಳನು ಕೂಡಿಸಿ ಉಣಿಸದೆ ಕಳಿಸಿದ್ದರ ಫಲವು ದೊರೆಯದೆ ಬಿಡದು' ಎಂದು ಬಗೆದು ಅನ್ನದಾನೀಶ್ವರರು ಮರುವರ್ಷ ಬಾಗಲಕೋಟೆಯ ಮಲ್ಲಣಾರ್ಯರನ್ನು ಕರತಂದು ಇಟ್ಟಗಿಯಲ್ಲಿ ಪುರಾಣವನ್ನು ಹೇಳಿಸಿ ಗಣಾರಾಧನೆಯನ್ನು ಮಾಡಿಸಬೇಕೆಂದು ನಿಶ್ಚಯಿಸಿದರು. ಮಲ್ಲಣಾರ್ಯರೂ ಸಹಜವಾಗಿಯೇ ಆಗಮಿಸಿದರು.

ಮಲ್ಲಣಾರ್ಯರು ಅದ್ವಿತೀಯ ಪಂಡಿತರು; ಸಂಸಾರದ ತೊಡಕನುಳಿದು ಆತ್ಮೋನ್ನತಿಯನ್ನು ಮಾಡಿಕೊಂಡಿದ್ದರಲ್ಲದೆ ವೀರಶೈವಮತೋನ್ನತಿಗಾಗಿ ಹಗಲಿರಳು ಯತ್ನಿಸುವರು. ಅವರ ಮನ

ಸ್ತಿನ ಸ್ಥೈರ್ಯವು ಮಿಗಿಲಾದದ್ದು; ಸತ್ಯಸಂಸ್ಥಾಪನೆ ಮಾಡುವಲ್ಲಿ ಯಾರ ಹಂಗೂ ಅವರಿಗಿರಲಿಲ್ಲ. ಒಬ್ಬರ ಮನೆಯ ಅನ್ನವನ್ನು ಉಣ್ಣು ತ್ತಿದ್ದಿಲ್ಲ. ದಿನಾಲು ಐದು ಮನೆಯ ಭಿಕ್ಷೆಯನ್ನು ಮಾತ್ರ ಮಾಡಿ ಅಷ್ಟ ರಲ್ಲಿಯೇ ದೊರೆತದ್ದನ್ನು ಲಿಂಗಾರ್ಪಣ ಮಾಡುವರು. ಇವರು ಇಂಥ ಅದ್ಭುತಗುಣನಿಧಿಗಳಾದ ವಿರಕ್ತಮೂರ್ತಿಗಳಾಗಿದ್ದರು. ಅವರು ಅನ್ನ ದಾನೀಶ್ವರರ ಮಹಿಮೆಯನ್ನು ಕೇಳಿ ಅವರ ದರ್ಶನಕ್ಕಾಗಿ ಒಮ್ಮೆ ಇಟ್ಟಿಗಿಗೆ ಬಂದರು. ಸ್ವಾಮಿಗಳ ಪಾದಕ್ಕೆ ಮೊಡಮಟ್ಟರು. ಅವರು ಹಿಡಿದೆಬ್ಬಿಸಿ ಲಿಂಗಾರ್ಚನೆಗೆ ಏಳಬೇಕೆಂದರು. ಮಲ್ಲಣಾರ್ಯರು ನಿತ್ಯದಂತೆ ಅಲ್ಲಿಯ ಮಠದ ಸಮೀಪದಲ್ಲಿಯ ಐದು ಮನೆಗಳ ಭಿಕ್ಷೆಗೆ ಹೋದರು. ಮೊದಲನೆಯದು ಕುರುಬರ ಮನೆಯಾಯಿತು; ಎರ ಡನೆಯದರಲ್ಲಿ ಕೈತೆರವಿಲ್ಲೆಂದರು; ಮೂರನೆಯದು ಬಡಿಗರದು; ನಾಲ್ಕ ನೆಯದರಲ್ಲೊಂದು ತುತ್ತು ನೀಡಿದರು; ಐದನೆಯ ಮನೆಯ ಸ್ತ್ರೀಯ ಳೊಬ್ಬಳು 'ಟೊಣಪನಾಗಿದ್ದಿಯೇ; ದುಡಿಯಬಾರದೇ?' ಎಂದು ಕಿರು ನಾಯಂತೆ ಮರೆಯಾಗುವ ವರೆಗೆ ಗುರುಗುಟ್ಟಿದಳು. ಶಿವನು ಮನೆಗೆ ಬರಲು ಬೇಡೆಂಬರೇ? ಶಿವಯೋಗಿಯನ್ನು ತಣಿಸದೆ, ಗಳಿಸಿದುದನ್ನೆಲ್ಲ ತಾನೇ ತಿಂದು ಸಾಯುವದೇ? ಶಿವಯೋಗಿಗೆ ಕೊಟ್ಟ ಅನ್ನದ ಅಗ ಳುಗಳಷ್ಟು ಯಾಗ ಮಾಡಿದ ಫಲವು ಬರುವದಂತೆ. ಶಿವಯೋಗಿಯನ್ನು ಉಪಚರಿಸುವದಿರಲಿ, ಹೀಗೆ ಮನನೊಂದಿಸುವದೇ? ಮಲ್ಲಣಾರ್ಯರಿಗೆ ಇಂಥದೇ ಒಂದು ಪ್ರಸಂಗವು ಇದಕ್ಕೂ ಮೊದಲೊಮ್ಮೆ ಒದಗಿತ್ತು.

ಒಂದು ಹಳ್ಳಿಯೊಳಗಿನ ಜಗಳಗಂಟಿಯೊಬ್ಬಳು ಉಂಡು ಹೊಲಕ್ಕೆ ಬುತ್ತಿಯ ಕಟ್ಟಿ ತಂದು ಬಾಗಿಲಹೊರಗಿನ ನೆರಕಿಯಲ್ಲಿಟ್ಟು ಕೀಲಿಯನ್ನು ತರಲಿಕ್ಕೆ ಒಳಗೆ ಹೋದಳು. ಅದನ್ನು ನೋಡಿದ ನಾಯಿಯೊಂದು ಬುತ್ತಿಯನ್ನು ನೆಗವಿಕೊಂಡು ಓಡಿತು. ಅವಳು ತಿರುಗಿ ಬರುವ ಸಮಯಕ್ಕೆ ಸರಿಯಾಗಿ ಮಲ್ಲಣಾರ್ಯರು ಬಾಗಿಲಿಗೆ ಬಂದು ಭಿಕ್ಷೆಯೆಂದರು. ನೀಡುವಳೇ ಅವಸರದೊಳಾಕೆ? 'ಹೋಗು

ಹೋಗೇಡೀ' ಎಂದು ಕೋಪದಿಂದ ನುಡಿದು ಕೀಲಿಯನ್ನು ಹಾಕಿ ನೆರಕಿಯಲ್ಲಿ ನೋಡಿದಳು; ಬುತ್ತಿಯಿಲ್ಲ. ಜೂಗನಾಯಿಯಂತೆ ಬೊಗಳುತ್ತ ಅವಳು ಹಾದಿಯ ಹಿಡಿದ ಈ ಜಂಗಮರನ್ನು ಮುಟ್ಟಿ ಹಿಡಿದಳೀ! ಜೋಳಿಗೆಯನ್ನು ಸೆಳೆದು ನೆಲಕ್ಕೊಗೆದಳೀ "ನನ್ನ ಬುತ್ತಿಯನ್ನು ಎಲ್ಲಿಟ್ಟಿ? ಕೊಟ್ಟು ಮುಂದೆ ನಡೆ. ಕಳ್ಳಯ್ಯಾ!" ಎಂದು ಗಲಗಲಬಾಯಿಮಾಡಿದಳು. ಅಕಸ್ಮಾತ್ತಾಗಿ ಸಜ್ಜನನೊಬ್ಬನು ಬಂದು "ನಾಯಿಯೊಯ್ದಿರಬಹುದು ಹುಚ್ಚೀ, ಆತನೇಕೆ ಇಂಥ ಕೆಲಸ ಮಾಡಿಯಾನು?" ಎಂದು ಬೆದರಿಸಿ ಬಿಡಿಸಿದನು. ಮಲ್ಲಣಾರ್ಯರು ಬಂದ ಅನ್ನವ ಚೆಲ್ಲಿ ಮುಂದೆ ಹಾದಿಯ ಹಿಡಿದರು. ಅದಿರಲಿ, ಈಗ ಇಟ್ಟಗಿಯಲ್ಲಿ ಅವರು ತಮಗೆ ಈ ಬಗೆಯಾಗಿ ಒಂದು ತುತ್ತು ಅನ್ನವೇ ದೊರೆಯಲು ಅಷ್ಟರಿಂದಲೇ ಒಡಲುರಿಯ ತೀರ್ಚಿ ಸ್ವಾಮಿಗಳ ಅಪ್ಪಣೆಯನ್ನು ಸಹ ಪಡೆಯದೆ ಮುಂದಿನ ಊರಿಗೆ ಹೊರಟರು. ಸ್ವಾಮಿಗಳು ಹೊರಗೆ ಬಂದು ಹೀಗೆ ಹೊರಟು ಹೋದುದನ್ನು ಕೇಳಿ ಒಬ್ಬ ಬಲವುಳ್ಳವನನ್ನು ಕೊಟ್ಟು ಕರೆಯಕಳುಹಿದರು. ಆತನು ಓಡುತ್ತಹೋಗಿ ಬರದಿದ್ದರೆ ಹೊತ್ತುಕೊಂಡು ಹೋಗುವೆನೆಂದು ಬಲುಮೆಯಿಂದ ಕರೆತಂದನು.

ಮಲ್ಲಣಾರ್ಯರು--ಏಕೆ ಕರಿಸಿದಿರಿ ನನ್ನನ್ನು? ನನಗಿಲ್ಲಿರುವ ಇಚ್ಛೆಯಿಲ್ಲ; ಶಿವಭಕ್ತಿಸದಾಚಾರಗಳು ಒಂದಿನಿತಾದರೂ ಇಲ್ಲಿಲ್ಲ. ನಿಮಗೆ ಹಿರಿಯರ ಮಠದ ತೊಡಕುಂಟು; ನೀವು ಇದ್ದುಕೊಂಡು ಬಿಡಿರಿ. ನಾನು ಹೋಗುವೆನು.

ಅನ್ನದಾನೀಶ್ವರ-- ಲೇಸನಾಡಿದೆಯಯ್ಯಾ! ಧರ್ಮಜ್ಞರಲ್ಲದವರನ್ನು ತಿದ್ದುವದು ಸರಿಯಾದುದಲ್ಲವೇ? ಆಚಾರಭಕ್ತಿಗಳುಳ್ಳವರಲ್ಲಿ ಸುಳಿದರೇನಾಯಿತು? ಸಾಮಾನ್ಯಜನರನ್ನು ಸನ್ನುತಸುಗುಣಿಗಳನ್ನು ಮಾಡುವದೇ ಕರ್ತವ್ಯವು.

ಮಲ್ಲಣಾರ್ಯ--(ಸಿಟ್ಟಿಳಿದು) ಚರವರ್ಯ, ನಿಮ್ಮ ಮತವು ನಿಜವು. ಘನಮಹಿಮರಾದ ನಿಮ್ಮಿಂದ ಸುಧಾರಿಸದಿದ್ದವರನ್ನು ನಾನು

ತಿದ್ದುವೆನೇ? ಇಂಥವರು ಕೇಳುವರೇನು? ನಾನು ಹೇಳುವೆನೇನು? ಮತ್ತೆ ಕಲಿಸುವೆನೇನು?

ಅನ್ನದಾನೀಶ್ವರ—(ಪ್ರೀತಿಯಿಂದ) ಸುಮತಿಯುತನೇ, ಹಾಗೆನ್ನಕೂಡದು. ಕೇವಲ ಅನುಷ್ಠಾನಪರರಿಂದ ಯಾವುದನ್ನು ಮಾಡಲು ಅವಕಾಶವು? ನಿನಗೆ ಅನುಕೂಲವುಂಟು. ಪ್ರಯತ್ನಿಸಿದರೆ ಪಶ್ವಾದಿಗಳು ಕೂಡ ಬುದ್ಧಿಗಲಿವವು; ಇವರು ಮನುಷ್ಯರು. ನೀನು ನಿನ್ನ ಬುದ್ಧಿಬಲದಿಂದ ಜನರತಿದ್ದಲೇಬೇಕು. ಅದಕ್ಕಾಗಿ ಯತ್ನಿಸು. ಈಗಿಲ್ಲಿ ಪುರಾಣವನ್ನು ಹೇಳು.

ಮಲ್ಹಣಾರ್ಯ— ತಮ್ಮ ಅಪ್ಪಣೆಯಂತಾಗಲಿ.

ಸ್ವಾಮಿಗಳು ಊರ ಪ್ರಮುಖರನ್ನು ಕರಿಸಿದರು; ಒಡಂಬಡಿಸಿದರು. ದುರಭಿಮಾನದಿಂದ ದುಂದುವೆಚ್ಚವನ್ನು ಮಾಡಲಾಗದೆಂದು ಅಪ್ಪಣೆಯನ್ನು ಕೊಟ್ಟು ವಚನತಕ್ಕೊಂಡರು. ಮಲ್ಹಣಾರ್ಯರು ಅರವತ್ತುಮೂವರು ಪುರಾತನರ ಭಕ್ತಿಬೋಧಕಪುರಾಣವನ್ನು ಹೇಳಹತ್ತಿದರು. ಶ್ರೋತೃಸಮುದಾಯವು ಬೆಳೆಯಹತ್ತಿತು. ಸುತ್ತಲಿನ ಊರುಗಳ ಜನರು ತಂಡತಂಡವಾಗಿ ಬರಹತ್ತಿದರು. ಮಲ್ಹಣಾರ್ಯರ ವಾಕ್ಪಟುತ್ವವೇ ಹಾಗೆ ಪರಿಣಾಮಕಾರಕವಾಗಿತ್ತು. ಇದಕ್ಕಾಗಿ ಅವರು ಸುತ್ತು ಹೆಸರಾಗಿದ್ದರು. ಅವರು ಒಳ್ಳೇ ಸತ್ಯನಿಷ್ಠರರಾಗಿದ್ದರು. ಸರ್ವರನ್ನೂ ಸಮನಾಗಿ ಕಾಣುತ್ತಿದ್ದರು. ಗುರುಸನ್ನಿಧಿಯಲ್ಲಿ ಸರ್ವರೂ ಸಮರೆಂಬ ಭಾವನೆಯು ಸಹಜವಾದುದೇ! ಅಗ್ರಪೀಠಅಗ್ರತಾಂಬೂಲಗಳನ್ನಪೇಕ್ಷಿಸುವ ಪದವೀಧರರಲ್ಲಿಯೂ ಸಾವುಕಾರರಲ್ಲಿಯೂ ಅವಗುಣಗಳೇ ಅಧಿಕವಾಗಿರುವವೆಂದು ಅವರು ಯಾರ ದಾಕ್ಷಿಣ್ಯವನ್ನೂ ಹಿಡಿಯದೆ ಹೇಳಿ ಮರ್ಮೋದ್ಘಾಟನೆ ಮಾಡುತ್ತಿದ್ದರು. ಒಂದುದಿನ ಒಬ್ಬ ಮಾಮಲೇದಾರನು ಬರಲು ಕುಳಿತವರನೆಬ್ಬಿಸಿ ಅವನಿಗೆ ಸ್ಥಳಮಾಡಹತ್ತಿದರು. ಆ ಗದ್ದಲವನ್ನು ಸಹಿಸದೆ ಮಲ್ಹಣಾರ್ಯರು "ಯಾರಿದ್ದರೇನು? ಭಕ್ತಿಯಿಂದ ಬಂದಿದ್ದರೆ ಹಿಂದೆ ಕುಳಿತು ಕೇಳಲಿ" ಎಂದು ಹೇಳಿ ಸುಮ್ಮನಾಗಿಸಿಬಿಟ್ಟರು.

ಈಗಿನ ಕಾಲದಲ್ಲಿ ಹೊಟ್ಟೆಗಾಗಿ ಹೇಳಹೊರಟು ಸಭೆನೋಡಿ ರಾಗಮಾಡುತ್ತ ಜನರ ಮೆಚ್ಚುಗೆಯ ಪಡೆಯ ಲೆಳಸುವ ಪುರಾಣಿಕರೇ ಬಹಳ. ಆದರೆ ಲೌಕಿಕದ ಹಂಗೇ ಇಲ್ಲದ ಮಲ್ಲಣಾರ್ಯರಿಗೆ ಯಾರ ಮೆಚ್ಚುಗೆ ಯಾಕೆ ಬೇಕು? ಟೊಂಗೆಗಳನ್ನು ಕಳೆದುಕೊಂಡ ಗಿಡದ ಬೊಡ್ಡೆಯು ಬಿರುಗಾಳಿಗೆ ಬೊಗ್ಗದು; ಸಂಸಾರದ ತೊಡಕುಗಳನ್ನು ಕಳೆದ ಮನುಷ್ಯನು ಪರರದರ್ಪಕ್ಕೆ ಅಂಜುವನೇ? ಇಲ್ಲ. ಪುರಾಣ ಸಮಾಪ್ತಿಯಲ್ಲಿ ದೊಡ್ಡ ಗಣಾರಾಧನೆಯೂ ಇಟ್ಟಗಿಯಲ್ಲಿ ಜರುಗಿತು.



ಅಥಣಿಯ ಶಿವಯೋಗೀಶ್ವರರು.

ಮಲ್ಲಣಾರ್ಯರು ಹಾಲಗೆರೆಯೇ ಕಾಶಿಯೆಂತಲೂ ಅಥಣಿಯೇ ರಾಮೇಶ್ವರವೆಂತಲೂ ಭಾವಿಸಿ ಮನವೊಲ್ದು ಒಂದೆರಡು ತಿಂಗಳಿಗೊಮ್ಮೆ ಎರಡೂ ಕ್ಷೇತ್ರಗಳಿಗೆ ಕಾಲಿನಿಂದ ನಡೆಯುತ್ತಲೇ ಹೋಗಿ ಬರುತ್ತಿದ್ದರು. ಅವಕಾಶವಾದಾಗ ಹಾಲಗೆರೆಯಲ್ಲಿಯೇ ಇರುತ್ತಿದ್ದರು.

ಶ್ರೀಮನ್ನಿರಂಜನ ನಿರಾಭಾರಿ ಜಯದೇವ ಪಂಡಿತರು ಮುರಘಾಮಹಾಸಿಂಹಾಸನವನ್ನು ಹೊಂದುವಾಗ ಈ ಮಹಾಸ್ವಾಮಿಗಳ ಅನುಮತಿಯನ್ನು ಪಡೆಯಲೆಂದು ಹಾಲಗೆರೆಗೆ ಹೊರಟರು. ಅವರ ಬರುವಿಕೆಯನ್ನು ಮೊದಲೇ ತಿಳಿದು ಇವರು ಮಠದಲ್ಲಿ ಎಲ್ಲ ಭಕ್ತರನ್ನು ನೆರೆಯಿಸಿದ್ದರು. ಹೇಳಿದ ಹೊತ್ತಿಗೆ ಸರಿಯಾಗಿ ಜಯದೇವಪಂಡಿತರು ಬಂದರು. ಅನ್ನದಾನೀಶ್ವರರು ಅವರನ್ನು ಕರುಣಾಕಟಾಕ್ಷದಿಂದ ನೋಡಿ “ಧರ್ಮಸುಧಾರಕನೇ ಕರುಣೈಕನಿಧಿಯೇ, ವೀರಶೈವಧ್ವಜವನ್ನು ಮೆರೆಯಿಸಲು ನೀನೇ ತಕ್ಕವನು” ಎಂದು ಹರಸಿ ಕಳಸಿ ಕೊಟ್ಟರು.

ಶಿರಸಂಗಿಯ ಸರದೇಸಾಯರಾದ ಲಿಂಗರಾಜರು ಅತ್ಯಂತ ಧರ್ಮಿಷ್ಠರೂ ಉದಾರಿಗಳೂ ದಯಾರ್ದ್ರಹೃದಯದವರೂ ಆಗಿದ್ದರು. ದೇವರು ತಮಗೆ ಕೊಟ್ಟ ವೈಭವದ ಸದ್ವಿನಿಯೋಗವನ್ನು ಮಾಡಲು ಒಳ್ಳೇ ಕುಶಲರು. ಅವರಿಗೆ ಸಂತಾನವಾಗದಿರುವದೇ ಕೊರತೆ! ಅವರು ತಮಗೆ ಮಕ್ಕಳೇ ಆಗದಿದ್ದರೆ ಈ ಸಂಸ್ಥಾನದ ಸಹಾಯದಿಂದ ವೀರಶೈವ ಮತವನ್ನೇ ಉದ್ಧರಿಸಲೆಂದು ಬಗೆದಿದ್ದರು. ಇದಕ್ಕಾಗಿ ತಮ್ಮ ಭವಿಷ್ಯವನ್ನು ತಿಳಿಯಲೋಸುಗವಾಗಿ ಅನ್ನದಾನೀಶ್ವರರ ದರ್ಶನಕ್ಕೆಂದು ಹಾಲಗೆರೆಗೆ ಬಂದರು. ಅವರು ಬಂದಾಗ ಮಠದ ಬಾಗಿಲವು ಮುಚ್ಚಿತ್ತು. ಅದು ಬಿಸಿಲಿನ ವೇಳೆಯಾದ್ದರಿಂದ ರಥದೊಳಗಿಂದ ಇಳಿಯದೆ ಹಾಗೆಯೇ ಮಠದ ಮುಂದೆ ತಡೆದು, ಬಾಗಿಲು ತೆಗೆಯುವ ಹಾದಿಯನ್ನು ನೋಡಿದರು. ಲಿಂಗರಾಜರು ಸಾಮಾನ್ಯರಲ್ಲ; ಜನಮಾನ್ಯರಾಗಿದ್ದರು. ವೀರಶೈವ ಮಹಾಸಭೆಯ ೧ನೇ ೨ನೇ ಅಧಿವೇಶನಗಳು ಧಾರವಾಡ ಬೆಂಗಳೂರುಗಳಲ್ಲಿ ಕೂಡಿದಾಗ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು. ಇಂಥವರು ಯತಿಯ ದರ್ಶನಕ್ಕಾಗಿ ಬಂದು ಬಾಗಿಲಲ್ಲಿ ಕಾಯ್ದುಕೊಂಡಿದ್ದರು. ಅಲ್ಪಾಧಿಕಾರಿಗಳು ಅಲ್ಪಮತಿಗಳು ಹೆಮ್ಮೆಯಿಂದ ಮಹಾತ್ಮರನ್ನು ಸಾಮಾನ್ಯರನ್ನಾಗಿ ಕಾಣುವರು. ಆದರೆ ಸಂಪತ್ತು ತೃಣಕ್ಕೆ ಸರಿಯಾದುದೆಂದೂ ತಪಸ್ಸೇ ಘನವಾದುದೆಂದೂ ಬಗೆದ ಲಿಂಗರಾಜರು ಹಾಗೆ ಭಾವಿಸುವರೇ? ಕೆಲಹೊತ್ತಿನಲ್ಲಿ ಹೊರಗೆ ಬಂದ

ಮಲ್ಲಣಾರ್ಯ— ನೀನಾರು? ಇಲ್ಲಿಗೆ ಏಕೆ ಬಂದಿರುವೆ?

ಲಿಂಗರಾಜ— ನಾನೊಬ್ಬ ಭಕ್ತನು, ಯತಿಯ ದರ್ಶನಕ್ಕಾಗಿ ಬಂದೆನು.

ಮಲ್ಲ— ಯತಿಯ ದರ್ಶನಕ್ಕೆ ಬರುವವರು ಕಾಲಿನಿಂದ ನಡೆಯುತ್ತ ಬರಬೇಕು. ಮಠದ ಮುಂದೆ ರಥವೇರಿ ಕುಳ್ಳಿರುವುದೇ? ತಿಳಿಯದೇ ನಿನಗೆ?

ಲಿಂಗ--- ಬಿಸಿಲಿವೆ, ಬಾಗಿಲ ತೆಗೆಯುವ ವರೆಗೆ ಹೀಗೆಯೇ ಕಾದಿರುವೆನು; ಇದರಲ್ಲಿ ತಪ್ಪೇನು?

ಮಲ್ಲ--- ಗುರುವಿನೆದುರಲ್ಲಿ ಆಸನವಾಹನಗಳಲ್ಲಿ ಮೆರೆವುದು ಅನುಚಿತವಲ್ಲವೆ? ಹೇಳಿದರೆ ಕೇಳದಿರುವೆ! ನೀನೊಳ್ಳೇ ಹಟವಾದಿಯಾಗಿಯೇ ಕಾಣುವೆ!

ಲಿಂಗ--- ಸರಿ. ಗುರುವಿನೆದುರಿನಲ್ಲಿ ನಿದ್ರೆಯ ಮಾಡಲಾಗದು, ಉಣಲಾಗದು, ಯಾಕಂದರೆ, ಅವೂ ತನುಭೋಗಗಳೇ ಆಗಿವೆ.

ರಾಜರ ನಿರ್ವಂಚನೆಯ ಮನಸ್ಸನ್ನು ತಿಳಿದು ಮಲ್ಲಣಾರ್ಯರು ಒಳಗೆ ಹೋದರು. ಮುಂದೆ ರಾಜರೂ ವಿನಯದಿಂದ ಮಠವನ್ನು ಪ್ರವೇಶಿಸಿದರು. ಅವರಿಗೆ 'ತನಯರಾಶಿ ಬೇಡ, ಭೋಗವಿರತಿಯೇ ಶಿವಸನ್ನಿಧಾನದ ಸುಖವ ಕೊಡುವುದು; ದಾನಮಾಡಿ ಮಹತ್ಫಲವ ಪಡೆಯಬೇಕು' ಎಂಬ ಭಾವದ ಸೂಚನೆಗಳಾದವು. ಸ್ವಾಮಿಗಳು ಬಾಯಿಬಿಚ್ಚಿ ಯಾವ ಮಾತನ್ನೂ ಹೇಳುತ್ತಿದ್ದಿಲ್ಲ. ಅವರ ಮುಖಮುದ್ರೆ-ಮಠದಲ್ಲಿಯ ವ್ಯವಹಾರಲಕ್ಷಣಗಳಿಂದಲೇ ಜನರು ತಮ್ಮ ಇಷ್ಟಾನಿಷ್ಟ ಫಲಗಳನ್ನು ಊಹಿಸುತ್ತಿದ್ದರು. ಇರಲಿ, ರಾಜರು ಅನ್ನದಾನೀಶ್ವರರ ಪಾದಗಳಿಗೆರಗಿದರು. ಅವರು ಆಶೀರ್ವದಿಸಿ ಕುಳ್ಳಿರಿಸಿ ಶಿವಗೋಷ್ಠಿಗಳನ್ನಾಡಿದರು. ಬಹಳ ಹೊತ್ತಿನ ಮೇಲೆ ಲಿಂಗರಾಜರು ಸನ್ನಿಧಿಯ ಅಪ್ಪಣೆಯನ್ನು ಪಡೆದು ಮರಳಿ ಹೊರಟರು.

ಸೊನ್ನಲಿಗೆ (ಸೊಲ್ಲಾಪುರ) ಯ ವಾರದ ಮಲ್ಲಪ್ಪನವರು ಒಳ್ಳೇ ಘನತೆಯನ್ನು ಪಡೆದವರು. ಸರಕಾರದವರು ಹಲವು ಪದವಿಗಳಿಂದ ಅವರನ್ನು ಗೌರವಿಸಿದ್ದರು. ಮಲ್ಲಪ್ಪನವರು ಉದ್ಯೋಗಾಭಿವೃದ್ಧಿಯಿಂದ ಅತ್ಯಂತ ಶ್ರೀಮಂತಿಗೆಯನ್ನು ಹೊಂದಿದ್ದರು. ಅಪಾರವಾದ ಐಶ್ವರ್ಯವಿದ್ದರೂ ಹೆಮ್ಮೆಯೊಂದಿಷ್ಟಾದರೂ ಅವರಿಗಿದ್ದಿಲ್ಲ. ಅವರು ಕೊಡಗೈದೊರೆಗಳೆಂದು ಹೆಸರು ಹೊಂದಿದ್ದರು. ಯಾವ ಧಾರ್ಮಿಕ ಸಂಘಗಳೂ ವಿದ್ಯಾಸಂಸ್ಥೆಗಳೂ ಅವರಿಂದ ಧನಸಹಾಯವನ್ನು ಹೊಂದದೆ ಉಳಿದಿದ್ದಿಲ್ಲ. ಕಾಶಿಯಲ್ಲಿ ಕಲಿಯುವ ಸಂಸ್ಕೃತ ಪಾಠ

ಶಾಲೆಯ ವಿದ್ಯಾರ್ಥಿಗಳಿಗೆ ಮಾಸಿಕವೇತನಗಳನ್ನು ಸಲ್ಲಿಸುತ್ತಿದ್ದರು. ಅವರು ಏಕಪತ್ನೀವ್ರತದಲ್ಲಿ ಹೆಸರಾಗಿದ್ದರು. ಅವರು ಅನ್ನದಾನೀಶ್ವರರ ದರ್ಶನಕ್ಕೆ ಒಮ್ಮೆ ಹಾಲಗೆರೆಗೆ ಬಂದರು. ಸ್ವಾಮಿಗಳಿದನ್ನು ಮೊದಲೇ ತಿಳಿದು ಊರವರಿಗೆ ತಿಳಿಸಿದ್ದರು. ಊರ ಪ್ರಮುಖರು ನಾರದವರಿಗೆ ಕಾಣಿಕೆ ಕೊಡುವದಕ್ಕಾಗಿ ಅವರ ಇಬ್ಬರು ಮಕ್ಕಳಿಗಾಗಿ ಎರಡು ಲಿಂಗದ ಕರಡಿಗೆಗಳನ್ನು ಬಂಗಾರದಿಂದ ಮಾಡಿಸಿ ತಂದರು. ಸ್ವಾಮಿಗಳು "ಒಂದೇ ಸಾಕು; ಒಂದನ್ನು ತೆಗೆಯಿರಿ" ಎಂದರು. ಜನರು "ಇಬ್ಬರು ಮಕ್ಕಳಿಗೂ ಒಂದೊಂದಾಗುವವು ಬುದ್ಧೀ" ಎಂದು ನುಡಿದರು. ಅದಕ್ಕೆ "ಒಂದನು ತೆಗೆಯುಂದರಾಯಿತು" ಎಂದು ಸ್ವಾಮಿಗಳು ಪ್ರತಿಯಾಗಿ ಗಟ್ಟಿಸಿ ನುಡಿದು ತೆಗೆಯಿಸಿಬಿಟ್ಟರು. ಹೇಳಿದ ವೇಳೆಗೆ ಸರಿಯಾಗಿ ಮಲ್ಲಪ್ಪನವರು ಬಂದರು. ಬಗೆಬಗೆಯಿಂದ ನುತಿಸಿ ನಮಸ್ಕರಿಸಿದರು. ಸ್ವಾಮಿಗಳು ಆಶೀರ್ವದಿಸಿ, ಅವರ ಸೆಲ್ಲೆಯ ಕೊನೆಯಲ್ಲಿ ಆ ಲಿಂಗದ ಕರಡಿಗೆಯನ್ನು ಮಡಗಿದರು. ಬಳಿಕ ಜನರಿಗೆ ನಾರದವರ ಮಗನೊಬ್ಬನು ಇಷ್ಟರಲ್ಲಿಯೇ ತೀರಿರುವನೆಂಬುದು ಗೊತ್ತಾಯಿತು. ಸ್ವಾಮಿಗಳು ಕರಡಿಗೆಗಳನ್ನಿಡುವಾಗ ಮಾಡಿದ ಪೂರ್ವಸೂಚನೆಯನ್ನು ನೆನಸಿ ಅವರು "ಮಹಿಮರು ಯಾವದನ್ನು ಮೊದಲೆ ಅರಿಯರು?" ಎಂದು ಕೊಂಡಾಡಿದರು. ಊರಲ್ಲಿ ಸಭೆಗೂಡಿಸಿ ನಾರದವರನ್ನು ಸತ್ಕರಿಸಿದರು.

ಅನ್ನದಾನೀಶ್ವರರ ಮಹಿಮೆಯನ್ನು ಕೇಳಿ ಸನ್ನಿಧಿಯ ದರ್ಶನಕ್ಕಾಗಿ ಘನವಂತರಾದ ಹಲವು ಜನರು ಹೀಗೆ ಯಾವಾಗಲೂ ಬಂದು ಆಶೀರ್ವಾದವನ್ನು ಪಡೆಯುತ್ತಲಿದ್ದರು.

೯. ಉಳವಿಯ ಯಾತ್ರೆ.

ಇತ್ತಿತ್ತಲಾಗಿ ಜನರು ಪೂಜ್ಯಭಾವನೆಯಿಂದಲೋ, ಸಹಜವಾಗಿರುವ ಪೇರ್ಮೆಯನ್ನು ಪ್ರೀತಿಯಿಂದ ಪ್ರಕಟಿಸುವದಕ್ಕೋ, ನಿಜವಾಗಿಯೂ ಮುಪ್ಪಾದ್ದರಿಂದಲೋ ಏನೋ ಅನ್ನದಾನೀಶ್ವರರನ್ನು 'ಅಜ್ಜ' 'ಅಜ್ಜನವರು' ಎಂತಲೇ ಕರೆಯಹತ್ತಿದರು. ಸ್ವಾಮಿಗಳು ಹೀಗೆ ಮುಪ್ಪು ಬಂದರೂ ಈ ವರೆಗೆ ಸ್ತ್ರೀಯರ ಮುಖವನ್ನೇ ನೋಡಿದವರಲ್ಲ. ಪ್ರೀತಿಯಿಂದ ಬಂದು ತಾಯಿಯಂತೆ ಓಲಯಿಸುವ ಫಣಿಯಮ್ಮನ ಭಕ್ತಿಗೆ ಮೆಚ್ಚಿ ಆಕೆಯ ಸೇವೆಯನ್ನು ಮಾತ್ರ ಕೈಕೊಂಡರಲ್ಲದೆ ಉಳಿದ ಸ್ತ್ರೀಯರ ದರ್ಶನವೇ ಆಗುತ್ತಿದ್ದಿಲ್ಲ. ಇನ್ನೊಂದು ವಿಶೇಷ ಸಂಗತಿಯೆಂದರೆ, ಹಲವು ತರದ ಉತ್ಪನ್ನವು ತಮಗೆ ಬರುತ್ತಿದ್ದರೂ ಅದರಿಂದ ಅವರು ಭೂಮಿಯನ್ನು ಕೊಳ್ಳಲಿಲ್ಲ; ಜನರ ಗಳಿಸಲೆಂದು ಹಾಕ ಮಾಡಲಿಲ್ಲ. ಭಕ್ತರು ಕೊಟ್ಟ ಹಣದಲ್ಲಿ ಒಂದು ಕಾಸನ್ನಾದರೂ ಬಳಸದೆ ಕ್ಷೇತ್ರಯಾತ್ರೆಗಳ ನೆವದಿಂದ ಗಣಗಳಿಗಾಗಿ ವಿನಯೋಗಿಸುತ್ತಿದ್ದರು. ಗಣಗಳಿಗೆ ಕೊಡುವಾಗ ಒಂದು ರೂಪಾಯಿಯನ್ನು ಒಂದು ಕಾಸಿಗೆ ಸರಿಯಾಗಿ ತಿಳಿಯುತ್ತಿದ್ದರು. ಉಳಿದ ಪ್ರಸಂಗಗಳಲ್ಲಿ ವೆಚ್ಚವನ್ನೇ ಮಾಡುತ್ತಿರಲಿಲ್ಲ. ಅವರ ಈ ತರದ ಸದ್ವಿನಿಯೋಗದ ಹೃದ್ಗತವನ್ನು ಅರಿಯದವರು ಸ್ವಾಮಿಗಳು ಜೀನರೆಂದೂ ಅನ್ನುತ್ತಿದ್ದರು. ಅನ್ನದಾನೀಶ್ವರರು ತಾವು ನಿರಾಭಾರಿನಿರಂಜನಜಗದ್ಗುರುಗಳಾಗಿದ್ದರೂ ಜಂಗಮ ಭಕ್ತರಾಗಿದ್ದರು; ದಾಸಭಾವವನ್ನು ವಹಿಸುತ್ತಿದ್ದರು; ಕುಂದಿಲ್ಲದೆ ಗಣಾರಾಧನೆಯನ್ನು ಮಾಡಿ ಉಳಿದ ಪ್ರಸಾದದಿಂದ ಲಿಂಗಾರ್ಪಣೆಯ ಮಾಡುತ್ತಿದ್ದರು.

ಕಾರ್ತಿಕಮಾಸದಲ್ಲಿ ಒಮ್ಮೆ ನೆರೆಹೊರೆಯ ಊರುಗಳ ಧರ್ಮಾತ್ಮರನ್ನೆಲ್ಲ ಕೂಡಿಸಿದರು. ಬಳಿಕ— 'ನಾವು ಮಾಘ ಶುಕ್ಲ ಪ್ರತಿಪ

ದೆಗೆ ಉಳವಿಯ ಯಾತ್ರೆಗೆ ಹೋಗಬೇಕೆಂದು ಮಾಡಿದ್ದೇವೆ. ನಮ್ಮೊಡನೆ ಬರಲಿಚ್ಛಿಸುವವರು ಆಪ್ತೇಷ್ಟ ಮಿತ್ರರೊಡನೆ ಹೊರಡಬಹುದು" ಎಂದು ಆಜ್ಞಾಪಿಸಿದರು. ಎಲ್ಲರೂ ಹರ್ಷಸಾಗರದಲ್ಲಿ ಲೋಲಾಡಿದರು. ಕೂಡಿದವರು ಸಂಗ್ರಹಗಳನ್ನು ಮಾಡತೊಡಗಿದರು. ಹರ್ಷಿತರಾದ ಭಕ್ತರಿಂದ ಕಾಣಿಕೆಗಳೂ ಬಂದವು. ಸರ್ವ ಅನುಕೂಲವೂ ಸಿದ್ಧವಾಯಿತು.

ಯಾತ್ರಾರ್ಥವಾಗಿ ಸಿದ್ಧವಾದ ಅನ್ನಸಂಗ್ರಹವೇನೂ ಸಣ್ಣದಲ್ಲ. ಜೋಳ ಎಂಬತ್ತು ಚೀಲ; ಅಕ್ಕಿ ನೂರೈವತ್ತು ಚೀಲ; ಹಿಟ್ಟು ಇನ್ನೂರು ಚೀಲ; ಬೆಲ್ಲ ಹನ್ನೆರಡುನೂರುಮಣ; ತುಪ್ಪವಿನ್ನೂರುಮಣ. ಉಳಿದ ಅಂಥಿಂಥ ಸಂಗ್ರಹಗಳೆಲ್ಲ ಇದಕ್ಕೆ ತಕ್ಕ ಪ್ರಮಾಣದಿಂದ ಕೂಡಿಸಲ್ಪಟ್ಟಿದ್ದವು. ಬಾಂಡೆಪಾತ್ರೆಗಳನ್ನು ಮಾರಲೊಯ್ಯುವವರಂತೆ ಅಗಣಿತವಾಗಿ ಹೇರಿದ್ದರು. ಮರ ಬುಟ್ಟಿ ಲಟ್ಟಣಿಗೆಹುಟ್ಟು ಹಂಚು ಸೌಟು ಮೊದಲಾದ ಸಾಮಾನುಗಳನ್ನಂತೂ ಒಂದೂ ಉಳಿಯದಂತೆಯೂ ಕೊರತೆ ಬೀಳದಂತೆಯೂ ಹೇರಿದ್ದರು. ಬಡಿಗಕಮ್ಮಾರರ ಸಾಮಾನುಗಳೂ ಒಕ್ಕಲಿಗರ ಸಾಮಾನುಗಳೂ ಕಣಿಕೆಹೊಟ್ಟುಮೇವುಗಳೂ ಜಾಣಲೌಕಿಕರ ಬುದ್ಧಿಗೆ ಮೀರುವಂತೆ ಸರಿಯಾಗಿ ಹೇರಲ್ಪಟ್ಟಿದ್ದವು. ಒಂದೊಂದು ಸಂಗ್ರಹಕ್ಕೆ ಒಬ್ಬೊಬ್ಬನನ್ನು ಮುಖ್ಯಸ್ಥನನ್ನಾಗಿ ನೇಮಿಸಿ ವ್ಯವಸ್ಥೆಗೊಳಿಸಿದ್ದರು. ಸಾಮಾನುಗಳಿಗಾಗಿಯೇ ನೂರರ ಮೇಲೆ ನಾಲ್ವತ್ತು ಬಂಡಿಗಳನ್ನು ಹೂಡಿದ್ದರು.

ವಿರಕ್ತರು, ಪಟ್ಟಚರಪಟ್ಟಾಧಿಕಾರಿಗಳು, ಮಹೇಶ್ವರರು, ಭಕ್ತರು, ಗೌಡರು, ಕರಣಿಕರು,ಸೆಟ್ಟಿಸಾವುಕಾರರು, ಕವಿಗಳು, ಗಾನಸಂಗೀತಗಾರರು, ಪುರಾಣಕೀರ್ತನಕಾರರು ಮೇಲ್ಮೆಯಿಂದ ಕೂಡಿ ಜಾತ್ರೆಗೆ ಹೊರಟರು. ಬಡಿಗರು, ಕಮ್ಮಾರರು, ಹಡಪದವರು, ಅಗಸರು ಉಳಿದವರು ತಮ್ಮತಮ್ಮ ಉದ್ಯೋಗಗಳೊಡನೆ ಹೊರಟರು. ದೊಡ್ಡದಂಡಿನ ವ್ಯವಸ್ಥೆಯಂತೆಯೂ ಊರಿಗೆ ಊರೇ ಉದ್ಯೋಗದೊಡನೆ

ನಡೆಯುವಂತೆಯೂ ಆ ಮಹಾಜನಸಮುದಾಯವು ಕಂಗೊಳಿಸಿತು. ಅಡಿಗೆಯವರಲ್ಲಿ ಎರಡು ಭಾಗ. ಇಳಿದುಕೊಂಡಲ್ಲಿ ಒಂದು ಭಾಗದವರು ಅಡಿಗೆಯನ್ನುಮಾಡಿದರೆ ಇನ್ನೊಂದು ಭಾಗದವರು ಉಂಡ ಕೂಡಲೆ ಹೊರಟು ಮುಂದೆ ಇಳಿದುಕೊಳ್ಳಬಹುದಾದ ಸ್ಥಳದಲ್ಲಿ ಮೊದಲೇ ಅಡಿಗೆಗೆ ಸನ್ನದ್ಧರಾಗುತ್ತಿದ್ದರು. ಹೀಗಿರುವ ವ್ಯವಸ್ಥೆಯು ಯಾವ ಜಾಣನಾಯಕನಿಂದ ಮಾಡಲ್ಪಟ್ಟಿತೋ ಎಂದು ಅಚ್ಚರಿಗೊಳ್ಳುವಂತಿತ್ತು.

ಸರ್ವಸನ್ನಾಹದೊಡನೆ ಹೊರಟ ಗಾಡಿಗಳು ಹಾಲಗೆರೆಯಿಂದ ನರೇಗಲ್ಲಿನ ಮೇಲೆ ಹಾಯ್ದು ಬರುತ್ತಿರಲು ಬಯಲಬಸವಣ್ಣನೆಂಬ ದೇವಸ್ಥಾನದ ಹತ್ತರ ಹದಿನೇಳು ಬಂಡಿಗಳು ಮುರಿದು ಬಿದ್ದವು. 'ದೇಗುಲವನಾಶ್ರಯಿಸಿ ಸ್ಥಿರಲಿಂಗವೆನಿಸಿದ ಮಹೇಶನು ವ್ಯಕ್ತಿಯಲ್ಲಿ ಇಷ್ಟಲಿಂಗವಾಗಿ ಚರಲಿಂಗವೆನಿಸಿದನು. ಇವೆರಡರಲ್ಲಿಯೂ ಸಂಬಂಧವುಂಟು. ಅನ್ಯೋನ್ಯಅನುಕೂಲವಿಲ್ಲದಿದ್ದರೆ ಉಭಯರ ಮಹಾಕಾರ್ಯಗಳೂ ನೆರವೇರವು. ಆದ್ದರಿಂದ ಬಸವಣ್ಣನನ್ನು ಮನ್ನಿಸದ ಚರನಕಾರ್ಯವೆಂತು ನಡೆಯಬೇಕು?' ಎಂದು ಆಲೋಚಿಸಿ ಅನ್ನದಾನೀಶ್ವರರು—"ಭಕ್ತರೇ ಬಯಲಬಸವಣ್ಣನು ಬಹಳ ಹುರುಡಿನವನು; ಅವನೆದುರಿನಲ್ಲಿ ಇಷ್ಟು ಸಾಮಗ್ರಿಗಳನ್ನು ಒಯ್ದರೂ ಅವನಿಗೆ ಒಂದಿಷ್ಟನ್ನಾದರೂ ಕೊಡಲೊಲ್ಲಿರಿ. ಅದಕ್ಕಾಗಿ ಬಂಡಿಗಳನ್ನು ಆತನು ತಡೆದನು. ತಿರುಗಿ ಬರುವಾಗ ಎರಡು ಹೊಸ ಕಾಯಿ ಕೊಡುವೆವೆಂದು ಒಪ್ಪಿ ಬೇಡಿಕೊಳ್ಳಿರಿ" ಎಂದು ಆಜ್ಞಾಪಿಸಿದರು. ಹಾಗೆಯೇ ಪೂಜಿಸಿ ಹರಕೆಯ ಹೊತ್ತರು. 'ಕಾಯ್ಗಳೆರಡನ್ನೇ ಕೊಡಲೊಪ್ಪಿದ ಈ ಯೋಗಿ ಕೃಪಣನು; ಅಷ್ಟರಿಂದಲೇ ಸಮ್ಮತಿಸಿದ ಈ ಬಸವನು ಅಲ್ಪಸಂತೋಷಿಯು!' ಎಂದು ಹಲವರು ವಿನೋದವನ್ನು ಮಾಡಿದರು. ಆದರೆ "ಬಸವರಾಜನು ಎರಡು ಕಾಯ್ಗಳಿಗೊಲಿದವನಲ್ಲ. ಚರೋತ್ತಮನ ದಿವ್ಯಪ್ರಸಾದಕ್ಕೆ ಮೆಚ್ಚಿದನು. ಉಳವಿಯಲ್ಲಿ ಗಣೇಶ್ವರರು ಕೊಂಡು ಉಳಿದುದೇ ಸಾಕೆಂದನು. ಇವನು ಕಿರಿಯ ದೇವ

ರಂತೆ ಕೀಳು ಮನಸ್ಸಿನವನಲ್ಲವು" ಎಂದು ಕೆಲರಂದರು. "ಸ್ಥಿರಲಿಂಗ ಚರಲಿಂಗಗಳಲ್ಲಿಯು ಸ್ಥೂಲಸಂಬಂಧವಲ್ಲದೆ ಸೂಕ್ಷ್ಮಸಂಬಂಧವೂ ಇರುವದೆಂಬದನ್ನು ತೋರಿಸಲು ಈ ಶಿವಯೋಗಿಯೇ ಗೌಪ್ಯವಾಗಿ ಈ ಬಸವೇಶನಿಂದ ಹೀಗೆ ಮಾಡಿಸಿದನಲ್ಲದೆ ಬೇರೆಯಲ್ಲವು" ಎಂದೂ ಕೆಲರಂದರು. ಸರಿಯೇ! ಸ್ಥಿರಲಿಂಗವಾದರೇನಾಯಿತು? ತೃಣೀಕರಿಸ ಲಾಗದು. ಹಿಂದೆ ಬಸವರಾಜನು ಸಂಗಮೇಶನೊಳು ಅಡಗಿದನು. ಶ್ರೀಮದ್ರೇಣುಕಾರ್ಯನು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಲ್ಲಿ ಅವತರಿಸಿ ಕಲಿವಿಭೀಷಣನ ಪ್ರಾರ್ಥನೆಯಂತೆ ಕೋಟಿಲಿಂಗಗಳನ್ನು ಸ್ಥಾಪಿಸಿದನು. ಈ ಗುರುಮೂರ್ತಿಯು ಇಷ್ಟಲಿಂಗಾರ್ಚನೆಯನ್ನು ಮಾಡಿ ಜನ್ಮಲಿಂಗವನ್ನು ವಂದಿಸದೆಯೂ, ನಿರಾಕರಿಸದೆಯೂ, ತಾನೆ ಸ್ಥಾಪಿಸಿದ ಲಿಂಗಗಳನ್ನೂ ಪುರಸ್ಕರಿಸದೆಯೂ, ತಿರಸ್ಕರಿಸದೆಯೂ ಇದ್ದನು.

ಆದರಿಂದ ಸ್ಥಿರಲಿಂಗವು ಅನ್ಯವಲ್ಲ. ಆ ಲಿಂಗಸ್ಥಾಪನೆಯ ಮೊದಲು ಜಂಗಮಪೂಜೆಯನ್ನು ಮಾಡಬೇಕು. ಅದಿಲ್ಲದಿದ್ದರೆ ಲಿಂಗಕ್ಕೆ ಕಳೆಬಾರದು. ಲಿಂಗವು ಜಂಗಮನ ಬಲವನ್ನಾಶ್ರಯಿಸಿರುವದು; ಲಿಂಗ ದಿಂದ ಜಂಗಮನು ರೂಪದಾಳಿರುವನು. ಹೀಗೆ ಲಿಂಗಜಂಗಮರಲ್ಲಿ ಅನ್ಯೋನ್ಯಸಂಬಂಧವಿದೆ.

ಇರಲಿ; ಮುಂದೆ ಅಬ್ಬಿಗೇರಿಯ ಉದ್ಯಾನದಲ್ಲಿ ಇಳಿದು ಅಲ್ಲಿಂದ ಬರುವವರನ್ನು ಕೂಡಿಕೊಂಡು ಹೊರಟರು. ಮುಂದೆ ಒಂದು ಬಂಡಿಯೂ ಕೆಡಲಿಲ್ಲ. ಅವರು ರಾತ್ರಿಯಲ್ಲಿ ಹಾದಿಯನ್ನು ನಡೆಯ ಲಿಲ್ಲ. ಬೆಳಗಿಗೆ ಮೂರುತಾಸು ರಾತ್ರಿಯಿರುವಾಗ ಕಹಳೆಯನ್ನು ಊದುವರು. ಆಗ ಎದ್ದು ಎತ್ತುಗಳನ್ನು ಮೇಯಿಸುವರು. ನಂತರ ಎರಡು ತಾಸಿಗೆ ಮತ್ತೆ ಕಹಳೆಯಾಗಲು ಎಲ್ಲರೂ ಗಾಡಿಗೆ ಎತ್ತು ಹೂಡುವರು. ಮುಂದೆ ಅರ್ಧತಾಸಿನ ಕಹಳೆಗೆ ಸರಿಯಾಗಿ ಎಲ್ಲ ಬಂಡಿಗಳೂ ಸಾಗುತ್ತಿದ್ದವು. ಯಾರೂ ಕಟ್ಟಳೆಯನ್ನು ಮೀರಲು

ಆಗುತ್ತಿದ್ದಿಲ್ಲ. ಮಾರ್ಗದಲ್ಲಿ ಭಕ್ತರು ಕೊಟ್ಟ ಕಾಣಿಕೆಯ ಹಣವು ಆರುಸಾವಿರವಾಯ್ತು. ಸ್ವಾಮಿಗಳು ಯಾರ ಬಿನ್ನಪವನ್ನೂ ಕೈಕೊಳ್ಳುತ್ತಿರಲಿಲ್ಲ. ಹೀಗಿರುವ ಪ್ರಯಾಣದಲ್ಲಿ ಮುನ್ನೂರು ಬಂಡಿಗಳು ಓರಣದಿಂದ ಸಾಗಿದ್ದವು. ಚರವರನ ಪಾದಸ್ಪರ್ಶದಿಂದ ಪುನೀತಳಾದ ಭೂದೇವಿಯು ಕೈಲಾಸಕೇರುವಳೆಂಬಂತೆ ಧೂಳಿದ್ದು ಆಕಾಶಕ್ಕಡರುತ್ತಿತ್ತು. ಗಾಲಿಗಳ ಗಡಗಡವು, ಜನರ ಕೋಲಾಹಲವು, ಎತ್ತುಗಳ ಗಂಟೆಗೆಜ್ಜೆಗಳ ಸಪ್ಪಳವು, ಕುದುರೆಗಳ ಹೇಷಾರವವು, ಒಟ್ಟುಗೂಡಿ ಉಂಟಾದ ಮಹಾಧ್ವನಿಯು ಪ್ರತಿಧ್ವನಿಗೊಂಡು ದಿಕ್ತಟಗಳಿಂದ ಬಂದಂತಾಗುತ್ತಿತ್ತು. ಇವರಿಗಿಳಿಯಲಿಕ್ಕೆ ವಿಶಾಲವಾದ ಶುದ್ಧನೀರುಳ್ಳ ಅರಣ್ಯವೇ ತಕ್ಕದು; ಊರು ಒಳಕೊಳ್ಳಲಾಗದೆಂಬದು ಸಹಜವೇ.

ಎಡಬಲಗಳಲ್ಲಿ ಗಿರಿಗಳೂ ಕೊಳ್ಳಗಳೂ ಉಳ್ಳ ಘಟ್ಟದ ಮಾರ್ಗವು: ಆಗ 'ಅಯ್ಯೋ ಸತ್ತೆ' ಎಂಬ ಸ್ವರವು ಸ್ವಾಮಿಗಳ ಕಿವಿಗೆ ಬಿತ್ತು; ಅಷ್ಟೇ ತಡ, ಬೋಯಿಗಳಿಗೇನೂ ಗೊತ್ತಿಲ್ಲದೆ ಸ್ವಾಮಿಗಳು ಮೇಣೆಯಿಂದ ಇಳಿದು ಹೋಗಿದ್ದರು. ಸ್ವಾಮಿಗಳು ನೋಡಿದ ಮಾತ್ರದಿಂದಲೇ ಕೊಳ್ಳದಲ್ಲಿ ಉರುಳುತ್ತಿರುವ ಒಂದು ಬಂಡಿ ಅಲ್ಲಿಯೇ ನಿಂತಿತು. ಓಡಿಬಂದ ಜನರು ನೋಡಿ ಸರಿಪಡಿಸಿದರು. ಗುರುವಿನ ಪಾದವನ್ನು ಹೊಗಳಿದರು. ಮುಂದೆ ಕಿನ್ನರಿಬೊಮ್ಮಯ್ಯನ ಹೊಳೆಯನ್ನು ದಾಟುವಾಗ ಒಂದು ಗಾಡಿಯ ಗಾಲಿಯೊಂದು ಕಳಚಿಹೋಯಿತು. ಸ್ವಾಮಿಗಳ ಸೂಚನೆಯಂತೆ ಒಬ್ಬನು ಅದರ ಅಚ್ಚನ್ನು ಹಿಡಿದು ಆಚೆಯ ದಂಡೆಗೆ ಮುಟ್ಟಿಸಿದನು. ತುಂಬಿದ ಬಂಡಿಯೇನು? ಅದರ ಅಚ್ಚನ್ನು ಮನುಷ್ಯನೊಬ್ಬನು ಎತ್ತಿ ಹಿಡಿಯುವದೇನು? ಹಾಗೆಯೇ ಕಲ್ಲಿರುವ ನದಿಯ ಪಾತ್ರದಲ್ಲಿ ನಡುಮಟ್ಟ ನೀರಲ್ಲಿ ನಡೆಯುವದೇನು? ಅಗಾಧವೇ ಸರಿ. ನೋಡಿದವರು ಬೊಮ್ಮಯ್ಯನಿಗೆ ಪ್ರಸಾದಾಶೆಯು ಬಲವಾಗಿರುವದೆಂದು ನುಡಿದು ನಕ್ಕುಬಿಟ್ಟರು.

ಉಳವಿಯಲ್ಲಿ ಮೊದಲೇ ರಚಿಸಿದ ಡೇರೆಹಂದರಗಳಲ್ಲಿ ಚೀಲಗಳನ್ನು ಒಟ್ಟಿಸಿ ಸುತ್ತಲೂ ಬಂಡಿಗಳನ್ನು ಬಿಡಿಸಿದರು. ಮರುದಿನವೇ ಮಹಾಗಣಾರಾಧನೆಯು ದೂರಿನ ಕೆರೆಯ ನೀರು ತಂದು ಪೂರೈಸುವದು ಆಗದೆಂದು ಅಡಿಗೆಯವರು ಗುಣುಗುಟ್ಟಿದರು. ಪ್ರಮುಖರು ಕೆರೆಯನೊಡೆದು ನೀರು ಅಲ್ಲಿಗೇ ಬರುವಂತೆ ಮಾಡಬೇಕೆಂದು ಯತ್ನಿಸಿದರು. ಆದರೆ ಅದರೊಡೆಯನು ಹಾಗೆ ಮಾಡಿದರೆ ದಂಡನೆಗೆ ಗುರಿಮಾಡುವೆನೆಂದು ಬೆದರಿಸಿದನು. ಆತನು ಅಷ್ಟು ದರ್ಪಿನ ದೊಡ್ಡ ಜಮೀನದಾರನೂ ಆಗಿದ್ದನು.

ಇತ್ತ ಅಂದಿನ ರಾತ್ರಿ ಅನ್ನದಾನೀಶ್ವರರು 'ನಾಳೆ ಏನಾದರೂ ಆದೀತು! ಇಂದೇಕೆ ಚಿಂತೆ?' ಎಂದು ತಮ್ಮವರನ್ನು ಸಮಾಧಾನಗೊಳಿಸಿ ಯೋಗನಿದ್ರೆಗೊಳಗಾದರು.

ಕೆರೆಯ ನಾಯಕನು ಆ ದಿನ ರಾತ್ರಿಯ ಪೂರ್ವಭಾಗದಲ್ಲಿಯೇ ಒಂದು ಕನಸನ್ನು ಕಂಡನು. ಅದರಲ್ಲಿ ಶಿವಯೋಗಿಯೊಬ್ಬನು ಬಂದು "ಬಾಗಿಲಿಗೆ ಬಂದು ಬೇಡಿದರೆ, ನೀರ ನೀಡದಿರುವರೇ?" ಎಂದು ಅಂದುದನ್ನು ಸ್ಪಷ್ಟವಾಗಿ ಕೇಳಿದನು. ದಿಗ್ಗನೆ ಎದ್ದ ಆತನು ರಾತ್ರಿಯಲ್ಲಿಯೇ ನೂರಾರ ಜನ ಒಡ್ಡರನ್ನು ಕೂಡಿಸಿ ಕೆರೆಯ ಕಟ್ಟೆಯ ಕಡಿಸಿ ಕಾಲುವೆಯನ್ನು ಮಾಡಿ ಚನ್ನಬಸವೇಶ್ವರರ ಕ್ಷೇತ್ರದವರೆಗೆ ತಂದನು. ಬೆಳಗಿಗೆ ಸರಿಯಾಗಿ ನೀರು ಕ್ಷೇತ್ರವನ್ನು ಹೊಕ್ಕಿತು. ಅಲ್ಲಲ್ಲಿ ಜನರಿನ್ನೂ ಕಡಿಯುವ ಕೆಲಸದಲ್ಲಿಯೇ ತೊಡಗಿದ್ದರು. ಇದನ್ನೆಲ್ಲ ನೋಡಿ ಅಡಿಗೆಯವರು ಕುಣಿದಾಡಿದರು. ಎಲ್ಲರೂ 'ಗುರುವಿನ ಲೀಲೆಯನ್ನು ಯಾರು ತಿಳಿಯುವರು' ಎಂದು ಹೊಗಳಿದರು. ಸ್ವಾಮಿಗಳು ತಮ್ಮಡಿಗಳಿಗೆರಗಿದ ಆ ಕೆರೆಯೊಡೆಯನನ್ನು ಸನ್ಮಾನಿಸಿ ಆಶೀರ್ವದಿಸಿದರು. 'ಅನ್ನದಾನಿಯ ಕಾಲುವೆ' ಯೆಂಬ ಹೆಸರಿನಿಂದ ಅದು ಈಗಲೂ ಅಲ್ಲಿ ಹರಿಯುತ್ತಿರುವದು.

ಅಡಿಗೆಯವರಿಗೆ ಒಳ್ಳೇ ಉತ್ಸಾಹ; ಯಾಕಂದರೆ ನಿಂತಲ್ಲಿಯೇ ನೀರು! ಬಿಸಿಲು ಬೀಳುವದರೊಳಗಾಗಿ ೧೬ ಚೀಲ ಬೇಳೆಯನ್ನು

ಕುದಿಸಿ ಸುರುವಿದರು. ಸುರುವಿದ ಬೇಳೆಯ ರಾಶಿಯಿಂದ ಉಗಿಯು ಹಾಯುತ್ತಿತ್ತು. ಅಷ್ಟರಲ್ಲಿಯೇ ಮಿಡಿನಾಗರ ಹಾವೊಂದು ಮೇಲೆ ಕುಳಿತು ನಲಿದಾಡುತ್ತಿರುವದೆಂಬದು ಕಂಡು ಬಂತು. ತೆಗೆದರೆ ಬಾರದು; ಹೊಡೆದರೆ ಅಡಿಗೆ ಕೆಡುವದು. ಸ್ವಾಮಿಗಳು ಬಂದು ಕರೆಯಲು ಹರಿದುಬಂದು ಅವರ ಕೋಲನ್ನು ಸುತ್ತಿತು. ಅವರು ಬಿಲದಲ್ಲಿ ಬಿಟ್ಟರು. ಆರೇಳು ತಾಸುಗಳೊಳಗೆ ಕರಿಗಡಬುಗಳನ್ನು ಕರಿಕರಿದು ಎತ್ತರವಾಗಿ ಗುಂಪಿಯನ್ನು ಹಾಕಿದರು. ಅಕಸ್ಮಾತ್ತಾಗಿ ಯಾರೂ ಅರಿಯದಂತೆ ಬಂದು ಗೋವೊಂದು ರಾಶಿಯ ಮೇಲೆ ನಿಂತು ಕಡಬು ತಿನ್ನುತ್ತಿತ್ತು. ಹೊಡೆಬಡಿಯೆಂದು ಹಿಡಿಯ ಹೋಗುವವರೊಳಗೆ ಅಲ್ಲಲ್ಲಿಯೇ ಮಾಯವಾಯಿತು. "ಕಾಮಧೇನುವು ಪ್ರಸಾದವನ್ನು ಸಲ್ಲಿಸಿತು. ಯೋಗ್ಯವೇ ಸರಿ. ಸಾಗಲಿ ಮುಂದೆ ನಿಮ್ಮ ಕಾರ್ಯ" ವೆಂದು ಸ್ವಾಮಿಗಳಂದರು.

ಜಾತ್ರೆಯಲ್ಲೆಲ್ಲ ಡಂಗುರಹಾಕಿ ಸರ್ವರೂ ಲಿಂಗಾರ್ಪಿತಕ್ಕೆ ಬರಬೇಕೆಂದು ಸಾರಿದರು. ಇವರ ಮಹತ್ವವು ಜಾತ್ರೆಯಲ್ಲಿ ನಡೆಯಬಾರದೆಂದು ಬೇರೆ ಮಠದ ವಿರಕ್ತಸ್ವಾಮಿಗಳು ತಮ್ಮಲ್ಲಿ ಊಟಕ್ಕೆ ಬಂದವರಿಗೆ ತಲೆಗೊಂದು ರೂಪಾಯಿಯನ್ನೂ ಹೆಣ್ಣುಮಕ್ಕಳಿಗೆ ಸೀರೆಯುಡುಗರೆಯನ್ನೂ ಕೊಡುವೆವೆಂದು ಸಾರಿದರು. ಇಷ್ಟಾದರೆ ಯಾರಿಗೆ ಬೇಡ. ಎಲ್ಲರೂ ಅಲ್ಲಿಯೇ ಮುತ್ತಿದರು. ಕರೆದ ಮಹಾಜನರು ಗಾಬರಿಯಾದರು. ಅವರು ಬರೇ ಬಾಯಿಬಂಡತನದವರು, ನಿಜವಾಗಿ ಎಂದರೆ ಹಿಂದೆ ಸರಿಯುವವರು!! ಅವರು ಬಂದ ಜನರನ್ನು ಉಣಿಸದೆ ನೂಕಿ ಕಳಿಸಿದರು. ಎಲ್ಲ ಜನವೂ ಅವರನ್ನು ನಿಂದಿಸುತ್ತ ಅನ್ನದಾನೀಶ್ವರರ ಮಹಾ ಪ್ರಸ್ತಕ್ಕೆ ಹೊರಳಿತು. ಅವರೆಲ್ಲರನ್ನು ಕಂಡು ಅಜ್ಜನವರು ಆನಂದದಿಂದ ಬರಲಿ! ಇನ್ನೂ ಬರಲಿ! ಮತ್ತೂ ಬರಲಿ!! ಎಂದು ಹುಡುಹುಡುಕಿಸಿ ಕರಿಸಿ ಕೂಡಿಸಿದರು. ಸ್ವತಃ ನಿಂತು ನೀಡಿನೀಡಿಸಿ ಹೆಚ್ಚಾಗಿ ಉಣಿಸಿದರು. ಎಷ್ಟು ಉಂಡರೂ ಯಾರಿಗೂ ಆಯಾಸವಿಲ್ಲ. ಇವರು ಹಿಂದೆ ಮಠದಲ್ಲಿ ಸೀಕರಣೆ,

ಸುರಳೀಹೋಳಿಗೆ ಮೊದಲಾದವುಗಳನ್ನು ಮಿತಿಯಿಲ್ಲದೆ ತಿನ್ನಿಸಿ ವಿನೋದಗೈದಿದ್ದರು. ಒಮ್ಮೆ ಮೂರುಮಣ ಸಕ್ಕರೆಯನ್ನು ಹನ್ನೊಂದು ಜನರಿಗೆ ತಿನ್ನಿಸಿದ್ದರು. ಅದೂ ಯೋಗಮಹಿಮೆಯೇ. ಅದಿರಲಿ, ಈಗ ಅಸಂಖ್ಯಜನರು ನೀಡಿದುದೆಲ್ಲವನ್ನು ಉಂಡು ಸಂತೃಪ್ತರಾಗಿ 'ಚನ್ನಬಸವೇಶ್ವರನ ಜಾತ್ರೆ, ಅನ್ನದಾನಿಯ ಪ್ರಸ್ತ' ಎಂದು ಕೊಂಡಾಡುತ್ತ ಸುತ್ತಲೂ ಹರಿದರು.

ಉಳವಿಯಲ್ಲಿರುವ ವರೆಗೆ ದಿನಾಲು ಶಿವಭಜನೆ, ಪುರಾಣ, ಕೀರ್ತನೆ, ಶಿವಕಥೆಗಳು ಎಡೆಬಿಡದೆ ನಡೆಯುತ್ತಿದ್ದವು. ಅನ್ನದಾನೀಶ್ವರರಿಗೆ ಗಂಗೆಯೂ ಚಂದ್ರನೂ ಮಾತ್ರ ಇದ್ದಿಲ್ಲವಲ್ಲದೆ ಶಿವನ ಸಭೆಗೂ ಆ ಆಶ್ರಮಕ್ಕೂ ಯಾವ ಹೆಚ್ಚುಕಡಿಮೆಯೇ ಇಲ್ಲ. ಜನರೆಲ್ಲರೂ ಅನ್ನದಾನೀಶ್ವರರನ್ನು 'ಅಲ್ಲಮಾನ್ವಯಶ್ರೇಷ್ಠ, ಭಕ್ತಿಜ್ಞಾನ ವೈರಾಗ್ಯವನಲೋಲ, ಲೋಕಪಾವನ, ಪರತರಾನಂದಮೂರ್ತಿ' ಎಂದು ಹರುಷವು ಉಕ್ಕೇರುವಂತೆ ನುತಿಸಿದರು.

ಸ್ವಾಮಿಗಳು ವೇದವಿಧಿಯಿಂದ ಚನ್ನಬಸವೇಶ್ವರನಿಗೆ ಅಭಿಷೇಕವನ್ನು ಮಾಡಿಸಿ ದರ್ಶನಕೊಟ್ಟರು. ಜನರಿಗೆ ಆ ಮೂರ್ತಿಯನ್ನೂ, ಚಿಲುಮೆಯಗ್ಗವಣಿಯನ್ನೂ, ನೀಲಾಂಬಿಕೆಯ ಗವಿಯನ್ನೂ, ಭಸ್ಮದ ಸಿಧಿಯನ್ನೂ, ರುದ್ರಾಕ್ಷಿಮಂಟಪವನ್ನೂ, ಧೇನುಗವಿಯನ್ನೂ, ಬೇರೆ ಪುಣ್ಯಸ್ಥಲಗಳನ್ನೂ ತೋರಿಸಿದರು. ಯಾತ್ರಾವಿಧಿಯನ್ನು ತೀರಿಸಿ ಗುರುಸ್ತೋತ್ರವನ್ನು ಮಾಡುತ್ತ ತಿರುಗಿದರು.

ಬರುವಾಗ ಬಯಲಬಸವಣ್ಣನೆಡೆಯಲ್ಲಿ ಉಳಿದ ಸಂಗ್ರಹವನ್ನೆಲ್ಲ ವೆಚ್ಚಮಾಡಿ ದೊಡ್ಡ ಗಣಾರಾಧನೆಯನ್ನು ಮಾಡಿಸಿದರು. ಬಳಿಕ ಅಲ್ಲಿಂದಲೇ ತಮ್ಮ ತಮ್ಮ ಊರುಗಳಿಗೆ ಹೋಗುವವರಿಗೆ ಆಶೀರ್ವಾದದೊಡನೆ ಅಪ್ಪಣೆಕೊಟ್ಟರು. ಉಳಿದವರೊಡನೆ ಹಾಲಗೆರೆಗೆ ಬಂದರು. ಹಾದಿಯಲ್ಲಿ ಭಕ್ತರು ಕೊಟ್ಟ ಕಾಣಿಕೆಯಿಂದಲೇ ಎಲ್ಲ ವೆಚ್ಚವು ಸಾಗಿತು. ಹೋಗುವಾಗ ಒಯ್ದ ೪೪೦ ರೂಪಾಯಿಗಳು ಹಾಗೆಯೇ

ಇದ್ದವು. ಅವುಗಳೊಳಗಿಂದ ಒಬ್ಬೊಬ್ಬರಿಗೆ ೨ಕಾಯಿ ೩ರೂಪಾಯಿ ಈ ಪ್ರಕಾರ ಎಲ್ಲ ಚರರಿಗೂ ಕಳಿಸಿದರು. ಉಳಿದ ಹಣದಿಂದ ಹಾಲಗೆರೆಯಲ್ಲಿ ಬಸವಪುರಾಣವನ್ನು ಹೇಳಿಸಿ ಸಂಭ್ರಮವನ್ನು ಮಾಡಿದರು.

೧೦. ಕೃತಕರ್ಮದ ಫಲವು.

ಪ್ರಾತಃಕಾಲದ ಸಮಯ ಸೂರ್ಯನುದಯಿಸಿ ಒಂದೇ ತಾಸು ಆಗಿದ್ದಿತು. ಆತನ ಹೊಂಬಣ್ಣದ ಕಿರಣಗಳು ಈಗೀಗ ಪ್ರಖರತೆಯನ್ನು ಹೊಂದುತಲಿದ್ದವು. ಬೆಳಗಿನ ಸುಳಿಗಾಳಿಯು ಸುಳ್ಳನೆ ಸುಳಿದು ಇನ್ನೂ ಆಲ್ಹಾದವನ್ನುಂಟುಮಾಡುತಲಿದ್ದಿತು. ಜನರು ಉತ್ಸಾಹದಿಂದ ಕಾರ್ಯದಲ್ಲಿ ತೊಡಗುತಲಿದ್ದರು. ಆಗ ಅಬ್ಬೀಗೇರಿಯ ತೋಟದಲ್ಲಿದ್ದ ಮಠದಲ್ಲಿಯಂತೂ ಅಪೂರ್ವಶೋಭೆ. ವಟುಗಳು ಮಠದ ಕಾರ್ಯಗಳಲ್ಲಿ ತೊಡಗಿದ್ದರು. ಅನ್ನದಾನೀಶ್ವರರು ಭಸ್ಮಭೂಷಿತವಾದ ಮುಖದಿಂದೊಪ್ಪಿ ತಪಃಪ್ರಭಾವವನ್ನು ಬೀರುತ್ತ ಆಸನದಲ್ಲಿ ವಿರಾಜಮಾನರಾಗಿದ್ದರು. ಭಕ್ತಗಣವು ಬಂದು ಬಂದು ನಮಿಸಿ ಹಿಂದಿರುಗುತಲಿದ್ದಿತು. ನಾಲ್ಕೆಂಟುಜನ ದೊಡ್ಡ ಮನುಷ್ಯರು ಮಾತ್ರ ಯಾವದೋ ಕಾರ್ಯಾರ್ಥವಾಗಿ ಬಂದು ಸ್ವಾಮಿಗಳ ಸನ್ನಿಧಿಯಲ್ಲಿ ಕುಳಿತುಕೊಂಡಿದ್ದರು. ಆಗ


ಅನ್ನದಾನೀಶ್ವರರು— ನಾವು ಮುಮುಕ್ಷುರು; ನಮ್ಮಿಂದಾಗುವದೇನು? ಬಂದು ಮಾಡುವದೇನು? ಪ್ರಭುವು ತಾನೆ ನಿಂದು ಸರ್ವವನ್ನೂ ನೆರವೇರಿಸುವನು.

ಕುಳಿತವರು (ಅಂಜುತ್ತಂಜುತ್ತ)— ತಾವು ಹೀಗೆ ಅಪ್ಪಣೆಕೊಡಿಸಿದರೆ ಉಪಾಯವಿಲ್ಲ. ಕಾರ್ಯವೇ ನಿಲ್ಲುವದು.

ಎಂದು ಉದಾಸೀನರಾಗಿ ನುಡಿದರು. ಅಷ್ಟರಲ್ಲಿ ವಿರಾಟಪುರದ (ಹಾನಗಲ್ಲಿನ) ಸದಾಶಿವ ಮಹಾಸ್ವಾಮಿಗಳು ರೋಣದ ಗುರುಪಾದ ಶಿವಯೋಗಿಯನ್ನು ಸಂಗಡ ಕರೆದುಕೊಂಡು ಬಂದರು; ನಮಸ್ಕರಿಸಿ ಕುಳಿತುಕೊಂಡರು.

ಸದಾಶಿವಸ್ವಾಮಿಗಳು--- ಮಹಿಮರೆ, ನೀವಿಲ್ಲದೆ ಕಾರ್ಯವು ನೆರವೇರದು; ಕರುಣವಿದ್ದರೆ ಬರಬೇಕು. ತಾವು ಆಗಮಿಸಿದರೆ ಸರಿಯಾಯಿತು. ಇಲ್ಲದಿದ್ದರೆ ಈ ಗುರುಪಾದದೇವನನ್ನೇ ಇಲ್ಲಿ ಬಿಟ್ಟು ಹೋಗುವೆವು. ಮುಂದಿನಕಾರ್ಯ ನಮಗೆ ಬೇಡ.

ಅನ್ನದಾನೀಶ್ವರರು (ನಕ್ಕು)--- ಈಗ ಮಾತ್ರ ನಾನು ನಿಮ್ಮ ಆಗ್ರಹವನ್ನು ಮೀರಲಾರದಾದೆನು.



ಹಾನಗಲ್ಲ ಸದಾಶಿವಸ್ವಾಮಿಗಳು.

ರೋಣದಲ್ಲಿ ವಾಗಿನಗಿರಿಯ ಚರಪಟ್ಟಾಧಿಕಾರಕ್ಕೆ ಗುರುಪಾದಸ್ವಾಮಿಯ ಆರೋಹಣಮಹೋತ್ಸವವನ್ನು ಅಲ್ಲಿಯ ಪ್ರಮುಖರು ಹೂಡಿದರು. ಪಟ್ಟಣವನ್ನು ಸಿಂಗರಿಸಿದರು. ಮಠದಲ್ಲಿ ಮಂಟಪವನ್ನು ರಚಿಸಿ ಕನ್ನಡಿ ತೋರಣ ಜಲ್ಲಿಗಳಿಂದ ಅಲಂಕರಿಸಿದರು. ನಾನಾತರದ ಕಲೆಯವರೂ ಹಿರಿಕಿರಿಯರೂ ಒಟ್ಟುಗೂಡಿದರು. ಸುತ್ತಲಿನ ಹತ್ತಿಪ್ಪತ್ತು ಊರುಗಳ ವಿರಕ್ತಮಹಾಸ್ವಾಮಿಗಳನ್ನೂ ಪಟ್ಟಾಧಿಕಾರಿಗಳನ್ನೂ (ಇವರೆಲ್ಲರ ಹೆಸರುಗಳು ಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿವೆ.) ಸನ್ಮಾನಿಸಿ ಕರೆಯಿಸಿಕೊಂಡರು. ಎಲ್ಲರೂ ಬಂದರೂ ಹಾಲಗೆರೆಯ ಅನ್ನದಾನೀಶ್ವರರಿಲ್ಲದಿರೆ ಉತ್ಸವವು ಶೋಭಿಸದೆಂದು ಮುಖ್ಯಸ್ಥರು ಕಂಡುಕೊಂಡರು. ಯಾರ ಬಿನ್ನಪವನ್ನೂ ಕೈಕೊಳ್ಳದ, ಎಲ್ಲಿಗೂ

ದಯಮಾಡಿಸಿದ ಅವರನ್ನು ಹೇಗಾದರೂ ಮಾಡಿ ಕರತರಬೇಕೆಂದು ನಿಶ್ಚಯಿಸಿದರು. ಅದಕ್ಕಾಗಿ ಕೆಲವುಜನ ದೊಡ್ಡಮನುಷ್ಯರು ಅಬ್ಬಿಗೇರಿಗೆ ಹೊರಟು ಮೇಲೆ ಹೇಳಿದಂತೆ ಸ್ವಾಮಿಗಳ ಸನ್ನಿಧಿಗೆ ಬಂದಿದ್ದರು. ಇವರ ಬಿನ್ನಹಮಾತ್ರದಿಂದಲೇ ಬರಬಹುದೋ ಬರಲಿಕ್ಕಿಲ್ಲವೋ ಎಂಬ ಸಂಶಯದಿಂದ ಸದಾಶಿವ ಮಹಾಸ್ವಾಮಿಗಳೂ ಹಿಂದಿನಿಂದ ಗುರುಪಾದದೇವನನ್ನು ಕರಕೊಂಡೇ ಅಲ್ಲಿಗೆ ಬಂದಿದ್ದರು. ಇವರ ಬಹಳವಾದ ವಿನಂತಿಗೂ ಆಗ್ರಹಕ್ಕೂ ಅನ್ನದಾನೀಶ್ವರರು ರೋಣಕ್ಕೆ ಬರಲು ಒಪ್ಪಿಕೊಂಡರು. ಎಲ್ಲರೊಡನೆ ಶಿವಾರ್ಚನೆ, ಅರ್ಪಣಗಳನ್ನು ತೀರಿಸಿಕೊಂಡು ರಥದಲ್ಲಿ ಕುಳಿತು ಹೊರಟರು.

ಇತ್ತ ರೋಣದ ಸದ್ಭಕ್ತರೂ, ನೆರೆದ ಶಿವಯೋಗಿಗಳೂ ಅನ್ನದಾನೀಶ್ವರರನ್ನು ಎದುರುಗೊಂಡು ಸಂಭ್ರಮದಿಂದ ಕರೆದೊಯ್ಯಬೇಕೆಂದು ಸಿದ್ಧರಾದರು. ಇಂಥ ಮೆರವಣಿಗೆ ಮೊದಲಾದ ಯಾವ ಗೊಂದಲವೂ ಅನ್ನದಾನೀಶ್ವರರಿಗೆ ಸೇರದು. ಅವರು ಇದನ್ನು ತಿಳಿದು ತಮಗೆ ಇಳಿದುಕೊಳ್ಳಲಿಕ್ಕೆ ಗೊತ್ತುಮಾಡಿದ ತೋಟಕ್ಕೆ ನೆಟ್ಟಗೆ ಹೋಗಬೇಕೆಂದು ಅವಸರಮಾಡಿ ಆ ದಾರಿಯನ್ನು ಹಿಡಿದರು. ಶಿವನು ಭಕ್ತರನ್ನು ಗೆಲಿವನೇ? ಶಿವಸ್ವರೂಪದ ಈ ಸ್ವಾಮಿಯು ಭಕ್ತರಿಗೆ ಸೋಲದಿರುವನೇ? ಹಿಂದೆ ಇವರು ಭಕ್ತರನ್ನು ಹಲವು ಸಾರೆ ವಂಚಿಸಿದ ಫಲವು ಈಗ ಅಡ್ಡವಾಯಿತು; ಸೋಲಿಗೆ ಕಾರಣವಾಯಿತು. ಅವರ ರಥದ ಚಕ್ರವು ಉಚ್ಚಿ ಉರುಳಿತು. ಅಚ್ಚು ನೆಲಕ್ಕಿಳಿಯಿತು. ಚಕ್ರವನ್ನುತಂದು ತೊಡಸುವಷ್ಟರಲ್ಲಿಯೇ ರೋಣದ ಭಕ್ತಮಂಡಲವು ಮೇಣೆ, ಪಲ್ಲಕ್ಕಿ, ರಥಗಳೊಡನೆಯೂ ವಾದ್ಯಗಳೊಡನೆಯೂ ಸಡಗರದಿಂದ ಬಂದು ಎದುರಾದರು. ಭಕ್ತಿಪಾಶದಿಂದ ಬಂಧಿಸಿದರು. ಸ್ವಾಮಿಗಳು ಹೋಗುವರೆಲ್ಲಿ? ಭಕ್ತರ ಬಂಧನದಲ್ಲಿ ಸಿಲುಕಿದರು. ಭಕ್ತರು ಹಾಕಿದ ಸುತ್ತಲಿನ ಮುತ್ತಿಗೆಯನ್ನು ನೋಡಿ ಸುಮ್ಮನಾದರು. ವಂಚನೆಯದೆಷ್ಟು ದಿನ ನಡೆಯುವದು?

ಭಕ್ತರ ಬಲಕ್ಕೆ ನೆಲೆಯಿರುವದೇ? ಶಿವನು ಕೈಲಾಸವನ್ನು ಹೊಕ್ಕರೂ ಸಿಜ್ಞಣಿಕೆಯ ಹಚ್ಚಿತರುವ ಸಾಮರ್ಥ್ಯವು ಅವರಿಗೆ ಇಲ್ಲವೆ?

ಸ್ವಾಮಿಗಳನ್ನು ಸುಂದರವಾದ ರಥದಲ್ಲಿ ಕುಳ್ಳಿರಿಸಿದರು. ಮೆರವಣಿಗೆಯು ಸುವ್ಯವಸ್ಥೆಯಿಂದ ಸಾಗಿತು. ಎಲ್ಲಕ್ಕೂ ಮುಂದೆ ಮಂಗಲವಾದ್ಯಗಳು ಭೋರ್ಗರೆಯುತ್ತಿದ್ದವು. ಅವುಗಳ ಹಿಂದೆ ಉಚ್ಚೈಶ್ರವದಂಥ ಸುಂದರವಾದ ತುರಂಗವು ನಲಿದು ನರ್ತಿಸುತ್ತಿತ್ತು. ಅದರ ಹಿಂದೆ ವಸ್ತ್ರಭೂಷಿತವಾದ ದೊಡ್ಡ ಆನೆಯು ಸೊಂಡೆಯಲ್ಲಿ ಚಾಮರವನ್ನು ಹಿಡಿದು ಸೂಸ್ವರಿದು ಢಾಳಿಸುತ್ತ ಸ್ವಾಮಿಗಳ ರಥದ ಕಡೆಗೆ ಮುಖಮಾಡಿ ಹಿಂಬರಿದು ನಡೆಯುತಲಿತ್ತು. ಈ ಆನೆಗೂ ರಥಕ್ಕೂ ನಡುವೆ ಭಜನಾಮೇಳದವರು ಸುಸ್ವರದಿಂದ ಶಿವನಾಮವನ್ನು ಭಜಿಸುತ್ತಿದ್ದರು. ರಥದ ಹಿಂದೆ ಉಳಿದ ಶಿವಯೋಗಿಗಳು ಮೇಣೆ ಪಲ್ಲಕ್ಕಿಗಳನ್ನೇರಿ ಕ್ರಮವಿಡಿದು ಸಾಗಿದ್ದರು. ಅವರ ಹಿಂದೆ ಸೆಟ್ಟಿಸಾವುಕಾರರೂ ಅಧಿಕಾರಿಗಳೂ ಭಕ್ತಿಯಿಂದ ಪಾದಚಾರಿಗಳಾಗಿ ನಡೆದಿದ್ದರು. ಮದ್ದುಗುಂಡುಗಳು ಹಾರಿದವು. ಜನವು ಕಿಕ್ಕಿರಿದು ನೆರೆದಿತ್ತು. ಭಕ್ತರುಬ್ಬುಬ್ಬಿ ಮೇಲ್ವರಿದು ಸ್ವಾಮಿಗಳನ್ನು ಕಾಣಲೆಂದು ಮುತ್ತುವರು. ಕಂಡು ನಮಿಸಿ ಧನ್ಯರಾಗುವರು. ಸ್ತ್ರೀಯರೆಲ್ಲರು ಅಕ್ಕಾ ಬಾ! ತಂಗೀ ಬಾ! ಗಂಗಮ್ಮ ಗೌರಮ್ಮ ಬನ್ನಿರಿ! ಮಹಾತ್ಮನ ದರ್ಶನವು ಬನ್ನಿರಿ! ಧನ್ಯರಾಗುವಾ ಬನ್ನಿರಿ!! ಎಂದು ಬಂದುಬಂದು ಫಲಪುಷ್ಪಗಳನರ್ಪಿಸಿ ನಮಿಸಿ ತಿರುಗುವರು. ಇಂದುವದನದ ಭಸ್ಮದ ಬೆಳಗಿನಲ್ಲಿ ಕುಂಕುಮದ ತಿಲಕವು ಲಲಿತವಾಗಿರಲು ನಗೆಮೊಗದ ಸುದತಿಯರು ಕಂಕುಳದಲ್ಲಿ ಕಲಶಗಳನ್ನಿಟ್ಟು ಭರದಿಂದ ಬಂದು ನೀರೆರೆದು ಹೋಗುವದರಿಂದಲೂ ಅಮಲಶೋಭೆಯೇ ಬೀರುತಲಿತ್ತು.

ಮೆರವಣಿಗೆಯು ಮಠದ ಮುಂದೆ ಬಂದಿತು. ಅಲ್ಲಿ ಪದ್ಧತಿಯನರಿಯದ ಸ್ತ್ರೀಯರು ಮಾಳಿಗೆಯನೇರಿ ಉತ್ಸವವನ್ನು ನೋಡುತ್ತಿದ್ದರು. ಭಕ್ತರು ಕೂಗಿ 'ಅವ್ವ ಅಕ್ಕ ಕೆಳಗಿಳಿಯಿರಿ! ಸ್ವಾಮಿಗಳು ಬರುವಾಗ ಮೇಲಿರಬಾರದು ಇಳಿಯಿರಿ' ಎಂದು ಹೇಳಿದರು. ಬಹುಜನರ ಬಲುಮೆ

ಯಿಂದಾಗಲಿ, ತಿಳಿದಾಗಲಿ, ತಿಳಿಯದೆ ಉದಾಸೀನತೆಯಿಂದಾಗಲಿ, ಎಲ್ಲರೂ ಕೆಳಗಿಳಿದರು. ಒಬ್ಬ ಪರಮತೀಯಳು ಮಾತ್ರ ಛಲದಿಂದ ಹಾಗೆಯೇ ನಿಂತಳು. ಆಕೆಯೂ ಕುಲವನಿತೆ, ಪತಿವ್ರತೆ, ವಿನಯ ಶೀಲೆ. ಆದರೆ ಕಾಲವಶದಿಂದ ವಿಪರೀತ ಬುದ್ಧಿ ಬಂತು ಮಾಡುವ ದೇನು? ಜನರು ಮತ್ತಿಷ್ಟು ಕೂಗಲು ಆಕೆಯು ಅಂಜದೆ--"ನಮ್ಮ ಪಾಳಿಗೆ, ನಾನು ನಿಲ್ಲುವವಳೇ! ನಿಮ್ಮದೇನು ಗಂಟಿರುವದಿಲ್ಲಿ? ನಿಮ್ಮ ಸ್ವಾಮಿ ಕೆಳಗಾದರೆ ನಾನೇನುಮಾಡಲಿ? ಆತನನ್ನು ಒಂದು ಬಿದಿರು ತುದಿಯಲ್ಲಿ ಕೂಡ್ರಿಸಿ ಎತ್ತಿ ಹಿಡಿಯಿರಿ; ಅಂದರೆ ಎಲ್ಲರಿಗೂ ಮೇಲಾ ಗುವನು." ಎಂದು ಬಗೆಬಗೆಯಿಂದ ನಿಂದಿಸಿದಳು. ಅಷ್ಟರಲ್ಲಿ ಒಬ್ಬ ಹುಡುಗನು 'ಇಳಿಯಂದರಿಳಿದರಾಯಿತು; ಒಳ್ಳೇ ದೊಡ್ಡವಳೀಕೆ' ಎಂದು ಒಂದು ಹರಳನ್ನು ಒಗೆದನು. ಅದು ಆಕೆಗೆ ಬಡಿಯಿತು. ಕೇಳುವದೇನು! ಒಳಿತಾಗಿ ಕೋಪಗೊಂಡು--"ಅದೇಕರೋ ಮುಂಡಿಯುಗಂಡರೇ ನಿಮ್ಮ ಸ್ವಾಮಿ ಹಾಳಾಗಿಹೋಗಲಿ! ಬಂದರೇ ಸೀಳಿಸುವೆನು ನಿಮ್ಮನ್ನೊಬ್ಬೊಬ್ಬರನ್ನು" ಎಂದು ಒದರುತ್ತ ಕೈತುಂಬ ಮಣ್ಣು ತಕ್ಕೊಂಡು ಸ್ವಾಮಿಗಳ ರಥದ ಮೇಲೆ ತೂರಿದಳು. ಅಷ್ಟರಲ್ಲಿ ಸ್ವಾಮಿ ಗಳು ರಥದಿಂದಿಳಿದು ಮಠದೊಳಗೆ ಹೋಗಿದ್ದರು. ಸೂರ್ಯನಿಗೆ ಮಣ್ಣು ತೂರಿ ಕಣ್ಣಲ್ಲಿ ತುಂಬಿಕೊಂಡಂತಾಯಿತು. ಕೂಡಿದ ಜನರು ಛೀ, ಥೂ, ಎಂದು ಬಲವಾಗಿ ಬೈದರು. ಮತ್ತಿಷ್ಟು ಕಿನಸಿಗೆದ್ದ ಆಕೆಯು ಧಾವಿಸಿ ಕೆಳಗಿಳಿದಳು.

ಆಕೆಯ ಗಂಡನೂ ಮತಿವಂತನು. ಜಾತಿಭೇದವನ್ನೆಣಿಸದೆ ವೀರಶೈವರ ಮಿತ್ರನೂ ಆಗಿದ್ದನು. ಆದರೂ ಪ್ರಸಂಗವಿಶೇಷದಲ್ಲಿ ಬುದ್ಧಿಯು ಕೆಡುವದುಂಟು. ಸರ್ವವೂ ಕಾಲಕ್ಕೆ ಸರಿಯಾಗಿ ನಡೆ ಯುವದುಂಟು. ಆಗ ಆತನು ಗುರುಪಾದಯತಿಗಳ ಸಿಂಹಾಸನಾ ರೋಹಣದ ತರುವಾಯ ನಡೆಯುವ ಅವರ ತಿರ್ಯಗಾಂದೋಲಿ ಕೋತ್ಸವವನ್ನು ತಡೆದು ಕಲಹ ಹೂಡಬೇಕೆಂದು ಊರ ತಮ್ಮ ತಮ್ಮ ಜನರೊಡನೆ ಆಲೋಚಿಸುತ್ತ ಕುಳಿತಿದ್ದನು. ಅಷ್ಟರಲ್ಲಿಯೇ

ಹೆಂಡತಿಯು ಒದರುತ್ತ ಬಂದು “ಲಿಂಗಾಡಿಗಳು ಕಣ್ಣಿಗೆ ಕಲ್ಲೊಗೆದರು. ಮನಬಂದಂತೆ ಬೈದರು. ಒಳಗೇ ಕುಳಿತ ನಿಮ್ಮ ಆಲೋಚನೆ ಸುಟ್ಟಿತು” ಎಂದು ಅಳಅಳುತ್ತಲೇ ಹೇಳಿ ಹುರುಪಿಗೆಬ್ಬಿಸಿದಳು. ಬಳಿಕೇನು? ಹೊರಗೆ ಹಾರಿದನೇ ಶೂರ! “ಈ ಹುಮ್ಮರ ಮಬ್ಬು ಇಳಿಸುವೆನು! ಇವರ ಮೇಲೆ ‘ಖಟ್ಲೆ’ ಮಾಡುವೆನು!! ಈ ಲಿಂಗಾಯತರನ್ನು ಸಾಲಾಗಿ ಸೆರೆಮನೆಯಲ್ಲಿಡಿಸುವೆನು!!!” ಎಂದು ಗಳಹುತ್ತಲೂ, ಹಿಡಿಯಬಂದವರಿಂದ ಕೊಸರಿ ಮುಂದೆ ಸಾಗುತ್ತಲೂ ಇದ್ದನು. ಆತನ ಮಿತ್ರರಾದ ಗೌಡರೇ ಮೊದಲಾದವರು ಬಂದು “ಹೀಗೇಕೆ ಮಾಡುವಿರಿ? ಕೋಪವನ್ನು ಬಿಡಿರಿ! ನಿಮ್ಮ ಮನೆಯ ಜನರ ಅಭಿಮಾನವು ನಮಗಿಲ್ಲವೋ? ಆ ತುಂಟನನ್ನು ನಿಮ್ಮೆದುರಿಗೆ ಶಿಕ್ಷಿಸುವೆವು. ಹೆಂಗಸರ ಮಾತಿನಿಂದ ಹೀಗೆ ರೊಚ್ಚಿಗೇಳಬಾರದು” ಎಂದು ಕೈ ಹಿಡಿದು ಸಮಾಧಾನದಿಂದ ಹೇಳಿದರೂ ಕೇಳಲಿಲ್ಲ. ಕೈಕೊಸರಿಕೊಂಡು ‘ಫಿರ್ಯಾದು’ ಮಾಡುವೆನೆಂದು ಓಡಿದನು. ಆದರೆ ದೈವಲೀಲೆಯು ಯಾರಿಗೆ ತಿಳಿಯುವದು? ಆತನು ಅಷ್ಟೇನು ದೂರ ಹೋಗಿದ್ದಿಲ್ಲ! ತನ್ನ ಮನೆಯಲ್ಲಿಯೇ ಆರ್ದು ಕೂಗುವ, ಚೀರುವ, ಅಳುವ, ಬೊಬ್ಬಿಡುವ ಭೀಕರ ಧ್ವನಿಯನ್ನು ಕೇಳಿದನು. ಗಾಬರಿಯಾಗಿ ಹಿಂದಿರುಗಿದನು. ಮೈಯೆಲ್ಲ ಉರಿಯುಡರಿ ಸುಡುತ್ತಿರುವ ತನ್ನ ಮಡದಿಯು ಓಣಿಗೆ ಬರುವದನ್ನು ಕಂಡನು! ಹೌಹಾರಿದನು!!

ಓಣಿಯಲ್ಲಿ ಒದರುವ ತನ್ನ ಗಂಡನ ಶೂರತನವನ್ನು ನೋಡಬೇಕೆಂದು ಆ ಸ್ತ್ರೀಯು ಮಾಳಿಗೆಯನ್ನು ಮತ್ತೆ ಏರಿದ್ದಳು. ಗಂಡನು ಚಾವಡಿಗೋಡುತ್ತಿರಲು ತನ್ನ ಪೌರುಷವನ್ನು ನೆರೆದ ಹೆಂಗಸರಲ್ಲಿ ಮೆರೆಯಿಸಬೇಕೆಂದು ಒಂದೊಂದು ಎರಡೆರಡು ಪಾವಟಿಗೆಗಳನ್ನು ಹಾರುತ್ತ ಬರುತ್ತಿದ್ದಳು; ಸೋಪಾನದ ಬಾಗಿಲದಲ್ಲಿ ಕಟ್ಟಿದ ಸೀಮೆಯೆಣ್ಣೆಯ ದೀಪದ ಕಾಜಿನ ‘ಲಾಂದರ’ಕ್ಕೆ ತಡೆಹಾಯ್ದಳು. ತುಂಬಿದ್ದ ಎಣ್ಣೆಯು ಮೈಯೆಲ್ಲ ಸುರಿಯಿತು. ಉರಿಯು ತುಂಬ ಹತ್ತಿಕೊಂಡಿತು. ಚೀರುತ್ತ ಓಡಿ ಓಣಿಗೆ ಬಂದಳು. ಗಾಬರಿಯಾಗಿ ವೈದ್ಯನ ಮನೆಯು

ಸೇರಹೋಗಲು ಮನೆಯವರು ಭಯದಿಂದ ಬಾಗಿಲು ಮುಚ್ಚಿಕೊಂಡರು. ಜೀವದಾಶೆಯಿಂದ ಸಿಕ್ಕಸಿಕ್ಕವರ ಮೇಲೇರಿ ಹೋಗಲು ಎಲ್ಲರೂ ಹಿಂದಕ್ಕೆ ಸರಿದರು. 'ತಾನುಬಲಂ ಜಗಬಲಂ' ಎಂಬಂತಾಯಿತು. ಎಲ್ಲರೂ ದೂರಿನಿಂದಲೇ ನೋಡಿದರು. ಗಂಡನ ಬುದ್ಧಿ ಮಸಣಿಸಿತು. ಸಿಟ್ಟು ಎಲ್ಲಿಯೋ ಹೋಗಿಬಿಟ್ಟಿತು. ಅಪ್ಪಾ ಅಣ್ಣಾ ಬರ್ರಿ ಬರ್ರಿ! ಎಂದು ಒದರಿದನು. ಧೈರ್ಯಸ್ಥರು ಮುಂದೆ ಬಂದು ಸೀರೆಯನ್ನು ಬಿಡಿಸಿ ತೆಗೆಯಲು ಯತ್ನಿಸಿದರು. ಆದರೆ ಚನ್ನಾಗಿ ಸುಡಲೆಂದು ಬಗೆದ ಪಾಪವು ಅವನ್ನು ಬಿಡಲಿಲ್ಲ. ನಡುವಿನೊಳಿಟ್ಟ ಮೇಖಲೆಯು (ಒಡ್ಯಾಣ) ಸೀರೆಯನ್ನು ಗಟ್ಟಿಯಾಗಿ ಹಿಡಿಮುಕೊಂಡಿತ್ತು. ಅದರಿಂದ ಸುಟ್ಟ ಸೀರೆ ಕೈಗೆಹತ್ತಿದಷ್ಟೇ ಬರಹತ್ತಿತು. ಬಳೆಗಳು ಚಿಟಚಿಟನೆ ಸಿಡಿದವು. ಅಗ್ನಿಯ ಕ್ರೌರ್ಯವು ಮಿಗಿಲಾಯಿತು. ಬಹಳಹೊತ್ತಿನ ಮೇಲೆ ಬಲಾತ್ಕಾರದಿಂದ ಸೀರೆಯನ್ನು ಕಡೆಗೆ ತೆಗೆದರೂ ಅಷ್ಟರಲ್ಲಿ ಚರ್ಮವೆಲ್ಲ ಬೆಂದು ಹೋಗಿತ್ತು. ಬಾಳೆಯೆಲೆಯ ಮೇಲೆ ಮಲಗಿಸಿ ಮೇಲೆ ಎಣ್ಣೆಯನ್ನು ಹೊಯ್ದರು. ಏನು ಮಾಡಿದರೇನು? ಮುಂದೆರಡೇ ತಾಸಿನಲ್ಲಿ ಕೃತಕರ್ಮದ ಫಲವನ್ನು ಅನುಭೋಗಿಸಿ ಹೆಚ್ಚಾದ ಯಾತನೆಯಿಂದ ಹಲ್ಗಿರಿದು ಸತ್ತುಹೋದಳು. ಗಂಡನು ಕರ್ಮಕಥೆಯನ್ನು ನೆನೆದನು. ಗುಣವತಿಯಾದ ಹೆಂಡತಿಯು ಹೋದಳೆಂಬುದೊಂದು, ಜನರ ಅಪಹಾಸ್ಯಕೀಡಾದೆನೆಂಬುದಿನ್ನೊಂದು, ಯತಿಯ ದ್ರೋಹವಾಯಿತೆಂದು ಬೇರೊಂದು, ಮಕ್ಕಳ ಮುಖನೋಡಿ ಉಂಟಾದ ನೋವು ದೊಡ್ಡದೊಂದು, ಹೀಗೆ ಒಂದಲ್ಲ ಎರಡಲ್ಲ ಹಲವುತರದ ಸಂಕಟಗಳಿಂದ ಹಣ್ಣಾಗಿ ದುಃಖಿಸಿದನು. ಕಳೆದ ಮೂರು ತಾಸುಗಳಲ್ಲಿಯೇ ಇಷ್ಟೆಲ್ಲ ನಡೆಯಿತು; ವಿಚಿತ್ರವಾಯಿತು.

ಭೀಕರವಾದ ಬೇನೆಗಳಿಗೆ ಔಷಧವುಂಟು; ಹಾವಿನ ವಿಷಕ್ಕೆ ಮಂತ್ರಗಳುಂಟು; ಹುಲಿಸಿಂಹಾದಿ ಕ್ರೂರಪ್ರಾಣಿಗಳಿಗೆ ಶಸ್ತ್ರಾಸ್ತ್ರಗಳುಂಟು. ಕಳ್ಳರಿಗೆಸೆರೆಮನೆಗಳುಂಟು; ಶ್ರುತಿಗಳಲ್ಲಿ ಪಾಪಿಗಳಿಗೆ ಪ್ರಾಯಶ್ಚಿತ್ತವನ್ನು ಹೇಳಿರುವದೂ ಉಂಟು. ಆದರೆ ಶಿವದ್ರೋಹಕ್ಕೆ ಪರಿಹಾರೋಪಾಯವೇ

ಇಲ್ಲ. ಈ ನಷ್ಟವನ್ನು ಯಾರೂ ಮಾಡಿಲ್ಲ, ಯಾರಿಗೆ ಹೇಳಬೇಕು? ಆಗ ನ್ಯಾಯಕ್ಕೋಡಾಡುವ ಮನುಷ್ಯನು ಈಗೇನು ಮಾಡುವನು?

ಮಠದ ಸಿಂಹಾಸನಾರೋಹಣದ ಕಾರ್ಯವು ನಿರ್ವಿಘ್ನವಾಗಿ ನೆರವೇರಿತು. ಮರುದಿನ ರಾತ್ರಿ ಗುರುಪಾದಶಿವಯೋಗಿಗಳ ತಿರ್ಯಗಾಂದೋಲಿಕದ (ಅಡ್ಡಪಲ್ಲಕ್ಕಿಯ) ಉತ್ಸವವು ಮಾಡಲ್ಪಟ್ಟಿತು.

ಪಶ್ಚಾತ್ತಾಪಬಟ್ಟ ಆ ಪರಮತೀಯನು 'ನಾನು ತಿಳಿಯದೆ ಕೆಡಕು ಮಾಡಿದೆನು. ಯತಿದ್ರೋಹದಿಂದ ಇನ್ನೇನನಿಷ್ಟವೊದಗುವದೋ' ಎಂದು ಭೀತಿಯಿಂದ ಬಾಂಧವರೊಡನೆ ಬಂದು ಯತಿಯ ಪಾದಕ್ಕೆ ಫಲಗಾಣಿಕೆಯನಿಟ್ಟು ಮೊರೆಬಿದ್ದನು. ಅನ್ನದಾನೀಶ್ವರರು "ಉತ್ಕಟವಾದ ಕರ್ಮಕ್ಕೆ ಶೀಘ್ರವಾದ ಫಲವು ದೊರೆಯುವದು ಸಹಜವು. ಅದನ್ನು ನಿವಾರಿಸಲು ಶಕ್ಯವಿಲ್ಲ. ಶಿವನಿಚ್ಛೆಯಿಂದ ಹೀಗಾದುದು. ಆದುದಕ್ಕೆ ಚಿಂತಿಸಬೇಡ. ಮುಂದೆ ನಿನ್ನನ್ನು ಪ್ರಭುವು ಪಾಲಿಸುಸುವನು. ನಿಶ್ಚಿಂತನಾಗಿರು" ಎಂದು ಅನುಗ್ರಹಿಸಿದರು. ಆತನು ಮತ್ತೊಮ್ಮೆ ನಮಸ್ಕರಿಸಿ ಬೀಳ್ಕೊಂಡನು. ಕಾರ್ಯಾನಂತರ ಅನ್ನದಾನೀಶ್ವರರು ಅಬ್ಬೀಗೇರಿಗೆ ದಯಮಾಡಿಸಿದರು.

೧೧. ಪೀಠಾಧಿಕಾರಪ್ರದಾನ.

ವಟುವು ಪರಿಶುದ್ಧವಾದ ವಂಶದಲ್ಲಿ ಹುಟ್ಟಿರಲಿ ಸರಸವಾದ ಮಾತುಗಳನ್ನಾಡಲಿ ವೇಷಭೂಷಣಗಳಿಂದ ರಂಜಿಸಲಿ, ಕರುಣ, ಸದ್ಗುಣ, ತಪೋನುಷ್ಠಾನ, ಶಿವಜ್ಞಾನ ಮೊದಲಾದವುಗಳಿಲ್ಲದಿದ್ದರೆ ಅಂಥವನನ್ನು ನಿರಾಭಾರಿ ಪೀಠಕ್ಕಾಗಲಿ ಗುರುಪೀಠಕ್ಕಾಗಲಿ ನೇಮಿಸಲಾಗದು. ಅವನಿಂದ ಶಿವಮತೋದ್ಧಾರವಾಗದು. ಅಂಥ ಪೀಠಗಳನ್ನು ಹೊಂದತಕ್ಕವನು ಶಿವಸಂಸ್ಕಾರಕ್ಕೊಳಪಟ್ಟ ಸತಿಪತಿಗಳಿಂದ ಗುರುವಂಶದಲ್ಲಿ ಹುಟ್ಟಿ ಮೊದಲಿನಿಂದಲೂ ಗುರುಕುಲವಾಸವನ್ನು ಮಾಡಿರಬೇಕು. ಬ್ರಹ್ಮಚರ್ಯವನ್ನು ಪಾಲಿಸಿ ವಿರತನಾಗಿ ಕೀರ್ತಿಯನ್ನು ಪಡೆದಿರಬೇಕು. ಶಾಸ್ತ್ರಗಳನ್ನರಿತು ಭಕ್ತರನ್ನು ತಿದ್ದುವ ಮತಿಯುತನಾಗಿರಬೇಕು. ಹೀಗಿಲ್ಲದೆ ಮನೆಯ ಮಗನೆಂಬ ಭ್ರಾಂತಿಯಿಂದ, ಹಲವು ನೆವದಿಂದ ಜನರ ಸಮ್ಮತಿಯ ಪಡೆದು ಆತನಿಗೆ ಚರಗುರೂತ್ತಮನ ಪೀಠವನ್ನು ಕೊಟ್ಟು ಗೌರವಿಸಿದರೆ ಪ್ರಯೋಜನವೇನು? ಮನೆಯ ದೀಪವೆಂದು ಮುದ್ದಿಸ ಹೋದರೆ ಮೊಗವು ಸುಡದಿರುವದೇ? ಮಾಡಿದವರಿಗೆ ಅದರಿಂದ ಮಾನವೂ ಇಲ್ಲ, ಯಶಸ್ಸು ಇಲ್ಲವೇ ಇಲ್ಲ. ಪೀಠದೊಡೆತನಕ್ಕೆ ತಕ್ಕ ಲಕ್ಷಣಗಳುಳ್ಳವರನ್ನು ಆರಿಸದಿದ್ದರೆ ಅಥವಾ ಮುಂದೆ ಅವರಿಗೆ ಸತ್ಪ್ರವೃತ್ತಿಯನ್ನು ಕಲಿಸದಿದ್ದರೆ ಹಾಗೆಯೇ ಉಳಿದ ಆ ಶುದ್ಧವಿದ್ಯಾವಿಹೀನರಾದ ಮಠಾಧಿಕಾರಿಗಳು ಮಠದಲ್ಲಿ ತೊಟ್ಟಿಲವನ್ನು ಕಟ್ಟದಿರುವರೇ? ಇಂದಿನ ಹೊತ್ತಿನಲ್ಲಿ ಹಲವು ಜನ ಮಠಸ್ಥರು ಈ ಕೆಡಕು ಮಾರ್ಗವನ್ನೇ ಹಿಡಿದದ್ದರಿಂದ ವೀರಶೈವ ಮತದ ಕಳೆಯು ಇಳಿದಿರುವದಲ್ಲವೆ? ಅದನ್ನು ಹೋದ ಮಾರ್ಗದಿಂದಲೇ ದೊರಕಿಸುವದು ಬುದ್ಧಿವಂತರ ಲಕ್ಷಣವು!

ಅನ್ನದಾನೀಶ್ವರರು ತಮ್ಮ ಗುರುಪೀಠಾಧಿಕಾರಕ್ಕೆ ತಕ್ಕ ಗುಣ ವರ್ತನೆಗಳಿಂದ ವಿರಾಜಿಸುವ ವಟುವು ಯಾರೆಂಬುವರ ಬಗ್ಗೆ ಈ

ದೃಷ್ಟಿಯಿಂದ ವಿಚಾರಿಸಿದರು. ಕಡೆಗೆ ಚಿನಿವಾಲನು ರತ್ನಗಳ ರಾಶಿಯೊಳಗಿಂದ ದಿವ್ಯರತ್ನವನ್ನು ಆರಿಸಿ ತೆಗೆವಂತೆ ತಮ್ಮ ವಟುಗಳಲ್ಲಿ **ಗುರುವನ್ನದಾನಿ**ಗಳನ್ನು ಆರಿಸಿ ತೆಗೆದರು. ಗುರುವನ್ನದಾನಿಗಳಲ್ಲಿ ಯಾವ ಕುಂದೂ ಇಲ್ಲ. ಅವರನ್ನು ಅನ್ನದಾನೀಶ್ವರರು ತಮ್ಮ ಸನ್ನಿಧಿಯಲ್ಲಿ ಇರಿಸಿಕೊಂಡು ಅಲ್ಪಕಾಲದಲ್ಲಿಯೇ ನೀತಿ, ವಿದ್ಯೆ, ಸದಾಚಾರ, ಯೋಗವಿಚಾರ, ಪಾಪಭೀತಿ, ಧರ್ಮಾಭಿವರ್ಧನಕಲೆ, ಶಾಂತಿ, ಸಜ್ಜನಪ್ರೇಮ ಮೊದಲಾದವುಗಳನ್ನು ಕಲಿಸಿ ಶಿವಶರಣರೊಪ್ಪುವಂತೆ ಪರಿಪೂತರನ್ನಾಗಿ ಮಾಡಿದರು.


ಮುಂದೆ ಕೆಲಕಾಲದ ಮೇಲೆ ಸರ್ವರನುಮತಿಯಿಂದ ರೋಣದ ಗುರುಪಾದಸ್ವಾಮಿಗಳಿಂದ ಜ್ಞಾನಬೋಧೆಯನ್ನು ಮಾಡಿಸಿದರು. ಮತ್ತು ತಮ್ಮ ಪೀಠದ ಅಧಿಕಾರವಿಭವವನ್ನು ಮಾಡಬೇಕೆಂದು ನಿರ್ಣಯಿಸಿದರು. ಸಂಪ್ರದಾಯದಂತೆ ಸ್ಥಲವ ಕೂಡಿಸುವದಕ್ಕಾಗಿ ಮಲ್ಲಿಕೆರೆಯ ಚನ್ನಬಸವಸ್ವಾಮಿ, ರೋಣದ ಗುರುಪಾದಸ್ವಾಮಿ, ಕನಕಗಿರಿಯ ರುದ್ರಸ್ವಾಮಿ, ಹಾವೇರಿಯ ಶಿವಬಸವಸ್ವಾಮಿ, ವಿರಾಟಪುರದ ಸದಾಶಿವಸ್ವಾಮಿ ಮೊದಲಾದವರನ್ನು ಬರಿಸಿದರು. ನೇಮಿಸಿದ ಶುಭದಿವಸವು ಒದಗಿತು. ಹಾಲಗೆರೆಯ ಸುಂದರವಾದ ಮಠದಲ್ಲಿ ಮಂಟಪವನ್ನು ರಚಿಸಿ ವೃತ್ತಿಷ್ಟು ಸಿಂಗರಿಸಿದ್ದರು. ಅದರ ಮಧ್ಯದಲ್ಲಿ ಅನ್ನದಾನೀಶ್ವರ ಮಹಾಸ್ವಾಮಿಗಳು ಉಳಿದ ಚರಶ್ರೇಷ್ಠರಿಂದೊಡಗೂಡಿ ಅವರ ಸಾಕ್ಷಿಯಾಗಿ ಜ್ಞಾನಾಮೃತಪಾನಮಾಡಿಸಲು ಸಿದ್ಧರಾಗಿದ್ದರು. ಗುರುವನ್ನದಾನಿಗಳು ಶ್ರುತಿತಂತ್ರವಿಧಿಗನುಸರಿಸಿ ಶಿವನಂ ನೆನೆನೆನು ಕೈಮುಗಿದ್ದ



ಮಲ್ಲಿಕೆರೆಯ ಚನ್ನಬಸವಸ್ವಾಮಿ.

ಅವರ ಸಮ್ಮುಖದಲ್ಲಿ ವಿನಯದಿಂದ ಕುಳಿತುಕೊಂಡರು. ಆ ಮಹಿಮರು ಬೋಧೆಯನ್ನಿತ್ತರು.

"ಸುಕೃತಮತಿ, ಕೇಳು, ನೀನು ಅಂಗರೂಪನಿರುವೆ; ಲಿಂಗದಲ್ಲಿ ಬೆರೆವುದೇ ಸ್ಥಳವ ಕೂಡುವದು. ಶಂಕರ ಸ್ವರೂಪವೇ ಮಹಾ



ಹಾವೇರಿಯ ಶಿವಬಸವಸ್ವಾಮಿ.

ಸ್ಥಲವಲ್ಲದೆ ಪೀಠಗಳಲ್ಲ. ಆದ್ದರಿಂದ ಅದು ಕಂಡಕಂಡವರಿಗೆ ಸಿದ್ಧಿಸುವದಿಲ್ಲ. ವಿಶ್ವದ ಪರಿವರ್ತನೆಗೆ ಮೂಲವಾದ ಹೊನ್ನು, ಹೆಣ್ಣು, ಮಣ್ಣುಗಳನ್ನು ಬಿಡಬೇಕು; ಅವುಗಳಿಗೆ ಎಳಸಿದರೆ ಘಾತವಾಗುವದು. ಮನುಷ್ಯನಿಗೆ ಇವೇ ಬಾಹ್ಯ ವೈರಿಗಳು. ಕಾಮಾದಿ ಷಡ್ವರ್ಗವೇ ಅಂತರ ವೈರಿಸಮೂಹವು. ಇಂದ್ರಿಯಗಳೇ ಇವುಗಳಿಗೆ ಮಧ್ಯವೈರಿಗಳು, ಇವೆಲ್ಲವುಗಳೊಳಗಿಂದ ಪಾರಾಗಿ ಉಳಿಯುವದು ಅಸಾಧ್ಯ ಕಂಡೆಯಾ? ನೀನು ಇವುಗಳನ್ನು ಗೆಲ್ಲಬೇಕಾದರೆ ವೇದ ಹಾಗು ಗುರುಗಳೆಂಬ ಮಿತ್ರರ ಅನುಕೂಲವನ್ನು ಪಡೆದುಕೊಳ್ಳು. ಕೀರ್ತಿಯ ಮಹತ್ವಾಕಾಂಕ್ಷೆಯು ಬೇಡ. ಮನೋವೃತ್ತಿಗಳನ್ನು ನಾಶ ಮಾಡುವ ಉಪಾಯಗಳನ್ನು ಸಾಧ್ಯಮಾಡಿಕೊಂಡು ಸಿದ್ಧನಾಗು. ತಂದೆತಾಯಿ ಮೊದಲಾದ ಮೊದಲಿನ ಲೌಕಿಕರ ಮೋಹವನ್ನು ಬಿಡು. ದೇಹ ಮಮತೆಯು ದುರ್ಗತಿಯ ಮಾರ್ಗವೆಂದು ತಿಳಿ. ಗುರುಲಿಂಗಜಂಗಮದ ಭಕ್ತಿಯನ್ನು ನಂಬಿ ಮಾಡು. ಪ್ರಾಣವು ತೊಲಗುವ ಹೊತ್ತು ಬಂದಾಗಲೂ ಶಿವಯೋಗಸಾಧನವನ್ನು ಮಾಡುತ್ತಿರು. ಅಷ್ಟಾವರಣಗಳೇ ಅಂಗನಾಗಿ ಐದು ಆಚಾರಗಳೇ ಪ್ರಾಣವಾಗಿ ಮೂವತ್ತಾರು ಲಿಂಗಸ್ಥಲಗಳಲ್ಲಿ



ಶ್ರೀ ಗುರುಪಾದ ಶಿವಯೋಗಿಗಳು ರೋಣ.
ಶೂನ್ಯಸಿಂಹಾಸನಾಧಿಕಾರ ಫಾಲ್ಗುಣ ಶು. ೧೦ ಶಕೆ ೧೮೩೦



ಶ್ರೀ ಗುರುಅನ್ನದಾನೀಶ್ವರರು ಹಾಲಕೆರೆ.
ಶೂನ್ಯಸಿಂಹಾಸನಾಧಿಕಾರ ಮಾರ್ಘಶೀರ್ಷ ಬ. ೫. ಶಕೆ ೧೮೩೨.

ನೆಲೆಯೂರಿ ಯಾವಾಗಲೂ ಪ್ರಾಣಲಿಂಗವನ್ನು ಪರಿಭಾವಿಸು. ಶಿವಲಿಂಗವೇ ನಿನಗೈಕ್ಯಭೂಮಿಯು. ಲಿಂಗವೇ ಐಕ್ಯಭೂಮಿಯೆಂಬ ಅದ್ವೈತ ಸಿದ್ಧಾಂತವನ್ನು ಸಿದ್ಧಗೊಳಿಸುವ ಬೋಧೆಯೇ ಸ್ಥಲವ ಕೂಡುವ ಮಾರ್ಗವು. ಇದುವೇ ಮಹಾಸಂಸ್ಕಾರವು. ಇದು ವಿಮಲಾತ್ಮರಿಗಲ್ಲದೆ ಮೋಹದ ಮಾನವರಿಗೆ ದೊರೆಯದು. ಜನ್ಮದಲ್ಲಿ ಸಂಪಾದಿಸಿದ ಪರಮ ಪುಣ್ಯಪ್ರಭಾವದಿಂದ ದೊರೆವುದು.

ತಂದೆತಾಯಿ ಅಣ್ಣತಮ್ಮ ಮೊದಲಾದ ಮಂದಿಯನ್ನು ಕೂಡಿಕೊಂಡಿದ್ದು ನಲವಿಂದ ನಿಜಸೂತ್ರವನ್ನು ಹಿಡಿದು ಅಷ್ಟಾವರಣಗಳನ್ನು ಹೊಂದಿ ಭೋಗಮೋಕ್ಷಗಳೆರಡನ್ನೂ ಪಡೆಯುವ ಬೇರೆ ಮಾರ್ಗವೂ ಒಂದಿರುವದು. ಆದರೆ ಎರಡನೆಯ ಮಾರ್ಗದಿಂದ ಅದರಷ್ಟು ಹೆಚ್ಚು ಪೂಜ್ಯತೆಯೂ ಜಗದುದ್ಧಾರಕ ಶಕ್ತಿಯೂ ತೀವ್ರಸುಖಸಿದ್ಧಿಯೂ ಆಗಲಾರವು. ಆದ್ದರಿಂದ ಪೂರ್ಣ ವಿರಕ್ತಮಾರ್ಗವೇ ಸರ್ವೋತ್ಕೃಷ್ಟವಾದದ್ದು.

ಜಂಗಮನು ಈಶಸ್ವರೂಪನು, ವಿಷಯದಾಶೆಗೆ ಬಿದ್ದು ಬಳಲುವವನಲ್ಲ; ಪಂಚಪಾಶದಿಂದ ಬಿಗಿವಡೆದು ಭವಚಕ್ರದಲ್ಲಿ ಭ್ರಮಿಸುವವನಲ್ಲ. ನಿಜವಾದ ಜಂಗಮನು ಹೀಗಿರಬೇಕು. ಕಾಸುವೀಸಕ್ಕೆ ಕೈಯೊಡ್ಡುವ ಹೇಸಿ ಜಂಗಮನಿಂದ ಜಗಕ್ಕೆ ಹಿತವಾಗದು; ದೋಷಕ್ಕೆ ಮಾತ್ರ ಕಾರಣವಾಗುವದು. ಬರಿವೇಷದಿಂದ ನಟಿಸುತ್ತಿರುವ ಮೋಸಗಾರನು ಪೂಜ್ಯನೇ?

ಇದು ಕಲಿಕಾಲವಿರುವದರಿಂದ ಹಲಕೆಲವು ವಿರಕ್ತರು ಹೊನ್ನು ಹೆಣ್ಣು ಮಣ್ಣುಗಳ ಮೋಹಕ್ಕೊಳಗಾಗಿ ಹಳೆಯ ಮಂದಿಯನ್ನು ಪೋಷಿಸುವವರಾಗಿ ಕಳೆಗೆಟ್ಟರು. ಅದರಿಂದ ಬರಿಯ ಬಾಯಿಮಾತಾದರೆ ತೀರದು. ನಿನ್ನಲ್ಲಿ ತಿಳಿದುನೋಡು; ಇಂಥ ಅಸಾಧಾರಣ ವಿರಕ್ತಿಯನ್ನು ಹೊಂದುವ ಬಲವಿದ್ದರೆ ಈ ಸ್ಥಲವನ್ನನುಕರಿಸು. ಮಗು ಬಲು ಕಠಿಣವಾದದ್ದು. ಇದನ್ನು ಹೊಂದಿದ ಬಳಿಕ ಈ ಮಹಾಸಂಸ್ಕೃತಾಚಾರ

ವನ್ನು ನಡಿಸದಿದ್ದರೆ ನಿನಗೆ ದುರ್ಗತಿಯಾಗುವದು; ಅಪಯಶಸ್ಸುಂಟಾಗುವದು. ಅಲ್ಲದೆ ಇದರಿಂದ ಮತಕ್ಕೆ ಕುಂದುಬಾರದಿರದು. ಭಕ್ತರಿಗೆ ಅನುತಾಪವಾಗದಿರದು. ಮತ್ತು ಅನ್ಯವಾದಿಗಳಿಗೆ ಉತ್ಸಾಹವಾಗುವದು! ಹಿಡಿದು ಭೋಧಿಸಿದ ಗುರುವರನ ಗೌರವಕೆ ಹಾನಿಯೊದಗುವದು!! ಆದ್ದರಿಂದ ಮೊದಲೇ ವಿಚಾರಿಸಿ ಹೇಳು.

ಎಂದು ಬೆದರಿಸಿದ ವಚನಗಳನ್ನು ಕೇಳಿದ ಗುರುವನ್ನದಾನಿಗಳು ಎಷ್ಟುಮಾತ್ರವೂ ಹಿಂಜರಿಯಲಿಲ್ಲ. ಅಂತರಂಗದಲ್ಲಿ ಹುಟ್ಟಿದ ಸಹಜಸ್ವಭಾವದ ದೃಢವಾದ ವಿರಾಗತೆಯಿಂದ ಅವರಲ್ಲಿ ಧೈರ್ಯವು ಹುಟ್ಟಿತು; ಸಂತೋಷವು ತಲೆದೋರಿತು!! ನಿರ್ಮಲವಾದ ಭಕ್ತಿಯು ಮುಂದುವರಿಯಿತು. ಆಗ ಕೈಮುಗಿದು—"ಗುರುವೆ, ಜಗದ್ಗುರುವೆ, ನಿತಾಂತಶಾಂತಿಕರಪ್ರಸಾದಮಯಮೂರ್ತಿಯೇ, ಜಂಗಮಚಕ್ರವರ್ತಿಯೇ, ಧೀರರಿಂದ-ವೇದಶಾಸ್ತ್ರಗಳಿಂದ ಸಂಸಾರವಲ್ಲಿದ್ದ ಅನಿತ್ಯತ್ವಾದಿ ದೋಷಕುಲವನ್ನು ಕಂಡು ಹಿಡಿದು ಆ ವಿಷಯ ಭೋಗಾಪೇಕ್ಷೆಯನ್ನು ದೂರದಿಂದಲೇ ತೊರೆದು ನಿನ್ನ ದಿವ್ಯಸನ್ನಿಧಿಯನ್ನು ಸೇರಿದೆನು. ನಿನ್ನ ಅನುಗ್ರಹ ಶಕ್ತಿಯಿಂದ ನಿರಾಭಾರಿಯಾಗಬೇಕೆಂದಿರುವೆನು. ಕೃಪಾವಾರಾಶಿಯೇ ಕರುಣಿಸು." ಎಂದು ಬೇಡಿಕೊಳ್ಳುವ ಬಿನ್ನಪದಿಂದ ಅನ್ನದಾನೀಶ್ವರ ಮಹಾಸ್ವಾಮಿಗಳು ಎಲ್ಲ ಚರವರ್ಗಿಗೂ ಅರಿಕೆಯಾಗುವಂತೆ ಆ ಶಿಷ್ಯವರನ ಪರಿಪಕ್ವಹೃದಯವನ್ನು ಮನಗಂಡರು. ಮತ್ತು ಆ ಗುರುವರರು ಶ್ರುತಿಸಮ್ಮತವಾಗಿ ಶಿವಾನುಭವಶಾಸ್ತ್ರವನ್ನು ಕ್ರಮವಾಗಿ ಬೋಧಿಸಿದರು.

ಭೃಂಗಕೀಟನ್ಯಾಯದಂತೆ ಚರೋತ್ತಮರ ಸಂಗದಿಂದ ಗುರುವನ್ನದಾನಿಗಳು ಜಂಗಮತ್ವವನ್ನು ಹೊಂದಿದರು. ಬಳಿಕ ಗುರುವಿಗೆರಗಿ ನಿಂದು—"ಮಂಗಲಾಂಗನೆ, ನಿನ್ನ ಕರುಣಪ್ರಭಾವದಿಂದ ಲಿಂಗಾಂಗ ಸಮರಸತೆಯನ್ನು ಹೊಂದಿದೆನು; ಅಂಗದ ಗುಣವು ಹಿಂಗಿದುದು; ಲಿಂಗಭಾವವು ಬೆಳಗಿದುದು; ಸಂಶಯವು ಅಡಗಿದುದು. ಸೂರ್ಯ

ನೊಬ್ಬನೇ ಈ ಭೂಮಂಡಲವನ್ನು ಮುತ್ತಿದ ಕತ್ತಲೆಯನ್ನು ಕಳೆಯು ಲಳವುಳ್ಳವನಾವರೂ ಅಂತರ್ದೇಶದಲ್ಲಿ ವ್ಯಾಪ್ತವಾಗಿರುವ ಹಾಗೂ ಭವಕ್ಕೆ ಬೀಜವಾಗಿರುವ ಮಾಯಾಂಧಕಾರವನ್ನು ಹೋಗಲಾಡಿಸಲಾರನು. ಅದನ್ನು ನೀನು ಕರುಣಾಕಟಾಕ್ಷವೆಂಬ ಪ್ರಖರಕಿರಣಗಳಿಂದ ಜವಗೆಡಿಸಿ ಕಳೆದೆ. ನಿನ್ನಿಂದ ಅಧಿಕರಾದವರಾರು?" ಎಂದು ಗುರುಗಳನ್ನು ನುತಿಸಿದರು.

ಬಳಿಕ ಅನ್ನದಾನೀಶ್ವರರು ಈ ಮಹಾಕಾರ್ಯಕ್ಕೆ ಬಂದ ಗಣವರರನ್ನು ಮೃಷ್ಟಾನ್ನಪಾನಗಳಿಂದ ಪ್ರೀತಿಪೂರ್ವಕವಾಗಿ ತೃಪ್ತಿಬಡಿಸಿದರು. ಗುರುವನ್ನದಾನಿಗಳ ತಿರ್ಯಗಾಂದೋಲಿಕೋತ್ಸವವನ್ನು ವಿಜೃಂಭಣೆಯಿಂದ ಮಾಡಿಸಿದರು.

---

೧೨. ತಪೋಬಲದ ಮಹಿಮೆ.

ಮೇಘಮಾಲೆಯ ಮಧ್ಯದಲ್ಲಾಗಲಿ, ಪ್ರಾಣಿಗಳ ಶರೀರದಲ್ಲಾಗಲಿ ಸಾಗರಗಳ ಒಡಲೊಳಗಾಗಲಿ, ಗಿರಿಗಂಹರವನಗಳೆಡೆಯಲ್ಲಾಗಲಿ, ಸೃಷ್ಟಿಯಲ್ಲಿ ಬೇಕಾದ ಕಡೆಗೆ, ಬೇಕಾದ ಭಾಗದಲ್ಲಿ ಬೇಕಾದ ಕಾಲದಲ್ಲಿ ನಡೆಯುವ ಎಲ್ಲ ಕಾರ್ಯಗಳಿಗೂ ಒಂದೇ ಚಿಚ್ಛಕ್ತಿಯೇ ಆಧಾರಭೂತವೂ ಕಾರಣವೂ ಪ್ರೇರಕವೂ ಆಗಿರುತ್ತದೆ. ಎಲ್ಲ ಕಾರ್ಯಗಳೂ ಒಂದೇ ಸೂತ್ರದಿಂದ ಬಂಧಿಸಲ್ಪಟ್ಟಿವೆ. ಆದ್ದರಿಂದ ಅವುಗಳಲ್ಲಿ ಪರಸ್ಪರ ಭೇದವಿಲ್ಲ; ಅವು ಒಂದನ್ನೊಂದು ಅರಿಯದಂತಿಲ್ಲ. ಕೇವಲ ಮಾಯಾಬದ್ಧನಾದ ಜೀವಾತ್ಮನು ಮಾತ್ರ ಹಿಂದುಮುಂದಿನ ಇಲ್ಲವೆ ಬೇರೆ ಕಡೆಯ ಕಾರ್ಯಗಳನ್ನು ತಿಳಿಯು

ದಿರುವನು. ಆದರೆ ಎಲ್ಲಕ್ಕೂ ಏಕಸೂತ್ರ ಸ್ವರೂಪನಾದ ಪರಮಾತ್ಮನು ಅವನ್ನು ತಿಳಿಯದಿರುವನೇ? ಆದ್ದರಿಂದ ಯೋಗಸಾಧನದಿಂದ ಆತ್ಮಜ್ಞಾನವನ್ನು ಹೊಂದಿದ ಅಂದರೆ ಪರಮಾತ್ಮಸ್ವರೂಪವನ್ನು ಕಂಡು ಬೆರೆದ ಶಿವಯೋಗಿಗಳು ಹಿಂದುಮುಂದಿನ ಇಲ್ಲವೆ ಬೇರೆ ಕಡೆಯ ಸಂಗತಿಗಳನ್ನೂ ಆಗುಹೋಗುವದನ್ನೂ ತಿಳಿದುಕೊಳ್ಳುವದು ಸಹಜವಾದುದೆಂಬಲ್ಲಿ ಸಂದೇಹವಿಲ್ಲ. ಅದರಿಂದಲೇ ಅವರಿಗೆ ಸರ್ವಜ್ಞರೆಂಬ ಅಭಿಧಾನವು ಸಾರ್ಥಕವಾದದ್ದು. ಧರ್ಮೋದ್ಧಾರಕ್ಕಾಗಿ ಅವತರಿಸಿ ಹೆಣಗುವ ಶಿವಯೋಗಿಗಳು ಈ ಸರ್ವಜ್ಞತ್ವದ ಬಲದಿಂದಲೂ ತಪಸ್ಸಿನಿಂದ ಸಾಧ್ಯಮಾಡಿಕೊಂಡ ಪಂಚಪರುಷಗಳ ಸಿದ್ಧಿಯ ಬಲದಿಂದಲೂ ಹಲವು ಮಹಿಮೆಗಳನ್ನು ತೋರಿ ಲೀಲೆಗಳನ್ನು ಮಾಡಿ ಸಾಮಾನ್ಯ ಜನರ ಮನಸ್ಸನ್ನು ತಮ್ಮ ಕಡೆಗೆ ಎಳೆದುಕೊಳ್ಳುವರು. ಜನರ ಮನಸ್ಸು ಒಲಿದ ಹೊರ್ತು ಉಪದೇಶಕರ ಅಥವಾ ತತ್ವವೇತ್ತರ ಮಾತುಗಳನ್ನು ಇಲ್ಲವೆ ಅಭಿಪ್ರಾಯಗಳನ್ನು ಅವರು ನಂಬುವದಿಲ್ಲ; ಧರ್ಮೋದ್ಧಾರವೂ ಪ್ರಗತಿಯೂ ಆಗುವದಿಲ್ಲ. ಇದೇ ಕಾರಣದಿಂದಲೇ ಧರ್ಮದ ಪ್ರವರ್ತಕರ ಇತಿಹಾಸದಲ್ಲಿ, ಅವರು ಅನಂತ ಅಘಟಿತ ಘಟನಾತ್ಮಕ ಲೀಲೆಗಳನ್ನು ಮಾಡಿಯೂ ನಂಬಿದ ಭಕ್ತರಿಗೆ ಫಲಗಳನ್ನು ಕೊಟ್ಟು ಭಕ್ತಿಯ ಶಕ್ತಿಯನ್ನು ತೋರಿಯೂ ಬಹು ಜನರ ಒಲವು ಮನ್ನಣೆಗಳನ್ನು ಪಡೆದು ತಮ್ಮ ಉದ್ದೇಶಗಳನ್ನು ಸಾಧ್ಯಮಾಡಿಕೊಂಡುದನ್ನು ಕಾಣಬಹುದು. ಧರ್ಮೋದ್ಧಾರಕರಾದ ಪರಮ ಶಿವಯೋಗಿಗಳ ಈ ಸಹಜ ಸ್ವಭಾವಕ್ಕನುಸರಿಸಿ ನಮ್ಮ ಅನ್ನದಾನೀಶ್ವರರು ತಮ್ಮ ಅವತಾರದಲ್ಲಿ ಮಾಡಿದ ಇನ್ನೂ ಹಲವು ಅಗಾಧ ಲೀಲೆಗಳಲ್ಲಿ ಕೆಲವನ್ನು ಮಾತ್ರ ಸಂಗ್ರಹಿಸಿ ಈ ಪ್ರಕರಣದಲ್ಲಿ ಹೇಳುವೆವು.

ಅನ್ನದಾನೀಶ್ವರರು ಒಮ್ಮೆ ಶಿವಪೂಜನೊಡನೆ ಶ್ರೀಶೈಲಯಾತ್ರೆಗೆ ಹೋಗಿದ್ದರು. ಯಾತ್ರಾವಿಧಿಗಳನ್ನು ತೀರಿಸಿಕೊಂಡು ತಿರುಗಿ ಹೊರಟು ಮಹಾನಂದಿಕ್ಷೇತ್ರದಲ್ಲಿ ಶಿವಾರ್ಚನೆಗೆ ಕುಳಿತಿದ್ದರು. ಆಗ ಅಕಸ್ಮಾ

ತ್ತಾಗಿ 'ಹರನೆ ಕರೆದೊಯ್ದೆಯಾ' ಎಂದರು. ಶಿವಪೂಜನು "ಗುರುವೆ. ಅಪ್ಪಣೆಮಾಡಿಸಿದುದವೇನು?" ಎಂದು ಕೇಳಲು 'ಹಾಲಗೆರೆಯಲ್ಲಿ ಇದೀಗ ಶಾಂತವೀರಪ್ಪನು ಶಿವನಲ್ಲಿ ಬೆರೆದನು' ಎಂದು ಹೇಳಿದರು. ಶಿವಪೂಜನು ಆ ವೇಳೆಯನ್ನು ನೆನಪಿಟ್ಟುಕೊಂಡು ಬಂದನು. ಶಾಂತವೀರಪ್ಪನು ದೇಹವಿಟ್ಟಕಾಲವು ಅದೇ ಎಂದು ಮನಗಂಡನು.

ಮಠಕ್ಕೆ ಬೇಕಾದ ಕಲ್ಲಿನ ತೊಲೆಗಳನ್ನು ತರುವದಕ್ಕಾಗಿ ಊರೊಳಗಿನ ದೊಡ್ಡ ದೊಡ್ಡ ಸಾವುಕಾರರು ಕೊಬ್ಬಿದ ಎತ್ತುಗಳನ್ನು ದೊಡ್ಡ (ಹಳಿಯ) ಬಂಡಿಗಳಿಗೆ ಹೂಡಿ ಗುಡ್ಡವನ್ನೇ ತರುವವರಂತೆ ಹೊರಟರು. ಗುರುಸೇವೆಗೆ ಆತುರನಾದ ಬಳಗೋಡ ಭಕ್ತನೊಬ್ಬನು ಹೆಳೆಯ ಕಿರಿಯೆತ್ತುಗಳುಳ್ಳವನಾದರೂ ಸ್ವಾಮಿಗಳೆಡೆಗೆ ಬಂದು ಅಪ್ಪಣೆಯನ್ನು ಕೇಳಿದನು. ಸ್ವಾಮಿಗಳು "ನಿನ್ನ ಎತ್ತುಗಳು ಬಲವುಳ್ಳವಲ್ಲ; ಹಣ್ಣಾದೀ ಬೇಡವಯ್ಯಾ! ನಿನಗೆ ತಕ್ಕ ಬೇರೆ ಸೇವೆಯನ್ನು ಮಾಡು" ಎಂದರು. ಆತನು ಕೇಳಲಿಲ್ಲ. ಸ್ವಾಮಿಗಳು ಭಕ್ತನ ಭಕ್ತಿಯುಕ್ತವಾದ ಬಲುಮೆಗೆ ಒಪ್ಪಿದರು. ಆತನೂ ಕಿರಿಯೆತ್ತುಗಳ ಬಂಡಿಯನ್ನು ಹೂಡಿಕೊಂಡು ಗುಡ್ಡದಲ್ಲಿ ಹೊರಟನು. ಉಳಿದವರು ನೋಡಿ ನಕ್ಕರು. ಆದರೇನು? ಗುರುಬಲದ ಬೆಂಬಲವುಳ್ಳ ಆತನು ಒಂದು ತೊಲೆಯನ್ನು ಹೇರಿಕೊಂಡು ಬಂದು ಎಲ್ಲಕ್ಕೂ ಮೊದಲು ಮಠದ ಮುಂದೆ ಚಲ್ಲಿದನು. ಗೋಳಾಡಿ ಗಾಡಿಗಳನ್ನು ಸಾವರಿಸುತ್ತ ಬರುವ ಅವರಿಗೆ ಎದುರಾಗಿ ನಡೆದನು. ಮೊದಲು ನಕ್ಕವರು ಈಗ ಬೆರಗಾಗಿ ನಿಂತರು.

ಹೂವಿನ ಹಡಗಲಿಯು ಲಿಂಗನಗೌಡನು ಒಳ್ಳೇ ಶಿವಭಕ್ತನು. ಅಷ್ಟಾವರಣ ನಿಷ್ಠನು. ಆತನ ಹೆಂಡತಿಯು ಸುಶೀಲೆಯಾಗಿದ್ದಳು. ಆಕೆಗೆ ಮಕ್ಕಳಚಿಂತೆ; ಗೌಡನಿಗೆ ಬಡತನಸಾಲಗಳ ಚಿಂತೆ. ಬಡತನವೆಂದರೆ ಅಷ್ಟಿಷ್ಟಲ್ಲ; ಅದರಿಂದಲೇ ಬಳಲಿ ಬೆಂಡಾಗಿದ್ದನು. ಹೀಗಿರಲೊಮ್ಮೆ ಆತನು ಹೆಂಡತಿಯೊಡನೆ ಬೀಗರ ಮನೆಗೆಂದು ಕೊಂಡಿ

ಹಾಳಕ್ಕೆ ಬಂದಿದ್ದನು. ಮರುದಿನ ರೂಢಿಯಂತೆ ಸ್ವಾಮಿಗಳ ದರ್ಶನಕ್ಕಾಗಿ ಹಾಲಗೆರೆಗೆ ಹೊರಡುವ ಸಿದ್ಧತೆಯಲ್ಲಿದ್ದನು. ಆದಿನ ಸಂಜೆಗೆ ಕಂಬಳಿಯನ್ನು ಹೊದ್ದ ಕುರೂಪಿಯಾದ ಮುದುಕನೊಬ್ಬನು ಬಂದು ಗೌಡನೆಮರಿನಲ್ಲಿಯೇ ಗೌಡತಿಯನ್ನು ಕುರಿತು--"ಅಮ್ಮಾ, ನೀನು ಮಕ್ಕಳ ಸಲುವಾಗಿ ಚಿಂತಿಸುವಿಯೇಕೆ? ಅನ್ನದಾನೀಶನೊಲಿದು ಪಾಲಿಸುವನು. ನೀನವನ ನಂಬಿ ನಡೆದುಕೊಂಡರೆ ಸರ್ವ ಕಷ್ಟಗಳೂ ಪರಿಹಾರವಾಗುವವು. ನಿಮ್ಮ ಹಿರಿಯರು ಅವನ ಕೃಪೆಯಿಂದಲೇ ಘನತೆಯನ್ನು ಹೊಂದಿದರು." ಎಂದು ಮೊದಲಿನ ಹಿರಿಯರ ಹೆಸರುಗಳನ್ನೇ ಹೇಳಿದನು. ಅದರಿಂದ ಗೌಡನು 'ಹಿರಿಯನೇ ನೀನಾರು?' ಎಂದು ಕೇಳಿದನು. 'ನಾನೊಬ್ಬ ಆಬ್ಬೀಗೇರಿಯ ಮೂಢನು' ಎಂದು ಹೇಳಿ ಆ ಮುದುಕನು ಹೊರಟು ನಡೆದನು. "ಈತನು ಮಹಾಸಾಧುವೇ ಸರಿ. ಈತನನ್ನು ಅನ್ನದಾನಿಯೇ ಕಳಿಸಿದನು." ಎಂದು ನಂಬಿ ಆ ದಂಪತಿಗಳು ಹನ್ನೊಂದು ಅಮಾವಾಸೆ ನಡೆದುಕೊಳ್ಳುತ್ತಿರಲು ಗೌಡತಿಯು ಗರ್ಭವಾಂತಳು. ದುರ್ದೈವದಿಂದ ಮೊದಲು ಜನರಿಂದ ಬಂಡನೆಂದು ಕರೆಯಿಸಿಕೊಳ್ಳುತ್ತಿದ್ದ ಗೌಡನ ಸದ್ವೃತ್ತಿಯು ಗುರುಕೃಪೆಯಿಂದ ಅಂದು ಫಲಿಸಿತು. ಸದ್ಗುಣಿಯೆಂದು ಎಲ್ಲರಿಗೂ ಕಾಣಹತ್ತಿದನು. ಆತನ ಸುಶೀಲತನಕ್ಕೊಪ್ಪಿದವರು ಆತನು ಮಾಡಿದ ಸಾಲವನ್ನು ತೀರಿಸಿಬಿಟ್ಟರು. ಹೀಗೆ ಜನರು ಕೊಟ್ಟ ಹಣವನ್ನು ಗೌಡನು 'ಲಂಚ' ವಾಗಿ ತೆಗೆದುಕೊಂಡನೆಂದು ಅಧಿಕಾರಿಗಳು ಆರೋಪವಿಟ್ಟರು; ಗೌಡಕಿಯನ್ನು ಕಸಿದುಕೊಂಡರು. ಈ ದೋಷವೂ ಮುಂದೆ ಪರಿಹಾರವಾಯಿತು. ಅಷ್ಟರಲ್ಲಿ ಹುಟ್ಟಿದ ಮಗನ ಹೆಸರಿನಿಂದ ಗೌಡಕಿಯನ್ನು ಮಾಡಲು ಅಪ್ಪಣೆ ದೊರೆಯಿತು.

ಶಲವಡಿಯ ಕುಲಲಲನೆಯೊಬ್ಬಳು ಪ್ರಾಯದಿಂದಲೇ ಮಕ್ಕಳ ಆಶೆಯಿಂದ ಕೊರಗುತ್ತಲಿದ್ದಳು. ಒಲೆಯ ಗುಂಡುಗಳೂ ಸಾಲವೆ ದೇವರೆಂಬವುಗಳನ್ನೆಲ್ಲ ಪೂಜಿಸಿದಳು. ಮಂತ್ರ, ತಂತ್ರ, ಔಷಧೋಪಚಾರ, ಹೊತ್ತಿಗೆ ನೊಮೊಲಾದವುಗಳನ್ನೆಲ್ಲ ಮುಗಿಸಿದಳು. ನಿತ್ಯವೂ

ನಿಂತಲ್ಲಿ ಕುಳಿತಲ್ಲಿ ಮಕ್ಕಳಿಂದಾಗುವ ಸುಖವನ್ನು ನೆನಿಸಿ ಬಯಸಿ ಚಿಂತಿಸುತ್ತಿದ್ದಳು. ಏನೋ ಪುಣ್ಯದಿಂದ ಅನ್ನದಾನೀಶ್ವರರ ಮಹಿಮೆಯು ಆಕೆಯ ತಿಳುವಳಿಕೆಗೆ ಬಂತು. ಆಗ ಸನ್ನಿಧಿಯು ಶಿವಪುರದ ತಪೋವನದಲ್ಲಿತ್ತು. ಅಲ್ಲಿಗೇ ಬರತೊಡಗಿದಳು. ನಾಲ್ಕನೆಯ ದರ್ಶನಕ್ಕಾಗಿ ಬಂದು ಆಶ್ರಮದ ಬಾಗಿಲಲ್ಲಿ ಕುಳಿತಿದ್ದಳು. ಆಗ ಸೇವಕನೊಬ್ಬನು ತೊಯ್ದು ನೀರಿಳಿಯುತ್ತಿರುವ ಚರವರನ ಶಾಟಿಯನ್ನು ಒಗೆದು ತರಲಿಕ್ಕೆ ಒಯ್ಯುತ್ತಿದ್ದನು. ಆ ಸುದತಿಯು ಆತನಿಗೆ 'ಅಪ್ಪಾ ಗುರುವಿನ ಪಾದೋದಕವನ್ನಷ್ಟು ಒದಗಿಸಿಕೊಡಬಾರದೇ?' ಎಂದು ದೈನ್ಯದಿಂದ ಕೇಳಿದಳು. ಕೂಡಲೆ ಆತನು "ಮಗಳೇ ಹಿಡಿ, ಇದುವೇ ಪಾದೋದಕತೀರ್ಥಪ್ರಸಾದ. ಬೇರೆ ಆಲೋಚನೆಯೇಕೆ?" ಎಂದು ಕೈಯೊಳಗಿನ ಶಾಟಿಯನ್ನು ಹಿಂಡಿದನು. ಆಕೆಯು ಕೈತುಂಬಕೊಂಡು ಭಕ್ತಿಯಿಂದ ಕುಡಿದು ನಡೆದುಬಿಟ್ಟಳು. ಮುಂದೆ ಬೇಗನೆ ಗರ್ಭವನ್ನು ಧರಿಸಿ ಮಗುವನ್ನು ಹೆತ್ತಳು. ಅನ್ನದಾನಿಯೆಂದು ಹೆಸರಿಟ್ಟು ಹರಕೆಯನ್ನು ತೀರಿಸಿದಳು.

ಜಕ್ಕಲಿಯು, ಶಿವಶರಣಬಸವಪ್ಪಸೆಟ್ಟರೆಂಬವರು ಲೀಲೆಯನ್ನು ಮಾಡಿ ಐಕ್ಯರಾದ ಸ್ಥಳವು. ಅಲ್ಲಿಯ 'ಬಸವ' ನೆಂಬ ಆರೇಳು ವರ್ಷಗಳ ಚಲುವ ಬಾಲಕನ ಮುಖವು ಮಲಗಿದಾಗ ಎಡಗಡೆಗೆ ನರತೊಡಕಿ ಎಡಕೇ ಆಗಿಬಿಟ್ಟಿತ್ತು. ಅದು ಸೊಟ್ಟಾಗಿ ಅಮಂಗಲಕಾಣುತಲಿತ್ತು. ಎರಡು ವರ್ಷವೂ ಹಾಗೆಯೇ ಉಳಿದಿತ್ತು. ಬೇನೆ ಬಳಲಿಕೆಗಳಿಗೆ ಅನ್ನದಾನೀಶ್ವರರೆ ಮೊರೆಬೀಳುವದು ಸಹಜ. ಆ ಬಾಲಕನಣ್ಣನು "ಅನ್ನದಾನಿಯ ಮಠಕ್ಕೆ ಕರೆದೊಯ್ದರೆ ಗುಣವಾಗಬಹುದು" ಎಂದು ಅಮಾವಾಸೆಗೊಮ್ಮೆ ಕರೆದುಕೊಂಡು ಬರುತ್ತಿದ್ದನು. ಐದನೆಯಸಾರೆ ಹೊರಟಿದ್ದನು; ತಮ್ಮನನ್ನು ಎತ್ತಿನ ಮೇಲೆ ಕುಳ್ಳಿರಿಸಿದ್ದನು; ಎತ್ತು ಮುಂದೆ ಮುಂದೆ ಸಾಗಿತ್ತು. ತಾನು ಸ್ವಲ್ಪ ಹಿಂದೆ ಉಳಿದು ಉದಾಸೀನತೆಯಿಂದ 'ಯಾರ ಕೈಯಲ್ಲಿ ಏನಿದೆ? ನಾಲ್ಕು ಸಾರೆ ಬಂದು ಹೋದರೂ ಒಳಿತಿನ ಲಕ್ಷಣವೇ ಇಲ್ಲ. ಇದೊಂದು

ಸಾರೆ ಹೋಗಿ ಬಿಟ್ಟರಾಯಿತು' ಎಂದು ಆಲೋಚಿಸುತ್ತ ಬರುತ್ತಿದ್ದನು. ಇತ್ತ ಮುಂದಿನ ಎತ್ತು ಒಮ್ಮಿಂದೊಮ್ಮೆ ಜಿಗಿದಾಡಿ ಹುಡುಗನನ್ನು ನಿಗಚಿ ಒಗೆದು ಆತನ ಎಡಗಡೆಯ ಗಲ್ಲಕ್ಕೆ ಬಲವಾಗಿ ಒದೆದು ಓಡಿಹೋಯಿತು. ಅಣ್ಣನು ಗಾಬರಿಯಾಗಿ ಓಡಿಬಂದು ನೋಡುತ್ತಾನೆ, ಅಳುವಿಲ್ಲ ಕರೆವಿಲ್ಲ; ತಮ್ಮನು ನಗುತ್ತ ಕುಳಿತಿದ್ದಾನೆ. ಗಾಯವೂ ಇಲ್ಲ, ನೋವೂ ಇಲ್ಲ. ಮೇಲೆ ಮೊಗವು ನೆಟ್ಟಗಾಗಿದೆ. ಅದರಿಂದ "ಅನ್ನದಾನಿಯ ಲೀಲೆಯು ಘನವಾದದ್ದು. ಐದನೆಯ ಸರತಿಯು ಮುಟ್ಟುವದರೊಳಗಾಗಿಯೇ ನೆಟ್ಟಗಾಗಿ ಹೋಗಿದೆ. ನಾನು ತಿಳಿಯದೆ ಗುರುದೂಷಣೆಯನ್ನು ಮಾಡಿದೆನು" ಎಂದು ಆ ಗೃಹಸ್ಥನು ಆನಂದದಿಂದ ಬಂದು ಪ್ರಸಾದವಕೊಂಡು ಹೋದನು. ತಂದೆಯು ಹೊಡೆದದ್ದು ಹಿತಕರವು, ವೈರಿಯ ಉಪಚಾರವು ಅಹಿತಕರವು. ಸಣ್ಣಬಸವನ ಜೀನೆಯನ್ನು ದೊಡ್ಡಬಸವನು ಕಳಿದದ್ದು ಆಶ್ಚರ್ಯಕರವು. "ಎತ್ತಿನಿಂದೊದಿಸಿ, ಬಾಲಕನ ಕಣ್ಣುಬಾಯಿಗಳನ್ನು ತಿದ್ದಿಸಿದ ಅನ್ನದಾನಿಯ ಮಹಿಮೆಯು ಅದೇನಗ್ಗಳವೋ?" ಎಂದು ಕೇಳಿದವರು ಕೊಂಡಾಡಿದರು.

ಒಂದು ವರ್ಷ ಮಳೆಯಿಲ್ಲದೆ ಬೆಳೆಗಳೆಲ್ಲ ಒಣಗಿದವು. ನೀರಿನ ಬರಬು ಬಿತ್ತು. ಆಗ ಕೆಲಜನರು ಸ್ವಾಮಿಗಳ ಸನ್ನಿಧಿಗೆ ತಾವು ಹೋಗಲು ಅಂಜಿ ಒಬ್ಬ ಕುರುಬನನ್ನು ಕರೆದು ಕಳಿಸಿದರು. ಆತನು 'ಗುರುವೆ ಕೆರೆಯಲ್ಲಿ ನೀರಿಲ್ಲ; ಜಾತ್ರೆಯು ಹೇಗೆ ನೆರವೇರುವದು? ಮಳೆಯನ್ನು ಬರಿಸಿ ಸರ್ವರನ್ನು ಕಾಪಾಡಬಾರದೇ?' ಎಂದು ಕೇಳಿಕೊಂಡನು. ಅನ್ನದಾನೀಶ್ವರರು 'ಅಯ್ಯಾ ನಾವು ಸನ್ಯಾಸಿಗಳು ನಮ್ಮಲ್ಲೆಲ್ಲಿಯ ಮಳೆಯು? ಅದು ನಿನ್ನ ಕಂಬಳಿಯಲ್ಲಿರುವದು. ಅದನ್ನು ಬೀಸು, ಮಳೆಯಾಗುವದು. ಸುಮ್ಮನೆ ಆಲೋಚನೆಯೇಕೆ?' ಎಂದರು. ಆ ಕುರುಬನು 'ನನ್ನ ಕಂಬಳಿಯಲ್ಲಿರುವದೋ ಹಾಗಾದರೆ?' ಎಂದು ಮರುಳತನದಿಂದಲೋ ಗುರುವಾಕ್ಯದ ನಂಬಿಗೆಯಿಂ

ದಲೋ ಹೊರಗೆ ಬಂದು, ಹೊದ್ದ ಕಂಬಳಿಯನ್ನು ತೆಗೆದು ಬೀಸಿದನು. ಆಗ ನೋಡಿದವರಲ್ಲಿ ಮೂರ್ಧರು ನಕ್ಕರೂ ಅಂದಿನ ರಾತ್ರಿ ಸಾಕಷ್ಟು ಮಳೆಯಾಯಿತು. ಜನರು 'ಕುರುಬನ ಕಂಬಳಿಯಲ್ಲಿ ಮಳೆಯಿಲ್ಲ' ಅದು ಗುರುವಿನ ಕಾರುಣ್ಯದಲ್ಲುಂಟು; ಗುರುವಾಕ್ಯದಲ್ಲುಂಟು; ಎಂದು ಹೊಗಳಿದರು.

ಅನ್ನದಾನೀಶ್ವರರು ಒಂದು ವರ್ಷ ಜಾತ್ರೆಯಲ್ಲಿ 'ಮಾಲಿದೆ' ಮಾಡಿಸುವದನ್ನು ಬಿಡಿಸಿದರು; ಆ ವರ್ಷ ಗುಳಿಗೆಯ ಪಾಯಸವನ್ನು ಮಾಡಿಸಿ ಜಾತ್ರೆಯನ್ನು ತೀರಿಸಿದರು. ಬಳಿಕ ಇಟ್ಟಗಿಯಲ್ಲಿ ಒಂದು ಡೇರೆಯನ್ನು ಹೊಲಿಯಿಸಿ ಅಡವಿಯಲ್ಲಿ ಅದನ್ನು ನಿಲ್ಲಿಸಿದರು. ಆರು ದಿನಗಳ ತರುವಾಯ ಊರಿಗೆ ಕಿತ್ತುತಂದರು. ಇದಾವ ಇಷ್ಟಾನಿಷ್ಟ ಫಲಗಳ ಸೂಚನೆಯೋ ಎಂದು ಜನರು ಚಿಂತಿಸುತ್ತಿದ್ದರು. ಮುಂದಿನ ಜಾತ್ರೆಯ ಒಳಗಾಗಿಯೇ ಗುಳಿಗೆಯ ಅಂದರೆ ಗುರ್ಳೆಯ ಬೇನೆಯು ('ಪ್ಲೇಗ'ವು) ಹೊಸದಾಗಿ ಬಂದು ಸುತ್ತಲೆಲ್ಲ ಹಬ್ಬಿತು; ಮನೆಮನೆಗೆ ಹೆಣಗಳಾದವು. ಜನರು ಕೆಲವು ದಿವಸ ಅಡವಿಯಲ್ಲಿ ಗುಡಿಸಲು ಕಟ್ಟಿಕೊಂಡಿದ್ದು ಬಂದರು.

ಊರ ಓಲೇಕಾರನೊಬ್ಬನು ದಿನಾಲು ನಸುಕಿನಲ್ಲಿ ಬಂದು ಮಠದ ಅಂಗಣವನ್ನುಡಿಗಿ ರಜಘಾರಣಮಾಡಿಕೊಂಡು ಹೋಗುತ್ತಿದ್ದನು. ಒಂದು ದಿನ ಯತಿಗಳು ಕಂಡು ಮುಂದಕ್ಕೆ ಕರೆದರು. ಆತನು ಎರಗಿ "ಗುರುವೆ, ಗಂಡುಮಾಲಿಯಾಗಿದೆ; ಬಲತೋಳನ್ನು ಎತ್ತಲಾಗುವದಿಲ್ಲ; ಎಡಗೈಯಿಂದಲೇ ಉಣ್ಣುವೆನು" ಎಂದನು. ಸ್ವಾಮಿಗಳು ಹೀಗೋ? ನೋಡುವೆನು ಈ ಕೈಯನ್ನೆತ್ತು ಎಂದು ಕೈಯೊಳಗಿನ ದಂಡಕೋಲನ್ನು ತಾಕಿಸಿದರು. ಆತನು ಆಯಾಸವಿಲ್ಲದೆ ಎತ್ತಿಬಿಟ್ಟನು. ನೋವಿಲ್ಲ, ಹುಣ್ಣಿಲ್ಲ, ಕಲೆಯಿಲ್ಲ. ಆ ದಿನ ಬಲಗೈಯಿಂದುಡುಗಿಕೊಂಡಾಡಿ ಮನೆಗೆ ಹೋದನು. ದಿನಾಲು ಹಾಗೆಯೇ ಸೇವೆಯನ್ನು ಸಲ್ಲಿಸುತ್ತಿದ್ದನು.

ಮುಗುಳಿಯ ಒಡೆಯರಾದ ವಿರೂಪಾಕ್ಷ ದೊರೆಗಳ ಮಗಳು ಬಸವಮ್ಮ; ಆಕೆಗೆ ಕ್ಷಯರೋಗವಾಗಿತ್ತು. ವೈದ್ಯರೆಲ್ಲರಾದರೂ ಪರಿಹಾರವಾಗಲಿಲ್ಲ. ಅವಳ ದೊಡ್ಡವ್ವ ಶಿವಗಂಗವ್ವನೆಂಬಾಕೆಯು ಅನ್ನದಾನೀಶ್ವರರ ಕಡೆಗೆ ಒಯ್ಯಲು ತಿಳಿಸಿದಳು. ಬಿಕ್ಕುಹತ್ತಿ ಸಾಯಲಾದವಳನ್ನು ಮಠಕ್ಕೆ ತಂದು ಹಾಕಿದರು. 'ಬಹು ದಿವಸದಿಂದ ನಡೆದುಕೊಂಡು ತಮ್ಮ ಕೃಪಾಬಲದಿಂದ ಕಂಟಕವನೀಗಿದೆವು. ಈಗ ಮರೆತು ಭಿನ್ನೋಪಾಯಗಳನ್ನು ಮಾಡಿಕೆಟ್ಟೆವು; ಕ್ಷಮಿಸಬೇಕು.' ಎಂದು ಬೇಡಿಕೊಂಡರು. ಅದಕ್ಕೆ 'ಸೂಕ್ಷ್ಮ ಔಷಧ, ಪಥ್ಯ, ನಿಮ್ಮವು, ಕಾಡು ಔಷಧ ನಮ್ಮದು, ನೋಡಿರಿ ಸರಿಯಾಗಲಿಕ್ಕಿಲ್ಲ' ಎಂದು ಸ್ವಾಮಿಗಳು ಬೆದರಿಸಿದರು. 'ಈ ಪಾದವನ್ನೇ ನಂಬಿದೆವು; ಆದುದಾಗಲಿ' ಎಂದು ಅವರು ನಮಸ್ಕರಿಸಿದರು. ಸ್ವಾಮಿಗಳು ಬಾಳೆಯಹಣ್ಣು ತರಿಸಿ, ಬಾಯಲ್ಲಿ ಇಡಲು ಆಕೆಯು ಜುರುಜುರು ಹೀರಿ ಕಣ್ದೆರೆದಳು. ಎರಡು ಮೂರು ದಿವಸ ಹೀಗೆಯೇ ಮಾಡುತ್ತಿರಲು ಎದ್ದು ಕುಳಿತಳು. ಬಳಿಕ ವಿನೋದದಿಂದ 'ನಿತ್ಯವೂ ಬಡವರಾದ ನಾವು ಹಣ್ಣು ಜೇನತುಪ್ಪಗಳನ್ನೆಲ್ಲಿಂದ ತರುವೆವು? ಅನ್ನವನ್ನುಣ್ಣಮ್ಮಾ' ಎಂದು ರೊಟ್ಟಿ ಅಂಬಲಿಗಳನ್ನು ಹಾಕಹತ್ತಿದರು. ಅದರಿಂದ ದಿನದಿನಕ್ಕೆ ಗುಣವಾಗಿ ತಿರುಗಾಡಹತ್ತಿದಳು. ಮತ್ತೆ ಸ್ವಾಮಿಗಳು ಮೊದಲಿನಂತೆ, "ಅಮ್ಮಾ, ತಿಂದುತಿಂದು ಬಡವರ ಮಠವನ್ನು ಹಾಳುಮಾಡೀ ನಡೆ ಮನೆಗಿನ್ನು!" ಎಂದರು. ಆಕೆಯು ಸುಖದಿಂದ ನಡೆದು ಹೋಗಿಬಿಟ್ಟಳು. ಕೆಲವು ದಿನಗಳ ಮೇಲೆ ಬಂದು ನಮಸ್ಕರಿಸಿ "ಅಜ್ಜ, ನೀನು ಅಂದುಕೊಟ್ಟದ್ದು ಹಣ್ಣಲ್ಲ, ರೊಟ್ಟಿ ಅಂಬಲಿಗಳಲ್ಲ; ಸಂಜೀವನವು! ಅದರಿಂದಲೇ ಬೇನೆಯಿಂದ ಪಾರಾದೆನು; ನನ್ನನ್ನು ಉದ್ಧರಿಸಿ ಪಾಲಿಸಿದೆ" ಎಂದು ಸ್ತೋತ್ರವನ್ನು ಮಾಡಿದಳು. ಈಕೆಯೇ ಮುಂದೆ ಶಾಂತಗಿರಿಯ ದೇಸಾಯರ ಪುತ್ರನಾದ ಮಲಸರ್ಜರಾಜನಿಗೆ ಸತಿಯಾಗಿ ಸತ್ಪುತ್ರನನ್ನು ಹೆತ್ತಳು.

ಶಕೆ ೧೮೩೦ ರಲ್ಲಿ ಅಜ್ಜನವರು ಒಮ್ಮೆ ಆನಂದದಿಂದ ವಿಶ್ರಮಿಸಿರುವಾಗ ಅಬ್ಬಿಗೇರಿಯ ಪಾಠಶಾಲೆಯ ಪ್ರೌಢವಿದ್ಯಾರ್ಥಿ ಬಸವರಾಜ

ನೆಂಬವನು ಬಂದು ನಮಸ್ಕರಿಸಿದನು. ಅಜ್ಜನವರು ನೋಡಿ 'ತಮ್ಮಾ ನಿನ್ನ ಕಣ್ಣು ಮಂದವಾಗಿದೆಯೆಂದು ಕೇಳಿರುವೆವಲ್ಲೋ' ಎನಲು ಅವನು 'ಹೌದು ಅಜ್ಜಾ, ಎರಡು ಮೂರು ತಿಂಗಳಾಯಿತು; ಅದರ ಚಿಕಿತ್ಸೆಯ ವಿಚಾರವೂ ನಡೆದಿದೆ, ಎಂದನು. ಕೂಡಲೆ ಸ್ವಾಮಿಗಳು ತಮ್ಮ ಕೈಯಲ್ಲಿದ್ದ ಚಿತ್ತವನ್ನು (ದಂಡಕೋಲನ್ನು) ಕೊಟ್ಟು 'ಕಣ್ಣಿಗೆ ತಕ್ಕ ಉಪಾಯವನ್ನು ಮಾಡು. ಆದರೂ ಗುರುವಿನ ಮುದ್ರೆಯಿದು, ಇದನ್ನು ಹೊಂದಿ ಆರಾಧಿಸು, ನಿನ್ನ ಕಲ್ಯಾಣವಾಗುವದಪ್ಪಾ' ಎಂದು ಪ್ರೀತಿಯಿಂದ ಹೇಳಿದರು. ಬಸವರಾಜನು ಭಕ್ತಿಯಿಂದ ತಕ್ಕೊಂಡನು. ಕಣ್ಣಿನ ದೋಷವು ದೂರಾಯಿತು. ಅವನು ಮುಂದೆ ಏಳಿಗೆಯನ್ನು ಹೊಂದಿದನು.

ಶಕೆ ೧೮೩೧ರಲ್ಲೊಮ್ಮೆ ಅದೇ ಪಾಠಶಾಲೆಯ ಮೂರುಜನ ವಿದ್ಯಾರ್ಥಿಗಳು ಕಾಶಿಗೆ ಹೋಗಬೇಕೆಂದು ಬಂದು ಇಟ್ಟಗಿಯಲ್ಲಿಯೇ ಇದ್ದ ಸ್ವಾಮಿಗಳಿಗೆ ನಮಸ್ಕರಿಸಿದಾಗ ಆ, ಅಜ್ಜನವರು ಅವರ ಕ್ಷೇಮ ಸಮಾಚಾರವನ್ನು ವಿಚಾರಿಸಿ--'ಹುಡುಗರಿರಾ ಚನ್ನಾಗಿದೆ, ನೀವು ಒಳ್ಳೇ ಪ್ರಸಿದ್ಧರಾಗಬೇಕೆಂದು ನಮ್ಮಾಶೆಯಿದೆಯೋ' ಎಂದರು. ಅವರು 'ಬುದ್ಧೀ ತಮ್ಮಾಶೀರ್ವಾದದ ಬಲದಿಂದಲೇ ಅಲ್ಲವೇ?' ಎಂದು ಮತ್ತೆ ನಮಸ್ಕರಿಸಿದರು. ಅಜ್ಜನವರು ಆಶೀರ್ವದಿಸಿದರು. ಸರಿ ಅವರ ದಿವ್ಯವಾಣಿಯಂತೆ ಕಾಶಿಗೆ ಹೋಗಿ ಒಬ್ಬರು ಪಂಡಿತರಾಗಿ ಬಾಳೀಹಳ್ಳಿಯ ಜಗದ್ಗುರು ಪೀಠಾಧಿಕಾರಿಗಳಾಗಿ ಶ್ರೀ ಶಿವಾನಂದರಾಜೇಂದ್ರಶಿವಾಚಾರ್ಯರೆಂಬಭಿಧಾನದಿಂದ ವೀರಶೈವ ಮತೋದ್ಧಾರವನ್ನು ಮಾಡುತ್ತಿರುವರು. ಇನ್ನೊಬ್ಬರು ಪ್ರಸಿದ್ಧ ವಕ್ತೃಗಳೂ ಕೀರ್ತನಕಾರರೂ ಆಗಿ ಕೀರ್ತಿಯನ್ನು ಪಡೆದಿರುವರು. ಮೇಲ್ಕಂಡ ಬಸವರಾಜರೇ ಮೂರನೆಯವರು. ಸಂಸ್ಕೃತಾಧ್ಯಯನದಲ್ಲಿ ಪ್ರಾವಿಣ್ಯವನ್ನು ಪಡೆದು ಪಂಡಿತರೆನಿಸಿ ಅಧ್ಯಾಪಕರೂ ಸಾಹಿತ್ಯಸೇವಕರೂ ಆಗಿ ಹೆಸರಾಗಿರುವರು.

ಮಠದಲ್ಲಿ ವೀರಯ್ಯನೆಂಬ ಮಾಹೇಶನು ಸೇವೆಗಿದ್ದನು. ಕಾಲವೈಚಿತ್ರ್ಯದಿಂದ ಆತನು ದುರ್ವರ್ತನಕ್ಕೆಳಸಿದನು. ಅದರ ಫಲದಿಂದ

ವ್ಯೆಗೆ ಬಿಳಪು ಹಿಡಿಯಿತು. ಉಪಾಯುಗಳನ್ನು ಮಾಡಿವಾಡಿವಂತೆ ಹೆಚ್ಚಾಯಿತು. ನಾಚಿ ಮನೆಹಿಡಿದನು. ಕಡೆಗೆ ನಿತ್ಯದಲ್ಲಿಯೂ ನಸುಕಿನಲ್ಲಿ ಬಂದು ಯಾರೂ ಅರಿಯದಂತೆ ಮಠದ ಅಂಗಣವನ್ನು ಉಡುಗಿಹೋಗುತ್ತಿದ್ದನು. ಬರಬರುತ್ತ ಆ ತೊನ್ನು ಕಡಿಮೆಯಾಗಿ ಬೆನ್ನುಬಿಟ್ಟುಹೋಯಿತು. ಆತನು ಬಂಧುಬಳಗಗಳನ್ನೆಲ್ಲ ಬಿಟ್ಟು ಮಠಕ್ಕೆ ಬಂದು "ಸಂಸಾರವನ್ನೊಲ್ಲೆ, ನನ್ನನ್ನು ಇಲ್ಲಿಯೇ ಇಟ್ಟುಕೊಂಡು ರಕ್ಷಿಸಬೇಕು" ಎಂದು ಬೇಡಿಕೊಂಡು ನಿಂತುಬಿಟ್ಟನು.

ಇಟ್ಟಗಿಯ ಅಡಿವೀರಪ್ಪನೆಂಬ ಭಕ್ತನ ಮಗಳು ಬಾಲ್ಯದಲ್ಲಿಯೇ ಕಾಲುಹೋಗಿ ಹೆಳವಿಯಾಗಿದ್ದಳು. ಕೊಡುವ ಹೆಣ್ಣು ಕೆಟ್ಟಿತೆಂದು ಚಿಂತಿಸುತ್ತಿದ್ದರು. ಕಡೆಗೆ ಅನ್ನದಾನೀಶ್ವರರ ಮಠಕ್ಕೆ ತಂದು ಇರಿಸಿ ವಿಭೂತಿ-ಪಾದೋದಕಗಳನ್ನು ಕೊಡುತ್ತಿರಲು ಹೆಳವುತನವು ಹೋಗಿಬಿಟ್ಟಿತು. ಹೆಗಲಮೇಲೆ ಬಂದವಳು ನಡೆದುಹೋಗಿಬಿಟ್ಟಳು.

ಈ ಮಹಿಮರ ವಿಭೂತಿಯು ಅಂಥಿಂಥದಲ್ಲ. ಅದು ಪಿಶಾಚಿಗಳಿಗೆ ಮುಳ್ಳು; ರೋಗಗಳಿಗೆ ಮೃತ್ಯು; ದಾರಿದ್ರ್ಯಾದಿ ದುಃಖಗಳಿಗೆ ಘೋರವೈರಿ. ಈ ವಿಭೂತಿಯು ಭೂಮಿಯಲ್ಲಿಲ್ಲದ ಕ್ರೂರತನವನ್ನು ವಹಿಸಿರುವದೆಂದು ಅಂಜಿ, ಗ್ರಹ-ರೋಗ-ದುಃಖಗಳು ಓಡಿಹೋಗಿ ಈ ಚರೋತ್ತಮರ ದ್ರೋಹಿಗಳ ದೇಹಗಳಲ್ಲಿ ಅಡಗಿಕೊಳ್ಳುತ್ತಿದ್ದವು. ಇರಲಿ.

ಗುರುವನ್ನದಾನೀಶ್ವರರಿಗೆ ಪೀಠಾಧಿಕಾರವನ್ನು ಕೊಟ್ಟ ಬಳಿಕ ಕೆಲವು ದಿವಸಗಳ ತರುವಾಯ ಅನ್ನದಾನೀಶ್ವರರು ಒಮ್ಮೆ ಇಟ್ಟಗಿಯ ಮಠದಲ್ಲಿದ್ದರು. ಒಂದುದಿನ ಕೋಳಿಕೂಗದ ಮೊದಲೇ ಎದ್ದು ಲಿಂಗಾರ್ಚನೆಯನ್ನು ಮಾಡುತ್ತಿರುವಾಗ ಗುರುವನ್ನದಾನೀಶ್ವರರನ್ನು ಕರೆದು "ಈಗಲೇ ರೋಣದಮೇಲೆ ಹಾಯ್ದು ಅಬ್ಬಿಗೇರಿಗೆ ಹೋಗು" ಎಂದು ಆಜ್ಞಾಪಿಸಿದರು. ಈ ಸ್ವಾಮಿನಿಷ್ಠರು ಅದೇಕೆಂದು ಸಹ ಕೇಳದೆ ಹೊರಟುಬಿಟ್ಟರು. ಮೂರು ಹರದಾರಿಯಿರುವ ಊರಿಗೆ, ರೋಣದ

ಮೇಲೆಹಾಯ್ದು ಆರು ಹರದಾರಿಯೇಕೆ ನಡೆದು ಹೋಗಬೇಕೆಂಬ ಕಾರಣವು ತಲೆದೋರಿದರೂ ಅಪ್ಪಣೆಯಾದಂತೆ ನಡೆದರಾಯಿತೆಂದು ಹಾಗೆಯೇ ಸಾಗಿಬಿಟ್ಟರು. ರೋಣವನ್ನು ದಾಟಿದ್ದರು; ಅಬ್ಬೀಗೇರಿಯ ಹಾದಿಯನ್ನು ಹಿಡಿದಿದ್ದರು. ಅಬ್ಬೀಗೇರಿಯ ಬಸವಣ್ಣಗೌಡನು ಇವರೊಡನೆ ಎದುರಿಗೆ ಬರುತ್ತಿದ್ದನು. ಆತನು ಆತುರದಿಂದ ನಮಸ್ಕರಿಸಿದನು.

ಬ. ಗೌ.— ರೋಣಕ್ಕೆ ಬಂದು ಕರೆಯಕಳುಹಬೇಕೆಂದು ಮಾಡಿದ್ದೆವು. ತಾವೇ ಬಂದದ್ದು ಒಳಿತಾಯಿತು. ತಮಗಾರು ಹೇಳಿದರು? ಅಧಿಕಾರಿಗಳು ತಮ್ಮ ಮಾಜ್ಞಾಲವನ್ನು ಕೇಳಬಹುದು.

ಗು. ಅನ್ನದಾನಿಗಳು— ನಾನಾವುದನ್ನೂ ಅರಿಯೆನು. ನಿಮ್ಮ ಮಾತಿನ ಅರ್ಥವೇ ತಿಳಿಯದು. ಅಜ್ಜನವರೇ ಹೋಗೆಂದರು; ಸುಮ್ಮನೆ ಹೊರಟು ಬಂದೆನು.

ಬ. ಗೌ.— (ವಿಸ್ಮಯದಿಂದ) ಸರಿಸರಿ, ಗುರುಮಹಾತ್ಮರು ತಾವೇ ತಿಳಿದುಕೊಂಡು ಹೀಗೆ ಕಳಿಸಿರುವರು. ಅವರಿಗೆ ಕಳ್ಳರು ಬೇರೆ ಹೇಳಲಿಲ್ಲವಷ್ಟೇ? ಇರಲಿ, ಈ ರಾತ್ರಿ ನಮ್ಮ ಮನೆಯಲ್ಲಿ ಕಳವು ಆಗಿದೆ. ತಾವು ನಮ್ಮಲ್ಲಿಟ್ಟ ಬೆಳ್ಳಿಯ ಬಂಗಾರದ ಉಪಕರಣಗಳೂ ಕೂಡ ಎಲ್ಲವೂ ಹೋಗಿವೆ.

ಗು. ಅನ್ನ— ಹೊ, ಹೀಗೋ? ಅವು ಹೋದರೆ ಹೋಗಲಿ. ಗುರುವರನು ಮೊದಲೇ ತಿಳಿದದ್ದು ಎಂಥ ಮಹಿಮಾದರ್ಶಕವಾಗಿದೆ, ನೋಡಿದಿರಾ?

ಆವರರಿಯದ ಸಂಗತಿಯಾವುದೆಂದು ಎಲ್ಲರೂ ತಲೆದೂಗಿ ಇಟ್ಟಿಗಿಗೆ ಬಂದರು. ಅನ್ನದಾನೀಶ್ವರರಿಗೆ ನಮಸ್ಕರಿಸಿ ಕಳವಿನ ಸುದ್ದಿಯನ್ನು ಹೇಳಿದರು. ಮತ್ತು 'ನಮ್ಮ ಸಾಮಾನುಗಳು ಹೋದರೆ ಹೋಗಲಿ. ಮಠದ ಒಡವೆಗಳು ಹೋದವಲ್ಲ' ಎಂದು ಗೌಡನು ಮಿಡುಕಿದನು.

ಅನ್ನದಾನೀಶ್ವರರು— ಒಬ್ಬನು ಒಯ್ಯುವನು; ಮತ್ತೊಬ್ಬನು ಕೊಡುವನು. ಇದಕ್ಕೆ ಚಿಂತೆಯೇಕೆ? ಸುಮ್ಮನೆ ಇರ್ರಿ, ಸರಕಾರಕ್ಕೆ ತಿಳಿಸಬೇಡಿರಿ.

ಬ. ಗೌ.-- ಬುದ್ಧೀ ಮೊದಲೇ ತಿಳಿಸಿದೆ. ಈಗ ಆ ಒಡವೆಗಳ ಪಟ್ಟಿ ಬೇಕಾಗಿದೆ.

ಗುರುವನ್ನದಾನೀಶ್ವರರು ಆ ಒಡವೆಗಳ ಪಟ್ಟಿಯನ್ನು ಮಾಡಿ ಕೊಟ್ಟರು. ಬೆಳ್ಳಿಯಕೊಡ, ಸಮೆ, ಮಣೆ, ತಾಲಿ, ಕೊಡೆ, ಚಾಮರಗಳ ಹಿಡಿಕೆಗಳು ಇನ್ನೂ ಏನೇನೋ ಎರಡುಮಣಬೆಳ್ಳಿಯ ಸಾಮಾನುಗಳೂ ಕೆಲವು ಬಂಗಾರದ ಉಪಕರಣಗಳೂ ಕಳವಾಗಿ ದ್ದವು. ಬಸವನಗೌಡನು ಪಟ್ಟಿಯನ್ನು ತೆಗೆದುಕೊಂಡು ರೋಣಕ್ಕೆ ಹೋದನು. ಅಧಿಕಾರಿಗಳು ಎಷ್ಟು ಪ್ರಯತ್ನಬಟ್ಟರೂ ಕಳವಿನ ಶೋಧವಾಗಲಿಲ್ಲ. ಮುಂದೆ ಬಸವನಗೌಡನ ಹಿರಿಯರಾದ ಪರ್ವ ತಗೌಡನೂ ಫಕೀರಗೌಡನೂ ಅನ್ನದಾನೀಶ್ವರರ ಸನ್ನಿಧಿಗೆ ಬಂದು ನಮಸ್ಕರಿಸಿ "ಗುರುವೆ ಹೋದ ಒಡವೆಗಳನ್ನೆಲ್ಲ ನಾವು ಮಾಡಿಸಿ ಕೊಡುವೆವು; ಅಪ್ಪಣೆಯಾಗಬೇಕು" ಎಂದು ಕೇಳಿಕೊಂಡರು.

ಅನ್ನದಾನೀಶ್ವರರು-- ಬೇಡ, ನೀವು ಮಾಡಿದ ಅಪರಾಧವೇನು? ನಿಮ್ಮ ಮನೆಯಲ್ಲಿದ್ದಾಗ ಹೋಗಿರುವವೆಂದು ಅನ್ನುವಿರೇನು? ಹಾಗಾ ದರೆ ಮಠದಲ್ಲಿಯೇ ಹೋಗಿದ್ದರೆ ಆ ಕೆಡಕು ನಿಮ್ಮದಲ್ಲವೇನು? ಬೇರೆ ಭಾವನೆಯೇಕೆ? ಭಕ್ತರಿಂದ ಬಂದವುಗಳು, ಮುಂದೆಯೂ ಭಕ್ತರಿಂದಲೇ ಕೂಡದಿರುವವೇ?

ಗೌಡರು-- ಒಂದೇ ಎರಡೇ ಎಷ್ಟೋ ಬೆಲೆಯ ಒಡವೆಗಳು ಹೋಗಿರಲು ಸಮಾಧಾನವೆಂತು? ಅವು ಕೂಡುವ ವರೆಗೆ ಬಡತನದ ಶಿವಲಿಂಗಪೂಜೆಯೇಕೆ? ಐದುಸಾವಿರ ಹಣದ ಒಡವೆಗಳು ಭಕ್ತರಿಂ ದೆಂದು ಸಂಗ್ರಹವಾಗಬೇಕು? ನಾವು ನಿಮ್ಮ ಭಕ್ತರಲ್ಲವೇ?

ಅನ್ನದಾನೀಶ್ವರರು-- ಆಗಲಿ, ಹೋದ ಒಡವೆಗಳು ದೊರೆಯ ದಿದ್ದರೆ ನೀವೇ ಮಾಡಿಸಿಕೊಡಬಹುದು; ಆ ವರೆಗೆ ತಡೆಯಿರಿ.

ಎಂದು ಸಮಾಧಾನ ಮಾಡಿ ಕಳಿಸಿದರು. ಇತ್ತ ಅವುಗಳನ್ನು ಒಯ್ದು ಲಮಾಣಿಗಳು ತಮ್ಮ ಸ್ಥಳದಲ್ಲಿ ಮುಚ್ಚಿಗಿದರು. ಕೆಲವನ್ನು

ಒಯ್ದು ಮಾರ ಹೋಗಲು, ಹೆಸರುಗಳನ್ನು ನೋಡಿದವರು ಕೆಲವರು ಕೊಳ್ಳುವದನ್ನು ಬಿಟ್ಟರು. ಒಬ್ಬನು ಮಾತ್ರ ಕಡಿಮೆ ಬೆಲೆಗೆ ದೊರೆ ವವೆಂದು ಕೊಂಡು ಮೇಲಿನ ಹೆಸರ ನೋಡಿಯೂ ಒಡೆಯರಿಗೆ ಒಪ್ಪಿ ಸವೆ ಇದ್ದನು. ಆದರಿಂದ ಅವನು ಮನೆಯಲ್ಲಿ ಬೆಂಕಿಯು ಕೊಂಡಂತಾ ಯಿತು; ಹೆಂಡರುಮಕ್ಕಳೂ ಕರೆವ ಎಮ್ಮೆಯೂ ನೆಲಹಿಡಿದವು. ಅಹಹಾ! ಉರಿವ ಕಿಚ್ಚಿನಲ್ಲಿ ನಿದ್ರಿಸಬಹುದು, ಹಾವನ್ನು ಮೆಟ್ಟಿ ನಿಲ್ಲಬ ಹುದು, ಕಾಯ್ದ ಕಬ್ಬಿಣವನ್ನು ಬರಿಗೈಯಿಂದ ಮಣಿಸಬಹುದು, ವಿಷವನ್ನುಂಡು ಮೃತ್ಯುವನ್ನು ಜಯಿಸಬಹುದು. ಚರವರನ ಪದಾರ್ಥ ವನ್ನು ಅಪಹರಿಸಿ ಬದಕುವದಸಾಧ್ಯವು! ಆ ವರ್ತಕನು ತನ್ನ ಕೆಡಕಿನ ಕಾರಣವನ್ನು ತಿಳಿದು ಪಶ್ಚಾತ್ತಾಪದಿಂದ ಅನ್ನದಾನೀಶ್ವರರ ಪಾದಕ್ಕೆ ಅವುಗಳನ್ನು ತಂದೊಪ್ಪಿಸಿದನು; ಅವರು ಗೌಡನ ಕಡೆಗೆಯೇ ಹೋಗೆಂದರು. ಗೌಡನು ಅವನಿಂದ ಎಲ್ಲವನ್ನೂ ಕೇಳಿಕೊಂಡು ಅಧಿ ಕಾರಿಗಳೊಡನೆ ಹೋಗಿ ಲವಣ್ಯಾಣಿಗಳನ್ನು ಹಿಡಿದನು. ಎಲ್ಲ ಬದುಕೂ ಸಿಕ್ಕಿತು. ವರ್ತಕನೂ ಅಧಿಕಾರಿಯೂ ಅನ್ನದಾನೀಶ್ವರರ ಪಾದಕ್ಕೆ ಕಾಣಿಕೆಯನ್ನಿಟ್ಟು ನಮಸ್ಕರಿಸಿದರು.

ನಾಲತ್ತವಾಡದ ದೇಸಾಯರು ಒಮ್ಮೆ ಅನ್ನದಾನೀಶ್ವರರ ಭೆಟ್ಟಿಗೆ ಬಂದರು. ಸ್ವಾಮಿಗಳು ದೇಸಾಯರಿಗೆ - "ನಮಗೊಂದು ಕುದುರೆಯು ಬೇಕಾಗಿದೆ. ಅದು ತೊಗರೆಯ ಬಣ್ಣದ್ದು ಇರಬೇಕು. ಅದರ ಹಣೆಯ ಮೇಲೆ ಬಿಳಿಯ ಚುಕ್ಕೆಯಿರಬೇಕು. ನಾಲ್ಕೂ ಕಾಲುಗಳು ಕೆಳಭಾಗದಲ್ಲಿ ಬಿಳೆಯವಾಗಿರಬೇಕು. ಅದಕ್ಕೆ ಹೂಬಾಲವಿರಬೇಕು. ಮೇಲೆ ಕುಳಿತಾಗ ಮನಕ್ಕೆ ಉತ್ಸಾಹವಾಗುವಂತೆ ಸೌಮ್ಯದಿಂದ ನಡೆಯುತ್ತಿರಬೇಕು. ಇಂಥದೊಂದು ಹೆಣ್ಣು ಕುದುರೆಯನ್ನು ಸ್ವಲ್ಪ ಬೆಲೆಯಲ್ಲಿ ಕೊಂಡು ಕಳಿಸ ಬೇಕು." ಎಂದು ಹೇಳಿದರು. ದೇಸಾಯರು ಬಂದು ಸುತ್ತಲೆಲ್ಲ ಶೋಧಿಸಿದರೂ ಅಂಥ ಕುದುರೆಯೇ ದೊರೆಯಲಿಲ್ಲ. ಆಗ ಅವರ ಮಗನು "ಇದಕ್ಕೇಕೆ ಇಷ್ಟು ಆಲೋಚನೆ? ಗುರುವಿನ ಕೃಪೆಯಿಂದ ನಮ್ಮ ಕುದುರೆಯೇ ಅಂಥ ಮರಿಯನ್ನು ಕೊಟ್ಟರೆ ಅವನ್ನೇ ಕಾಣಿಕೆ

ಯಾಗಿ ಅರ್ಪಿಸಿದರಾಯಿತು.!! ಎನಲು ದೇಸಾಯರು ನಕ್ಕು 'ಹದಿನೆಂಟು ಸಾರೆ ತುಂಬಿಸಿದರೂ ಗರ್ಭಹೊಂದದ ಬಂಜೆಕುದುರೆಯು ಇನ್ನು ಈಯುವದೇ?' ಎಂದರು. ಮಗನು ಒಪ್ಪಲಿಲ್ಲ. 'ಗುರುಮಹಿಮೆಯನ್ನು ನೋಡಿಯೇ ಬಿಡುವಾ' ಎಂದು ಸಕಾಲದಲ್ಲಿ ಕುದುರೆಯನ್ನು ವೈದೊಳೆದು ಪೂಜಿಸಿ ತುಂಬಿಸಿದನು. ಅದು ಗರ್ಭವಾಯಿತು. ಸ್ವಾಮಿಗಳು ಹೇಳಿದಂಥ ಲಕ್ಷಣದ ಮರಿಯನ್ನೇ ಕೊಟ್ಟಿತು. ದೇಸಾಯರು ಚರಮಹಿಮೆಯನ್ನು ಕೊಂಡಾಡಿ ಕುದುರೆಯ ಮರಿಯನ್ನು ಅರ್ಪಿಸಿದರು.

ಅನ್ನದಾನೀಶ್ವರರು ಅಬ್ಬೀಗೇರಿಯಲ್ಲಿರುವಾಗ ಒಮ್ಮೆ ಬಸವನಗೌಡನನ್ನು ಕರೆದು "ನಾಳೆ ಶಿವಯೋಗಿಯೊಬ್ಬನು ಬರಬಹುದು; ಅತನಿಗೆ ಸೌತೆಯ ಹಣ್ಣೆರಡು ಬೇಕು. ಹೊಲಕೆ ಹೋಗಿ ತೆಗೆದುಕೊಂಡು ಬಾ.' ಎಂದರು. ಗೌಡನು 'ಬುದ್ಧೀ ಬೇಸಿಗೆಯಕಾಲ ಈಗೆಲ್ಲಿ ದೊರೆವವು?' ಎಂದನು. ಅದಕ್ಕವರು, ಏನೋ ಹಾಗೆಯೇ ಹೋಗಪ್ಪ ಎಂದರು. ಆತನು ಕುದುರೆಯನ್ನೇರಿ ಹೋಗಿ ಬಿಟ್ಟನು. ಕಾಲವೇ ಅಲ್ಲ; ಎತ್ತ ತಿರುಗಿದರೂ ಎಲ್ಲಿ ದೊರೆಯಬೇಕು? ತಿರುಗಿ ತಿರುಗಿ ದಣಿದು ಬರುವಾಗ ಒಂದು ಹಳ್ಳಿಯಲ್ಲಿ ಒಬ್ಬ ಸ್ತ್ರೀಯಳನ್ನು ಕರೆದು 'ಅಮ್ಮಾ, ಸೌತೆಯಹಣ್ಣು ಎಲ್ಲಿವೆ?' ಎಂದು ಕೇಳಿದನು. "ಅಣ್ಣಾ ನನ್ನಲ್ಲಿಯೇ ಎರಡಿರುವವು; ತೆಗೆದುಕೊಳ್ಳು" ಎಂದು ಕೊಟ್ಟುಬಿಟ್ಟಳು. ಗೌಡನು ಆನಂದದಿಂದ ಹೊರಟನು. ಇತ್ತ ಮಠದಲ್ಲಿ ಅದೇ ಕಾಲಕ್ಕೆ ಸರಿಯಾಗಿ ಸ್ವಾಮಿಗಳು ಜನರೊಡನೆ ಮಾತಾಡುತ್ತ ಕುಳಿತಾಗ ಒಮ್ಮಿಂದೊಮ್ಮೆ 'ಸರಿ ಹಣ್ಣು ಚನ್ನಾಗಿವೆ' ಎಂದುಬಿಟ್ಟರು. ಕುಳಿತವರು ಆಶ್ಚರ್ಯದಿಂದ ಅತ್ತಿತ್ತ ನೋಡಹತ್ತಿದರು. ಅಜ್ಜನವರು ನಸುನಕ್ಕು 'ಗೌಡನಿಗೆ ಹಣ್ಣುದೊರೆತಿವೆ; ಈಗ ಬರುವನು' ಎಂದು ಹೇಳಿಬಿಟ್ಟರು. ಮರುದಿನವೇ ಒಬ್ಬ ಶಿವಯೋಗಿಯು ಬಂದನೇ! ಲಿಂಗಾರ್ಪಣಕ್ಕೆ ಸೌತೆಯ ಹಣ್ಣುಗಳನ್ನು ಬೇಡಿದನೇ! ಅನ್ನದಾನೀಶ್ವರರ ಸೂಚನೆಯು ಹುಸಿಯಾಗುವದೇ?

ಮಠದ ಉಗ್ರಾಣದ ಮನೆಯ ಗೋಡೆಯನ್ನು ಕಟ್ಟುವ ಕೆಲಸವು ನಡೆದಿತ್ತು. ಸ್ವಾಮಿಗಳು ಆ ಕೂಲಿಯವರೊಳಗಿನ ಬಸವಪ್ಪನೆಂಬವನಿಗೆ "ನೀನಿಂದು ಮನೆಗೆ ಹೋಗು; ಬಹಳ ದಣಿದಿದ್ದಿಯೇ; ಏನಾದರೂ ಹೆಚ್ಚು ಕಡಿಮೆಯಾದೀತು" ಎಂದು ಕೈಯೊಳಗಿನ ಕೋಲಿನಿಂದ ಮೃದುವಾಗಿ ಹೊಡೆದು ಹೇಳಿದರು. ಆತನು ಕೆಳಗಿಳಿದು ಬಂದನು. ಆದರೆ ಸ್ವಾಮಿಗಳು ಮರೆಯಾಗಲು 'ಇಂದಿನ ಹಗಲೆಲ್ಲ ಕಾಲವನ್ನು ಸುಮ್ಮನೆ ಹೇಗೆ ಕಳೆಯಲಿ?' ಎಂದು ಮತ್ತೆ ಗೋಡೆಯನ್ನು ಏರಿದನು. ಕೆಲಹೊತ್ತಿನಲ್ಲಿ ದೊಡ್ಡದೊಂದು ಕಲ್ಲು ಸರಿಯಿತು' ಆತನು ನೆಲಕ್ಕೆ ಬಿದ್ದನು. ಆ ಕಲ್ಲು ಮೇಲೆ ಬಿತ್ತು. ತಲೆಯೊಡೆಯಿತು; ಎಲುವು ಮುರಿದವು. ದೊಡ್ಡ ಕಲ್ಲು! ಒಬ್ಬಿಬ್ಬರಿಗೆ ಸರಿಯುದಂಥದು!! ನಾಲ್ಕಾರು ಜನರು ಕೂಡಿ ಉರುಳಿಸಿದರು. ಅಯ್ಯೋ ಬಡವನು ಸತ್ತನೆಂದು ನೋಡಿದವರು ಮರುಗಿದರು. ಸ್ವಾಮಿಗಳು ಬಂದು 'ಬಸವಾ ಏಳು! ಮಣ್ಣಲ್ಲಿ ಉರುಳುವರೇ? ಮಗನು ಊಟಕ್ಕೆ ಕರೆಯ ಬಂದಿರುವನು ಏಳು! ಎಂದು ಕೈಹಿಡಿದೆಬ್ಬಿಸಲು ನಿದ್ರೆಯಿಂದೆದ್ದವನಂತೆ ಎದ್ದು ಬಿಟ್ಟನು. ನೋವು-ಬಾವು-ಗಾಯಗಳನ್ನೇನೂ ಕೇಳಲೇ ಬೇಡ. ಆತನು ಚರವರರನ್ನು ನಮಿಸಿ ನುತಿಸಿದನು.

ಹುಲಿಕಂಥೆಯ ಮಠದ ಸದಾಚಾರಸಂಪನ್ನನಾದ ಸಂಗಾರ್ಯನೆಂಬವನು ಬಾಲ್ಯದಿಂದಲೂ ಅನ್ನದಾನೀಶ್ವರರ ಪರಮಶಿಷ್ಯನಾಗಿದ್ದನು. ಸ್ವಾಮಿಗಳ ಅನುಗ್ರಹವನ್ನು ಪಡೆದಿದ್ದನು. ಭಕ್ತಿಯಿಂದ ತನ್ನ ತನು ಮನ ಧನಗಳನ್ನೆಲ್ಲ ಮಠದ ಸೇವೆಗೆ ಸಮರ್ಪಿಸಿದ್ದನು. ಈತನಿಗೆ ಅಂತ್ಯದಲ್ಲಿ ಅನ್ನದಾನೀಶ್ವರರು ಬಸವಬೋಧಾಮೃತದಿಂದ ತಣಿಸಿ ಪುನೀತನನ್ನಾಗಿ ಮಾಡಿದರು.

ಈಶ್ವರನು ಮಾನವಗೆ ಕರ್ಮಫಲವನ್ನು ಕೊಡುವನು. ಚರವರರು ತಮ್ಮ ಭಕ್ತಿ-ಜ್ಞಾನ-ವೈರಾಗ್ಯ-ಶಿವಯೋಗಶಕ್ತಿಗಳಿಂದ ಆ ಕರ್ಮಬಂಧನವನ್ನು ಪರಿಹರಿಸುವರು.

ತಮ್ಮ **ತಪೋಬಲದ ಮಹಿಮೆ**ಯಿಂದ ಅನ್ನದಾನೀಶ್ವರರು ಮಾನವರ ಬುದ್ಧಿಶಕ್ತಿಗೆ ತೋಚದ ಅದೆಷ್ಟೋ ಲೀಲೆಗಳನ್ನು ಮಾಡಿದರು. ಅವುಗಳಲ್ಲಿ ಮುಖ್ಯವಾದವುಗಳನ್ನಷ್ಟು ಇಲ್ಲಿ ಹೇಳಿದುದಾಯಿತು. ಇನ್ನು ಈ ನಿರಂಜನ ಗುರುವರರ ಇನ್ನುಳಿದ ಚರಿತ್ರಾಂಶದ ಕಡೆಗೆ ಹೊರಳುವಾ!

೧೩. ಲಿಂಗೈಕ್ಯ.

ಅನ್ನದಾನೀಶ್ವರರು ಈ ಪ್ರಕಾರ ಮಹಿಮಾನ್ವಿತರಾಗಿ ಭಕ್ತರನ್ನು ಪರಿಪಾಲಿಸುತ್ತ ೧೦೧ ವರ್ಷ ಬಾಳಿದರೂ ಅವರ ಕಣ್ಣು-ಕಿವಿ-ಹಲ್ಲುಗಳ ಶಕ್ತಿ ಶಿಥಿಲವಾಗಲಿಲ್ಲ; ಮಾತು ಅಸ್ಪಷ್ಟವಾಗಲಿಲ್ಲ; ಸ್ಮರಣವು ಕೆಡಲಿಲ್ಲ; ಕೈಕಾಲುಗಳು ಸೋತು ಕೃತಿಗೆಡಲಿಲ್ಲ; ಬೆನ್ನು ಬಾಗಲಿಲ್ಲ. ಸ್ವತಂತ್ರತೆಯು ಕುಂದಲಿಲ್ಲ. ಲಿಂಗೈಕ್ಯರಾಗುವ ವರೆಗೆ ಪುಸ್ತಕಗಳನ್ನು ನೋಡಿ ಗುರುವನ್ನದಾನೀಶ್ವರರಿಗೆ ಶಿವಾನುಭವ ಶಾಸ್ತ್ರವನ್ನು ಹೇಳುತ್ತಲೇ ಇದ್ದರು. ಗುರುಲಿಂಗದೊಳಗಿನ ಶಿವಲಿಂಗಪ್ರಸಾದವು ಏನು ದೊರೆತರೂ ಅರ್ಪಣಮಾಡಿದರು; ಯಾವದನ್ನು ಗ್ರಹಿಸಿದರೂ ಹಲ್ಲುಗಳಿಗೆ ಬಾಧೆಯಾಗಲಿಲ್ಲ. ಕೈಯೊಳಗಿನ ಕೋಲು ಕೇವಲ ಮುದ್ರೆಗಾಗಿ ಇತ್ತಲ್ಲದೆ ನಡೆವ ಆಸರಕ್ಕಾಗಿ ಇರಲಿಲ್ಲ.

ಅನ್ನದಾನೀಶ್ವರರ ನಡೆಯು ಧರ್ಮತತ್ವಗಳ ಪ್ರದರ್ಶನಕಾಲೆಯಾಗಿತ್ತು; ನುಡಿಯು ವೇದಾಗಮಗಳ ಸಾರಸಂಗ್ರಹವಾಗಿತ್ತು; ಅವರ ಕಡೆಗಣ್ಣ ನೋಟದಲ್ಲಿ ಜನರುದ್ಧಾರಶಕ್ತಿಯು ವ್ಯಕ್ತವಾಗುತಲಿತ್ತು; ಸ್ಪರ್ಶದಲ್ಲಿ ಪಾಪಗಳನ್ನು ಒಕ್ಕಲಿಕ್ಕುವ ಬಿಂಕವು ಮಿಕ್ಕಿತ್ತು; ಅವರ

ಧೂಳಪಾದೋದಕದಲ್ಲಿ ಸಂಸಾರ ಮೋಹವನ್ನು ಪರಿಹರಿಸುವ ಬಿನ್ನಣವು ಮಿಣಗುತ್ತಿತ್ತು; ಬೋಧೆಯಲ್ಲಿ ಮುಕ್ತಿಸಂಪದವು ನೆಲಿಸಿತ್ತು.

ಅನ್ನದಾನೀಶ್ವರರಿಗೆ ೧೦೧ ನೆಯ ವರ್ಷವು ನಡೆದಿತ್ತು. ಎಲ್ಲ ಸದ್ಭಕ್ತಮಂಡಲದವರ ಲಕ್ಷವೂ ಅವರ ಪ್ರಕೃತಿಯ ಕಡೆಗೆಯೇ ಇತ್ತು. ಹೀಗಿರಲು ಇಟ್ಟಗಿಯ ಮಠದಲ್ಲಿರುವಾಗ ಸ್ವಾಮಿಗಳಿಗೆ ದೇಹಾಲಸ್ಯವಾಯಿತು. ಇದನ್ನು ಕೇಳಿದ ಕೂಡಲೆ ಹಾಲಗೆರೆಯವರು ಗುಂಪಾಗಿ ಬಂದರು. ಮತ್ತು "ಕಡೆಯಕಾಲ, ತಾವಿನ್ನು ಹಾಲಗೆರೆಗೆ ಬರಬೇಕು" ಎಂದು ಬಿನ್ನವಿಸಿಕೊಂಡರು. ಅದಕ್ಕೆ ಸ್ವಾಮಿಗಳು "ಅವಸರವೇಕೆ? ನಮ್ಮ ಸಮಾಧಿಯು ಹಾಲಗೆರೆಯಲ್ಲಿಯೇ, ಸಂದೇಹವಿಲ್ಲ. ಮುಂದೆ ನೋಡಿಕೊಂಡು ಬರುವೆವು" ಎಂದರು. ಅತುಲ ಗುರುಭಕ್ತಿಯುಳ್ಳ ಅವರು ಗುರುವಿನ ವಿಯೋಗವಾಗುವದೆಂದು ಎದೆಗುಂದಿದವರಾದ್ದರಿಂದ ಅವರ ಮಾತನ್ನು ನಂಬದೆ 'ಜಾತ್ರೆಯು ಸಮೀಪಿಸಿದೆ; ತಾವು ಬರಬೇಕು' ಎಂದು ಮತ್ತೆ ದೈನ್ಯದಿಂದ ಬೇಡಿಕೊಂಡರು. ಆಗ "ಇನ್ನೇನಾಗುವದು ಈ ವರ್ಷ ಜಾತ್ರೆಯು! ಒಮ್ಮೆಲೇ ನಮ್ಮ ಜಾತ್ರೆಯನ್ನೇ ಮಾಡಿಬಿಡಿರಿ" ಎಂದು ಅಂದುಬಿಟ್ಟರು. ಹಾಲಗೆರೆಯವರು ಉಪಾಯಗಾಣದೆ ತಿರುಗಿಬಂದರು. ಸ್ವಾಮಿಗಳ ವಾಕ್ಯದ ಸೂಚನೆಯಂತೆಯೇ ಆ ವರುಷ 'ಪ್ಲೇಗ'ದ ಬೇನೆಯುಂಟಾಗಿ ಜಾತ್ರೆಯು ನಿಂತುಹೋಯಿತು.

'ಪ್ಲೇಗ'ದ ಹಾವಳಿಯಿಂದ ಇಟ್ಟಗಿಯ ಜನರು ಊರು ಬಿಟ್ಟು ಗುಡಿಸಲುಗಳನ್ನು ಕಟ್ಟಿಕೊಂಡು ಅಡವಿಯಲ್ಲಿದ್ದರು. ಸ್ವಾಮಿಗಳು ಮಾತ್ರ ತಮ್ಮ ಮಠದಲ್ಲಿಯೇ. ಒಂದು ದಿನ ಗುರುವನ್ನದಾನೀಶ್ವರರು ದರ್ಶನಕ್ಕೆಂದು ಬಂದರು. ಅವರು ಹತ್ತಿಕೊಂಡು ಬಂದ ಕುದುರೆಯನ್ನು ನೋಡಲಿಕ್ಕೆಂದು ಅನ್ನದಾನೀಶ್ವರರು ಒಳಗಿನಿಂದ ಅಂಗಣಕ್ಕೆ ಬಂದರು. ಕೂಡಲೆ ಅದಾವ ಪ್ರೇರಣೆಯಿಂದಲೋ ಏನೋ ಗುರುವನ್ನದಾನೀಶ್ವರರೊಡನೆ ಹೊರಹೊರಟು, ಗಂಜಿಹಾಳದ ಮಾರ್ಗ

ದಲ್ಲಿ ಮುಪ್ಪಿನಬಸವಲಿಂಗದೇವನು ಹಾವಾಗಿ ದರ್ಶನವಿತ್ತ ಸ್ಥಾನಕ್ಕೆ ಬಂದು ವಿಶ್ರಮಿಸಿದರು. ಅಲ್ಲಿಯೇ ಊರ ಪ್ರಮುಖರು ನೆರೆದರು. ಶಾಂತಗಿರಿಯ ದೇಸಾಯರು ಅವರನ್ನು ಮಠಕ್ಕೆ ಕರೆತರಬೇಕೆಂದು ವಿನಯದಿಂದ ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟರು. ಮಾರ್ಗದಲ್ಲಿ ದೇಸಾಯರ ಡೇರೆಯು ಹತ್ತಿತು. ಅಲ್ಲಿ ಅವರ ಸತಿಯರೊಡನೆ ಊರ ಸ್ತ್ರೀಯರು ಗುಂಪುಗೂಡಿದ್ದರು. ಅವರು "ತಂದೆ, ಗಂಡ, ಮಗ, ಸಂಸಾರ ಇವುಗಳಿಗೆ ಯಾವಾಗಲೂ ಆಧೀನರಾದವರೂ ಯತಿಯ ಪಾದಕ್ಕೆ ಸಲ್ಲದೆ ಗತಿಗೆಟ್ಟ ದೀನೆಯರೂ ಆದ ಈ ಸತಿಯರಿಗೆ ಒಲಿದು ದರ್ಶನ ಕೊಡಬೇಕೆಂದು ಚರವರನು ಕರುಣದಿಂದ ಸಾಗಿ ಬಂದಿರುವನು. ಈ ಜಗತ್ಪಿತನ ಹಾವುಗೆಯು ನಮಗೆ ಸತತವೂ ಸೀಮಂತಮಣಿಯಾಗಿ ಒಪ್ಪಲಿ" ಎಂದು ನುತಿಸುತ್ತ ಸರ್ವರೂ ಸಾಷ್ಟಾಂಗವಾಗಿ ನಮಸ್ಕರಿಸಿದರು. ಹೀಗೆ ಬಹುಜನ ಭಕ್ತಮಂಡಲದೊಡನೆ ಶಿವಸಂತೆ ಮೆರೆಯುತ್ತ ಮಠಕ್ಕೆ ಬರುತ್ತಿದ್ದರು. ಹಾದಿಯಲ್ಲಿ ಹೊಸಭಾವಿಯೊಂದು ಸಿದ್ಧವಾಗುತ್ತಲಿತ್ತು. ಕೂಡಿದವರಲ್ಲಿ ಕೆಲವರು ಈ ನೀರು ಒಳ್ಳೇ ಮಧುರವೆಂದರು. ಸ್ವಾಮಿಗಳು ಅವುಗಳನ್ನು ತರಿಸಿಕೊಂಡು ಮುಖಪಾದಪ್ರಕ್ಷಾಲನವನ್ನು ಮಾಡಿಕೊಂಡರು. ಆ ಪುಣ್ಯಪಾದಜಲವು ಯಾವನಿಗೆ ದೊರೆತದೋ ಅವನು ಘನವಂತನೇ. "ಪಾದೋದಕವ ಹೊಂದಿ ಭೂಮಾತೆಯು ಪುಣ್ಯವಂತೆಯಾದಳು. ಆಕೆಯನ್ನು ಧರಿಸಿ ಪಾವನರಾಗಬೇಕು" ಎಂದು ಸ್ತ್ರೀಯರು ಬೆರಳುಗಳಿಂದ ಕೆಸರನ್ನು ತೆಗೆದು ಕುಂಕುಮದ ಬೊಟ್ಟಿಂಬಂತೆ ಹಣೆಗಿಟ್ಟುಕೊಂಡರು. ಮುಕ್ತಿಕಾಂತೆಯು ತನ್ನ ಪತಿಯ ಕಳಿಸಲು ಬಂದ ವಿಲಾಸಿನಿಯರಿಗೆ ಕಸ್ತೂರಿಯ ತಿಲಕವನ್ನಿಟ್ಟು ಮನ್ನಿಸಿದಳೆಂಬಂತೆ ಆ ಲಲನಾವಳಿಯು ರಂಜಿಸಿತು. ಅವರೇನು ಒಬ್ಬರಿಬ್ಬರೇ? ಅಲ್ಲಿಯ ಕೆಸರು ಹೆಸರಿಲ್ಲದಂತಾಯಿತು.

ಇದರಿಂದ ಕುಪಿತಳಾದ ಮೇದಿನೀರಮಣಿಯು "ವೇದವೇದ್ಯನಾದ ಚರಶ್ರೇಷ್ಠನು ನನಗೆ ಕೃಪೆಯಿಂದಿತ್ತ ಪಾದಜಲವನ್ನು

ಈ ಮಾನಿನಿಯರು ಅಪಹರಿಸಿದರು" ಎಂದು ಶಿವನಲ್ಲಿ ದೂರಿಕೊಳ್ಳುವದಕ್ಕೆ ಸಾರುತಿರುವಳೆಂಬಂತೆ ಅನ್ನದಾನೀಶ್ವರರ ಆಗಿನ ಪರಿವಾರದ ಪಾದದಿಂದೇಳುವ ಧೂಳು ಆಕಾಶಕ್ಕೇರಿತು.

ಕೂಡಿದ ಜನರು ಸ್ವಾಮಿಗಳನ್ನು ಮಠದಲ್ಲಿ ದಿವ್ಯಪೀಠದಲ್ಲಿ ಕೂಡ್ರಿಸಿ ಆನಂದರಸವು ಉಕ್ಕೇರುತಿರಲು ಸ್ತುತಿಸಿ ಪುಷ್ಪಾಂಜಲಿಯನ್ನರ್ಪಿಸಿದರು.

ಸ್ವಾಮಿಗಳು ಅಪ್ಪಣೆ ಕಳಿಸಿದ್ದರಿಂದ ಶಿವಪುರ (ಕೋಡೀಕೊಪ್ಪ)ದ ದೈವದವರು ಅವರನ್ನು ಕರೆಯ ಬಂದರು. ಇಟ್ಟಗಿಯವರು ಕಳಿಸಲಿಚ್ಛೆಯಿಲ್ಲದೆ ಆಗ್ರಹಗೊಂಡರು. ಅನ್ನದಾನೀಶ್ವರರು ಅದನ್ನೊಪ್ಪದೆ "ಪ್ರೀತಿಬಂದಲ್ಲಿರುವೆವು ನಾವು. ನಿಮ್ಮ ಸ್ವಾಮಿಯಿವನಿರಲು ನಮ್ಮ ಅವಶ್ಯಕತೆಯು ನಿಮಗೇನು?" ಎಂದು ಗುರುವನ್ನದಾನೀಶ್ವರರನ್ನು ತೋರಿಸಿ ಹೊರಟುಬಿಟ್ಟರು. ಶಿವಪುರದ ತಪೋವನಕ್ಕೆ ಬಂದು ನಿಂತುಕೊಂಡರು. 'ಇನ್ನೆರಡು ವಾರಕ್ಕೆ ಹಾಲಗೆರೆಗೆ ಬರುವೆವು. ಆ ವರೆಗೂ ನೀನಿಲ್ಲಿಯೇ ಇರು' ಎಂದು ಗುರುವನ್ನದಾನಿಗಳನ್ನೂ ಇಟ್ಟುಕೊಂಡರು. ಸುತ್ತಲಿನ ಊರ ಜನರು ಅಲ್ಲಿ ಕೂಡತೊಡಗಿದರು. ಸಕಲಸಾಹಿತ್ಯಗಳನ್ನೊದಗಿಸಿ ಗಣಾರಾಧನೆಗಳನ್ನು ಮಾಡತೊಡಗಿದರು. ನಿರಂಜನ ಗುರುವರನ ಪಾವಸನ್ನಿಧಿಗೆ ಫಲಪುಷ್ಪಗಳನ್ನರ್ಪಿಸಿ, ಸ್ತೋತ್ರಗೀತೆಗಳನ್ನು ಹಾಡಿ, ಭಜಿಸಿ ಆಶೀರ್ವಾದಗಳನ್ನು ಪಡೆಯತೊಡಗಿದರು. ಬಂದಬಂದ ಜನರು ಆನಂದಭಾಷ್ಪಗಳುದುರೆ ಪುಲಕಗಳೇಳೆ ಸಾತ್ವಿಕ ಭಕ್ತಿಯಿಂದ ಕೈಮುಗಿದು ಆ ಮಹಿಮರ ಮಹಿಮೆಗಳನ್ನು ಹಾಡಿ ಕಣ್ದಣಿಯೆ ನೋಡಿ ನೋಡಿ ಸುಖಸಮಾಧಾನಗಳನ್ನು ಹೊಂದಿದರೂ ಇದೇ ಕೊನೆಯದರ್ಶನವೆಂದು ಮನಸ್ಸಿನಲ್ಲಿ ಮರಗುತ್ತಲಿದ್ದರು. ಮುತ್ತು ನರೇಗಲ್ಲಿನ ಪ್ರಮುಖರು "ಗುರುವರ, ಮೊದಲಿನಿಂದ ಈ ವರೆಗೆ ಈ ಮಠದ ಮಹೋನ್ನತಸ್ವಾಮಿಗಳು ಅನಂತ ಮಹಿಮೆಗಳನ್ನು ಮಾಡಿದುದನ್ನು ಕೇಳಿರುವೆವು; ಕಂಡು ಮನಗಂಡಿರುವೆವು.

ನಮ್ಮನ್ನು ಉದ್ಧರಿಸಲೆಂದು ಬಂದಿರುವ ಈ ಗುರುವನ್ನದಾನಿಗಳಿಗೂ ನಿಮ್ಮ ಈ ಕಲೆಯನ್ನು ಕೊಟ್ಟು ಪರಿಪಾಲಿಸಬೇಕು." ಎಂದು ಲೀಲೆಯಿಂದಲೇ ಎರಗಿ ಬಿನ್ನವಿಸಿದರು.

ಅನ್ನದಾನೀಶ್ವರರು ಆ ಶಿವಪುರದ ತಪೋವನದಲ್ಲಿರುವಾಗ ಮುಂದೆ ಸ್ವಲ್ಪದಿವಸಗಳಲ್ಲಿಯೇ ಅರಸರಿಗೆ (ಆಂಗ್ಲರಿಗೆ) ಮಹಾಯುದ್ಧದ ಪ್ರಸಂಗವೊದಗುವದೆಂತಲೂ ಕೊನೆಗೆ ಅವರಿಗೇ ಜಯವಾಗುವದೆಂತಲೂ ಆಕಸ್ಮಿಕವಾದ ಒಂದು ಲೀಲೆಯಿಂದಲೇ ಸೂಚಿಸಿದರು.

ಸುತ್ತಲಿನ ಊರುಗಳ ಪ್ರಮುಖರನ್ನು ಕರಿಸಿ "ಮಠದ ಅಧಿಕಾರವನ್ನು ಗುರುವನ್ನದಾನಿಗೆ ಮೊದಲೇ ಒಪ್ಪಿಸಿದೆ. ಆದರೂ ಕೆಟ್ಟಕಾಲ! ಕಾಗದ ಮಾಡಿಸಬೇಕು" ಎಂದು ತಮ್ಮ ಮನೋಗತವನ್ನು ತಿಳಿಸಿದರು. ಅವರು ಕೂಡಲೆ 'ನೋಂದಣಿದಾರ' ರನ್ನು ಕರಿಸಿ ತಕ್ಕ ವ್ಯವಸ್ಥೆಯನ್ನು ಮಾಡಿಬಿಟ್ಟರು.

ಹಾಲಗೆರೆಯವರು ಮೇಣೆಯನ್ನು ತೆಗೆದುಕೊಂಡು ಕರೆಯ ಬಂದರು. ಇಟ್ಟಗಿಯವರಂತೆ ಕೋಡಿಕೊಪ್ಪದವರೂ ಸ್ವಾಮಿಗಳನ್ನು ಬಿಡಲು ಒಪ್ಪದೆ ಅಸಂತುಷ್ಟರಾಗಿ ಕಲಹಗೆದರಿದರು. ಆದರೂ ವಿಚಾರಸ್ಥರು ನ್ಯಾಯವನ್ನು ಬಗೆಹರಿಸಿ ಸರಳಮಾಡಿದರು. ಸ್ವಾಮಿಗಳು ಮಾರ್ಗಶಿರ್ಷ ಕೃಷ್ಣ ೩ಂನೇ ದಿವಸ ಹಾಲಗೆರೆಗೆ ಬಂದರು. ಹಾಲಗೆರೆಯಲ್ಲಿ ಅದಕ್ಕೂ ಮೊದಲು ತಿಂಗಳಿನಿಂದ ಗಣಾರಾಧನೆಯು ನಡೆದೇ ಇತ್ತು. ಶಾಂತಗಿರಿಯ ದೇಸಾಯರು ತಮ್ಮ ಗಣಾರಾಧನೆಯನ್ನು ಸುವ್ಯವಸ್ಥೆಯಿಂದ ಸಾಗಿಸಿ ತೀರಿಸಿದರು. ರೋಣದ ಮಹಾಸ್ವಾಮಿಗಳು ಮೊದಲೇ ಬಂದಿದ್ದರು. ಗುರುಸಮ್ಮುಖದಲ್ಲಿ ಗುರುವನ್ನದಾನಿಗಳು ಶಿವಾನುಭವಶಾಸ್ತ್ರವನ್ನು ಹೇಳುತ್ತಿದ್ದರು.

ಬಳಿಕ ಶಾಲಿವಾಹನ ಶಕೆ ೧೮೩೫ರ ಪ್ರಮಾದೀಚನಾಮ ಸಂವತ್ಸರ ಪೌಷ್ಯ ಶುದ್ಧ ೩, ಮಂಗಳವಾರ ದಿವಸ ಸೂರ್ಯೋದಯದ

ನಂತರ ಅನ್ನದಾನೀಶ್ವರರ ಅವಯುವಗಳ ಕಸುವು ತೀರಕುಂದಿ ಚಲ
ನವಲನವು ನಿಂತಿತು. ಆದರೂ ದೃಷ್ಟಿವಾಣಿಗಳು ಮಾತ್ರ ಸ್ಫುಟವಾ
ಗಿದ್ದವು. ಆಗಲವರು ಗುರುವನ್ನದಾನಿಗಳನ್ನು ಕುರಿತು—"ತರುಳನೇ
ಲಿಂಗದಲ್ಲಿ ಬೆರೆವೆವು ಇನ್ನು" ಎಂದು ಅಪ್ಪಣೆ ಮಾಡಿದರು. ಕೂಡಲೆ
ಭಕ್ತಮಾಹೇಶ್ವರರು ಉಘೇ, ಉಘೇ, ಎಂದುಲಿಯುತ್ತ ಸುತ್ತುವರಿ
ದರು. ಮತ್ತೆ ಅಜ್ಜನವರು ಸಮಾಧಾನಸೂಚಕವಾದ ಕೈಸನ್ನೆ
ಯನ್ನು ಮಾಡುತ್ತ 'ಇನ್ನೂ ಸ್ವಲ್ಪಾವಕಾಶವಿದೆ. ಎಲ್ಲರಿಗೂ ಪ್ರಸಾ
ದವು ದೊರೆಕೊಳ್ಳಲಿ' ಎಂದು ಆಜ್ಞಾಪಿಸಿದರು. ಬಳಿಕ ಎಲ್ಲರೂ
ಸಾವಧಾನದಿಂದ ಸ್ನಾನ ಮಾಡಿದರು; ಲಿಂಗಾರ್ಚನೆಯನ್ನು ತೀರಿಸಿ
ಕೊಂಡರು. ಸತ್ಕ್ರಿಯಾಜ್ಞಾನಸಂಪನ್ನರಿಂದೊಡಗೂಡಿ ಜಂಗಮೋ
ತ್ತಮಪ್ರಸಾದವನ್ನು ಸ್ವೀಕರಿಸಲು ಸನ್ನದ್ಧರಾದರು. ಪಂಕ್ತಿಯು
ಓರಣದಿಂದ ಸಾಗಿತು. ಇತ್ತ ಅನ್ನದಾನೀಶ್ವರರಿಗೆ ಭಸ್ಮಸ್ನಾನವನ್ನು
ಮಾಡಿಸಿ ಅವರಿಷ್ಟಲಿಂಗವನ್ನು ಪೂಜಿಸಿದರು. ಆ ಮಹಾಸ್ವಾಮಿಗಳು
ಏಕಾಗ್ರಚಿತ್ತದಿಂದ ಪರಸ್ವರೂಪನ ನಿರೀಕ್ಷಣೆಯನ್ನು ಮಾಡುತ್ತಿರಲು
ಗುರುವನ್ನದಾನೀಶ್ವರರು ಆ ಜಂಗಮರ ಮುಖಕ್ಕೆ ಪ್ರಸಾದವನ್ನು
ಅರ್ಪಿಸಿದರು. ತತ್‌ಕ್ಷಣವೇ ಪ್ರಜ್ಞೆಗೊಂಡರು; ಪ್ರಸಾದವನು
ಮುಗಿದರು. ಕೂಡಲೆ ಸುತ್ತು ಬಳಸಿ ನಿಂದವರು ಉಘೇಉಘೇ ಎಂದರು.
ಬಳಿಕ ಪಾದೋದಕವನ್ನು ಅರ್ಪಿಸಿದರು. ಅವನ್ನೂ ಗುಟುಕರಿಸಿ
ದೊಡ್ಡದೊಂದು ಉಸುರು ಬಿಟ್ಟರು. ಅದರೊಡನೆಯೇ ಅಂತರಾ
ತ್ಮನು ಹೊರಹೊರಟು ಬಯಲಾದನು. ಹೆಚ್ಚಾಗಿ ನಿಂತ ಜನರು ಜಯ
ನಮಃಪಾರ್ವತೀಪತೇ ಶಿವಹರಹರಹರ ಮಹಾದೇವ, ಎಂದೂ ಉಘೇ
ಉಘೇಉಘೇ ಎಂದೂ ಧ್ವನಿಗೈದು ಚಪ್ಪಾಳೆಗಳನ್ನಿಕ್ಕಿದರು.

ಶಿವಯೋಗಿಗಳು ಗಾಂಭೀರ್ಯವಾಂತರು! ಭಕ್ತರು ಚರ ಮಹಾತ್ಮನ ವಿಯೋಗದಿಂದ ಮರುಗಿದರು.

ಪರಸ್ವರೂಪನೂ ಲೀಲಾವಿನೋದಪರನಾದ ಅಪರಸ್ವರೂಪನ ಆದ ಶಿವನು ಧರ್ಮಗ್ಲಾನಿಯಾಗತೊಡಗಿದ ಇತ್ತೀಚಿನ ಕಾಲ ಲ್ಲಿಯೂ ಅವತರಿಸಿ ಇಂತು ಲೀಲೆಗಳನ್ನೆಸಗಿ ಧರ್ಮಜಾಗ್ರತೆಯನ್ನು ಟುಮಾಡಿ ಬಯಲಾದನು.

ಈ ಬಗೆಯಾಗಿ ಹಾಲಗೆರೆಯ ವಿಶಾಲವಾದ ಮಠವಲ್ಲಿ
ಮಹಾನಿರಂಜನ ಸಿರಾಭಾರಿ ಚರೋತ್ತಮರಾದ
ಅನ್ನದಾನೀಶ್ವರ ಶಿವಯೋಗಿರಾಜರು
ಲಿಂಗೈಕ್ಯರಾದರು.
ಎಂಬಲ್ಲಿಗೆ ಅವರ ಜೀವನ ಚರಿತ್ರವೂ ಸಮಾಪ್ತಗೊಂಡಿತು.

ತಿಳಿಯುಕಾಸಿದ ತುಪ್ಪವಳಿದು ಹಾಲಪ್ಪುದೇ?।
ಕಳಿಜೆಳಗರಿದ ಶಿವಯೋಗಿ ಭವಬಾಧೆ।
ಗೊಳಪಡುವನೇನು? ಸರ್ವಜ್ಞ॥

ಶ್ರೀ. ಶ್ರೀ. ಶ್ರೀ. ಶ್ರೀ. ಶ್ರೀ.

ಬಿ. ಆ. ಶಿರಹಟ್ಟಿ,
ಅಸಿ. ಡೆಪ್ಯುಟಿ ಎಜ್ಯುಕೇಶನಲ್ ಇನ್ಸ್ಪೆಕ್ಟರ

ಸಾಂಪತ್ತಿಕ, ಸಾಮಾಜಿಕ, ರಾಜಕೀಯ,
ಮುಂತಾದ ಮಹತ್ವದ ವಿಷಯಗಳ ಮೇಲೆ
ಮೇಲಾದ ಲೇಖಗಳನ್ನು
ನೀವು ಓದಿ ಅದರ ಲಾಭವನ್ನು ಪಡೆಯಬೇಕೆಂದು
ಬಯಸುತ್ತಿದ್ದರೆ

ನವಕರ್ನಾಟಕ

ಪತ್ರಿಕೆಯನ್ನು
ಅವಶ್ಯವಾಗಿ ತರಿಸಿ ನೋಡಿರಿ.
ಅದು
೬೦ ಪುಟಗಳುಳ್ಳದ್ದೂ ಅಂದವಾದ ಕವರವುಳ್ಳದ್ದೂ
ಇರುತ್ತದೆ.
ಅದರ ವಾರ್ಷಿಕ ಚಂದಾ ೪ ರೂ. ಮಾತ್ರ
ಅಪೇಕ್ಷೆಯುಳ್ಳವರು
ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮ್ಯಾನೇಜರ.
ನವಕರ್ನಾಟಕ ವಿಜಾಪುರ

ಜಾಹೀರಾತ ಹಾಕತಕ್ಕವರು ಅವಶ್ಯವಾಗಿ ಲಕ್ಷಕೊಡತಕ್ಕದ್ದು.
ಪತ್ರವ್ಯವಹಾರ ಮಾಡಿ ದರಗಳನ್ನು ತಿಳಕೊಳ್ಳಬೇಕು.

ಹಾಲಕೆರೆಯ

ಶ್ರೀ ಮದನ್ನ ದಾನೀಶ್ವರ ಮಹಾಪುರಾಣವು.

ಇದು ಸುಗಮವೂ ಸುಂದರವೂ ಸರಸವೂ

ಆದ ಶೈಲಿಯುಳ್ಳ

ವಾರ್ಧಿಕ ಷಟ್ಪದಿಗಳಲ್ಲಿ ರಚಿಸಲ್ಪಟ್ಟ ಪ್ರೌಢಕಾವ್ಯವಾಗಿದೆ.

ಸ್ಫುಟವಾದ ಅಕ್ಷರಗಳಿಂದ ಮುದ್ರಿಸಲ್ಪಟ್ಟಿದೆ.

ಭಾವಚಿತ್ರಗಳಿಂದ ಪರಿಶೋಭೆಗೊಂಡಿದೆ.

ಶ್ರದ್ಧೆಯುಳ್ಳವರೂ ಕನ್ನಡಭಾಷಾಪ್ರೇಮಿಗಳೂ ಪುರಾಣಕಾರರೂ

ಅವಶ್ಯವಾಗಿ ತರಿಸಿಕೊಳ್ಳಬೇಕು.

ಬೆಲೆ ೫ ರೂಪಾಯಿಗಳು.

ದೊರೆಯುವ ಪತ್ತೆ:—

ಗೌರೀನಾಥಶಾಸ್ತ್ರೀ ಕಾಟಾಪುರ ಹಿರೇಮಠ.

ಅಧ್ಯಾಪಕ, ಶ್ರೀಅನ್ನದಾನಿಸ್ಮಾರಕ ಸಂಸ್ಕೃತ ಪಾಠಶಾಲಾ

ಪೋ. ಹಾಲಕೆರೆ, ತಾ. ರೋಣ.